# ಹಿಂದೂ ಧರ್ಮದ ಪವಿತ್ರ ಪುಸ್ತಕ

- ಹಿಂದೂ ಧರ್ಮದ ಮೂಲ
- ಹಿಂದೂ ಧರ್ಮದ ಮೂಲ ಭೂತ ಸಿದ್ಧಾಂತಗಳು
- ಸ್ಮೃತಿ ಗಳು - ಆಗಾಗ ಕೇಳುವ ಪ್ರಶ್ನೆಗಳು
- ಹಿಂದೂ ಧರ್ಮ ಮತ್ತು ವೇದ ಮಂತ್ರಗಳು
- ಶ್ರೀ ಕೃಷ್ಣ ಮತ್ತು ಭಗವದ್ಗೀತೆ
- ನಿತ್ಯದ ಪ್ರಾರ್ಥನೆ -ಹಿಂದುಗಳ ನಿತ್ಯ ಅವಶ್ಯಕತೆ
- ಭಜನೆ
- ಸ್ವರ್ಗ ಮತ್ತು ನರಕ
- ಮೂರ್ತಿ ಪೂಜೆ
- ಜಾತಿ ಪದ್ಧತಿ
- ಮನು ಸ್ಮೃತಿ
- ಉಪನಿಷತ್ತುಗಳು
- ವಿಷ್ಣುವಿನ ಹತ್ತು ಅವತಾರಗಳು
- ಭಗವಾನ್ ಮಹಾವೀರ
- ಶಂಕರಾಚಾರ್ಯ
- ಸ್ವಾಮಿ ವಿವೇಕಾನಂದರ ತತ್ವಗಳು



# ಹಿಂದೂ ಧರ್ಮದ ಪವಿತ್ರ ಪುಸ್ತಕ

- ಹಿಂದೂ ಧರ್ಮದ ಮೂಲ
- ಹಿಂದೂ ಧರ್ಮದ ಮೂಲ ಭೂತ ಸಿದ್ಧಾಂತಗಳು
- ಸ್ಮೃತಿ ಗಳು – ಆಗಾಗ ಕೇಳುವ ಪ್ರಶ್ನೆಗಳು
- ಹಿಂದೂ ಧರ್ಮ ಮತ್ತು ವೇದ ಮಂತ್ರಗಳು
- ಶ್ರೀ ಕೃಷ್ಣ ಮತ್ತು ಭಗವದ್ಗೀತೆ
- ನಿತ್ಯದ ಪ್ರಾರ್ಥನೆ –ಹಿಂದುಗಳ ನಿತ್ಯ ಅವಶ್ಯಕತೆ
- ಭಜನೆ
- ಸ್ವರ್ಗ ಮತ್ತು ನರಕ
- ಮೂರ್ತಿ ಪೂಜೆ
- ಜಾತಿ ಪದ್ಧತಿ
- ಮನು ಸ್ಮೃತಿ
- ಉಪನಿಷತ್ತುಗಳು
- ವಿಷ್ಣುವಿನ ಹತ್ತು ಅವತಾರಗಳು
- ಭಗವಾನ್ ಮಹಾವೀರ
- ಶಂಕರಾಚಾರ್ಯ
- ಸ್ವಾಮಿ ವಿವೇಕಾನಂದರ ತತ್ವಗಳು

# ವಿಷಯಸೂಚಿ


| | | |
|---|---|---|
| 1. | ಹಿಂದೂ ಧರ್ಮದ ಮೂಲ | 5 |
| 2. | ಹಿಂದೂ ಧರ್ಮದ ಮೂಲ ಭೂತ ಸಿದ್ಧಾಂತಗಳು | 8 |
| 3. | ಸ್ಮೃತಿ ಗಳು – ಆಗಾಗ ಕೇಳುವ ಪ್ರಶ್ನೆಗಳು | 10 |
| 4. | ಹಿಂದುತ್ವದ ವೇದ ದರ್ಮ ಮತ್ತು ವೇದ ಮಂತ್ರಗಳು | 39 |
| 5. | ಶ್ರೀ ಕೃಷ್ಣ ಮತ್ತು ಭಗವದ್ಗೀತೆಯ ಶ್ಲೋಕಗಳು | 66 |
| 6. | ನಿತ್ಯದ ಪ್ರಾರ್ಥನೆ – ಹಿಂದೂಗಳಿಗೆ ಆವಶ್ಯಕ | 72 |
| 7. | ಭಜನೆ | 93 |
| 8. | ಸ್ವರ್ಗ ಮತ್ತು ನರಕ | 94 |
| 9. | ವಿಗ್ರಹಾರಾಧನೆ | 96 |
| 10. | ಜಾತಿ ಪದ್ಧತಿ | 100 |
| 11. | ಮನು ಸ್ಮೃತಿ | 106 |
| 12. | ಉಪನಿಷತ್ತುಗಳು | 108 |
| 13. | ವಿಷ್ಣುವಿನ ಹತ್ತು ಅವತಾರಗಳು | 110 |
| 14. | ಭಗವಾನ್ ಮಹಾವೀರ | 113 |
| 15. | ಶಂಕರಾಚಾರ್ಯ | 114 |
| 16. | ಹಿಂದೂ ಸನ್ಯಾಸಿ ವಿವೇಕಾನಂದ ಮತ್ತು ಅವರ ತತ್ವಗಳು | 116 |

# ಲೇಖಕನ ಮಾತು

ಹಿಂದು ಧರ್ಮದ ಪವಿತ್ರ ಪುಸ್ತಕ ವೆಂಬ ಈ ಗ್ರಂಥವನ್ನು ಹಿಂದೂ ಧರ್ಮಕ್ಕೆ ಸಂಬಂಧಪಟ್ಟ ಬೃಹತ್ತಾದ ಧರ್ಮ ಗ್ರಂಥಗಳಿಂದ ಆರಿಸಲಾಗಿದೆ. ಒಬ್ಬ ಧರ್ಮನಿಷ್ಠ ಹಿಂದುವಿಗೆ ತನ್ನ ದಿನ ನಿತ್ಯದ ಈಶ್ವರ ಪ್ರಾರ್ಥನೆಗೆ ಬೇಕಾದ ಶ್ಲೋಕಗಳನ್ನು ಸಹಧಾರ್ಮಿಕ ಗ್ರಂಥದಿಂದ ಆರಿಸಿ ಈ ಗ್ರಂಥದಲ್ಲಿ ಕೊಡಲಾಗಿದೆ. ಹಿಂದೂ ಧರ್ಮಕ್ಕೆ ಸಂಬಂಧಪಟ್ಟ ಗ್ರಂಥಗಳ ಅಧಿಕೃತವಾದ ಮೂಲ ಹಸ್ತಪ್ರತಿಯನ್ನು ಯಾರಾದರು ಈ ಪುಸ್ತಕದ ಪ್ರಕಾಶಕರಿಗೆ ಕೊಟ್ಟಲ್ಲಿ ಈ ಗ್ರಂಥದ ಮುಂದಿನ ಆವೃತ್ತಿಯಲ್ಲಿ ಸೇರಿಸಲು ಸಾಧ್ಯವಾಗುತ್ತದೆ.

ಸನಾತನ ಧರ್ಮವು ಮಾನವ ಜನಾಂಗಕ್ಕೆ ಋಷಿ ಮುನಿಗಳ ಮೂಲಕ ಈಶ್ವರನು ಕೊಟ್ಟ ಉಡುಗೊರೆಯಾಗಿದೆ. ಬೇರೆಲ್ಲ ಧರ್ಮಗಳು ಏಕ ವ್ಯಕ್ತಿಯ ವರ್ಚಸ್ಸು, ಒಂದೇ ತತ್ವದ ಆಧಾರವನ್ನು ಹೊಂದಿದ್ದು ಉಳಿದ ಆಧ್ಯಾತ್ಮಿಕ ಮಾರ್ಗಗಳನ್ನು ಒಪ್ಪಿಕೊಳ್ಳುವುದಿಲ್ಲ, ಆದರೆ ಹಿಂದೂ ಧರ್ಮಕ್ಕೆ ಉದಾರವಾದ ಸಂಪ್ರದಾಯವಿದೆ. ಹಿಂದೂ ಧರ್ಮವು ತನ್ನ ಸದಸ್ಯರಿಗೆ ಅವರಿಗೆ ಬೇಕಾದರೀತಿ ಪೂಜಿಸುವ ಯಾವುದೇ ನಿರ್ಬಂಧವಿಲ್ಲದ ಪೂರ್ಣ ಸ್ವಾತಂತ್ರ್ಯವನ್ನು (ಕಲ್ಪಿತ ಸ್ವಮತಾಂಧ ಧರ್ಮನಿಷ್ಠುರ ಹಸ್ತಕ್ಷೇಪವಿಲ್ಲದಂತೆ) ನೀಡಿರುತ್ತದೆ. ಈ ಗ್ರಂಥಕರ್ತನು **ಅವನಿಂದ** (ಈಶ್ವರ) ಮಾನವ ಜನಾಂಗದ ಒಳಿತಿಗಾಗಿ ಉಕ್ತಲೇಖನ ತೆಗೆದುಕೊಂಡಿರುತ್ತಾನಾಗಿ ಈ ಪುಸ್ತಕವನ್ನು ಬರೆದ ಅಥವಾ ಸಂಪಾದಿಸಿದ ಗೌರವಕ್ಕೆ ಪಾತ್ರನಲ್ಲ

ಈ ಪುಸ್ತಕದ ಓದುಗರನ್ನು ಈಶ್ವರನು ಜೀವನದಲ್ಲಿ ಆನಂದ ಮತ್ತು ಯಶಸ್ಸನ್ನು ಪಡಿಯುವಂತೆ ಕರುಣಿಸಲಿ.

ಪ್ರೊ. ಡಾ ಸತ್ಯಜಿತ್ ಚಕ್ರವರ್ತಿ
ಟ್ರಸ್ಟಿ, ಹಿಂದು ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್

# ಹಿಂದೂ ಧರ್ಮದ ಮೂಲ

ಹಿಂದೂ ಧರ್ಮದ ಸತ್ವವು 20,000[1] ವರುಷಗಳಷ್ಟು ಹಳೆಯದು. ಎಲ್ಲನಾಗರೀಕತೆಗಳ ಮೊದಲ ಧರ್ಮ ಇದಾಗಿದೆ.

ಈಶ್ವರನ ಧರ್ಮೋಪದೇಶವನ್ನು ಪ್ರಪಂಚಕ್ಕೆ ನೀಡಿದ ಮೂವರು[2] ಪ್ರವಾದಿಗಳೆಂದರೆ ಮಧ್ಯ ಭಾರತದಿಂದ ಬಂದ ಬ್ರಹ್ಮ, ದಕ್ಷಿಣ ಭಾರತದಿಂದ ಬಂದ ವಿಷ್ಣು (ನಾರಾಯಣ ನೆಂದೂ ಕರೆಯಲ್ಪಡುವ ವೆಂಕಟೇಶ್ವರ ಅಥವಾ ಬಾಲಾಜಿ) ಹಾಗೂ ಕಾಶ್ಮೀರ-ಉತ್ತರ ಭಾರತದ ಮಹೇಶ್ವರ (ಶಿವ/ರುದ್ರ/ಶಂಕರ ಎಂದೂ ಕರೆಯಲ್ಪಡುವ) ರಾಗಿರುತ್ತಾರೆ.

ಈ ತ್ರಿಮೂರ್ತಿಗಳ ಆಕಾರವಾದ ಅಂತರ್ಜ್ಞಾನ ಶಕ್ತಿಯುತವಾದುದಾಗಿದ್ದು ಅವರ ಸಂದೇಶಗಳ ಪ್ರಭಾವ ಭಾರತದಲ್ಲಿ ಮಾತ್ರ ವಲ್ಲದೆ ಬೇರೆ ದೇಶಗಳಿಗೂ ತುಸರಿಸಿತ್ತು. ಹಿಂದಿನ ಕಾಲದಲ್ಲಿ ಸಂಪರ್ಕಮಿತಿ ಇದ್ದರೂ ಅವರ ಸಂದೇಶಗಳು ಬಹಳ ದೂರದವರೆಗೆ ಹರಡಿ **ಸನಾತನ ಧರ್ಮ** ವೆಂದು ಸ್ಥಾಪಿತಗೊಂಡಿತು.

ಈ ಮೂವರನ್ನು ಆದಿ ದೇವತೆಗಳೆನ್ನುತ್ತಾರೆ. ಇವರೇ **ಸನಾತನ ಧರ್ಮ** ಹಿಂದೂ ಧರ್ಮದ ಸಂಸ್ಥಾಪಕರು. ಇವರೇ ವೇದಗಳನ್ನು ಪ್ರಕಾಶಪಡಿಸಿದವರು.

ಹಿಂದೂ ಧರ್ಮಕ್ಕೆ ಒಂದೇ ಪುಸ್ತಕ ವಿಲ್ಲ ಅಥವಾ ಯಾವುದೇ ಒಬ್ಬ ವ್ಯಕ್ತಿ ಈ ಧರ್ಮಕ್ಕೆ ಮೂಲ ಪುರುಷನಲ್ಲ. ಹಿಂದೂಗಳು **ವೇದಗಳನ್ನು ಅಪೌರುಷೇಯ - ಮನುಷ್ಯನಿಂದ** ಬರೆಯಲ್ಪಟ್ಟದಲ್ಲವೆಂದೂ, ಮನುಷ್ಯನು ದೇವ ವಾಣಿಯನ್ನು ಪ್ರಚಾರ ಮಾಡುವ ಸಾಧನವೆಂದು ಮಾತ್ರ ತಿಳಿಯುತ್ತಾರೆ.

ಸಿಂಧೂನದಿಯ ಪೂರ್ವ ಭಾಗದಲ್ಲಿರುವ ಸಂಸ್ಕೃತಿಯನ್ನು ಮಧ್ಯ ಪ್ರಾಚ್ಯದ ಜನರು ಹಿಂದೂ ಧರ್ಮವೆಂದು ಕರೆದಿರುತ್ತಾರೆ. ಅವರು 'ಸ' ಕಾರವನ್ನು 'ಹ' ಕಾರವೆಂದು ಉಚ್ಚರಿಸುವುದರಿಂದ ಸಿಂಧೂನದಿಯ ಪೂರ್ವ ಭಾಗದ ಜನರನ್ನು ಹಿಂದೂಗಳೆಂದು ಕರೆದಿರುತ್ತಾರೆ. ಮಧ್ಯ ಪ್ರಾಚ್ಯದ ಜನರು ದಂಡೆಯಾತ್ರ ಮಾಡಿ ಇಲ್ಲಿ ರಾಜ್ಯಭಾರಮಾಡಿದ್ದರಿಂದ ಅವರು ಕೊಟ್ಟ ಹೆಸರು ಜನಪ್ರಿಯ ವಾಯಿತು. ಕ್ರಿ.ಪೂ. 4500 ರಿಂದ 3500 ರಕಾಲದಲ್ಲಿ ವಾಯುವ್ಯ ಗಡಿಯು ಆಕ್ರಮಣಕ್ಕೆ ಒಳಗಾಯಿತು, ಈ ಧಾಳಿಕೋರರು ಕ್ರಮೇಣ ಭಾರತದ ಇತರ ಪ್ರದೇಶಗಳನ್ನೂ ಆಕ್ರಮಿಸಿಕೊಂಡರು.

ಹಿಂದೂ ಧರ್ಮದ ಮೂಲ ಹೆಸರು **ಸನಾತನ ಧರ್ಮ** ವೆಂದಾಗಿದ್ದು ವೈದಿಕ ಧರ್ಮವು (Vedic religion) ಅದರ ಪ್ರಧಾನ ತತ್ವವಾಗಿತ್ತು. ಭಾರತಕ್ಕೆ ಬಂದ ಆಕ್ರಮಣಕಾರರು ಮತ್ತು ರಾಜರು ಸ್ಥಳೀಯರೊಂದಿಗೆ ಬೆರೆತು ಹಿಂದೂ ಧರ್ಮದ ಮೂಲ ತತ್ವವನ್ನು ಸ್ವೀಕರಿಸಿ ತಮ್ಮ ವಿದೇಶಿ ವ್ಯಕ್ತಿತ್ವವನ್ನು ಕಳೆದು ಕೊಂಡರು.

ಹಿಂದೂಗಳ ದೇವರನ್ನು ಈಶ್ವರ ಎನ್ನುತ್ತಾರೆ. ಈಶ್ವರನು ಪರಮಶ್ರೇಷ್ಠನೂ, ಪರಿಪೂರ್ಣನೂ, ಸರ್ವವ್ಯಾಪ್ತನೂ ಮತ್ತು ಅನಂತನೂ ಆಗಿದ್ದಾನೆ. ಅವನಿಗೆ ಆದಿಯಾಗಲೀ ಅಂತ್ಯವಾಗಲೀ ಇಲ್ಲ. ಅವನು ನಿರಾಕಾರನೂ ವರ್ಣನಾತೀತನೂ ಆಗಿದ್ದಾನೆ. ಅವನು ಸೃಷ್ಟಿಕರ್ತನೂ,

ಎಲ್ಲಕಾರಣಗಳಿಗೆ ಕಾರಣೀ ಭೂತನೂ ಆಗಿದ್ದಾನೆ. ಅವನು ಸರ್ವ ಶಕ್ತನಾದ್ದರಿಂದ ತಾನುಬಯಸುವ ಕಾರ್ಯಗಳನ್ನು ಈಡೇರಿಸಲು ಅವನಿಗೆ ಅಧೀನರ ಅವಶ್ಯಕತೆ ಇಲ್ಲ.

**ಈಶ್ವರನು** ತನ್ನ ಮಹತ್ವವನ್ನು ಪ್ರತಿಬಿಂಬಿಸುವ ಉದ್ದೇಶದಿಂದ ಪ್ರಪಂಚದ ನಾನಾ ಭಾಗಗಳಿಗೆ ಮನುಷ್ಯರೂಪದ ಉದ್ಧಾರಕರನ್ನು (messiahs) ಕಳುಹಿಸುತ್ತಾನೆ. ಈ ಉದ್ಧಾರಕರನ್ನು (messiahs) ಭಾರತದ ಕೆಲವು ಭಾಷೆಗಳಲ್ಲಿ ದೇವತೆಗಳೆನ್ನುತ್ತಾರೆ.

ಭಕ್ತರು ಈಶ್ವರನಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ ಹಾಗೂ ದೇವತೆಗಳ ಬೋಧನೆ, ಕೆಲಸ ಇತ್ಯಾದಿಗಳನ್ನು ಕುರಿತು ಕೊಂಡಾಡುತ್ತಾ ಉತ್ಸವಗಳನ್ನು ಆಚರಿಸುತ್ತಾರೆ. ದೇವತೆಗಳು ಅಲೌಕಿಕ ಶಕ್ತಿಯುಳ್ಳ ಮಾನವರೇ ಆಗಿದ್ದಾರೆ. ಅವರ ದಿವ್ಯದರ್ಶನಗಳು ಅವರ ಚಾರಿತ್ರಿಕ ಸಮಯ, ಸಾಮಾಜಿಕ ಪರಿಸರ ಮತ್ತು ಭೌಗೋಳಿಕ ಸ್ಥಾನವನ್ನು ಹೊಂದಿಕೊಂಡಿತ್ತು ದೇವಸ್ಥಾನ ದಲ್ಲಿರುವ ವಿಗ್ರಹವು ಸಾಮಾನ್ಯ ಮನುಷ್ಯರ ಆರಾಧನಾ ಮೂರ್ತಿ ಮಾತ್ರ ವಲ್ಲದೆ **ಈಶ್ವ**ರನಿಗೆ ಸಲ್ಲಿಸುವ ಗಾಢವಾದ ಪ್ರಾರ್ಥನೆಯ ಕೇಂದ್ರವೂ ಆಗಿದೆ.

ವೇದವನ್ನು ಓದಿ ಅರ್ಥಮಾಡಿಕೊಂಡಿರುವ ಹಾಗೂ ಅದರ ಅಂತರಾರ್ಥವನ್ನು ತಿಳಿದಿರುವವನು ವಿಗ್ರಹಾರಾಧನೆ ಮಾಡುವ ಅಗತ್ಯವಿರುವುದಿಲ್ಲ. ಅಂತಹವರಿಗೆ **ಈಶ್ವರನ** ನಿಜ ಸ್ವರೂಪ ತಿಳಿದಿರುವುದರಿಂದ ವಿಗ್ರಹಾರಾಧನೆ ನಿರರ್ಥಕವೆನಿಸುವುದು.

ನಮ್ಮ ಪ್ರಾರ್ಥನೆಗೆ **ಈಶ್ವ**ರನು ಮಾತ್ರ ಅರ್ಹನಾಗಿರುತ್ತಾನೆ. ಈಶ್ವರನು ಸರ್ವವ್ಯಾಪಿಯೂ, ಸರ್ವಶಕ್ತನೂ ಹಾಗೂ ಭೂಮಿ ಮತ್ತು ಸೌರ ಮಂಡಲ ಗಳೆಂಬ ಸೀಮೆಗೆ ಒಳಪಡದವನಾಗಿರುತ್ತಾನೆ.

**ಸನಾತನ ಧರ್ಮ** ದ ಪೂರ್ವ ಚರಿತ್ರೆಯನ್ನು ಗಮನಿಸಿದಾಗ ಹಿಂದೂಗಳು ಒಬ್ಬನೇ ದೇವರ ಆರಾಧಕರಾಗಿದ್ದು ಒಬ್ಬನೇ ಈಶ್ವರನನ್ನು ನಂಬುತ್ತಿದ್ದುದು ತಿಳಿದುಬರುತ್ತದೆ. ವಿಗ್ರಹಾರಾಧನೆಯನ್ನು ಹಿಂದೂಗಳು ಪಟ್ಟಣ ನಾಗರೀಕತೆಯಾದ (urban civilization) ಹರಪ್ಪ ಮತ್ತು ಮೊಹಿಂಜೊದಾರೊದಿಂದ ಕಲಿತರು. ಮೊಹೆಂಜೊದಾರೊ ಮತ್ತು ಹರಪ್ಪದ ನಿವಾಸಿಗಳು ಸೂರ್ಯ, ಶಿವಲಿಂಗ, ಮಾತೃ ದೇವತೆ ಮತ್ತು ಕೆಲವು ಪ್ರಾಣಿ ಚಿಹ್ನೆಗಳನ್ನು ಪೂಜಿಸುತ್ತಿದ್ದರು.

ವಿಗ್ರಹಾರಾಧನೆಯು ಮೆಸೊಪೊಟೆಮಿಯ (ಈಜಿಪ್ಟ್) ಮತ್ತು ಸುಮೇರಿಯ (ಪರ್ಷಿಯ) ನಾಗರೀಕತೆಗಳ ಪ್ರಭಾವದ ಪರಿಣಾಮವಾಗಿದೆ. ಆ ಸಮಯದಲ್ಲಿ "ಕ್ಯೂನೆಫಾರಂ" ಬರವಣಿಗೆಯನ್ನು ಹರಪ್ಪ ಮತ್ತು ಮೊಹೆಂಜೊದಾರೊ ಹಾಗೂ ಮೆಸಪೊಟೆಮಿಯದಲ್ಲಿ ಉಪಯೋಗಿಸುತ್ತಿದ್ದರು. ಈ ಬರವಣಿಗೆಯು ಪೂರ್ಣವಾಗಿ ವಿಗ್ರಹಗಳ ಚಿತ್ರಗಳಿಂದ ಕೂಡಿದುದಾಗಿತ್ತು. ಹರಪ್ಪ ಮತ್ತು ಮೊಹೆಂಜೊದಾರೊ ಸಂಸ್ಕೃತಿಯು ಕ್ರಿ.ಪೂ. 3430 ರಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತು. ಇದೇ ಸಮಯದಲ್ಲಿ ಸಾಗರ ಗರ್ಭದಲ್ಲಿ ದೊಡ್ಡ

ಭೂಕಂಪವಾಗಿ ಭಾರಿ ಅಲೆಗಳೆದ್ದು ಸಿಂಧೂನದಿ ಹಾಗೂ ಅದರದಡವು ಪ್ರವೇಶದಿಂದ ಆವೃತವಾದ ಬಗ್ಗೆ ಸನಾತನ ಗ್ರಂಥಗಳು ತಿಳಿಸುತ್ತವೆ. ಇದರಿಂದಾಗಿ ಹರಪ್ಪ, ಮೊಹೆಂಜೊದಾರೊಗಳು ಮಣ್ಣಿನಿಂದ ಮುಚ್ಚಲ್ಪಟ್ಟು ಮನುಷ್ಯರು, ಪ್ರಾಣಿಗಳು ಹಾಗೂ ಸಸ್ಯ ಸಂಕುಲವೆಲ್ಲವೂ ನಾಶವಾಯಿತು.

ಹರಪ್ಪ ಮತ್ತು ಮೊಹೆಂಜೊದಾರೊ ನಾಗರಿಕತೆಯು ಮರಮುಟ್ಟುಗಳ ಉಪಯೋಗವನ್ನು ಬಹಳವಾಗಿ ಮಾಡುತ್ತಿದ್ದುದರಿಂದ ಅರಣ್ಯ ನಾಶವಾಗಿ ಅದರಿಂದ ಪರಿಸರದ ಸಮತೋಲನ ತಪ್ಪಿ ಕೊನೆಗೆ ಈ ನಾಗರೀಕತೆಯ ನಾಶಕ್ಕೆ ಕಾರಣವಾಯಿತು.

ವಿಗ್ರಹಾರಾಧನೆಯು ದೇವತೆಗಳ/ಪ್ರವಾದಿಗಳ ಪೂಜೆಯಾಗಿರುತ್ತದೆ. ದೇವತೆಗಳು ಮೂಲತ: ಮನುಷ್ಯರೇ, ಹೀಗಾಗಿ ಒಂದು ಪ್ರಾಂತ್ಯದಲ್ಲಿ ಪೂಜಿಸುವ ದೇವತೆಗಳನ್ನು ಮತ್ತೊಂದು ಪ್ರಾಂತ್ಯದಲ್ಲಿ ಪೂಜಿಸುತ್ತಿರಲಿಲ್ಲ. ಆದರೆ ಈಶ್ವರನು ಮಾತ್ರ ಯಾವುದೇ ಹೆಸರಿನಲ್ಲಿ ಯಾವುದೇರೀತಿಯಲ್ಲಿ ಸಲ್ಲಿಸುವ ಪ್ರಾರ್ಥನೆಯನ್ನು ಸ್ವೀಕರಿಸುತ್ತಾನೆ.

ಋಗ್ವೇದದ ಆದಿಕಾಲದಲ್ಲಿ ಜಾತಿ ಪದ್ಧತಿ, ಬಾಲ್ಯ ವಿವಾಹ ಅಥವಾ ಸತಿ ದಹನಗಳು ಇರಲಿಲ್ಲವಾದರೂ ವರ್ಗೀಕರಣ (division of labour) ವಿತ್ತು. ಒಂದು ಕುಟುಂಬದ ಒಬ್ಬ ಸದಸ್ಸ ಉಪಾಧ್ಯಾಯನಾಗಿದ್ದರೆ ಇನ್ನೊಬ್ಬ ಯೋಧನಾಗ ಬಹುದಿತ್ತು ಹಾಗೂ ಅದೇ ಕುಟುಂಬದ ಇನ್ನೊಬ್ಬ ಕುಶಲ ಕೆಲಸಗಾರನಾಗಿರಬಹುದಾಗಿತ್ತು. ಕೆಲಸಗಳ ಪರಸ್ಪರ ಬದಲಾವಣೆ ಮತ್ತು ಅಂತರ್ಜಾತಿ ಮದುವೆಗಳು ಸಮ್ಮತವಾಗಿತ್ತು.

ಹೆಂಗಸರು ವೇದಾಭ್ಯಾಸ ನಿರತರಾಗಿದ್ದರು. ಘೋಸ, ವಿಶ್ವಾಬರ, ಲೋಪಾಮುದ್ರ, ವಿಶಾಖ ಮತ್ತು ಇತರ ಪಾಂಡಿತ್ಯವಿರುವ ಹೆಂಗಸರು ಋಗ್ವೇದದ ಆದಿಕಾಲದಲ್ಲಿ ಹೆಸರು ವಾಸಿಯಾಗಿದ್ದರು. ಮದುವೆಯ ವಿಷಯದಲ್ಲಿ ಹೆಂಗಸರು ತಮ್ಮದೇ ಆದ ಆಯ್ಕೆ ಮತ್ತು ನಿಲುವನ್ನು ಹೊಂದಿದ್ದರು. ಶಸ್ತ್ರಾಸ್ತ್ರ ಪ್ರಯೋಗವನ್ನು ಸಹ ಹೆಂಗಸರು ಬಲ್ಲವರಾಗಿದ್ದು ಯುದ್ಧದಲ್ಲಿಯೂ ಪಾಲ್ಗೊಳ್ಳುತ್ತಿದ್ದರು. ಮುದಲನೀ ಎಂಬ ಸೇನಾದಿಪತಿ. ಬಹಳ ಹೆಸರುವಾಸಿಯಾಗಿದ್ದಳು. ಜೀವನದ ಎಲ್ಲ ಸ್ಥಳಗಳಲ್ಲಿಯೂ ಹೆಂಗಸು ಗಂಡನೊಂದಿಗೆ ಸಹಭಾಗಿಯಾಗಿರುತ್ತಿದ್ದಳು.

# ಹಿಂದೂ ಧರ್ಮದ
# ಮೂಲಭೂತ ಸಿದ್ಧಾಂತಗಳು

1. ಜ್ಞಾನ ಸಂಪಾದನೆ ಮಾಡಬೇಕು ಮತ್ತು ಅರಿಯದೆ ಇರುವ ಬಗ್ಗೆ ಅಪರಾಧ ಪ್ರಜ್ಞೆ ಇರಬಾರದು. ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ಅವನವನ–ಅವಳವಳ ಶಕ್ತ್ಯಾನುಸಾರ ಮಾಡಬೇಕು ಹಾಗೂ ಮೋಹವನ್ನು ತೊರಿಯಬೇಕು ಮಾಡಿದ ಕರ್ತವ್ಯದ ಫಲಗಳು ಪ್ರಯತ್ನ ಮತ್ತು ಸಂಧರ್ಭಕ್ಕೆ ತಕ್ಕದಾಗಿರುತ್ತದೆ.

2. ಪ್ರತಿಫಲಾಪೇಕ್ಷೆ ಇಲ್ಲದೆ ಉದಾರವಾಗಿ ದಾನ ಮಾಡಬೇಕು. ದೇಶ, ಕಾಲ ಹಾಗೂ ಸತ್ಪಾತ್ರರಿಗೆ ದಾನ ಕೊಡಬೇಕು.

3. ಮಾನವ ದೇಹವು ಜೀವನವೆಂಬ ಸಮುದ್ರವನ್ನು ದಾಟಿಸಿ ಅಮೃತತ್ವವೆಂಬ ದಡಕ್ಕೆ ಮುಟ್ಟಿಸುವ ದೋಣಿಯಾಗಿದೆ. ಮನುಷ್ಯನಿಗೆ ಪುನಃರ್ಜನ್ಮವಿರಬೇಕೆಂದು **ಈಶ್ವರನು** ವಿಧಿಸಿದ್ದಾನೆ. ಇದರಿಂದ ತಾನು ಹಿಂದೆ (ಜನ್ಮ) ಮಾಡಿದ ಮತ್ತು ಈ ಜನ್ಮದ ಕರ್ಮ ಫಲವನ್ನು ಮನುಷ್ಯನು ಅನುಭವಿಸುತ್ತಾನೆ. ಜನ್ಮಾಂತರದಲ್ಲಿ ಮಾಡಿದ ಪಾಪ ಪುಣ್ಯಗಳ ಫಲವಾಗಿ ಅನಿರೀಕ್ಷಿತವಾದ ಕಷ್ಟಗಳು, ಆಕಸ್ಮಿಕಗಳು ಹಾಗೂ ಅಮೋಘವಾದ ಯಶಸ್ಸು (ಸಾಧನೆ) ದೊರಕುತ್ತದೆ.

4. ಪ್ರತಿಯೊಬ್ಬನೂ **ಈಶ್ವರನನ್ನು** ಹೃತ್ಪೂರ್ವಕವಾಗಿ, ಮನಃಪೂರ್ವಕವಾಗಿ ಮತ್ತು ತನ್ನೆಲ್ಲ ಶಕ್ತಿಯನ್ನು ಒಂದುಗೂಡಿಸಿ ಪ್ರೀತಿಸಬೇಕು. **ಈಶ್ವರನಿಗೆ** ಅಗೌರವ ತೋರಿಸುವವನು ಮನುಷ್ಯತ್ವದ ಶತ್ರುವಾಗಿರುತ್ತಾನೆ.

5. ಕೊಲ್ಲಬಾರದು, ಕದಿಯಬಾದು, ಸುಳ್ಳು ಹೇಳಬಾರದು, ಮತ್ತು ವ್ಯಭಿಚಾರ ಮಾಡಬಾರದು. ಜೀವನದಲ್ಲಿ ಪ್ರಾಮಾಣಿಕನಾಗಿರಬೇಕು, ಮಧುರ ಸ್ವಭಾವದವನಾಗಿರಬೇಕು ಮತ್ತು ಕಷ್ಟಪಟ್ಟು ಕೆಲಸ ಮಾಡಬೇಕು.

6. ಮತ್ತೊಬ್ಬರ ತಪ್ಪನ್ನು ಮತ್ತು ಅತಿಕ್ರಮಣವನ್ನು ಕ್ಷಮಿಸುವವನಿಗೆ (ಅವನ ಪಾಪಗಳಿಗೆ) ಈಶ್ವರನಿಂದ ಕ್ಷಮೆ ಸಿಗುತ್ತದೆ.

7. ತನ್ನ ಮನಃ (ಅಂತಃ) ಶಕ್ತಿಯನ್ನು ತನ್ನ ದುಃಖವನ್ನು ಕೊನೆಗಾಣಿಸಲು ಬಾಣದಂತೆ ಹರಿತವಾಗಿಡ ಬೇಕು.

8. ಮಂತ್ರ, ಸ್ತೋತ್ರ ಅಥವಾ ಪ್ರಾರ್ಥನೆ, ಧ್ಯಾನಗಳ ಅವಶ್ಯಕತೆ ಇಲ್ಲ. **ಈಶ್ವರನಿಗೆ** ನಿಮ್ಮ ಹೃದಯ ತೆರದಿಡಿ.

9. ಆತ್ಮಕ್ಕೆ ಅಳಿವಿಲ್ಲ – ಜೀವಕ್ಕೆ ಪುರ್ನಜನ್ಮ ಉಂಟು. ದೇಹ ನಶಿಸಿದರೂ ಆತ್ಮ ಅಬಾಧಿತ. ಆತ್ಮವನ್ನು ಸುಡಲಾಗಲೀ ಕತ್ತರಿಸಲಾಗಲೀ ಸಾಧ್ಯವಿಲ್ಲ.

10. ಜೀವನವು ಒಳ್ಳೆಯದು ಮತ್ತು ಕೆಟ್ಟದರ ನಡುವಿನ ನಿರಂತರ ಹೋರಾಟವಾಗಿದೆ. ನಮ್ಮ ಆಲೋಚನೆ ಮತ್ತು ಮಾತಿನಿಂದ ಒಳ್ಳೆಯ ಮನುಷ್ಯರಿಗೆ ಹಾನಿ ಮಾಡಬಾರದು.

11. ಕೋಪ, ವೈರತ್ವ, ಹೆದರಿಕೆ ಮತ್ತು ದುಃಖ ಗಳೆಂಬ ಮಾರಕವಾದ ಆವೇಶಗಳಿಗೆ ವಶರಾಗಬಾರದು. ಯಾವಾಗಲೂ ಈಶ್ವರನ ದೀರ್ಘಕಾಲೀನ ಯೋಚನೆಗಳ ಬಗ್ಗೆ ಆಶಾಭಾವನೆ ಹೊಂದಿದ್ದು, ಕೊನೆಯಲ್ಲಿ ಎಲ್ಲಕ್ಕೂ ಸುಖಾಂತವಿದೆಯೆಂದು ನಂಬಿಕೆಯಿರಬೇಕು.

12. ಪ್ರತಿಯೊಬ್ಬನೂ ಪ್ರಪಂಚಕ್ಕೆ ಬರುವಾಗ ನಗ್ನವಾಗಿದ್ದು ಇಲ್ಲಿಂದ ಹೋಗುವಾಗ ಹಾಗೆಯೇ ಹೋಗುತ್ತಾನೆ. ಇಲ್ಲಿರುವ ಸ್ವಲ್ಪ ಸಮಯದಲ್ಲಿ ಒಳ್ಳೆಯ ಕೆಲಸಮಾಡಿ ಇಲ್ಲಿಂದ ಹೋಗುವಾಗ ಉತ್ತಮ ಪರಿಸರವನ್ನು ಬಿಟ್ಟು ಹೋಗಬೇಕು.

13. ಈ ಬ್ರಹ್ಮಾಂಡವೆಲ್ಲ ಈಶ್ವರನ ಸೃಷ್ಟಿಯಾಗಿದ್ದು ಅದನ್ನು ಉಪಯೋಗಿಸಲು ಪ್ರತಿಯೊಬ್ಬನಿಗೂ ಸಮವಾದ ಜವಾಬ್ದಾರಿ ಮತ್ತು ಅಧಿಕಾರವಿದೆ. ಈಶ್ವರನ ಸಾಮ್ರಾಜ್ಯದಲ್ಲಿ ಯಾರಿಗೂ ಹೆಚ್ಚಿನ ಹಕ್ಕಿಲ್ಲ.

14. ಹತ್ತು ವರುಷ ವಯಸ್ಸಿಗೆ ಮೇಲ್ಪಟ್ಟವರೆಲ್ಲರೂ ಪ್ರತಿದಿನ ಎರಡುಸಾರಿ ಈಶ್ವರನಿಗೆ ಪ್ರಾರ್ಥನೆ ಸಲ್ಲಿಸಬೇಕು (ಬೆಳಗಿನ ಹೊತ್ತು ಆ ದಿನದದಲ್ಲಿ ಆದ ಪರಾಜಯದ ಬಗ್ಗೆ ಅಂತರಂಗ ಪರೀಕ್ಷೆ () ಮಾಡಿಕೊಳ್ಳುತ್ತಾ) ಪ್ರತಿ ದಿನ ಕಡೇಪಕ್ಷ ಹತ್ತು ನಿಮಿಷವಾದರೂ ಪ್ರಾಣಾಯಾಮವನ್ನು ಮಾಡಬೇಕು.

15. ವಾರದಲ್ಲಿ ಒಂದು ದಿವಸವಾದರೂ ಸಮಾಜ ಬಾಂಧವರೊಂದಿಗೆ ಪ್ರಾರ್ಥನೆ ಮಾಡಬೇಕು. ಪುರೋಹಿತನು ಪ್ರಾರ್ಥನೆಯ ಮಂದಾಳತ್ವವನ್ನು ವಹಿಸಿ ಭಗವದ್ಗೀತೆ, ಉಪನಿಷತ್ತು, ಶಾಸ್ತ್ರಗಳು, ವೇದಗಳ ಕೊನೆಯಪಕ್ಷ ಐದು ಶ್ಲೋಕಗಳ ಅರ್ಥ ವಿವರಿಸಿ ಅವು ಈಗಿನ ಕಾಲಕ್ಕೆ ಹೇಗೆ ಉಪಯುಕ್ತ ಎಂದು ವಿವರಿಸಬೇಕು.

# ಸ್ಮೃತಿಗಳು – ಆಗಾಗ ಕೇಳುವ ಪ್ರಶ್ನೆಗಳು

ನಿತ್ಯ ಜೀವನದ ನಡವಳಿಕೆಯನ್ನು ಪ್ರಶ್ನೋತ್ತರ ರೂಪದಲ್ಲಿ ಇಲ್ಲಿ ಕೊಡಲಾಗಿದೆ ಬೇರೆ ಬೇರೆ ಸ್ಮೃತಿಗಳು ಇವೆ.

1 ಪ್ರ. ಪರಮೇಶ್ವರನಲ್ಲಿ ನಿಜವಾಗಿ ನಂಬಿಕೆ ಇದೆ ಎಂದು ಹೇಗೆ ಪರೀಕ್ಷಿಸುವುದು ?

ಉ. ನಿಷ್ಠೆ ಇರುವ ಭಕ್ತನಿಗೆ ಧೈರ್ಯವೇ ಜೀವನಮಾರ್ಗವಾಗಿರುತ್ತದೆ. ಧೈರ್ಯವು ಅವಶ್ಯಕತೆ ಅಥವಾ ಆಪತ್ಕಾಲದಲ್ಲಿ ಬರುವಂತಹದಲ್ಲ. ಧೈರ್ಯವನ್ನು ಪಾಠಹೇಳುವ ಮೂಲಕ ಕಲಿಸಿಕೊಡಲಾಗುವುದಿಲ್ಲ. ಅದು ಅಭ್ಯಾಸ ಬಲದಿಂದ ಬರಬೇಕು. ಪ್ರಾರ್ಥನೆ ಮತ್ತು ಸಂಪೂರ್ಣವಾಗಿ ಈಶ್ವರನ ಸಂಕಲ್ಪಕ್ಕೆ ನಮ್ಮನ್ನು ಒಪ್ಪಿಸಿಕೊಳ್ಳುವುದರಿಂದ ಧೈರ್ಯವು ನಮ್ಮ ನಡತೆಯ ಒಂದು ಭಾಗವಾಗುತ್ತದೆ. ಪರಮೇಶ್ವರನಲ್ಲಿ ನಿಜವಾಗಿ ನಂಬಿಕೆ ಇರುವವನಿಗೆ ಯಾವುದೇ ಶಕ್ತಿಯು ದೈವಿಕ ಶಕ್ತಿಗೆ ಎದುರಾಗಿ ನಿಲ್ಲಬಾರದು ಮತ್ತು ಕೊನೆಯಲ್ಲಿ ಎಲ್ಲವೂ ಸುಗಮವಾಗುತ್ತದೆ ಎಂದು ತಿಳಿದಿರುತ್ತದೆ. ನಿಜವಾದ ಧಾರ್ಮಿಕ ಹೆದರಿಕೆ ಇದ್ದರೂ ಧೈರ್ಯವಾಗಿ ಕೆಲಸಮಾಡಲು ತೊಡಗುತ್ತಾನೆ.

2. ಪ್ರ. ದೇವರು ಎಂದರೆ ಏನು ?

ಉ. ದೇವರು ಎಂದರೆ ಪರಮೇಶ್ವರ. ಹಿಂದೂ ಧರ್ಮದಲ್ಲಿ ಇದನ್ನು 'ಓಂ' ಎಂಬ ಶಬ್ದದಿಂದಲೂ ಮತ್ತು 'ॐ' ಗುರುತಿನಿಂದಲು ವರ್ಣಿಸುತ್ತಾರೆ. ಪರಮೇಶ್ವರನು ಎಲ್ಲವನ್ನು ಮಾಡಬಲ್ಲ ಒಬ್ಬನೇ ಅವಿಭಾಜ್ಯವಾದ ಸರ್ವಶಕ್ತನು ಮತ್ತು ಎಲ್ಲ ಕಾರಣಕ್ಕೂ ಕಾರಣೀಭೂತನಾಗಿದ್ದಾನೆ. ಅವನು ಸರ್ವಶಕ್ತನಾದದರಿಂದ ತನ್ನ ಇಚ್ಛೆಯನ್ನು ಪೂರೈಸಲು ಯಾರದೇ ಸಹಾಯ ಅವನಿಗೆ ಬೇಕಿರುವುದಿಲ್ಲ. ಅವನು ಅನಂತನು.

3 ಪ್ರ. ಪರಮೇಶ್ವರನಿಗೂ ದೇವತೆಗಳಿಗೂ ವ್ಯತ್ಯಾಸವೇನು ?

ಉ. ಪರಮೇಶ್ವರನು ಅವಿಭಾಜ್ಯನು ಮತ್ತು ಎಲ್ಲವನ್ನು ಮಾಡಬಲ್ಲ ಸರ್ವಶಕ್ತನು ಮತ್ತು ಎಲ್ಲಕಾರಣಗಳಿಗೂ ಕಾರಣೀಭೂತನು. ದೇವತೆಗಳು ಪರಮೇಶ್ವರನಿಂದ ಭೂಮಿಗೆ ಕಳುಹಿಸಲ್ಪಟ್ಟ ಪ್ರವಾದಿಗಳು. ಪರಮೇಶ್ವರನು ಕರುಣೆ ಮತ್ತು ಪ್ರೀತಿಯಿಂದ ತನ್ನ ದೂತರನ್ನು ಬೋಧಕರನ್ನಾಗಿ ಮತ್ತು ವಿಮೋಚಕರನ್ನಾಗಿ ಈ ಪ್ರಪಂಚಕ್ಕೆ ಕಳುಹಿಸುತ್ತಾನೆ, ಅವರು ತಮ್ಮದೇ ಉದಾಹರಣೆಗಳಿಂದ ಜನಗಳಿಗೆ ಮಾರ್ಗದರ್ಶನ ನೀಡಿ ಜ್ಞಾನೋದಯ ಉಂಟಾಗುವಂತೆ ಮಾಡಿ ಈ ಪ್ರಪಂಚದಲ್ಲಿ ಉತ್ತಮವಾಗಿ ಜೀವಿಸಲು ಸಾಧ್ಯವಾಗುವಂತೆ ಮಾಡುತ್ತಾರೆ. ಪರಮೇಶ್ವರ ವೈಭವದ ಪ್ರತಿಬಿಂಬವನ್ನು ನೋಡಿ ಆನಂದಿಸುತ್ತಾರೆ. ದೇವತೆಗಳ ಅನುಯಾಯಿಗಳು ಪರಮೇಶ್ವರನ ಅನುಯಾಯಿಗಳೂ ಆಗಿದ್ದಾರೆ. ದೇವತೆಗಳ ಮೂರ್ತಿಕೃತ ರೂಪವನ್ನು ನೋಡುವಾಗ ಅವರಿಗೆ ಪರಮೇಶ್ವರನ ದೂತರನ್ನು ಕಾಣುತ್ತಾರೆ. ಅವರ ಮೇಲೆ ತಮ್ಮ ಗೌರವ, ಕೃತಜ್ಞತೆ ಮತ್ತು ಪ್ರಶಂಸೆಗಳನ್ನು ನಾನಾರೀತಿಯಲ್ಲಿ ತೋರಿಸುತ್ತಾರೆ. ಕೆಲವರು ವಿಗ್ರಹಗಳನ್ನು ಮಾಡುತ್ತಾರೆ, ಕೆಲವರು ನಾಮಸ್ಮರಣೆ ಮಾಡುತ್ತಾರೆ ಮತ್ತೆ ಕೆಲವರು ಪೂಜ್ಯ ಭಾವದಿಂದ ಗೀತೆಗಳನ್ನು ರಚಿಸುತ್ತಾರೆ ಆದರೆ ಉತ್ತಮವಾದ ಫಲಿತಾಂಶ ಸಿಗಬೇಕಾದರೆ ಪರಮೇಶ್ವರನನ್ನು ಕುರಿತು ನೇರವಾಗಿ ಗಟ್ಟಿಯಾಗಿ ನಿಯಮಿತವಾಗಿ ಪ್ರಾರ್ಥನೆ ಸಲ್ಲಿಸಬೇಕು – ಬೆಳಗಿನ ಹೊತ್ತು

ಸಾಯಂಕಾಲ ಮಂತ್ರ ಪಠನ ಮಾಡಬೇಕು. ಮಂತ್ರಗಳನ್ನು ಹೇಳಲು ಪ್ರತಿನಿತ್ಯ ಹತ್ತು ನಿಮಿಷಗಳು ಸಾಕು ಅದನ್ನು ಹೇಳುವುದರಿಂದ ಶಾಶ್ವತವಾಗಿ ರಕ್ಷಣೆ ಸಿಗುತ್ತದೆ.

4. ಪ್ರ. ಪರಮೇಶ್ವರನು ಸರ್ವಶ್ರೇಷ್ಠ ನಾದರೆ ಇತರ ದೇವತೆಗಳನ್ನು ಪೂಜಿಸುವುದರಿಂದ ಅವನಿಗೆ ಅವಮಾನವಾಗುವುದಿಲ್ಲವೇ ?

ಉ. ಗೀತೆಯಲ್ಲಿ ಹೇಳಿರುವಂತೆ ಪರಮೇಶ್ವರನು ಸರ್ವಶ್ರೇಷ್ಠ ಮತ್ತು ಸರ್ವಶಕ್ತ ಮತ್ತು ಅವನು ಅಪರಿಮಿತನಾದವನು ಹೀಗಾಗಿ ಸಕಾರಾತ್ಮಕ ಅಥವಾ ನಕಾರಾತ್ಮಕ ವಿಧಿಗಳಿಂದ ಅವನು ಚಿಂತಿತನಾಗುವುದಿಲ್ಲ ಹಾಗೂ ತನ್ನ ಬದಲಿಗೆ ದೇವತೆಗಳನ್ನು ಪೂಜಿಸಿದರೂ ಚಿಂತಿಸುವುದಿಲ್ಲ.

5. ಪ್ರ. ಸ್ವಾರ್ಥ ಪ್ರಪಂಚದಿಂದಾಗಿ ಖಿನ್ನರಾದರೆ ಪೂರ್ಣ ಆಧ್ಯಾತ್ಮಿಕತೆಯನ್ನು ಹೊಂದಲು ಉತ್ತಮ ಮಾರ್ಗ ಯಾವುದು ?

ಉ. ಪ್ರಪಂಚದಲ್ಲಿರಲು ಚಟುವಟಿಕೆ ಮತ್ತು ಆಧ್ಯಾತ್ಮಿಕ ಸಂಯೋಜನೆ ಉತ್ತಮ ಕೀಲಿಕೈ ಆಗಿರುತ್ತದೆ. ನಾವು ಕಷ್ಟಪಟ್ಟು ಕೆಲಸಮಾಡಿ ಪರಮೇಶ್ವರನಿಗೆ ದೇವಸ್ಥಾನವನ್ನು ಕಟ್ಟುತ್ತೇವೆ. ಪರಮೇಶ್ವರನು ಅದರಲ್ಲಿ ತನ್ನೆಲ್ಲ ವೈಭವಗಳಿಂದ ಅದರಲ್ಲಿರುತ್ತಾನೆ. ಪ್ರತಿಯೊಬ್ಬರಿಗೂ ಬುದ್ಧಿ, ಶಕ್ತಿ, ಕಸುವು ಮತ್ತು ಭಾವನೆಗಳನ್ನು ಪರಮೇಶ್ವರನು ನೀಡಿರುತ್ತಾನೆ. ವಿವಿಧತೆಯಿಂದ ಕೂಡಿದ ವೈವಿಧ್ಯಮಯವಾದ ಈ ಪ್ರಪಂಚವನ್ನು ಪರಮೇಶ್ವರನು ಏಕೆ ಸೃಷ್ಟಿಸಿದ ? ಅವನಿಗೆ ತನ್ನದೇ ಆದ ಕಾರಣ ಮತ್ತು ಉದ್ದೇಶವಿದೆ. ದಿನ ನಿತ್ಯದ ಕಾರ್ಯಗಳಿಂದ ಮತ್ತು ಪರಿಶ್ರಮದಿಂದ ಯಾರಾದರೂ ದೂರವಿರಲು ಪ್ರಯತ್ನಿಸಿದರೆ ಅದು ಉತ್ಕಟವಾದ ಆಧ್ಯಾತ್ಮದ ಸ್ವಾರ್ಥವಾಗುತ್ತದೆ. ಈ ರೀತಿಯಕ್ರಿಯೆ ನಡೆಸಿದವರು ಪರಮೇಶ್ವರನ ಪ್ರೇಮದಿಂದ ವಂಚಿತರಾಗುತ್ತಾರೆ. ಪರಮೇಶ್ವರನ ದೇವಸ್ಥಾನದಲ್ಲಿ ಜನಗಳಿಗೆ ಶಾಂತಿಯ ಮತ್ತು ಸಾಫಲ್ಯ (ಶೂನ್ಯದಿಂದ) ಪಡೆದ ಅನುಭವವಾಗುತ್ತದೆ.

6. ಪ್ರ. ಕಾಲದ ಪ್ರಾರಂಭದಲ್ಲಿ ಪರಮೇಶ್ವರನ ಪ್ರಕಟಿತರೂಪ ಯಾವುದಾಗಿತ್ತು ?

ಉ. ಆಗ ಅಂಧಕಾರವನ್ನು ಅಂಧಕಾರ ಮರೆಮಾಡಿತ್ತು ಮತ್ತು ಇದ್ದದಿಲ್ಲ, ವಿವೇಚನಾರಹಿತ ಅವ್ಯವಸ್ಥೆಯಾಗಿತ್ತು. ಒಂದು ಮಾತ್ರ ಶೂನ್ಯದಿಂದ ಮುಟ್ಟಲ್ಪಟ್ಟು ಪ್ರಕಟಗೊಂಡಿತ್ತು – ಅದೇ ಪರಮೇಶ್ವರ – ಅವರ ಅನುಗ್ರಹದಿಂದಲೇ ಎಲ್ಲ ಚರಾಚರಗಳ, ನಡೆದಾಡುವ, ಈಜಾಡುವ ಮತ್ತು ಹಾರುವ ಜೀವಿಗಳ ಸೃಷ್ಟಿಯಾಯಿತು. ನಿರಾಕಾರವಾದ ಅಸ್ತಿಸ್ವವು ಪರಮೇಶ್ವರನಲ್ಲಿ ಅವಿತುಕೊಂಡಿತ್ತು.

7. ಪ್ರ. ಪರಮೇಶ್ವರನ ನಿಜವಾದ ಹೆಸರೇನು ? ಅವನು ಅವನ ಸೃಷ್ಟಿಯನ್ನು ಹೇಗೆ ಪ್ರೇರೇಪಿಸುತ್ತಾನೆ ?

ಉ. ಯಾವ ರಹಸ್ಯಗಳು ಅಸ್ತಿತ್ವದಲ್ಲಿ ಅಡಗಿಕೊಂಡಿರುತ್ತದೆಯೋ ಅದರಲ್ಲಿ ಬ್ರಹ್ಮಾಂಡವು ಮನೆ ಮಾಡಿಕೊಂಡಿರುತ್ತದೆ. ಆ ಅಸ್ತಿತ್ವದಲ್ಲಿ ಎಲ್ಲವೂ ಒಂದಾಗುತ್ತದೆ ಮತ್ತು ಅದರಿಂದ ಎಲ್ಲವೂ ಹೊರಬರುತ್ತದೆ. ಒಬ್ಬನೇ ಒಡೆಯನಿಗೆ ಹೆಸರಿರುವುದಿಲ್ಲ. ಋಷಿಗಳು ಅವನನ್ನು ಪರಮೇಶ್ವರ ಎಂದು ಕರೆಯುತ್ತಾರೆ. ಪ್ರವಾದಿಗಳು ಮಾನವ ರೂಪದಲ್ಲಿ ಭೂಮಿಗೆ ಬಂದು ಅವನಿಂದ ಸೃಷ್ಟಿ ಸಲ್ಪಟ್ಟವರನ್ನು ಪ್ರೇರೇಪಿಸುತ್ತಾರೆ. ಪ್ರವಾದಿಗಳು ಅವನ ಪ್ರತಿಬಿಂಬವಾಗಿದ್ದು ಅವರನ್ನು ದೇವತೆಗಳೆನ್ನುತ್ತಾರೆ. ಧಾರ್ಮಿಕರು ಪರಮೇಶ್ವರನಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ ಮತ್ತು ದೇವತೆಗಳ ಜೀವನ, ಕೆಲಸ ಮತ್ತು ಬೋಧನೆಗಳ ಕುರಿತು ದೇವಸ್ಥಾನಗಳಲ್ಲಿ ಉತ್ಸವಗಳನ್ನು ಆಚರಿಸುತ್ತಾರೆ.

8. ಪ್ರ. ನಾವು ಪ್ರತಿದಿನ ದೇವಸ್ಥಾನಕ್ಕೆ ಹೋಗಬೇಕೆ ? ಅರ್ಚಕನು ಏನು ಮಾಡಬೇಕು ?

ಉ. ದೇವಸ್ಥಾನಕ್ಕೆ ಪ್ರತಿನಿತ್ಯ ಹೋಗುವುದರಿಂದ ಮತ್ತು ದೇವರ ಪ್ರಾರ್ಥನೆ ಮಾಡುವುದರಿಂದ ಮಾನಸಿಕ ಸ್ಥೈರ್ಯ ಬರುತ್ತದೆ ಮತ್ತು ದೈವೀ ರಕ್ಷಣೆ ನಿಶ್ಚಿತವಾಗಿ ಸಿಗುತ್ತದೆ.

ಅರ್ಚಕನು ಸಮೂಹಗಾನದ ಪ್ರಾರ್ಥನೆಯನ್ನು ನಡೆಸಿಕೊಡಬೇಕು ಮತ್ತು ವೇದ / ಉಪನಿಷತ್/ ಗೀತೆ ಅಥವಾ ಇನ್ನಾವುದೇ ಹಿಂದೂ ಧಾರ್ಮಿಕ ಗ್ರಂಥದ ಕಡೆಯಪಕ್ಷ ಐದು ಶ್ಲೋಕಗಳ ಅರ್ಥವನ್ನು ವಿವರಿಸಬೇಕು. ಈಶ್ಲೋಕಗಳು ಭಕ್ತರ ಸಮಸ್ಯೆಗಳಿಗೆ ಪರಿಹಾರ ನೀಡುವಲ್ಲಿ ಮಾರ್ಗದರ್ಶಕ ವಾಗಿರುತ್ತದೆ. ಅರ್ಚಕನಾದವನು ಹಿಂದೂ ಸಮಾಜಕ್ಕೆ ಮಾರ್ಗದರ್ಶಕ, ಸ್ನೇಹಿತ ಹಾಗು ತತ್ವಜ್ಞಾನಿಯಂತೆ ಇದ್ದು ಸಮಾಜದ ಧಾರ್ಮಿಕ ಮತ್ತು ಐಹಿಕ ನೆಮ್ಮದಿಯ ಅಭಿವೃದ್ಧಿಗಾಗಿ ಪ್ರಯತ್ನಿಸುತ್ತಿರಬೇಕು.

9. ಪ್ರ. ನಾವು ಪೂಜೆಮಾಡಬೇಕೆ ಮತ್ತು ಪುರೋಹಿತರಿಗೆ ಸಂಭಾವನೆ ಕೊಡಬೇಕೆ ?

ಉ. ಪೂಜೆಮಾಡುವುದಕ್ಕಿಂತ ಪ್ರಾರ್ಥನೆ ಮಾಡುವುದು ಫಲದಾಯಕ. ಪೂಜೆಮಾಡುವುದು ಕಡ್ಡಾಯವಲ್ಲ. ಪುರೋಹಿತನ ಆರ್ಥಿಕ ಅವಶ್ಯಕತೆಗಳನ್ನು ಗಣನೆಗೆ ತೆಗೆದುಕೊಳ್ಳ ಬೇಕು ಮತ್ತು ಅರ್ಹರಾದವರು ಹಾಗೂ ಸಮರ್ಥರಾದವರು ಆ ಕೆಲಸವನ್ನು ಮಾಡಲು ಉತ್ಸುಕರಾಗು ವಂತೆ ಮಾಡಲು ಗೌರವಯುತವಾದ ಮೊಬಲಗನ್ನು ಕೊಡಬೇಕು. ಉತ್ತಮ ಪುರೋಹಿತರಿಂದ ಉತ್ತಮವಾದ ಸಮಾಜ ಸೃಷ್ಟಿಯಾಗುತ್ತದೆ.

10. ಪ್ರ. ಒಬ್ಬ ಧಾರ್ಮಿಕನಾದ ಹಿಂದುವಿಗೆ ಯಾವರೀತಿ ಶವಸಂಸ್ಕಾರ ಮಾಡಬೇಕು ?

ಉ. ಅಗ್ನಿಯನ್ನು ಪರಮಾತ್ಮನ ಒಂದು ರೂಪವೆಂದು ಪರಿಗಣಿಸಲಾಗಿದೆ. ಮೃತದೇಹವನ್ನು ಆತ್ಮನು ಪರಮಾತ್ಮನಲ್ಲಿ ಲೀನವಾಗುವಂತೆ ಅಗ್ನಿಗೆ ಅರ್ಪಿಸಬೇಕು. ಹೀಗೆ ಅರ್ಪಿಸುವಾಗ ದೇಶದ ಕಾನೂನನ್ನು ತಪ್ಪದೆ ಪಾಲಿಸಬೇಕು.

11. ಪ್ರ. ಹಿಂದೂಗಳ ಮದುವೆಯ ಕ್ರಮ ವೇನು ?

ಉ. ಮದುವೆಯು ಗಂಡು ಹೆಣ್ಣಿನ ನಡುವೆ ಏರ್ಪಡುವ ಸಂಘಟನೆಯಾಗಿದ್ದು ವಿಧಿವತ್ತಾಗಿ ಪ್ರಾದೇಶಿಕ ಸಂಪ್ರದಾಯದಂತೆ ನಡೆಯಬೇಕು.

12. ಪ್ರ. ನಿಷ್ಠೆ ಇಲ್ಲದ ಗಂಡ /ಹೆಡತಿಗೆ ಏನು ಶಿಕ್ಷ ಕೊಡಬೇಕು ? ಮತ್ತು ವ್ಯಭಿಚಾರ ನಡೆಸುವವರನ್ನು ಯಾವರೀತಿ ಶಿಕ್ಷಿಸಬೇಕು ?

ಉ. ನಿಷ್ಠೆ ಇಲ್ಲದಿರು ವಿಕೆ ನಂಬಿಕೆಯ ಉಲ್ಲಂಘನೆಯಾಗಿರುತ್ತದೆ. ನಂಬಿಕೆಯ ಉಲ್ಲಂಘನೆ ನಾನಾರೀತಿಯದಾಗಿರುತ್ತದೆ ಉದಾ – ಮಾಲೀಕ – ಕೆಲಸಗಾರರನಡುವೆ, ಕಂದಾಯ ಕೊಡುವವನ ಮತ್ತು ಸ್ವೀಕರಿಸುವವನ ನಡುವೆ, ಸರ್ಕಾರಿ ನೌಕರ ಮತ್ತು ಜನತೆಯ ನಡುವೆ ಇತ್ಯಾದಿ. ನಂಬಿಕೆಯ ಉಲ್ಲಂಘನೆಯಾದ ಸಂದರ್ಭದಲ್ಲಿ ನೀಡುವ ಶಿಕ್ಷೆಯೇ ನಿಷ್ಠೆಯ ಉಲ್ಲಂಘನೆಯ ಸಂದರ್ಭದಲ್ಲೂ ಕೊಡಬೇಕು.

13.ಪ್ರ. ಅತ್ಯಾಚಾರವೆಸಗಿದರೆ ಏನು ಶಿಕ್ಷೆ ಕೊಡಬೇಕು ?

ಉ. ಅತ್ಯಾಚಾರವು ಕ್ರೂರವಾದ ಬಲಾತ್ಕಾರವಾಗಿದೆ. ಅದಕ್ಕೆ ಅಷ್ಟೇ ಕಠೋರವಾದ ಶಿಕ್ಷೆ ಕೊಡ ಬೇಕು.

14. ಪ್ರ. ಸ್ವರ್ಗಕ್ಕೆ ಹೋಗಲು ಯಾರು ಅರ್ಹರು ?

ಉ. ಸ್ವರ್ಗಪಡೆಯಲು ಪ್ರತಿಯೊಬ್ಬ ಹಿಂದು ಪ್ರತಿನಿತ್ಯ ಎರಡು ಹೊತ್ತು ಸ್ತೋತ್ರ (ಮಂತ್ರ) ಪಠನ

ಮಾಡಬೇಕೆಂಬ ನಿರೀಕ್ಷೆ ಇದೆ. ಕಡೆಯ ಪಕ್ಷ ಹತ್ತು ನಿಮಿಷಕಾಲ ಪ್ರಾಣಾಯಾಮವನ್ನು ಮಾಡಬೇಕು ಮತ್ತು ಭೋಜ್ ಉತ್ಸವದಲ್ಲಿ ಪಾಲುಗೊಳ್ಳಬೇಕು.

15. ಪ್ರ. ಜನಗಳ ಉಪಯೋಗಕ್ಕಾಗಿ ದೇವಸ್ಥಾನವನ್ನು ಕಟ್ಟಲು ಸಹಾಯ ಮಾಡುವ ಅಥವಾ ಸಂರಕ್ಷಣೆ ಮಾಡುವವರನ್ನು ಸ್ವರ್ಗದಲ್ಲಿ ಯಾವರೀತಿ ನಡೆಸಿಕೊಳ್ಳುತ್ತಾರೆ ?

ಉ. ಜನರಿಗಾಗಿ ದೇವಸ್ಥಾನ ಕಟ್ಟುವವರಿಗೆ ಅಥವಾ ಅದರ ಸಂರಕ್ಷಣೆಗಾಗಿ ತಮ್ಮ ಶಕ್ತಿ ಸಾಮರ್ಥ್ಯವನ್ನು ಉಪಯೋಗಿಸುವವರಿಗೆ ಪರಮೇಶ್ವರನು ಸ್ವರ್ಗದಲ್ಲಿ ಪ್ರತ್ಯೇಕವಾದ ಸ್ಥಳವನ್ನು ನಿಗದಿ ಮಾಡಿರುತ್ತಾನೆ.

16.ಪ್ರ. ಈ ಜಗತ್ತಿನಲ್ಲಿ ಪರಮೇಶ್ವರನ ಮತ್ತು ಭಗವದ್ವೈರಿ (Satan)ಸ್ಥಾನವೇನು ?

ಉ. ಪರಮೇಶ್ವರನು ಪೂರ್ಣನಂದನಾಗಿದ್ದಾರೆ ಭಗವದ್ವೈರಿ ಯಾದರೋನೋವನ್ನು ನೀಡುವವನು. ಪರಮೇಶ್ವರನ ಅನುಯಾಯಿಗಳು ಸಂತೋಷಕರವಾದ ಜೀವನ ನಡೆಸುತ್ತಾರೆ. ಎಲ್ಲರಿಗೂ ಸಂತೋಷ ನೀಡುತ್ತಾರೆ ಮತ್ತು ನಿರಂತರವಾದ ಸುಖವನ್ನು ಅನುಭವಿಸುತ್ತಾರೆ. ಭಗವದ್ವೈರಿಯ ಅನುಯಾಯಿಗಳಾದರೋ ಗೂಢವಾದ, ಕ್ರೂರವಾದ ಜೀವನ ನಡೆಸುತ್ತಾ ಅವರ ಸಂಪರ್ಕಕ್ಕೆ ಬಂದವರಿಗೆಲ್ಲಾ ನೋವನ್ನುಂಟು ಮಾಡುತ್ತಾರೆ ಮತ್ತು ನರಕವು ಅವರ ಪ್ರಾರಬ್ಧದಲ್ಲಿರುತ್ತದೆ. ಭಗವದ್ವೈರಿಯ ಅನುಯಾಯಗಳು ಭಾಗ್ಯ ಸಂಪತ್ತನ್ನು ಕಸಿದುಕೊಳ್ಳುತ್ತಾರೆ. ಪರಮೇಶ್ವರನ ಅನುಯಾಯಗಳು ಕಷ್ಟಪಟ್ಟು ದುಡಿದು ಸಂಪಾದಿಸುತ್ತಾರೆ ಮತ್ತು ಅವನ ಸೃಷ್ಟಿಗೆ ತಮ್ಮ ಸೇವೆಸಲ್ಲಿಸುತ್ತಾರೆ. ಪರಮೇಶ್ವರನು ನಿರಂತರ ಸತ್ಯವಾದರೆ ಭಗವದ್ವೈರಿಯಾದರೋ ಮಾನವ ಕಲ್ಪನೆ.

17. ಪ್ರ. ಪುರೋಹಿತನಾಗಬೇಕಾದರೆ ಬ್ರಹ್ಮಚಾರಿಯಾಗಿರಬೇಕೆ ?

ಉ. ಪುರೋಹಿತನಾದವನು ಒಳ್ಳೆಯ ವಿದ್ಯಾವಂತನೂ ತಿಳುವಳಿಕೆಯುಳ್ಳ ವನೂ ನಿಃಸ್ವಾರ್ಥನೂ ಧನಾತ್ಮಕ ಮನಸ್ಸುಳ್ಳವನೂ ಹಾಗೂ ಸಮಸ್ಯೆಗಳನ್ನು ಸಹನೆಯಿಂದ ಕೇಳುವವನೂ ಆಗಿರಬೇಕು. ಸಮಸ್ಯೆ ಇರುವವರಿಗೆ ಪರಿಹಾರ ನೀಡಿ ಸಾಂತ್ವನ ಹೇಳುವ ಬುದ್ಧಿವಂತಿಕೆ ಅವನಿಗಿರಬೇಕು. ಬ್ರಹ್ಮಚರ್ಯವೆಂಬ ಹೆಚ್ಚಿನ ಅರ್ಹತೆ ಇರಬೇಕಿಂದಿಲ್ಲ. ಮಂತ್ರಗಳನ್ನು ಹೇಳಲು ಮಧುರವಾದ ಸ್ವರವಿದ್ದರೆ ಅದೊಂದು ಒಳ್ಳೆಯ ಅರ್ಹತೆ. ಬ್ರಹ್ಮಚರ್ಯವೆಂಬುದು ಒಂದು ಮನೋವೃತ್ತಿಯಷ್ಟೆ..

18. ಪ್ರ. ಹಿಂದಿನ ಋಷಿಗಳು ಬ್ರಹ್ಮಚರ್ಯವನ್ನು ಏಕೆ ಪಾಲಿಸುತ್ತಿದ್ದರು ?

ಉ. ಋಷಿಗಳು ಆಳವಾದ ತಿಳುವಳಿಕೆ ಉಳ್ಳವರು. ಜ್ಞಾನವುಳ್ಳ ಗುರುಗಳನ್ನು ಅರಸುತ್ತಾ ಪ್ರಪಂಚದ ಬೇರೆ ಬೇರೆ ಕಡೆಗಳಿಗೆ ಹೋಗುತ್ತಿದ್ದರು. ಆಗಿನ ಕಾಲದಲ್ಲಿ ಶಾಲೆಗಳಾಗಲೀ, ಕಾಲೇಜುಗಳಾಗಲೀ, ಪುಸ್ತಕಗಳಾಗಲೀ ಇರಲಿಲ್ಲ. ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ತಮ್ಮ ಆಶ್ರಮಗಳಲ್ಲಿ ಮೌಖಿಕವಾಗಿ ದೀರ್ಘಕಾಲ ಪಾಠ ಹೇಳುತ್ತಿದ್ದರು. ಹೆಚ್ಚಿನ ಸಮಯ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ–ಪ್ರತಿಕೂಲ ಹವಮಾನದಲ್ಲಿ, ಕ್ರೂರಪ್ರಾಣಿಗಳ ಭಯದಿಂದ, ಕಾಡಿನಲ್ಲಿರುವ ಮಾಂಸಭಕ್ಷಕ ಜನರ ಉಪಟಳವನ್ನು ಸಹಿಸುತ್ತಾ – ಪ್ರಯಾಣ ಮಾಡಬೇಕಾಗುತ್ತಿತು. ಈ ಪರಿಸ್ಥಿತಿಯಲ್ಲಿ ಕುಟುಂಬದೊಡನೆ ಸಂಚರಿಸುವುದು ಕಷ್ಟಸಾಧ್ಯವಾಗಿತ್ತು. ಜ್ಞಾನಪಿಪಾಸುವಾಗಿ ದೀರ್ಘಕಾಲ

ಬಹುದೂರದ ಪ್ರವಾಸದಲ್ಲಿರುತ್ತಿದುದರಿಂದ ಕುಟುಂಬದ ನಿರ್ವಹಣೆ ಕಷ್ಟವಾಗುತ್ತಿತ್ತು. ಹೀಗಾಗಿ ಋಷಿಗಳು ಬ್ರಹ್ಮಚರ್ಯ ಪಾಲನೆ ಮಾಡುತ್ತಿದ್ದರು. ಜನರು ಅವರಿಗೆ ಬಹಳ ಗೌರವ ಕೊಡುತ್ತಿದ್ದರು.

19. ಪ್ರ. ಧರ್ಮಗ್ರಂಥಗಳನ್ನು ಓದುವ ಅವಶ್ಯಕತೆ ಏನಿದೆ ?

ಉ. ಧಾರ್ಮಿಕ ಗ್ರಂಥಗಳು ಪರಮೇಶ್ವರನು ನೀಡಿದ ಸ್ಫೂರ್ತಿಯಿಂದ ರಚಿಸಲ್ಪಟ್ಟವೆ. ಈ ಪುಸ್ತಕಗಳು ಜೀವನದ ಧ್ರುವ ನಕ್ಷತ್ರವಾಗಿ ತಪ್ಪು ನಿರ್ಣಯಗಳನ್ನು ತೆಗೆದುಕೊಳ್ಳದಂತೆ ರಕ್ಷಿಸುತ್ತವೆ.

20. ಪ್ರ. ಪರಮೇಶ್ವರನು ಅರಿಷ್ಟಗಳನ್ನು ಏಕೆ ಕೊಡುತ್ತಾನೆ ?

ಉ. ಮನುಷ್ಯರಿಗೆ ಅವರ ಅವಯವಗಳನ್ನು, ಬುದ್ಧಿವಂತೆಕೆಯನ್ನು ಮತ್ತು ವಿವೇಚನೆಯನ್ನು ಪರಮೇಶ್ವರನು ಕೊಟ್ಟಿರುತ್ತಾನೆ. ಅರಿಷ್ಟಗಳು ಪರಮೇಶ್ವರನಲ್ಲಿ ನಂಬಿಕೆಯನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ಪರಮೇಶ್ವರನು ಅರಿಷ್ಟಗಳನ್ನು ಕೊಟ್ಟು ಜನರನ್ನು ಪರೀಕ್ಷಿಸುತ್ತಾನೆ.

21. ಪ್ರ. ನಮ್ಮ ಸಮಾಜದಲ್ಲಿ ಬಹಳ ಜನರ ಹಿತಾಸಕ್ತಿ ಮತ್ತು ರಕ್ಷಣೆಯನ್ನು ವಿದೇಶಿಯರು ಒಡ್ಡಿದ ಆಮಿಷಕ್ಕೊಳ್ಳಗಾಗಿ ಹಾಗೂ ತಮ್ಮ ಸ್ವಾರ್ಥ ಸಾಧನೆಗಾಗಿ ಮತ್ತು ದೇಶದ ರಾಜರಮೇಲೆ ಪ್ರತೀಕಾರ ಮಾಡುವ ಉದ್ದೇಶದಿಂದ ಬಲಿಗೊಟ್ಟ ತುಂಬಾ ಜನರಿದ್ದರು, ಅವರನ್ನು ಯಾವರೀತಿಯಾಗಿ ಕಾಣಬೇಕು ?

ಉ. ದುರದೃಷ್ಟವಶಾತ್ ಈ ರೀತಿಯ ಜನಗಳು ಸಾಮಾನ್ಯವಾಗಿ ಕುಟಿಲ ಬುದ್ಧಿಯವರೂ, ಪ್ರಬಲವಾದ ವರ್ಚಸ್ಸುಳ್ಳವರೂ, ಬಲಿಷ್ಠರೂ ಅಥವಾ ತಮ್ಮ ವಿಶ್ವಾಸಘಾತಉಂಟು ಮಾಡುವ ಸಮಯ ಪ್ರಜ್ಞಯಿಂದ ಜನರಲ್ಲಿ ಗೊಂದಲವುಂಟು ಮಾಡುವವರಾಗಿರುತ್ತಾರೆ. ಈ ರೀತಿಯ ನೀಚ ವಿಶ್ವಾಸಘಾತುಕರನ್ನು ದೇಹಮಾರುವ ದಂದೆಯಲ್ಲಿ ಹೆಂಗಸರನ್ನು ಮಾರುವವನಿಗೆ ನೀಡುವ ಶಿಕ್ಷೆ ನೀಡ ಬೇಕು. ನಿಮಗೆ ಶಿಕ್ಷಿಸಲು ಧೈರ್ಯ ಬರದಿದ್ದರೆ ನರಕದಲ್ಲಿ ನಿಮಗಾಗಿ ಜಾಗ ಸಿದ್ಧವಿರುತ್ತದೆ.

22. ಪ್ರ. ಒಬ್ಬ ಭ್ರಷ್ಟಾಚಾರಿಯು ಒಳ್ಳೆಯ ಜೀವನ ನಡೆಸುತ್ತಾನೆ ಆದಾಗ್ಯೂ, ಪರಮೇಶ್ವರನು ಮನುಷ್ಯರು ಪ್ರಾಮಾಣಿಕರಾಗಿರ ಬೇಕೆಂದು ಏಕೆ ವಿಧಿಸಿದ್ದಾನೆ ?

ಉ. ಒಬ್ಬ ಬ್ರಷ್ಟಾಚಾರಿಯು ಚೆನ್ನಾಗಿ ಊಟಮಾಡುತ್ತಾನೆ, ಆದರೆ ಪ್ರಾಮಾಣಿಕನಿಗೆ ನಿದ್ರೆ ಚೆನ್ನಾಗಿಬರುತ್ತದೆ. ಒಬ್ಬ ಪ್ರಾಮಾಣಿಕ ಮನುಷ್ಯನ ಜೀವನವು ಆನಂದಮಯವಾಗಿದ್ದು ಅವನ ಮಕ್ಕಳು ಸುಖವಾಗಿರುತ್ತಾರೆ.

23.ಪ್ರ. ಮಹಾನ್ ಸಾಧಕರು ಯಾವರೀತಿ ವರ್ತಿಸಬೇಕು ?

ಉ. ಮಹಾನ್ ಸಾಧಕರು "ತಾವು ಆಡುವಮಾತು ಮತ್ತು ತಮ್ಮ ಕೃತಿ" ನಿನ್ನನ್ನು ಕೆರಳಿಸದಿರಲಿ ಎಂದು ಪರಮೇಶ್ವರನನ್ನು ಪ್ರಾರ್ಥಿಸುತ್ತಿರ ಬೇಕು.

24.ಪ್ರ. ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಸ್ತ್ರೀಯರ ಸ್ಥಾನ ವೇನು ?

ಉ. ಒಂದು ಹಕ್ಕಿಯು ಹಾರಬೇಕಾದರೆ ಅದರ ಎರಡೂ ರೆಕ್ಕೆಗಳಲ್ಲಿ ಬಲವಿರಬೇಕು ಇದೇರೀತಿ ಒಂದು ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಎಲ್ಲ ವಿಷಯಗಳಲ್ಲಿ ಗಂಡಸಿಗೂ ಹಾಗೂ ಹೆಂಗಸಿಗೂ ಸಮಾನವಾದ ಸ್ಥಾನಮಾನವಿರಬೇಕು.

25.ಪ್ರ. ನಾವು ಸನ್ಯಾಸ ತೆಗೆದುಕೊಳ್ಳುವುದರಿಂದ ಪರಮೇಶ್ವರನಿಗೆ ಸಂತೋಷವಾಗುತ್ತದೆಯೇ ?

ಉ. ಸನ್ಯಾಸವೆಂದರೆ ಪ್ರಾಪಂಚಿಕ ವ್ಯವಹಾರಗಳನ್ನು ಬಿಟ್ಟು ನಮ್ಮ ಆಧ್ಯಾತ್ಮಿಕ ಉನ್ನತಿಗಾಗಿ ಕೆಲಸಮಾಡುವುದು ಎಂದು ಅರ್ಥ. ಆಧ್ಯಾತ್ತಿಕ ಸ್ವಾರ್ಥವು ಬಹಳ ಉತ್ಕಟವಾದ ಸ್ವಾರ್ಥವಾಗಿರುತ್ತದೆ. ಎಲ್ಲ ಮಾನವ ಸಮಾಜದಲ್ಲಿ ಅದರ ಸದಸ್ಯರು ಸ್ವಾರ್ಥರಾಗುವುದನ್ನು ತಡೆಯುವ ಅದ್ವಿತೀಯ ವಾದ ವ್ಯವಸ್ಥೆ ಹುದುಗಿ ಕೊಂಡಿದೆ. ಈ ಸ್ವಾಭಾವಿಕ ವ್ಯವಸ್ಥೆಯು ತನ್ನ ಹಿತವನ್ನು ಕಾಪಾಡಿಕೊಳ್ಳುತ್ತಾ ಇತರ ಹಿತದಲ್ಲಿ ಆಸಕ್ತಿ ತೋರುವಂತೆ ಮಾಡುತ್ತದೆ. ವಾಸ್ತವವಾಗಿ ಇತರರ ಹಿತವನ್ನು ಕಾಪಾಡಿಕೊಳ್ಳುವುದು ಸಾಧ್ಯವಿಲ್ಲ. ಈ ಸಾಮೂಹಿಕಹಿತವೇ ತನ್ನ ಹಿತ ಮತ್ತು ಇತರರ ಹಿತವನ್ನು ರಕ್ಷಿಸುವ ದಾರಿಯನ್ನು ಯಾವಾಗಲೂ ತೋರಿಸುತ್ತದೆ. ಸಂಕುಚಿತವಾದ ಸ್ವಹಿತವೇ ಕ್ರಮೇಣ ಮಕ್ಕಳ, ಕುಟುಂಬದ ಮತ್ತು ನೆರೆಹೊರೆಯವರ ಮತ್ತು ತನ್ನ ದೇಶದ ಹಾಗೂವಿಶಾಲವಾದ ಪ್ರಪಂಚದ ಹಿತದೊಂದಿಗೆ ಸೇರಿ ಒಂದಾಗುತ್ತದೆ. ಈ ಪ್ರಪಂಚದಲ್ಲಿ ಕಾಯಕವೆಂಬ ಪೂಜೆಯೇ ಪರಮೇಶ್ವರನಿಗೆ ಸಂತೋಷ ಉಂಟು ಮಾಡುವುದಾಗಿದೆ. ಸಂನ್ಯಾಸವು ಸ್ವಾರ್ಥಿಯ ಪಲಾಯನವಾದವಾಗಿದೆ.

26. ಪ್ರ. ಬ್ರಹ್ಮಚರ್ಯ ಏಕೆ ಬೇಕು ? ಅದು ಯಾರಿಗೆ ಅವಶ್ಯಕ ?

ವಿದ್ಯಾರ್ಥಿಯಾಗಿರುವಾಗ ಅಭ್ಯಾಸಮಾಡಲು-ಓದಲು ಮನಸ್ಸಿನ ಏಕಾಗ್ರತೆಯನ್ನು ಸಾಧಿಸಲು ಸಹಾಯಕವಾಗುತ್ತದೆ.

ಐಹಿಕ ಸುಖವನ್ನು ಪೂರ್ಣವಾಗಿ ಬಿಡುವ ಪ್ರತಿಜ್ಞೆ ಮಾಡಿದವರು ಇಂದ್ರಿಯ ಸುಖವನ್ನು ಮತ್ತು ದಿನ ನಿತ್ಯದ ಅವಶ್ಯಕತೆಗಳನ್ನು ನಿಯಂತ್ರಿಸಿಕೊಳ್ಳಬೇಕು. ಬ್ರಹ್ಮಚರ್ಯವು ಐಹಿಕ ಸುಖದ ಮತ್ತು ಇಂದ್ರಿಯ ಸುಖದ ತ್ಯಾಗವಾಗಿದೆ.

27.ಪ್ರ ಪರಮೇಶ್ವರನು ಎಲ್ಲರೂ ಶಿಸ್ತಿನಿಂದ ಇರಬೇಕು ಎಂದು ಏಕೆ ಬಯಸುತ್ತಾನೆ ?

ಉ. ಶಿಸ್ತು ಎಂಬುದು ಪರಿಶ್ರಮದಿಂದ ಮಾಡಬೇಕಾದ ಅಭ್ಯಾಸ. ಆದರೆ ಅದರ ತರಬೇತಿ ಆವರಿಗೆ ಪ್ರಾಮಾಣಿಕತೆ ಮತ್ತು ಶಾಂತಿ ಎಂಬ ಫಲ ಸಿಕ್ಕುತ್ತದೆ. ಪರಮೇಶ್ವರನು ಶಿಸ್ತಿನ ಮನುಷ್ಯರನ್ನು ಪ್ರೀತಿಸುತ್ತಾನೆ.

28. ಪ್ರ. ಸನ್ನಿವೇಶಕ್ಕೆ ಬೇಕಾದಂತೆ ಮನುಷ್ಯನು ಏಕೆ ಬದಲಾಗುತ್ತಾನೆ ?

ಉ. ಈ ಪ್ರಪಂಚವು ವಾಸ್ತವಿಕತೆಗೆ ತಕ್ಕಂತೆ ತನ್ನ ಮನಸ್ಸನ್ನು ಹೊಂದಿಸಿಕೊಳ್ಳುವ ಬುದ್ಧಿವಂತನಿಗೆ ಸೇರಿದೆ. ಪರಮೇಶ್ವರನು ಬುದ್ದಿವಂತನನ್ನು ಪ್ರೀತಿಸುತ್ತಾನೆ. ಜೀವನದಲ್ಲಿ ಏನನ್ನೂ ಸಾಧಿಸದವರಿಗೆ ಸ್ವಲ್ಪವನ್ನಾದರೂ ಸಾಧಿಸಿದವರ ಬಗ್ಗೆ ನಿರ್ಣಯಿಸುವ ಅರ್ಹತೆ ಇರುವುದಿಲ್ಲ.

29.ಪ್ರ. ನಾಲಿಗೆಯನ್ನು ಹೇಗೆ ಹತೋಟಿಯಲ್ಲಿಡುವುದು ?

ಉ. ಸರಿಯಾದ ಸಮಯದಲ್ಲಿ ಸರಿಯಾದ ಮಾತನ್ನು ಆಡುವುದು ಬಹಳ ಮುಖ್ಯ ವಾದುದು, ಅದೇ ರೀತಿ ಪ್ರಚೋದನೆಯಿಂದಾಗಿ ಅನುಚಿತ ಮಾತನ್ನು ಆಡ ಬಾರದು. ಅಪ್ರಿಯವಾದ ಸತ್ಯ ಕೇಳುಗರನ್ನು ಕೆರಳಿಸುತ್ತದೆ.

30. ಪ್ರ. ಜೀವನೋಪಾಯಕ್ಕಾಗಿ ಅಪಾಯವನ್ನೆದುರಿಸಬೇಕೆ ?

ಉ. ಅಪಜಯವಾದರೆ ನಿರಾಶೆ ಉಂಟಾಗಬಹುದು ಆದರೆ ಪ್ರಯತ್ನವನ್ನೇ ಮಾಡದಿದ್ದರೆ ಭವಿಷ್ಯವೇ

ಇಲ್ಲದಿರಬಹುದು. ಅಪಜಯವು ನಿಕೃಷ್ಟವಾದ ವಿಫಲತೆಯಲ್ಲ. ನಮ್ಮ ಕೆಲಸಗಳನ್ನು ನಾವು ನಿಶ್ಚಯಿಸುವಂತೆಯೇ ನಮ್ಮ ಕೆಲಸಗಳು ನಮ್ಮ ಇರವನ್ನು ಇತ್ಯರ್ಥ ಗೊಳಿಸುತ್ತವೆ.

31.ಪ್ರ. ಧೈರ್ಯ ವೆಂದರೇನು ?

ಉ. ಧೈರ್ಯವೆಂದರೆ ಹೆದರಿಕೆಗೆ ತೋರುವ ಪ್ರತಿರೋಧ, ಹೆದರಿಕೆಯ ಮೇಲಿನ ಅಧಿಪತ್ಯ – ಹೆದರಿಕೆಯು ಇಲ್ಲದಿರುವುದಲ್ಲ.

32.ಪ್ರ. ಸಂಗಾತಿಯನ್ನು ಹೇಗೇ ಆಯ್ಕೆಮಾಡುವುದು ?

ಉ. ಬುದ್ಧಿವಂತರೊಡನೆ ಒಡನಾಡುವವನು ಬುದ್ಧಿವಂತನೇ ಆಗುತ್ತಾನೆ. ಮೂರ್ಖರ ಸಂಘವು ವಿನಾಶಕ್ಕೆ ಕಾರಣವಾಗುತ್ತದೆ.

33.ಪ್ರ. ಪರಮೇಶ್ವರನು ಜೀವನದಲ್ಲಿ ಯಾರನ್ನು ಯಶಸ್ವಿಯನ್ನಾಗಿಸುತ್ತಾನೆ ?

ಉ. ಕಷ್ಟಪಟ್ಟು ಕೆಲಸಮಾಡುವುದೇ ಯಶಸ್ಸಿನ ಬೆಲೆ, ಕೈಯಲ್ಲಿರುವ ಕೆಲಸಕ್ಕೆ ನಮ್ಮನ್ನು ಸಮರ್ಪಿಸಿಕೊಳ್ಳ ಬೇಕು ಮತ್ತು ಸೋಲುಅಥವಾ ಗೆಲುವಿನ ಬಗ್ಗೆ ಯೋಚಿಸದೆ ದೃಢ ಸಂಕಲ್ಪ ದಿಂದ ನಾವು ಕೈಗೆತ್ತಿಕೊಂಡ ಕೆಲಸವನ್ನು ಮಾಡಬೇಕು. ಫಲಿತಾಂಶಕ್ಕಾಗಿ ಆಸೆಪಡಬಾರದು, ಏಕೆಂದರೆ ಫಲತಾಂಶವು ಎಲ್ಲ ಶಕ್ತಿಯ ಪರಿಣಾಮದ ಸ್ವರೂಪ ಮತ್ತು ಪ್ರಮಾಣಕ್ಕನುಗುಣವಾಗಿರಬೇಕೆಂದು ವಿಧಿ ನಿಯಮವಿದೆ. ಕಾರ್ಯತತ್ಪರತೆಯ ಸೌಭಾಗ್ಯದ ತಾಯಿ ಆಗಿದೆ.

34.ಪ್ರ. ಸಂನ್ಯಾಸಿಯಾಗಲು ಕೌಟುಂಬಿಕ ಮತ್ತು ಸಾಮಾಜಿಕ ಜೀವನವನ್ನು ಬಿಡಬೇಕೆ ?

ಉ. ನಮ್ಮ ಆತ್ಮ ಸಂತೋಷಕ್ಕಾಗಿ ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದಕ್ಕಿಂತ ನಮ್ಮ ಕರ್ತವ್ಯಗಳನ್ನು ಮಾಡುವುದು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು ಉತ್ತಮ. ನಮ್ಮ ಕರ್ತವ್ಯಗಳನ್ನು ಕಡೆಗಣಿಸಿ ಧಾರ್ಮಿಕ ಚಟುಚಿಕೆಗಳತ್ತ ಮಾತ್ರ ಒಲವು ತೋರುವುದು ಸರಿಯಲ್ಲ. ಈ ರೀತಿಯ ಚಟುವಚಿಕೆ ಧಾರ್ಮಿಕ ವಿಲಾಸವಾಗುತ್ತದೆ ಮತ್ತು ಪರಮೇಶ್ವರನ ಸೇವೆ ಎನಿಸಿಕೊಳ್ಳುವುದಿಲ್ಲ.

35.ಪ್ರ. ಬ್ರಹ್ಮಚರ್ಯ ವೆಂದರೆ ಏನು ?

ಉ. ಬ್ರಹ್ಮಚರ್ಯ ವೆಂದರೆ ನಮ್ಮನ್ನು ನಾವೇ ನಿಯಂತ್ರಿಸಿ ಕೊಂಡು ನಮ್ಮ ಗುರಿಯತ್ತ ಏಕಾಗ್ರತೆ ಹೊಂದಿರುವುದಾಗಿದೆ. ಅದು ಲೈಂಗಿಕ ಪ್ರವೃತ್ತಿಯನ್ನು ಮಾತ್ರ ನಿಯಂತ್ರಿಸುವುದಲ್ಲ. ಲೈಂಗಿಕ ಪ್ರವೃತ್ತಿಯು ಪರಮೇಶ್ವರನು ನೀಡಿದವರವಾಗಿದ್ದು ನಿಯಂತ್ರಣದಲ್ಲಿದ್ದರೆ ಪಾಪವಲ್ಲ.

36.ಪ್ರ. ಪ್ರಾಣಿಗಳನ್ನು ಕೊಲ್ಲಲು ಧರ್ಮದ ಒಪ್ಪಿಗೆ ಇದೆಯೆ ?

ಉ. ಆತ್ಮ ರಕ್ಷಣೆಗಾಗಿ ಮತ್ತು ಆಹಾರಕ್ಕಾಗಿ ಮಾತ್ರ ಕನಿಷ್ಠ ಪ್ರಮಾಣದಲ್ಲಿ ಪ್ರಾಣಿಗಳನ್ನು ಕೊಲ್ಲಬಹುದಾಗಿದೆ. ಆದರೆ ಕನಿಷ್ಠ ಪ್ರಮಾಣದ ಅವಶ್ಯಕತೆಯನ್ನು ಹೊರತುಪಡಿಸಿ ಪ್ರಾಣಿಗಳನ್ನು ಹಿಂಸಿಸುವುದು ಪಾಪ. ಹೆಚ್ಚಿನ ಪ್ರಾಣಿಗಳು ಮತ್ತು ಕೀಟಗಳು ಬದುಕಲು ಕೊಲ್ಲುತ್ತವೆ. ಉದಾ :ಹುಲಿ, ಹಲ್ಲಿ, ಜೇಡ ಇತ್ಯಾದಿ. ಪರಮೇಶ್ವರನು ಎಲ್ಲ ರೀತಿಯ ಕೊಲ್ಲುವಕ್ರಿಯಯನ್ನು ಆಹರಕ್ಕಾಗಿಕೂಡ, ನಿಷೇಧಿಸಿದ್ದರೆ ಮಾಂಸಾಹಾರಿ ಪ್ರಾಣಿಗಳನ್ನು – ಹುಲಿ, ಚಿರತೆ ಇತ್ಯಾದಿ – ಸೃಷ್ಟಿಸುತ್ತಿರಲಿಲ್ಲ.

37.ಪ್ರ. ಹಿಂದೂ ಹೆಂಗಸು ಪತಿಯ ಮರಣಾನಂತರ ಪುನ : ಮದುವೆಯಾಗಬಹುದೇ ?

ಉ. ಪತಿಯ ಮರಣಾನಂತರ ಹಿಂದೂ ಹೆಂಗಸು ಪುನ : ಮದುವೆಯಾಗಲು ಅನುಮತಿ ಇದೆ. ಉದಾಹರಣೆಕ್ಕಾಗಿ – ಮಹಾಭಾರತದಲ್ಲಿ ಹಸ್ತಿನಾಪುರದ ರಾಜ ಧೃತರಾಷ್ಟ್ರನ ತಂದೆ ವಿಚಿತ್ರ ವೀರ್ಯನು ಸಣ್ಣಪ್ರಾಯದಲ್ಲಿ ಕಾಲವಾದಾಗ, ಧೃತರಾಷ್ಟ್ರನ ಅಜ್ಜಿಯಾದ ಸತ್ಯವತಿಯು ವಿಚಿತ್ರ ವೀರ್ಯನ ಹೆಂಡತಿಯಾದ ಅಂಬಾಲಿಕ ಅವನ ಅಣ್ಣ ಭೀಷ್ಮನೊಂದಿಗೆ ಸಂಬಂಧ ಹೊಂದಬೇಕೆಂದು ಬಯಸುತ್ತಾಳೆ. ಆದರೆ ಭೀಷ್ಮನು ಜೀವನಪರ್ಯಂತ ಬ್ರಹ್ಮಚರ್ಯವ್ರತ ಪಾಲನೆ ಮಾಡುವ ಪ್ರತಿಜ್ಞೆ ಮಾಡಿದ್ದರಿಂದ ಸತ್ಯವತಿಯ ಮತ್ತೊಬ್ಬ ಮಗ ಪರಾಶರನು ಅವಳ ಇಚ್ಚೆಯನ್ನು ಪೂರೈಸಲು ಅಂಬಾಲಿಕೆಯ ಸಂಬಂಧ ಮಾಡಿದಾಗ ಧೃತರಾಷ್ಟ್ರನ ಜನನವಾಯಿತು.

38.ಪ್ರ. ನನ್ನ ಸ್ನೇಹಿತನು ತಪ್ಪು (ಪಾಪ) ಮಾಡಿದ್ದಾನೆ, ಹಿಂದೂವಾಗಿ ನಾನು ಅವನನ್ನು ತ್ಯಜಿಸಲೇ ?

ಉ. ನಿಮ್ಮ ಸ್ನೇಹಿತನು ಪಾಪಿಯಾದರೂ, ಅವನು ಮತ್ತಷ್ಟು ಪಾಪಗಳನ್ನು ಮಾಡುವುದರಿಂದ ತಡೆಯಲು ಸಹಾಯ ಮಾಡಬೇಕು.

39. ಪ್ರ. ಧಾರ್ಮಿಕನಾದವನು ಜೀವನ ನಡೆಸಲು ಕಷ್ಟಪಟ್ಟು ದುಡಿಯಬೇಕೆ ಅಥವಾ ಭಿಕ್ಷೆ ಬೇಡಬೇಕೆ ?

ಉ. ಸಬಲನಾದವನು ಮತ್ತು ಅರ್ಹನಾದವನು ತನಗಾಗಿ ಮತ್ತು ಇತರರಿಗಾಗಿ ಖಂಡಿತವಾಗಿ ದುಡಿಯ ಬೇಕು, ಇದರಿಂದಾಗಿ ಪರಮೇಶ್ವರನ ಕೃಪೆಗೆ ಪಾತ್ರನಾಗುತ್ತಾನೆ. ತನ್ನ ದುಡಿಮೆಯ ಸಂಪಾದನನೆಯಿಂದ ಜೀವಿಸುವವನಿಗೆ ಪರಮೇಶ್ವರನ ಕೃಪೆ ಇರುತ್ತದಲ್ಲವೆ ಭಿಕ್ಷೆ ಬೇಡಿ ಜೀವನ ನಡೆಸುವವನ ಮೇಲಲ್ಲ.

40. ಪ್ರ. ತನ್ನ ಯಜಮಾನನ ಬಗ್ಗೆ ಯಾವರೀತಿ ನಡೆದುಕೊಳ್ಳ ಬೇಕು ?

ಉ. ನಿಮ್ಮ ಕುಟುಂಬಕ್ಕೆ ಅನ್ನಾಹಾರವನ್ನು ಕೊಡುತ್ತಿರುವವರ ಬಗ್ಗೆ ನಿಷ್ಠೆಯಿಂದಿರ ಬೇಕು ಅವರನ್ನು ದ್ವೇಷಿಸುವುದರಿಂದ ಪರಮೇಶ್ವರನು ಕೆರಳುತ್ತಾನೆ.

41. ಪ್ರ. ಅಸೂಯೆಯನ್ನು ಹೇಗೆ ನಿಯಂತ್ರಿಸುವುದು ? ವರವನ್ನು ಹೇಗೆ ಕೇಳುವುದು ?

ಉ. ಧನಿಕನಾದವನು ತನಗಿಂತ ಕಡಿಮೆ ಸಂಪತ್ತಿರುವವನ್ನು ನೋಡಬೇಕು ಮತ್ತು ಬಡವನಾದವನು ತನಗಿಂತಲೂ ಬಡವರನ್ನು ನೋಡಿ ಪರಮೇಶ್ವರನ ಕೃಪೆ ಹೇಗೆ ತಮ್ಮ ಮೇಲಿದೆ ಎಂದು ಮನಗಂಡು ಅಸೂಯೆಯನ್ನು ಬಿಡಬೇಕು.

42.ಪ್ರ. ಅರಿವಿನ ಅನ್ವೇಷಣೆ ಯಾವ ಫಲಿತಾಂಶ ನೀಡುತ್ತದೇ ?

ಉ. ಅರಿವಿನ ಅನ್ವೇಷಣೆಯಲ್ಲಿ ಪ್ರಪಂಚದ ಯಾವ ಮೂಲೆಗಾದರೂ ಹೋಗಿರಿ. ತೊಟ್ಟಿಲಿ ನಿಂದ ಚಿತೆಯವರಿಗೆ ಕಲಿಕೆಗಾಗಿ ಜೀವನವನ್ನು ಅರ್ಪಿಸಿಕೊಳ್ಳುವವನು ಪರಮೇಶ್ವರನ ಸೇವೆ ಮಾಡುತ್ತಾನೆ ಪರಮೇಶ್ವರನನ್ನು ಸಾಕ್ಷಾತ್ಕರಿಸಿಕೊಳ್ಳಲು ನಿಮ್ಮನ್ನು ನೀವು ತಿಳಿಯಿರಿ. ಜ್ಞಾನಾರ್ಜನೆಯು ಧಾರ್ಮಿಕರಾದ ಎಲ್ಲ ಸ್ತ್ರೀ ಪುರುಷರ ಅಗತ್ಯವಾದ ಕರ್ತವ್ಯವಾಗಿದೆ. ಜ್ಞಾನವನ್ನು ಗಳಿಸಿರಿ, ಅದನ್ನು ಪಡೆದವರಿಗೆ ಸರಿ ತಪ್ಪುಗಳ ವ್ಯತ್ಯಾಸ ತಿಳಿಯುತ್ತದೆ ಮತ್ತು ಸ್ವರ್ಗ ಮತ್ತು ಭೂಮಿಯ ಮಾರ್ಗವನ್ನು ಆರಿಸಿಕೊಳ್ಳಲು ಸಹಾಯವಾಗುತ್ತದೆ.

43.ಪ್ರ. ಸಂಪತ್ತನ್ನು ಸಂಚಿಸುವುದರಿಂದ ಮನುಷ್ಯನು ಅಹಂಕಾರಿಯೂ ಉದ್ಧಟನೂ ಆಗುತ್ತಾನೆ. ಸಂಪತ್ತನ್ನು ಸಂಚಯಿಸುವುದು ಪಾಪವೇ ? ಈ ಐಹಿಕ ಪ್ರಪಂಚದಲ್ಲಿರುವವನು ಪ್ರೌಢ ಜೀವನದಲ್ಲಿ ಯಾವರೀತಿ ನಡೆದು ಕೊಳ್ಳ ಬೇಕು ?

ಉ. ಪರಮೇಶ್ವರನ ರಾಜ್ಯದಲ್ಲಿ ಎಲ್ಲ ಕೆಲಸಗಳನ್ನು ಅದರ ಉದ್ದೇಶ ಮತ್ತು ಅದನ್ನು ಮಾಡಲು ಇದ್ದ ಪ್ರೋತ್ಸಾಹದ ಮೇಲೆ ತೀರ್ಮಾನಿಸಲಗುತ್ತದೆ. ಅಹಂಕಾರ ವಿರುವವನಿಗೆ ಪರಮೇಶ್ವರನ ರಾಜ್ಯದಲ್ಲಿ ಪ್ರವೇಶವಿರುವುದಿಲ್ಲ. ಪರಮೇಶ್ವರನಿಗೆ ಧಾರ್ಮಿಕನಾದ ಮನುಷ್ಯನು ಯಥೇಷ್ಟವಾದ ಐಹಿಕ ಸಂಪತ್ತು ಕೊಡಲಾಗದ ವಿಫಲವಾದ ಸಂತೃಪ್ತ ಮನಸ್ಸಿನವನಾಗಿರುತ್ತಾನೆ. ಈ ಪ್ರಪಂಚದಲ್ಲಿ ತಾವರೆ ಎಲೆಯ ಮೇಲಿರುವ ನೀರಿನ ಹನಿಯಂತಿರಿ. ಸಂಪತನ್ನು ಸೃಷ್ಟಿಸಿರಿ ಆದರೆ ಅದರ ಮೋಹಕ್ಕೆ ಬೀಳದಿರಿ. ಏಕೆಂದರೆ ಪರಮೇಶ್ವರನು ನಿಮ್ಮನ್ನು ಈ ಪ್ರಪಂಚವನ್ನು ಸಂಪದ್ಭರಿತವನ್ನಾಗಿ ಮಾಡಲು ಕಳುಹಿಸಿದ್ದಾನೆ. ನಿಮ್ಮ ಯಾವುದೇ ದೌರ್ಭಾಗ್ಯವು ನಿಮ್ಮದೇ ಕರ್ಮದ ಫಲಿತಾಂಶವಾಗಿದೆ. ಪರಮೇಶ್ವರನಲ್ಲಿ ಕ್ಷಮೆಯಾಚಿಸಿರಿ.

44.ಪ್ರ. ದೇವಸ್ಥಾನದಲ್ಲಿ ಪ್ರಧಾನ ಅರ್ಚಕನಾಗ ಬೇಕಾದರೆ ಬ್ರಹ್ಮಚರ್ಯದ ಪಾಲನೆ ಕಡ್ಡಾಯವೇ ?

ಉ. ಇಲ್ಲ. ಬ್ರಹ್ಮಚರ್ಯದ ಪಾಲನೆ ಅವಶ್ಯಕವಲ್ಲ. ವಿದ್ಯಾರ್ಥಿ ದೆಸೆಯಲ್ಲಿ ಬ್ರಹ್ಮಚರ್ಯವನ್ನು ಪಾಲಸುವುದರಿಂದ ವಿದ್ಯಾರ್ಥಿಯು ಏಕಾಗ್ರತೆ ಇಂದ ಅಭ್ಯಾಸಮಾಡಲು ಪ್ರಯೋಜನ ವಾಗುತ್ತದೆ. ಯೌವ್ವನಾವಸ್ಥೆಯಲ್ಲಿ ಬ್ರಹ್ಮಚರ್ಯದ ಪಾಲನೆಯಿಂದ ನಿತ್ಯದ ಕೆಲಸವನ್ನೂ ಮಾಡು ವಾಗಲೂ ಸಹ ಮನಸ್ಸಿನ ಮೇಲೆ ಒತ್ತಡ ಬೀಳುತ್ತದೆ.

45.ಪ್ರ. ಹಿಂದೂಗಳು ಕಡ್ಡಾಯವಾಗಿ ದಾನ ಮಾಡಲೇ ಬೇಕೆ ?

ಉ. ದಾನ ಮಾಡುವುದು ಒಳ್ಳಯದು ಆದರೆ ಕಡ್ಡಾಯವಲ್ಲ. ಧಾರ್ಮಿಕತತ್ವವು ವರ್ತಮಾನದ ಆರ್ಥಿಕ ಸ್ಥಿತಿಗತಿಗಳಿಗೆ ಮಾತ್ರವಲ್ಲ ಅದಕ್ಕೆ ಕಾಲದ ಮಿತಿ ಇರುವುದಿಲ್ಲ. ಪ್ರತಿಯೊಬ್ಬನೂ ಸಂಪತ್ತನ್ನು ಸೃಷ್ಟಿಸಬೇಕು ಅದರಿಂದ ಪ್ರಪಂಚದ ಅಭಿವೃದ್ಧಿಯಾಗಿ ಭಿಕ್ಷುಕರಿಗೆ ದಾನ ನೀಡುವ ಅವಶ್ಯಕತೆ ಬರುವುದಿಲ್ಲ. ಹಿಂದೂಗಳು ತಮ್ಮ ಸಂಪಾದನೆಯ ಶೇಕಡ ಒಂದು ಭಾಗವನ್ನು ಸಮಾಜದ ಒಳಿತಿಗಾಗಿ ಮತ್ತು ದೇವಸ್ಥಾನದ ಬಗ್ಗೆ ಅವಶ್ಯವಾಗಿ ನೀಡ ಬೇಕು.

46. ಪ್ರ. ಹಿಂದೂ ಧರ್ಮವು ವೈಜ್ಞಾನಿಕ ಶೋಧನೆಗಳನ್ನು ಯಾವರೀತಿ ಆದರಿಸಬೇಕು ?

ಉ. ಹಿಂದೂ ಧರ್ಮದ ಹಾಗೂ ವಿಜ್ಞಾನದ ಸಿದ್ಧಾಂತಗಳು ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಉದಾಹರಣೆಗೆ ಅಥರ್ವ ವೇದದ 19/5/2/2-5ರಲ್ಲಿ ಬರುವ 'ಗಗನದುಹಿಕ ರಾತ್ರಿ'ಯ ವಿವರಣೆ ಯಲ್ಲಿ ರಕ್ಷಣಾ ಸಿಬ್ಬಂದಿಯ ನಿಯೋಜನೆಯ ಗಣಿತ ಶ್ರೇಣಿಯ ಬಗ್ಗೆ - 99, 88, 77, 66, 55, 44, 33, 22, 11 ಇತ್ಯಾದಿ ಓದುತ್ತೇವೆ. ಇದೇ ಗಣಿತ ಶ್ರೇಣಿಯು ಆರ್ಯಭಟ್ಟ, ಬ್ರಹ್ಮಸ್ಫುಟ, ಸಿದ್ಧಾಂತಶೇಖರ, ಲೀಲಾವತಿ ಇತ್ಯಾದಿ ಸನಾತನ ಗ್ರಂಥಗಳಲ್ಲಿ ಕೂಡ ಪ್ರತಿಪಾದಿಸಲ್ಪಟ್ಟು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ. ಬ್ರಹ್ಮಗುಪ್ತನ ಬ್ರಹ್ಮಸ್ಫುಟ ಸಿದ್ಧಾಂತದ 17ನೇಯ ಶ್ಲೋಕದಲ್ಲಿ ಗಣಿತಶ್ರೇಣಿಯನ್ನು ಈ ಕೆಳಗಿನಂತೆ ಸ್ಪಷ್ಟವಾಗಿ ನಿರೂಪಿಸಲಾಗಿದೆ.

पदमेकहीनमुत्तरगुणिता संयुक्तमादिनाऽन्त्यधनम्
आदियुतान्त्यधनार्धं मध्यधनं पदगुणनं गणितम् ॥

– ब्रम्हगुप्त

– ब्राम्हस्फुटसिद्धान्त गणिताध्याय १७ सुत्र ॥

ಪದಮೇಕಹೀನಮುತ್ತರಗುಣಿತಾ ಸಂಯುಕ್ತಮಾದಿನಾಽಂತಧನಮ್ ।

ಆದಿಯುತಾಂತ್ಯಧನಾರ್ಧಂ ಮಧ್ಯಧನಂ ಪದಗುಣನಂ ಗಣಿತಮ್॥ – ಬ್ರಹ್ಮಗುಪ್ತ

ಬ್ರಹ್ಮಸ್ಫುಟ ಗಣಿತ ಸಿದ್ಧಾಂತ ಗಣಿತಾಧ್ಯಾಯ

ಇದರ ಅರ್ಥ: n- term $t_n = [a+(n-1)b]$

Middle term $M_n = \frac{2a+(n-1)b}{2}$ sum of all terms $S_n = n/2[2a+(n-1)b]$

ಹಿಂದೂ ಧರ್ಮವು ವಿಜ್ಞಾನದ ಹೊಸ ಶೋಧನೆಗಳನ್ನು ತನ್ನಲ್ಲಿ ಸೇರಿಸಿಕೊಂಡು ಹೊಸ ಸತ್ಯದಿಂದ ಮಾರ್ಪಾಡಾಗುವ ಸ್ಥಿತಿ ಸ್ಥಾಪಕ ಗುಣವನ್ನು ಹೊಂದಿದೆ. ಹಿಂದೂ ಧರ್ಮದ ಈ ಸ್ಥಿತಿ ಸ್ಥಾಪಕ ಗುಣದಿಂದಾಗಿ ತನ್ನ ಸಿದ್ಧಾಂತವನ್ನು ಧಾಳಿನಡಿಸಿದ ಮತಾಂತರಗೊಳಿಸುವ ವಿದೇಶಿ ಧರ್ಮಗಳ, ಶತ್ರುತ್ವ ಸಾಧಿಸುವ ವಿದೇಶೀ ಆಡಳಿತಗಾರರ ಕಾಟವಿದ್ದರೂ ದೊಡ್ಡ ದೊಡ್ಡ ಮತ್ತು ಧಾರ್ಮಿಕ ಅಂತರ್ಯುದ್ಧಗಳು ನಡೆದರೂ ಪರಿವರ್ತನೆ. ಹೊಂದದಂತೆ ಅಖಂಡವಾಗಿ ಕಾಪಾಡಿಕೊಳ್ಳಲು ಸಾಧ್ಯ ವಾಗಿದೆ. ಹಿಂದೂಗಳು ವೈಜ್ಞಾನಿಕ ಶೋಧನೆಗಳನ್ನು ಅಪೌರುಷೇಯವಾದ ಪರಮೇಶ್ವರನ ಕೊಡುಗೆಯಂದು ಪರಿಗಣಿಸುತ್ತಾರೆ – ದೇವರಿಂದ ಮೊದಲೇ ಕೊಡಲ್ಪಟ್ಟ ಉಡುಗೊರೆಯನ್ನು ವಿಜ್ಞಾನಿಗಳು ಮತ್ತು ಋಷಿಗಳು ಕಂಡುಹಿಡಿದುದಾಗಿ.

47.ಪ್ರ. ಹಿಂದೂ ಪುರೋಹಿತರಿಗೆ ಯಾವ ಉಡುಪು ಸೂಕ್ತವಾದುದು ?

ಉ. ಕಾಲಕ್ಕೆ ತಕ್ಕ ಕೆಲಸಮಾಡಲು ಅನುಕೂಲಕರವಾದ ಉಡುಪು ಸೂಕ್ತವಾದುದಾಗಿದೆ. ಶ್ರೀಕೃಷ್ಣನ ಕಾಲಕ್ಕೆ ಪಂಚೆ ಮತ್ತು ಪಾದುಕೆ (ಮರದಲ್ಲಿ ಮಾಡಿದ್ದು) ಪ್ರಚಲಿತವಿತ್ತು ಅದನ್ನೇ ಪುರೋಹಿತರು ಉಪಯೋಗಸುತ್ತಿದರು. ಪುರೋಹಿತರು ಉಪಯೋಗಕ್ಕೆ ತಕ್ಕುದಾದ ಉಡುಪನ್ನು ಉಪಯೋಗಿಸಬೇಕು.

48.ಪ್ರ. ಪುರೋಹಿತರು ಅಂತರಾಷ್ಟ್ರೀಯ ಉಡುಪನ್ನು (ಪ್ಯಾಂಟ್, ಕೋಟ್) ಉಪಯೋಗಿಸಬಹುದೇ ?

ಉ. ಚಳಿ ಹೆಚ್ಚಾಗಿರುವ ಶೀತವಲಯದಹ ವಾಗುಣವವಿರುವಲ್ಲಿ ಪ್ಯಾಂಟ್ ಮತ್ತು ಕೋಟು ಸರಿಯಾಗುತ್ತದೆ. ಉಷ್ಣ ಹೆಚ್ಚಾಗಿರುನಲ್ಲಿ ವಂಚೆ ಸರಿಯಾಗುತ್ತದೆ. ಪುರೋಹಿತರು ತಮ್ಮ ತಿಳಿವು, ನೀಡುವ ಉಪ ನ್ಯಾಸ ಮತ್ತು ಅವರಿಂದ ಜನರಿಗೆ ಸಿಗುವ ಸಮಾಧಾನಗಳಿಂದ ಸಮಾಜಕ್ಕೆ ಉಪಯುಕ್ತರಾಗಿರುತ್ತಾರೆ. ಹೀಗಾಗಿ ಅವರು ಧರಿಸುವ ಉಡುಪಿನ ಆಯ್ಕೆ ಆವ್ಯಕ್ತಿಯ ಆಯ್ಕೆಗೇ ಬಿಡಬೇಕು.

49.ಪ್ರ. ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಜೀವನದಲ್ಲಿ ಹಿಂದೂಗಳು ಧರಿಸುವ ಉಡಿಗೆಯ (ಪಂಚೆ) ಪರಿಣಾಮವೇನು ?

ಉ. ಪಂಚೆಯ ಉಪಯೋಗದಿಂದ ಸಮಾಜದಲ್ಲಿ ಸರಳ ವ್ಯಕ್ತಿತ್ವದ ರೂಪ ಬಿಂಬಗೊಳ್ಳುತ್ತದೆ. ಪಂಚೆ ಧರಿಸಿದವರು ತಮ್ಮನ್ನು ತಾವು ರಕ್ಷಿಸಿಕೊಳ್ಳುವುದು ಕಷ್ಟಕರ. ಪಂಚೆಯನ್ನುಟ್ಟ ಹಿಂದೂಗಳನ್ನು ಚಲ್ಲಣ ಧರಿಸಿದ ಮಧ್ಯಪ್ರಾಚ್ಯಾದ ಧಾಳಿಕೋರರು ಯಾವಾಗಲೂ ಪರಾಜಯಗೊಳಿಸುತ್ತಿದ್ದರು.

50.ಪ್ರ. ದೇಶದ ಪ್ರತಿಷ್ಠಿತ ಕೆಲಸಗಳನ್ನು ಮಾಡಲು ಪಂಚೆ ಆದರ್ಶ ಪ್ರಾಯವಾದ ಉಡುಗೆಯೇ ?

ಉ. ಪಂಚೆಧರಿಸಿದ ಹಿಂದೂಗಳು ನಿಧಾನಗತಿಯಲ್ಲಿ ಕೆಲಸಮಾಡುವವರಾಗಿದ್ದು ಹೆಚ್ಚುಕಡಿಮೆ ಎಲ್ಲ ಸ್ಪರ್ಧೆಗಳಲ್ಲಿ ವೈಯುಕ್ತಿಕವಾಗಿಯಾಗಲೀ, ಒಂದು ದೇಶ ವಾಗಿಯಾಗಲೀ ಏನನ್ನು ಸಾಧಿಸದೆ

ಪರಾಭವಗೊಂಡಿದ್ದರು. ಹಿಂದೂಗಳು ತಮ್ಮದೇಗೂಡುನಿರ್ಮಿಸಿ ಕಲ್ಪನೆಯ ಪ್ರತಿಷ್ಠ ಬೆಳಸಿಕೊಂಡಿದ್ದರು ಆರಾಜ್ಯದಲ್ಲಿ ಯಾರೂ ಸ್ಪರ್ಧಿಸುತ್ತಿರಲಿಲ್ಲ.

51.ಪ್ರ. ಹಿಂದೂಗಳು ಕಲ್ಲಿನ ವಿಗ್ರಹವನ್ನು ಸರ್ವಶಕ್ತನ ಅಥವಾ ಸೈತಾನನ ಗುರುತೆಂದು ಗೌರವಿಸುವುದನ್ನು ಪರಮೇಶ್ವರನು ಪಾಪವೆಂದು ಪರಿಗಣಿಸುತ್ತಾನೆಯೇ ?

ಉ. ಕಲ್ಲಿನ ವಿಗ್ರಹವನ್ನು ಪರಮೇಶ್ವರನ ಅಥವಾ ಸೈತಾನನ ಗುರುತೆಂದು ಬಣ್ಣಿಸುವುದು ಅನಗತ್ಯ. ಆದರೆ ಆರೀತಿ ಮಾಡುವುದು ಜನರನ್ನು ಒಂದೇಕಡೆ ಒಟ್ಟುಸೇರಿಸುವ ಪರಿಣಾಮಕಾರಿ ವಿಧಾನವಾಗಿದೆ. ಎಲ್ಲಾ ಧರ್ಮದ ಬೋಧಕರು ಒಂದಲ್ಲ ಒಂದುರೀತಿ ಈ ವಿಧಾನವನ್ನು ಜನರನ್ನು ಒಟ್ಟುಸೇರಿಸಲು ಉಪಯೋಗಿಸಿದ್ದಾರೆ. ಕೆಲವು ಧರ್ಮದವರು ವಿಗ್ರಹವನ್ನು, ಕೆಲವರು ಪುಸ್ತಕಗಳನ್ನೂ, ಕೆಲವರು ಕಟ್ಟಡಗಳನ್ನು ಪರಮೇಶ್ವರನಿಗೆ ಗೌರವ ತೋರಲು ಉಪಯೋಗಿಸುತ್ತಾರೆ. ಮತ್ತೆ ಕೆಲವರು ಕಲ್ಲಿನ ಕಂಬವನ್ನು ಸೈತಾನನಿಗೆ ಅಗೌರವ ಸೂಚಿಸಲು ಉಪಯೋಗಿಸುತ್ತಾರೆ. ಸರ್ವಶ್ರೇಷ್ಠನಾದ ಪರಮೇಶ್ವರನು ಈ ಅಲ್ಪ ವಿಷಯಗಳಿಂದ ಪ್ರಭಾವಿತನಾಗುವುದಿಲ್ಲ.

52.ಪ್ರ. ಕಠಿಣ ನ್ಯಾಯ ಶಾಸ್ತ್ರವು– ಕಳ್ಳನ ಕೈ ಕತ್ತರಿಸುವುದು ಇತ್ಯಾದಿ – ಪರಮೇಶ್ವರನಿಗೆ ಸಂತೋಷಉಂಟು ಮಾಡುತ್ತದೆಯೇ ? ಮಾನವಜನಾಂಗಕ್ಕೆ ಒಳ್ಳೆಯದೇ ?

ಉ. ಪರಮೇಶ್ವರನು ಎಲ್ಲರ ಮತ್ತು ಎಲ್ಲದರ ಸೃಷ್ಟಿಕರ್ತನು. ಅವನಿಗೆ ಅಪಾರವಾದ ದಯೆಯಿದೆ ಮತ್ತು ಅವನು ತನ್ನ ಸೃಷ್ಟಿಯ ವಿಷಯದಲ್ಲಿ ಹೃದಯಹೀನನಾಗಲಾರ. ಒಬ್ಬ ಕಳ್ಳನು ಕದಿಯಲು ಕಡುಬಡತನವೇಕಾರಣ. ಜೀವನ ನಡೆಸುವ ಸುಲಭವಾದ ಅವಕಾಶಗಳನ್ನು ಸಮಾಜ ಒದಗಿಸುವುದಿಲ್ಲ. ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಳ್ಳುವ ಭದ್ರತೆಯನ್ನು ಸಮಾಜ ನೀಡುವುದಿಲ್ಲ. ಒಂದು ದೇಶದಲ್ಲಿ ಜೀವನ ನಡೆಸಲು ಕಳ್ಳತನವನ್ನೇ ಅವಲವಂಬಿಸ ಬೇಕಾಗಿರುವವನಿಗೆ, ಇನ್ನೊಂದು ದೇಶದಲ್ಲಿ ಸಭ್ಯ ಜೀವನ ನಡೆಸಲು ಯೋಗ್ಯವಾದ ಸಾಮಾಜಿಕ ಭದ್ರತೆ (Social Security net)ಸಿಗಬಹುದು. ಹೀಗಾಗಿ ಕದಿಯುವುದು ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯಿಂದಾದ ರೋಗವಾಗಿದೆ. ಕಳ್ಳನ ಕೈಗಳನ್ನು ಕತ್ತರಿಸುವ ಶಿಕ್ಷೆ ಸ್ವಾರ್ಥರೂ, ಅನ್ಯಾಯದ ಪಕ್ಷಪಾತಿಗಳೂ ಆದ ಆಡಳಿತಗಾರರು ಜನಸಾಮಾನ್ಯರ ಬಾಯಿ ಮುಚ್ಚಿಸಲು ಅನುಸರಿಸುವ ಭಯಹುಟ್ಟಿಸುವ ಉಪಾಯವಾಗಿದೆ. ಈರೀತಿ ಮಾಡುವುದರಿಂದ ಜನಸಾಮಾನ್ಯರು ಹೆದರಿ ನಡುಗಿ ತಮ್ಮ ನ್ಯಾಯಯುತವಾದ ಕುಂದು ಕೊರತೆಗಳ ಬಗ್ಗೆ ಸೊಲ್ಲೆತ್ತುವುದಿಲ್ಲ.

53.ಪ್ರ. ನೇರವಾದ ನ್ಯಾಯ ಶಾಸ್ತ್ರ (ವಿವಾಹಾತೀತ ಸಂಬಂಧವಿರುವ ಮಹಿಳೆಗೆ ಪಾಸಿ ಶಿಕ್ಷೆ ನೀಡುವ)ದ ಪಾಲನೆ ಪರಮೇಶ್ವರನಿಗೆ ಸಂತೋಷ ಉಂಟು ಮಾಡುತ್ತದೆಯೇ ಮತ್ತು ಮಾನವ ಜನಾಂಗಕ್ಕೆ ಒಳ್ಳೆಯದೇ ?

ಉ. ಎಲ್ಲ ಪುರುಷರಿಗೂ, ಮಹಿಳೆಯರಿಗೂ ಜೀವನದಲ್ಲಿ ಸ್ವಾಭಾವಿಕವಾದ ಆನಂದವನ್ನು ಪಡೆಯುವ ಅಧಿಕಾರವಿದೆ. ಅದು ಪರಮೇಶ್ವರನ ಉಡುಗೊರೆಯಾಗಿದೆ. ಅಪ್ರಾಮಾಣಿಕ/ಅವಮಾನ ಗೊಳಿಸುವ/ದಯೆಯಿಲ್ಲದ/ಸದಾ ಕಾಯಿಲೆಯಿರುವ/ಆಸಕ್ತಿ ಇಲ್ಲದ/ನಪುಂಸಕನಾದವನು ಗಂಡನಾಗಿದ್ದರೆ ಮಹಿಳೆಯು ಇನ್ನೊಬ್ಬನ ಸೆಳೆತಕ್ಕೆ ಅವಳು ಪರಮೇಶ್ವರನಿಗೆ ಅಗೌರವ ತೋರಿದಳೆಂದು ಹೇಳಲಾಗದು. ಬಹಳಷ್ಟು ಸಂದರ್ಭಗಳಲ್ಲಿ ಆಡಳಿತವರ್ಗ, ಸಮಾಜದ

ಪ್ರತಿಷ್ಠಿತರು ಅಪ್ರಮಾಣಿಕರು/ದಯೆಯಿಲ್ಲದವರೂ/ದಾರಿತಪ್ಪಿಸುವರೂ/ಅವಮಾನಗೊಳಿಸುವ ಪ್ರವೃತ್ತಿಯವರೂ, ತಮ್ಮ ಮಹಿಳೆಯರನ್ನು ಧಾರ್ಮಿಕ ಆಜ್ಞೆಯ ಹೆಸರಿನಲ್ಲಿ ಹೆದರಿಸಿ ನಿಯಂತ್ರಿಸಲು ಇಷ್ಟಪಡುತಿದ್ದರು. ವಿವಾಹಾತೀತ ಸಂಬಂಧ ಹೊಂದಿದ ಮಹಿಳೆಯು ಗಂಡನಾದವನಿಗೆ ವಿಚ್ಛೇಧನೆ ನೀಡುವ ಹಕ್ಕು ಇತ್ತು ಮತ್ತು ಸಮಾಜವು ಆ ರೀತಿ ನಡೆದುಕೊಂಡ ಮಹಿಳೆಯನ್ನು ಅಶ್ರಯ ನೀಡದೆ ವಿಚ್ಛೇಧನಕ್ಕೆ ಒಪ್ಪುವಂತೆ ಬಲವಂತ ಮಾಡಬಹುದು.ಇನ್ನಾವುದೇ ರೀತಿಯ ಶಿಕ್ಷೆಯು ಪರಮೇಶ್ವರನಿಗೆ ಎಸಗಿದ ಅಪರಾಧವಾಗುತ್ತದೆ. ಆದರೆ ವಿವಾಹಿತರದವರಲ್ಲಿ ಪರಸ್ಪರ ನಿಷ್ಠೆ ಇದ್ದರೆ ಶಾಶ್ವತವಾದ ಆನಂದದ ಭರವಸೆ ಇರುವುದು ಮಾತ್ರವಲ್ಲದೆ ಮಕ್ಕಳ ಪಾಲನೆಯೂ ಉತ್ತಮವಾಗುವುದರಿಂದ ಪರಮೇಶ್ವರನು ಸಂತೋಷಪಡುತ್ತಾನೆ.

54.ಪ್ರ. ಹಿಂದೂಗಳು ಆತ್ಮರಕ್ಷಣೆಗಾಗಿ ಆಯುಧವನ್ನು ಹೊಂದಿರ ಬೇಕೆ ?

ಉ. ಹದಿನಾಲುಕು ವರುಷ ಮೇಲ್ಪಟ್ಟ ಪ್ರತಿಯೊಬ್ಬ ಹಿಂದೂ ದೇಶದ ಕಾನೂನು ಸಮ್ಮತಿಸುವ ಆಯುಧ ಹೊಂದಿರಬೇಕು. ಅತಿಬಡವನಾದರೂ ತನ್ನ ಮನೆಯಲ್ಲಿ ಬಡಿಗೆಯನ್ನು ಇಟ್ಟಿರ ಬೇಕು. ಆಯುಧವಿದ್ದರೆ ಧೈರ್ಯ, ಆತ್ಮಗೌರವವಿರುತ್ತದೆ ಮತ್ತು ಅವಶ್ಯಕತೆ ಇದ್ದಾಗ ರಕ್ಷಣೆ ಸಿಕ್ಕುತ್ತದೆ. ಧೈರ್ಯವಂತನಾದವನಿಗೆ ಮಾತ್ರ ಪರಮೇಶ್ವರನಲ್ಲಿ ನಿಜವಾದ ಪ್ರೇಮವಿರುತ್ತದೆ.

55.ಪ್ರ. ಯಾವ ಪಂಗಡ ಅಥವಾ ಜನರನ್ನು ಹಿಂದೂಗಳೂ ಪ್ರೋತ್ಸಾಹಿಸಬೇಕು ?

ಉ. ಹಿಂದೂಗಳ ಆತ್ಮಗೌರವ, ಶಕ್ತಿ, ಭಧ್ರತೆ ಮತ್ತು ಆರ್ಥಿಕ ಸುಸ್ಥಿತಿಯನ್ನು ರಕ್ಷಿಸುವ ಪಂಗಡ ಅಥವಾ ಜನರನ್ನು ಬೆಂಬಲಿಸ ಬೇಕು ಮತ್ತು ಹಿಂದೂಗಳ ಹಿತಾಸಕ್ತಿಯ ಬಗ್ಗೆ ಉದಾಸೀನ ತಾಳುವವರನ್ನು ವಿರೋಧಿಸ ಬೇಕು.

56.ಪ್ರ. ತನ್ನ ಧರ್ಮ ಅಥವಾ ದೇವತೆಗೆ ಅವಮಾನವಾದರೆ ಯಾವರೀತಿ ವರ್ತಿಸ ಬೇಕು ?

ಉ. ಪರಮೇಶ್ವರನನ್ನು ಅಥವಾ ದೇವತೆಯನ್ನು ಅವಮಾನಿಸದವರೊಡನೆ ತಾಯಿಯನ್ನು ಕೊಂದವರೊಡನೆ ಯಾವರೀತಿ ವರ್ತಿಸುತ್ತಿರೋ ಅದೇ ರೀತಿಯಾಗಿ ವರ್ತಿಸಬೇಕು.

57.ಪ್ರ. ಇತರ ಧರ್ಮದವರು ದೇವಸ್ಥಾನಕ್ಕೆ ಬರಲು ಬಿಡಬೇಕೆ ?

ಉ. ಅಶುಚಿಯಾಗಿರುವರು ಮತ್ತು ಅಂಟುರೋಗವಿರುವವರನ್ನು ದೇವಸ್ಥಾನಕ್ಕೆ ಬರದಂತೆ ತಡೆಯಬೇಕು. ಉಳಿದೆಲ್ಲ ಜನರಿಗೆ ದೇವಸ್ಥಾನವು ಆಶ್ರಯಸ್ಥಾನವಾಗಿ ಧಾರ್ಮಿಕ ಶಾಂತಿಯನ್ನು ನೀಡ ಬೇಕು.

58.ಪ್ರ. ಭಕ್ತರು ದೇವಸ್ಥಾನದಿಂದ ಏನನ್ನು ನಿರೀಕ್ಷಿಸ ಬೇಕು ?

ಉ. ದೇವಸ್ಥಾನವು ಪ್ರಾರ್ಥನಾ ಸ್ಥಳವಾಗಿ ಸೂರ್ಯದಯದಿಂದ ಸೂರ್ಯಾಸ್ತದವರೆಗೆ ಎಲ್ಲರಿಗೂ ತೆರೆದಿರಬೇಕು. ದೇವಸ್ಥಾನದ ಆಡಳಿತಗಾರರು ಭಕ್ತರಿಂದ ಬರುವ ಕಾಣಿಕೆಯಿಂದ ಹಸಿದವರಿಗೆ ಆಹಾರ ನೀಡಬೇಕು. ಜನಗಳಿಗೆ ವಿದ್ಯಾಭ್ಯಾಸಕೊಡುವ, ಶುಶ್ರೂಷೆ ನೀಡುವ ಮತ್ತು ಇತರ ಪರಿಹಾರ ಕೊಡುವ ಕಾರ್ಯಗಳು ಹಾಗೂ ಭಕ್ತರ ಕ್ಷೇಮಾಭಿವೃದ್ಧಿ ಕೆಲಸಗಳನ್ನು ಮಾಡಬೇಕು.

59. ಪ್ರ. ರಾಜಕೀಯ ಮತ್ತು ಧರ್ಮಗಳು ಬೇರೆಯಾಗಿರಬೇಕೆ ?

ಉ. ರಾಜಕೀಯವು ಯಾವುದೇ ವಿಚಾರಕುರಿತು ಜನಗಳ ಮನೋವೃತ್ತಿಯಾಗಿದೆ. ಮನೋವೃತ್ತಿಯು ಮೌಲ್ಯಗಳಕುರಿತಾತಿದ ತಿಳುವಳಿಕೆಯ ಪರಿಣಾಮವಾಗಿದೆ. ಮತ್ತು ಮೌಲ್ಯಗಳಕುರಿತಾದ

ತಿಳುವಳಿಕೆಯು ಧಾರ್ಮಿಕ ಬದ್ಧತೆಯ ಉತ್ಪನ್ನವಾಗಿದೆ. ಧರ್ಮ ಮತ್ತು ರಾಜಕೀಯವು ಪರಸ್ಪರ ಸಮ್ಮಿಶ್ರವಾಗಿದ್ದು ಪರಸ್ಪರ ಪ್ರಯೋಜನಕಾರಿ ಸಂಬಂಧ ಹೊಂದಿದೆ. ಈ ಸಂಬಂಧವನ್ನು ಅಲಕ್ಷ್ಯ ಮಾಡಿದಾಗ ರಾಜಕೀಯವು ಜನರಿಗಾಗಿ ಅಲ್ಲದೆ ದುಷ್ಟರ ಆಡಳಿತವನ್ನು ನಿರಂತರವಾಗಿಸುವ ವ್ಯವಸ್ಥೆಯಾಗುತ್ತದೆ. (ಉದಾ : (1) ಮಹಾಭಾರತದಲ್ಲಿ ಭೀಷ್ಮನು ರಾಜಕೀಯ ಮತ್ತು ಧರ್ಮವನ್ನು ಬೆರೆಸುವಲ್ಲಿ ವಿಫಲನಾಗಿ ಭಾರತಕ್ಕೆ ಒಬ್ಬ ಶಕ್ತಿಶಾಲಿಯು ರಾಜನಾಗುವುದು ತಪ್ಪಿತು.

(2) ಶ್ರೀಕೃಷ್ಣನು ರಾಜಕೀಯ ಮತ್ತು ಧರ್ಮವನ್ನು ಬೆರೆಸಿದ್ದರ ಫಲವಾಗಿ ಭಗವದ್ಗೀತೆಯ ಉತ್ಪನ್ನ ವಾಯಿತು ಮತ್ತು ಕೌರವ ವಂಶದ ಪತನವಾಗಿ ಧಾರ್ಮಿಕರಾದ ಪಾಂಡವ ರಾಜ್ಯ ಸ್ಥಾಪಿತವಾಯಿತು)

60.ಪ್ರ. ರಾಜನೊಡನೆ ಹೇಗೆ ನಡೆದುಕೊಳ್ಳ ಬೇಕು ?

ಉ. ರಾಜನಿಗೆ ನಿಷ್ಠೆ ತೋರಬೇಕು, ಇದರಿಂದ ಅವನು ರಾಜ್ಯಕಟ್ಟುವ ಕೆಲಸ ಸುಗಮವಾಗುತ್ತದೆ. ರಾಜ್ಯಕಟ್ಟಲು ಬೇಕಾದಷ್ಟು ಮಾರ್ಗಗಳಿದ್ದು ನಿಮಗೆ ಉತ್ತಮವಾದ ಮಾರ್ಗವು ಕಾಣಲೂ ಬಹುದು ಆದರೆ ರಾಜನ ರೀತಿಯನ್ನು ಬಿಡುವಂತೆ ಒತ್ತಾಯಿಸುವುದರಿಂದ ಏನನ್ನು ಸಾಧಿಸಲಾಗದು. ರಾಜನು ನಿ:ಸ್ವಾರ್ಥಿಯಾಗಿದ್ದಲ್ಲಿ ನಿಷ್ಠೆಯು ಪೂರ್ಣವಾಗಿರಬೇಕು. ರಾಜನ ಸಾರ್ವಜನಿಕ ಕೆಲಸಗಳು ಮುಖ್ಯವೇ ಹೊರತು ಅವನ ವೈಯುಕ್ತಿಕ ಜೀವನವಲ್ಲ.

61.ಪ್ರ. ದೇವಸ್ಥಾನವನ್ನು ತನ್ನ ವ್ಯಾಪಾರದ ಅಭಿವೃದ್ಧಿಗಾಗಿ ಉಪಯೋಗಿಸಬಹುದೇ ?

ಉ. ದೇವಸ್ಥಾನವು ವ್ಯಾಪಾರದ ಬಗ್ಗೆ ಪ್ರಚಾರಮಾಡುವ ಸ್ಥಳವಲ್ಲ. ದೇವಸ್ಥಾನವು ಪರಮೇಶ್ವರನ ಪ್ರಾರ್ಥನೆಮಾಡುವ ಸ್ಥಳವಾಗಿದೆ. ಅಲ್ಲಿ ಸಮಾಜಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಚರ್ಚಿಸಬಹುದು.

62.ಪ್ರ. ಅರ್ಚಕರು ಶ್ಲೋಕಗಳ ಉಚ್ಚಾರಣೆಯನ್ನು ತಪ್ಪಾಗಿ ಮಾಡಿದರೆ ಏನಾಗುತ್ತದೆ ?

ಉ. ಪರಮೇಶ್ವರನು ಅರ್ಥಮಾಡಿಕೊಳ್ಳಬಲ್ಲವನಾಗಿದ್ದು ಅನುಯಾಯಿಗಳ ಮೇಲೆ ದಯತೋರುತ್ತಾನೆ ಆದರೆ ಅರ್ಚಕನಿಗೆ ಪ್ರಾರ್ಥನೆಯ ಪ್ರಯೋಜನ ಸಿಕ್ಕುವುದಿಲ್ಲ. ತಿಳಿದವರು ಸರಿಯಾದ ಉಚ್ಚಾರಣೆಯನ್ನು ಯಾರೂ ಇಲ್ಲದಿರುವಾಗ ಹೇಳಿಕೊಟ್ಟು ಸರಿಪಡಿಸಬೇಕು. ಸಾರ್ವಜನಿಕವಾಗಿ ಅವರಿಗೆ ಪೇಚಾಟವಾಗುವುದನ್ನು ತಪ್ಪಿಸಬೇಕು.

63. ಪ್ರ. ಯಾವ ಕೆಲಸವು ಗೌರವಾನ್ವಿತವಾದದ್ದು ?

ಉ. ಗೀತೆಯು ಕೆಲಸದಲ್ಲಿ ವರ್ಗೀಕರಣವಿಲ್ಲವೆಂದು ಬೋಧಿಸುತ್ತದೆ. ಯಾವ ಕೆಲಸವೂ ಕೆಳದರ್ಜೆಯದಲ್ಲ. ಯಾವುದೇ ಕೆಲಸವನ್ನು ಮಾಡತಕ್ಕುದಾದರೆ ಅದು ಒಳ್ಳೆಯದು ಮತ್ತು ಗೌರವಾನ್ವಿತವಾದುದೂ ಆಗಿದೆ.

64.ಪ್ರ. ಪ್ರಪಂಚವನ್ನು ಸಂತೋಷಕರವಾಗಿರುವಂತೆ ಹೇಗೆ ಬದಲಾಯಿಸುವುದು ?

ಉ. ಎಲ್ಲರೂ ಪ್ರಪಂಚವನ್ನು ಬದಲಿಸುವ ನಿಟ್ಟಿನಲ್ಲಿ ಯೋಚಿಸುತ್ತಾರೆ, ಆದರೆ ತನ್ನನ್ನು ತಾನು ಬದಲಾಯಿಸಿಕೊಳ್ಳುವ ಯೋಚನೆಯು ಪರಮೇಶ್ವರನಿಗೆ ಹೆಚ್ಚು ಪ್ರೀತಿಪಾತ್ರವಾದುದು.

65.ಪ್ರ. ಪರಮೇಶ್ವರನ ಭಕ್ತರು ವಿಗ್ರಹಾರಾಧನೆ ಮಾಡಲು ದೇವಸ್ಥಾನಕ್ಕೆ ಏಕೆ ಹೋಗುತ್ತಾರೆ ?

ಉ. ವಿಗ್ರಹಾರಾಧನೆ ಮಾಡುವಾಗ ಹೇಳುವ ಮಂತ್ರಗಳು ದೇವತೆಗಳ ಕೊಡುಗೆಯ ಪ್ರಶಂಸೆ ಮತ್ತು ಶ್ಲಾಘನೆಯಾಗಿದೆ. ದೇವತೆಗಳು ಹಿಂದೂ ಪ್ರವಾದಿಗಳಾಗಿದ್ದು ಉದ್ಧಾರಕರಾಗಿ ಪರಮೇಶ್ವರನಿಂದ ಕಳುಹಿಸಲ್ಪಟ್ಟವರಾಗಿದ್ದಾರೆ. ವಿಗ್ರಹಾರಾಧನೆಯಾದರೂ ಮಹಾಪುರುಷನ ಪೂಜೆಯ ಪ್ರದರ್ಶನವೇ ಆಗಿದೆ. ಆದರೆ ಪರಮೇಶ್ವರನ ಕುರಿತಾದ ಮಂತ್ರಗಳನ್ನು ನಿಯಮಿತವಾಗಿ ಹೇಳುವುದರಿಂದ ಉತ್ತಮವಾದ ಲಾಭಪಡೆಯಬಹುದು.

66.ಪ್ರ. ದೇವತೆಗಳು ತಾವೇ ಕೊನೆಯ ಪ್ರವಾದಿಗಳೆಂದು ಹೇಳಿಕೊಳ್ಳಬಹುದೇ ?

ಉ. ಪ್ರವಾದಿಗಳೆಲ್ಲರೂ ಮನುಷ್ಯರೇ. ಇನ್ನೊಬ್ಬ ಪ್ರವಾದಿಯನ್ನು ಕಳುಹಿಸಬೇಕೆ ಬೇಡವೇ ಎಂಬುದನ್ನು ಹೇಳುವ ಅಂತಿಮವಾದ ಹಕ್ಕು ಪರಮೇಶ್ವರನದಾಗಿರುತ್ತದೆ. ಈ ಹಕ್ಕನ್ನು ಪರಮೇಶ್ವರನಿಂದ ಯಾರೂ ಕಿತ್ತುಕೊಳ್ಳಲು ಸಾಧ್ಯವಿಲ್ಲ, ಶ್ರೀಕೃಷ್ಣನು ಕೊನೆಯ ಪ್ರವಾದಿ ಎಂದು ಈ ತನಕ ಹಿಂದೂಗಳು ಪರಿಗಣಿಸುತ್ತಾರೆ.

67.ಪ್ರ. ಯಾವುದೇ ದೇವಸ್ಥಾನದ ಮುಖ್ಯಸ್ಥರನ್ನು ಹೇಗೇ ಗೌರವಿಸಬೇಕು ?

ಉ. ಸಾಮಾನ್ಯವಾಗಿ ಯಾವುದೇ ದೇವಸ್ಥಾನದ ಮುಖ್ಯಸ್ಥರೆಂದರೆ ಆದರ ಪಾರುಪತ್ತೇದಾರ/ ಮೊಕ್ತೇಸರ/ಆಡಳಿತಗಾರ ಮತ್ತು ಅರ್ಚಕರಾಗಿರುತ್ತಾರೆ. ಭಕ್ತ ವೃಂದವು ಅವರೊಂದಿಗೆ ಗೌರವಯುತವಾಗಿ ಸಹಕರಿಸಿ ಅವರು ಭಕ್ತರ ಮತ್ತು ಸಮಾಜದ ಒಳಿತಿಗಾಗಿ ನಡೆದುಕೊಳ್ಳುವಂತೆ ನೋಡಿಕೊಳ್ಳಬೇಕು.

68.ಪ್ರ. ಹಿಂದೂಗಳು ಅನ್ಯಾಯವನ್ನು ಮುಗಿದಕೆಲಸ ವೆಂದು ಸಹಿಸುತ್ತಾರೆಯೇ ?

ಉ. ಹಿಂದೂ ಧರ್ಮ/ ಹಿಂದುತ್ವವು ಮಕ್ತ ಮನಸ್ಸಿನ ತತ್ವವನ್ನು (ಪ್ರಾರಬ್ದ, ವಿಧಿ ತತ್ವಗಳ ಎದುರು) ಎತ್ತಿ ಹಿಡಿಯುತ್ತದೆ. ತಮ್ಮ ಪ್ರಾರಬ್ದವನ್ನು ನಿರ್ಧರಿಸುವಲ್ಲಿರುವ ಅಸಾಮಾರ್ಥ್ಯದ ಬಗ್ಗೆ ಮನಗಾಣದ ಹೊರತು ನಿಜವಾದ ಹಿಂದೂ ಅನ್ಯಾಯವನ್ನು ಸೌಮ್ಯವಾಗಿ ಸಹಿಸುವುದಿಲ್ಲ. ವೇದಗಳು ಹೇಳಿದಂತೆ ''ಒಂದು ಜನಾಂಗದ ಪರಿಸ್ಥಿತಿಯನ್ನು ಅವರು ತಮ್ಮೊಳಗಿರುವುದನ್ನು ಬದಲಿಸದ ತನಕ ಪರಮೇಶ್ವರನು ಬದಲಿಸುದಿಲ್ಲ'' ನ್ಯಾಯವನ್ನು ರಕ್ಷಿಸುವ ಹೊಣೆಯನ್ನು ರಾಜನಿಗೊಪ್ಪಿಸಿದ್ದು ಅದರ ದೂಷಣೆಗೆ ಅವನೇ ಕಾರಣನೆಂದು ರುಜುವಾತಾಗಿ. ಮನದಟ್ಟಾದರೆ ಹಿಂದೂಗಳು ಅವಶ್ಯವಾಗಿ ದಂಗೆ ಏಳುತ್ತಾರೆ.

69.ಪ್ರ. ಹಿಂದೂಗಳಿಗೆ ಯಾವರೀತಿಯ ರಾಜ್ಯ ಅನುಕೂಲಕರ ?

ಉ. ರಾಜಕೀಯವು ಸಾಧನೆ ಮಾಡಿ ಸರ್ಕಾರವನ್ನು ನಡೆಸುವ ಕಲೆಯಾಗಿದೆ. ರಾಜಕೀಯ ವ್ಯವಸ್ಥೆಯಲ್ಲಿ ಹಿಂದೂ ತತ್ವದ ಪ್ರಸಾರ ಸಾಧ್ಯ. ಹಿಂದೂ ಪ್ರಜೆಗಳ ಸುಧಾರಣೆಗಾಗಿ ಶ್ರಮಿಸುವ, ರಾಜನು ಆಯ್ಕೆ ಅರ್ಹನಾಗಿರುತ್ತಾನೆ. ಹಿಂದೂ ಧರ್ಮಕ್ಕೆ/ಹಿಂದೂತ್ವಕ್ಕೆ ಪೂರ್ಣಬದ್ಧನಾಗಿರದಿದ್ದರೂ ಸ್ವಲ್ಪಮಟ್ಟಿಗಾದರೂ ಅದರ ಗುರಿಯ ಬಗ್ಗೆ ಸಹಾನುಭೂತಿ ಇರುವವನಾದರೂ ಒಪ್ಪಬಹುದು. ಹಿಂದೂ ಧರ್ಮದ ಕುರುತು ಅರ್ಪಣಾಭಾವ ಅಥವಾ ಅನುಕೂಲಕರವಾದ ರಾಜ್ಯದಲ್ಲಿ ಜೀವಿಸುವವರು ಸರ್ಕಾರದ ಉಳಿವಿಗಾಗಿ ಮತ್ತು ಹಿಂದೂತತ್ವದ ಪ್ರಸಾರಕ್ಕಾಗಿ ಚಟುವಟಿಕೆಯಿಂದ ಕೆಲಸಮಾಡಬೇಕು. ಹಿಂದೂತತ್ವಕ್ಕೆ ವಿರೋಧವಿರುವ ಆಡಳಿತದಲ್ಲಿ ಜೀವಿಸುವವರು ಅವಕಾಶ ಸಿಕ್ಕಾಗ ಆ ಆಡಳಿತವನ್ನು ಉರುಳಿಸ ಬೇಕು.

70.ಪ್ರ. ರಾಜನಿಗೆ ಅವಿಧೇಯತೆಯನ್ನು ಏಕೆ ಮತ್ತು ಹೇಗೆ ತೋರಿಸಬೇಕು ?

ಉ. ಯಾರು ರಾಜನಾಗಬೇಕು ಎಂದೋ ಅಥವಾ ರಾಜನಿಗೆ ಏಕೆ ವಿಧೇಯರಾಗಿರ ಬೇಕು ಎಂದೋ ಚರ್ಚೆ ನಡೆಯುವಾಗ ಎಲ್ಲ ಜಾಗೃತ ಹಿಂದೂಗಳೂ ಚರಿತ್ರೆಯತ್ತ ನೋಟಹರಿಸಿ ಚರ್ಚಿಸಬೇಕು. ಶತ್ರುವಿನ ಆಡಳಿತ, ವಿದೇಶಿ ಆಡಳಿತದಲ್ಲಿ ಹಿಂದೂಗಳು ಶತಮಾನಗಳ ಕಾಲ ಅನುಭವಿಸಿದ ಕಷ್ಟ ಕೋಟಲೆಗಳು ಈರೀತಿ ಚರ್ಚಿಸಲು ಶಕ್ತಿಯುತವಾದ ಪ್ರಚೋದನೆ ನೀಡುತ್ತದೆ. ತಮ್ಮ ಹಕ್ಕನ್ನು ಚಲಾಯಿಸಲು ಹಿಂದೂಗಳು ಈ ಸಮಯದಲ್ಲಿ ಪಾಲಿಸಬೇಕಾದ ಮಹತ್ವದ ನಿಯಮ ವೆಂದರೆ ಅನ್ಯಾಯ ಮತ್ತು ಉಪೇಕ್ಷೆಯನ್ನು – ಸಾಮೂಹಿಕವಾಗಿ ಕೆಲಸಮಾಡಿಯಾದರೂ – ತಡೆಯಬೇಕು. ಇದರಿಂದ ಹೆಚ್ಚಿನ ಅನುಕೂಲವಿದೆ.

71.ಪ್ರ. ಒಬ್ಬ ಹಿಂದೂ ಮುಖಂಡನು ರಾಜಕೀಯವಾಗಿ ಉನ್ನತಿ ಹೊಂದಲು ತನ್ನ ಸ್ಥಾನ, ಜಾತಿ ಅಥವಾ ಸಮುದಾಯವನ್ನು ಉಪಯೋಗಿಸಿಕೊಳ್ಳ ಬಹುದೇ ? ಯಾವ ರೀತಿಯ ಕೆಲಸ ಅವಮಾನಕರವಾದುದು ?

ಉ. ಹಿಂದೂಗಳನ್ನು ಯಾವುದೇ ರೀತಿಯಲ್ಲಿ ವಿಭಾಗ ಮಾಡುವ ರಾಜಕೀಯ ವಿಧಾನವನ್ನು ಉಪಯೋಗಿಸುವನು ಪರಮೇಶ್ವರನ ಶತ್ರುವಾಗಿದ್ದು ನಿರ್ಮೂಲಮಾಡಲು ಅರ್ಹನು. ಪರಮೇಶ್ವರನಿಗೆ ಕೆಲಸದ ಕ್ರಮಾಗತ ವ್ಯವಸ್ಥೆಯ ಅರಿವಿರುವುದಿಲ್ಲ. ಯಾವುದೇ ಕೆಲಸವು ಅವಮಾನಕರ ವಾದುದಲ್ಲ. ಮಾಡತಕ್ಕ ಕೆಲಸವಾದರೆ ಅದು ಒಳ್ಳೆಯ ಕೆಲಸವೇ.

72.ಪ್ರ. ಏಕ ದೇವ ತತ್ವದ ಅನುಯಾಯಿಗಳು (ಮೂರ್ತಿ ಪೂಜೆಯನ್ನು ವಿರೋಧಿಸುವವರು) ಈ ಪ್ರಪಂಚವನ್ನು ಉತ್ತಮಗೊಳಿಸುತ್ತಿದ್ದಾರೆ ಎಂದು ನಂಬುವಿರಾ ? ಉಪವಾಸ ಮಾಡುವುದರಿಂದ ಪಾಪ ವಿಮುಕ್ತನಾಗಬಹುದೇ ?

ಉ. ವೈದ್ಯ ವಿಜ್ಞಾನಕ್ಕೆ, ಆಹಾರ ತಂತ್ರಜ್ಞಾನಕ್ಕೆ, ಭೌತಶಾಸ್ತ್ರಕ್ಕೆ, ರಸಾಯನ ಶಾಸ್ತ್ರಕ್ಕೆ, ಗಣಿತ ಇತ್ಯಾದಿಗಳಿಗೆ ಮೂರ್ತಿಭಂಜಕರ ಕೊಡುಗೆ ಗಣನೀಯ ಪ್ರಮಾಣದಲ್ಲಿಲ್ಲ. ಅವರ ಪರಮತವೈರವು ನಿಷ್ಕಳಂಕರು, ಹೆಂಗಸರು ಬಲಹೀನರು ಮತ್ತು ಪ್ರಾಣಿಗಳ ಮೇಲೆ ನಡಿಸಿದ ದೌರ್ಜನ್ಯ ಮತ್ತು ಚಿತ್ರಹಿಂಸೆಗಳನ್ನು ನ್ಯಾಯಯುತವಾದುದನ್ನಾಗಿ ಮಾಡಿತಷ್ಟೆ. ಅವರು ನಂಬಿಕೆ ಉಳ್ಳವರ ಮಾನಸಿಕ ಮತ್ತು ಭೌತಿಕ ದಾಸ್ಯವನ್ನು ಉತ್ತೇಜಿಸಿದರಷ್ಟೆ. ಪಾತಕಿಗಳು ಎಲ್ಲ ರೀತಿಯ ಅಪರಾಧಗಳನ್ನು ಮಾಡಲು ಅಸಂಬದ್ಧ ಭವರವಸೆಗಳನ್ನು – ದೇವರಿಗೆ ಒಳ್ಳೆಯ ಸಮರ್ಪಣೆಗಳನ್ನು ಮಾಡುವುದರಿಂದ ಅಥವಾ ತಮ್ಮ ಆಹಾರ ಸೇವನೆಯನ್ನು ಕೆಲವು ದಿನಗಳ ಕಾಲ ನಿಯಂತ್ರಿಸುವುದರಿಂದ – ನೀಡುತ್ತಿದ್ದರಷ್ಟೆ.

73.ಪ್ರ. ಪರಮೇಶ್ವರನ ಹೆಸರಿನಲ್ಲಿ ಕ್ರೂರರಾದ ಶತ್ರುಗಳು ಮತ್ತು ಹಿಂಸೆ ನೀಡುವ (ಅತಿದುರಾಶೆಯ) ಸೈನಿಕರು ಇಡೀದೇಶವನ್ನು ಹೇಗೆ ವಶಪಡಿಸಿಕೊಳ್ಳುತ್ತಿದ್ದರು ?

ಉ. ಆತ್ಮ ಪ್ರಶಂಸೆಯ ಹುಚ್ಚಿರುವವರು ತಮ್ಮ ಪ್ರಭಾವದ ರಾಜ್ಯವನ್ನು ವಿಸ್ತರಿಸಲು ಪಂಥೀಯ ಮನ:ಶಾಸ್ತ್ರವನ್ನು ನೈಪುಣ್ಯದಿಂದ ಉಪಯೋಗಿಸಿಕೊಂಡು ತಾವು ಮಾಡುವ ಕೆಲಸವು ಪರಮೇಶ್ವರನನ್ನು ಸಂತೋಷಗೊಳಿಸಲು ಎಂದು ನಂಬಿಸುತ್ತಿದ್ದರು. ತಮ್ಮ ರಾಜ್ಯ ವಿಸ್ತರಣೆ ಮಾಡಲು ಪರಮೇಶ್ವರನ ಹೆಸರನ್ನು ಉಪಯೋಗಿಸಿಕೊಂಡು ಜನರಿಗೆ ಆಮಿಷತೋರಿಸಿ ಅಥವಾ ಹೆದರಿಸಿ ತಮ್ಮ ಯಜಮಾನಿಕೆಯನ್ನು ಸ್ಥಾಪಿಸುತ್ತಿದ್ದರು. ನಿಷ್ಪಕ್ಷಪಾತದಿಂದ ಯೋಚಿಸುವುದನ್ನು ತಡೆಯಲು ಮತ್ತು ಸೈನಿಕರು ದಂಗೆ ಏಳುವುದನ್ನು ಪ್ರತಿಬಂಧಿಸಲು ಪರಮೇಶ್ವರನ ಹೆಸರನ್ನು

ಉಪಯೋಗ ಮಾಡಲಾಗುತ್ತಿತ್ತು.

74.ಪ್ರ. ನಿರಂತರವಾಗಿ ಬುದ್ಧಿವಂತರ ಮತ್ತು ಪರಿಣಿತರ ಸಲಹೆ ಪಡೆಯುವ ನಿರಂಕುಶನಾದ ರಾಜನು ಉತ್ತಮವಾದ ಆಯ್ಕೆ ಯಲ್ಲವೇ ?

ಉ. ರಾಜನು ಆಡಳಿತಮಾಡುವವರ ಮತ್ತು ಆಡಳಿತಕ್ಕೊಳಪಟ್ಟವರ ನಡುವೆ ಏರ್ಪಡಿಸುವ ಸಲಹೆಗಳನ್ನು ಪಡೆಯುವ ವ್ಯವಸ್ಥೆಯಿಂದ ದೈವಿಕ ನ್ಯಾಯದಲ್ಲಿ ವಿಧಿಸಿರುವ ಅನ್ಯಾಯವನ್ನು ತಡೆಯುವ ನಿಯಮಗಳು ಮೇಲುಗೈ ಪಡೆಯುತ್ತವೆ ಮತ್ತು ಪ್ರಜಾಪ್ರಭುತ್ವ ತಾನಾಗಿಯೇಬರುತ್ತದೆ.

ಆದರೆ ಸಲಹೆಯನ್ನು ಪಡಿಯುವುದು ನಿರಂಕುಶವಾದ ರಾಜನ ನಂಬಿಕೆಯನ್ನು ಅವಲಂಬಿಸಿರುತ್ತದೆ. ಹೀಗಾಗಿ ಅನ್ಯಾಯದ ವಿರುದ್ಧವಾಗಿರಬೇಕಾದ ನಿಯಮಾವಳಿಗಳು ಕೆಲವೇ ವಿದ್ಯಾವಂತರ ಬುದ್ಧಿವಂತಿಕೆಯ ಪರಿಧಿಯೊಳಗೆ ಉಳಿದು ಜಾರಿಗೆ ಬರುವುದಿಲ್ಲ. ಹೀಗಾಗಿ ನಿರುಂಕುಶ ರಾಜನ ಆಯ್ಕೆ ಸರಿಯಲ್ಲ.

75.ಪ್ರ. ಬುದ್ಧಿವಂತರ ಸಭೆಯು ನಿರಂಕುಶ ರಾಜನ ಆಡಳಿತದ ವಿರುದ್ಧ ರಕ್ಷಣೆ ನೀಡಬಲ್ಲುದೇ ?

ಉ. ಅನ್ಯಾಯದ ವಿಧಾನದಿಂದ ಆಡಳಿತ ನಡೆಸುವ ರಾಜನು ತನ್ನ ಆಡಳಿತದ ಪಾವಿತ್ರ್ಯತೆಯನ್ನು ಸಾರಲು ಬುದ್ಧಿವಂತರಾದ ಮತ್ತು ನೈತಿಕ ಪ್ರತಿಷ್ಠೆ ಇರುವ ಮುಖ್ಯ ಪುರೋಹಿತರ ಸಭೆಯನ್ನು ಯಾವಾಗಲೂ ಕರೆದು ತನ್ನ ನಿರಂಕುಶ ಆಡಳಿತಕ್ಕೆ ಒಪ್ಪಿಗೆ ನೀಡುವಂತೆ – ಕತ್ತಿಯ ಮೊನೆಯಿಂದ ಹೆದರಿಸಿ ಅಥವಾ ಪ್ರಲೋಭನೆಗಳನ್ನು ನೀಡಿ – ಮಾಡುತ್ತಾನೆ. ನಂತರ ತನ್ನ ಆಡಳಿತವು ದೇವರ ಆಜ್ಞೆಯಂತೆ ನಡೆಯುತ್ತಿದೆ ಎಂದು ಸಾಧಿಸುವುದರಿಂದ ಸಾಮಾನ್ಯ ಜನರು ಒಪ್ಪಿಕೊಳ್ಳ ಬೇಕಾಗುತ್ತದೆ.

76. ಪ್ರ. ನಿರಂಕುಶ ರಾಜನ ಆಡಳಿತ ಒಳ್ಳೆಯದೇ ಅಥವಾ ಇಡೀ ಸಮಾಜವು ಸ್ಥಾಪಿಸುವ ಒಮ್ಮತದ ಆಡಳಿತವೇ ?

ಉ. ನಾಗರೀಕತೆಯ ಪ್ರಾರಂಭದಿಂದ ನಡೆದಿರುವ ಚಾರಿತ್ರಕ ಸಂದರ್ಭಗಳನ್ನು ನೋಡಿದರೆ ಇಡೀ ಸಮಾಜವು ರಾಜನನ್ನು ಪಟ್ಟಕ್ಕೆ ತರುವಲ್ಲಿ ಯಾವುದೇ ಪಾತ್ರ ವಹಿಸುತ್ತಿರಲಿಲ್ಲ. ಯಾವಾಗಲೂ ಬಲವಂತವಾಗಿ ಪಟ್ಟಕ್ಕೆ ಒಂದು ನಂತರ ದಬ್ಬಾಲಿಕೆಯಿಂದ ಅಧಿಕಾರವನ್ನು ಕಾಪಾಡಿಕೊಂಡು ಬರುತ್ತಿದ್ದರು. ಸಮಾಜದ ನ್ಯಾಯ ಪಂಡಿತರುಗಳು (ರಾಜಕೀಯ ಮತ್ತು ಧಾರ್ಮಿಕ ಮುಖಂಡರು) ಮಾತ್ರ ನಿರಂಕುಶ ಪ್ರಭುತ್ವದ ಪರವಾಗಿ ವಾದಿಸುತ್ತಾ ನಿಶ್ಶಬ್ದದ ಒಮ್ಮತವನ್ನು ತೋರುತಿದ್ದರು.

77.ಪ್ರ. ಧರ್ಮ ಮತ್ತು ರಾಜಕೀಯ ಹೇಗ ಸಂಬಂಧ ಹೊಂದಿದೆ ?

ಉ. ಧರ್ಮ ಮತ್ತು ರಾಜಕೀಯವೆರಡು ಜನಗಳ ಮನಸ್ಸಿನಲ್ಲಿ ಒಂದರಲ್ಲೊಂದು ಹೆಣೆದು ಕೊಂಡಿದೆ. ಒಂದರಿಂದೊಂದು ಬೇರೆಯಾಗುವುದು ಅಸ್ವಾಭಾವಿಕ. ಒಂದುವೇಳೆ ಸಂಪೂರ್ಣವಾಗಿ ಬೇರೆ ಯಾದರೆ ಧರ್ಮವು ರಾಜಕೀಯ ಆಶ್ರಯದ ಹಸಿವಿನಿಂದ ನಶಿಸುತ್ತದೆ ಮತ್ತು ರಾಜಕೀಯವು ಧಾರ್ಮಿಕ ನೀತಿಯ ಎಲ್ಲೆ ಇಲ್ಲದೆ ಅನೈತಿಕತೆ, ಸ್ವಾರ್ಥ ಮತ್ತು ರಾಕ್ಷಸೀಗುಣಗಳಿಂದಾಗಿ ನಾಶಹೊಂದುತ್ತದೆ.

78.ಪ್ರ. ಪೂಜೆಯನ್ನು ಯಾವರೀತಿಯಲ್ಲಿ ಮಾಡಬೇಕು ?

ಉ. ಪರಮೇಶ್ವರನ ಪ್ರಾರ್ಥನೆ ಮಾಡುವದೇ ಉತ್ತಮ ಪೂಜೆ. ನೀರು ಮತ್ತಿತರ ದ್ರವ ಪದಾರ್ಥಗಳ ಉಪಯೋಗವನ್ನು ದೂರಮಾಡಿ. ಅದು ಅನಾರೋಗ್ಯಕರವಾದುದು ಮತ್ತು ದೇವರನ್ನು ಕೆರಳಿಸುತ್ತದೆ.

79.ಪ್ರ. ಪೂಜೆಯ ಉತ್ತಮ ಫಲ ಸಿಗಬೇಕಾದರೆ ನಾವು ಉಪವಾಸ ಮಾಡಿರಬೇಕೆ ?

ಉ. ಪೌರ್ಣಮಿಯದಿನ ಸೂರ್ಯೋದಯದಿಂದ ಸೂರ್ಯಾಸ್ತದ ವರೆಗೆ ಉಪವಾಸಮಾಡಿ ಚಂದ್ರೋದಯದ ನಂತರ 'ಭೋಜ್ ಉತ್ಸವ' ವನ್ನು ಸಾಮಾನ್ಯ ಭೋಜನವನ್ನು ಪರ್ಯಾಯ ಕ್ರಮದಲ್ಲಿ ಆಸ್ವಾದಿಸಬೇಕು. ಸ್ನೇಹಿತರನ್ನು ಪರಿಚಿತರನ್ನು, ಇದಕ್ಕೆ ಆಹ್ವಾನಿಸಬೇಕು. ಇದರಿಂದ ಪರಮೇಶ್ವರನ ಅನುಗ್ರಹಸಿಗುತ್ತದೆ ಮತ್ತು ಭಕ್ತರಿಗೆ ಆರೋಗ್ಯ ಮತ್ತು ಸಂಪತ್ತು ದೊರೆಯುತ್ತದೆ. ಉಳಿದ ದಿನಗಳಲ್ಲಿ ಶುಭ್ರವಾದ ಬಟ್ಟೆಯನ್ನು ಧರಿಸಿ ಮುಕ್ತ ಮನಸ್ಸಿನಿಂದ ಪೂಜೆಮಾಡಬೇಕು. ಸಾಮಾಜಿಕ ಕಾರ್ಯಕ್ರಮ ಮಾಡಲು ಉಪವಾಸವಿರಬೇಕಾಗಿಲ್ಲ. 'ಭೋಜ್ ಉತ್ಸವ'ದಲ್ಲಿ ನೀವು ಎಷ್ಟು ಜನರೊಂದಿಗೆ ಭಾಗವಹಿಸುತ್ತಿರೋ ಅಷ್ಟೇ ಸಂಖ್ಯೆಯ ನಿಮ್ಮ ಪಿತೃಗಳಿಗೆ ಭೋಜನ ಸಿಗುತ್ತದೆ ಎಂಬ ನಂಬಿಕ ಇದೆ. ನೀವು ಜನಗಳನ್ನು ಕರೆದರೂ ಸರಿ. ನಿಮ್ಮನ್ನೇ ಜನ ಕರೆದರೂ ಸರಿ, ಪರಿಣಾಮ ಮಾತ್ರ ಒಂದೇ.

80.ಪ್ರ. ಯಾರು ಅರ್ಚಕನಾಗಬಹುದು ?

ಉ. ಒಳ್ಳೆಯ ಗಂಡಸು ಅಥವಾಹೆಂಗಸು 20ವರ್ಷಕ್ಕಂತ ಹೆಚ್ಚು ಪ್ರಾಯ ವಾಗಿದ್ದರೆ ಅರ್ಚಕ ನಾಗಬಹುದು. ಅರ್ಚಕನು ವಿದ್ಯಾವಂತ, ನೈತಿಕ ಗುಣ ಸಂಪನ್ನ ಮತ್ತು ಒಳ್ಳೆಯ ಮಾತುಗಾರನಾಗಿದ್ದು ಹಿಂದೂ ಧರ್ಮದ ಬಗ್ಗೆ ಮತ್ತು ಧಾರ್ಮಿಕ ಗ್ರಂಥಗಳನ್ನು ಓದಿದ ತಿಳುವಳಿಕಸ್ಥ ನಾಗಿರಬೇಕು. ಅರ್ಚಕನು ವೇದ, ಗೀತೆ, ಉಪನಿಷತ್ ಇತ್ಯಾದಿಗಳ ಬಗ್ಗೆ ಭಕ್ತ ಸಮೂಹದಲ್ಲಿ ವಿವರಣೆ ನೀಡುವ ಸಾಮರ್ಥ್ಯ ಉಳ್ಳವನಾಗಿರ ಬೇಕು ಮತ್ತು ಭಜನೆಗಳನ್ನು ಹೇಳಲು ಕಲಿತಿರಬೇಕು. ಅರ್ಚಕ ನಾದವನು ಆರೋಗ್ಯ ಶಾಲಿಯೂ, ಧೈರ್ಯಶಾಲಿಯೂ ಮತ್ತು ಒಳ್ಳೆಯ ಅಭ್ಯಾಸಗಳನ್ನು ಮೈಗೂಡಿಸಿಕೊಂಡವನೂ ಆಗಿರಬೇಕು. ಅರ್ಚಕನಾದವನು ಭಕ್ತರನ್ನೂ ತನ್ನ ಮಕ್ಕಳನ್ನೂ ಸಮಾನವಾದ ಪ್ರೀತಿ ಮತ್ತು ಕಾಳಜಿಯಿಂದ ಕಾಣಬೇಕು. ಅರ್ಚಕನಾದವನು ಭಕ್ತರಿಗೆ ಅವರು ಪ್ರಾರ್ಥಿಸುವಾಗ ಮಾರ್ಗದರ್ಶಕನಾಗಿದ್ದು ಸಾಮಾಜದ ಉದ್ಧಾರದಲ್ಲಿ ಮುಂದಾಳಾಗಿರಬೇಕು.

81.ಪ್ರ. ಬೇರೆ ಬೇರೆ ದೇವತೆಗಳ ಪೂಜೆಯನ್ನು ಹೇಗೆ ಮಾಡಬೇಕು ?

ಉ. ಕನಿಷ್ಠ ಹದಿನೈದು ಮಂತ್ರಗಳನ್ನು ಹೇಳಲೇಬೇಕು. ಮೂಲ ಹದಿನೈದು ಮಂತ್ರಗಳನ್ನು ಹೇಳಿದ ನಂತರ ಒಂದೊಂದು ದೇವತೆಯ ಸ್ಮರಣಾರ್ಥ ಅವರ ಮಹತ್ವವಾದ ಸಾಧನೆ, ಕೊಡುಗೆಯಬಗ್ಗೆ ಮಂತ್ರಹೇಳಬೇಕು. ಹೀಗೆ ಮಾಡುವುದರಿಂದ ಉಳಿದೆ ಭಕ್ತರು ಅದನ್ನು ಅನುಸರಿಸಲು ಪ್ರೋತ್ಸಾಹಸಿಗುತ್ತದೆ. ಅರ್ಚಕನು ಈ ಮಂತ್ರಗಳನ್ನು ಪುಸ್ತಕ ನೋಡಿ ಅಥವಾ ನೆನಪಿನಶಕ್ತಿಯಿಂದ ಹೇಳ ಬಹುದು. ಪ್ರಾರ್ಥನೆಯ ಹೊರತು ಇನ್ನೇನ್ನಾದರೂ ಸಮರ್ಪಣೆ ಮಾಡುವುದು ಭಕ್ತನ ಸಂಪತ್ತಿನ ಪ್ರದರ್ಶನ ವಾಗುತ್ತದೆ. ಇದರಿಂದ ಪರಮೇಶ್ವರನಿಗೆ ಏನೂ ಪ್ರಯೋಜನವಿಲ್ಲ.

82.ಪ್ರ. ಅರ್ಚಕರ ಆದಾಯ ವೆಷ್ಟಿರ ಬೇಕು ?

ಉ. ದೇವಸ್ಥಾನದ ನಿಧಿಯಿಂದ ಅರ್ಚಕರಿಗೆ ಸಂಬಳಕೊಡಬೇಕು. ಭಕ್ತರು ತಮ್ಮ ತಿಂಗಳ ಆದಾಯದ ನೂರನೆ ಒಂದು ಭಾಗವನ್ನು ದೇವಸ್ಥಾನದ ನಿಧಿಗೆ ಕೊಡಬೇಕು, ದೇವಸ್ಥಾನವ ನಿಧಿಗಲದಿದ್ದರೆ ಯಾವುದಾದರೂ ಹಿಂದೂ ಸಾಮಾಜಿಕ ಸಂಸ್ಥೆಗೆ, ಪರಮೇಶ್ವರನು ನಮಗೆ ಮಾನವಜನ್ಮ ನೀಡಿ ಸಂಪತ್ತನ್ನು ನೀಡಿದ್ದಕ್ಕಾಗಿ, ಕೃತಜ್ಞತೆ ಸೂಚಿಸಲು ನೀಡಬೇಕು.

83.ಪ್ರ. ಭಕ್ತರು ದೇವಸ್ಥಾನಕ್ಕಾಗಲೀ ಅಥವಾ ಸಾಮಾಜಿಕ ಸಂಸ್ಥೆಗೆ ಏಕೆ ನೀಡಬೇಕು ?

ಉ. ಪರಮೇಶ್ವರನು ಈ ಪ್ರಪಂಚದಲ್ಲಿರುವ ಎಲ್ಲರನ್ನು ಸಮಾನವಾಗಿ ಪ್ರೀತಿಸುತ್ತಾನೆ. ನಾನಾ ಕಾರಣಗಳಿಂದಾಗಿ ಒಬ್ಬೊಬ್ಬರಿಗೆ ಇತರರಿಗೆ ಹೋಲಿಸಿದರೆ ಸಂಪಾದಿಸುವ ಸಾಮರ್ಥ್ಯ ಕೊಟ್ಟಿರುತ್ತಾನೆ. ಇನ್ನು ಕೆಲವರಿಗೆ ಪ್ರಪಂಚದ ಉತ್ತಮವಾದ ಸಂಪತ್ತನ್ನು ಅನುಭವಿಸಲು ಸಾಧ್ಯವಾಗುತ್ತದೆ, ಆದರೆ ಯಥಾರ್ಥದಲ್ಲಿ ಇತರರೊಂದಿಗೆ ಸಮಾನವಾಗಿ ಹಂಚಿಕೊಳ್ಳಬೇಕೆಂಬ ಅಂತರ್ಗತ ಉದ್ದೇಶವಿರುತ್ತದೆ. ತನ್ನ ಆದಾಯ ಮತ್ತು ಸಂಪತ್ತನ್ನು ಸಂಪಾದಿಸುವಾಗ ಮಾಡಿದ ಪಾಪವು ಅದನ್ನು ಹಂಚಿಕೊಳ್ಳುವುದರಿಂದ ಪರಿಹಾರವಾಗುತ್ತದೆ. ದೇವಸ್ಥಾನ ಅಥವಾ ಸಮಾಜಸೇವೆಯು ಈ ರೀತಿಯ ಪಾಪನಾಶಕ್ಕೆ ಮಾಧ್ಯಮವಾಗಿದೆ.

84.ಪ್ರ. ಕಾಣಿಕೆ ನೀಡಲು ಉತ್ತಮ ಕಾರಣಗಳಾವುದು ?

ಉ. ದೇವಸ್ಥಾನವನ್ನು ಕಟ್ಟಲು ಬೇಕಾದ ಜಾಗ ತೆಗೆದುಕೊಳ್ಳಲು, ಹಸಿದವರಿಗೆ ಅನ್ನ ನೀಡಲು, ಅನಾರೋಗ್ಯದಿಂದ ನರಳುತ್ತಿರುವವರಿಗೆ ಮತ್ತು ವೃದ್ಧರಿಗೆ ಔಷಧ ಮತ್ತಿತರ ಪರಿಹಾರ ನೀಡಲು, ವಿದ್ಯಾಭ್ಯಾಸವನ್ನು ಪಡೆಯಲು, ಜೀವನೋಪಾಯವನ್ನು ಹುಡುಕುವುದಕ್ಕಾಗಿ ಬೇಕಾದ ತರಬೇತಿ ಪಡೆಯಲು ಹಾಗೂ ಹೆದರಿರುವವರಿಗೆ ರಕ್ಷಣೆ ಕೊಡಲು, ಇವೆಲ್ಲ ದೇಣಿಗೆ ನೀಡಲು ಉತ್ತಮ ಕಾರಣಗಳಾಗಿವೆ.

85.ಪ್ರ. ಪ್ರಾರ್ಥನೆ ಎಷ್ಟು ಸಮಯ ಮಾಡ ಬೇಕು ?

ಉ. ದಿವಸಕ್ಕೆ ಎರಡು ಸಾರಿ ಪ್ರಾರ್ಥನೆ ಮಾಡಬೇಕು. ಮುಂಜಾನೆ ಬೇಗ ಮತ್ತು ರಾತ್ರಿ ಮಲಗುವ ಮೊದಲು. ಪರಮೇಶ್ವರನ ಪ್ರಾರ್ಥನೆಗೆ ಕನಿಷ್ಠ ಐದು ನಿಮಿಷ ಬೇಕಾಗುತ್ತದೆ. ನಿಯಮಿತವಾಗಿ ಪ್ರತಿದಿನ ಹತ್ತು ನಿಮಿಷಗಳ ಕಾಲ ಪ್ರಾಣಾಯಾಮ ಮಾಡಬೇಕು. ಪರಮೇಶ್ವರನ ಪ್ರಾರ್ಥನೆ ಮಾಡಿದ ನಂತರ ಇತರ ದೇವರುಗಳಿಗೆ ಬಹಳ ಹೊತ್ತಿನವರೆಗೆ ಪ್ರಾರ್ಥನೆ ಸಲ್ಲಿಸಬಹುದು. ಅರ್ಚಕನು ಎಷ್ಟು ಹೊತ್ತು ಪ್ರಾರ್ಥನೆ ಮಾಡಬೇಕೆಂದು ಸಮಯ ನಿಶ್ಚಯಿಸಬಹುದು – ಮಕ್ಕಳಿಗೆ, ಮುದುಕರಿಗೆ ಮತ್ತು ಕಾಯಿಲೆಯವರಿಗೆ ತೊಂದರೆಯಾಗದಂತೆ. ಸ್ವರ್ಗಪ್ರಾಪ್ತಿಗಾಗಿ ಪ್ರತಿನಿತ್ಯ ಎರಡು ಹೊತ್ತು ಐದು ನಿಮಿಷಗಳ ಅವಧಿಯ ಪ್ರಾರ್ಥನೆ ಹತ್ತು ನಿಮಿಷಗಳ ಪ್ರಾಣಾಯಾಮ ಮಾಡಬೇಕು ಮತ್ತು ತಿಂಗಳಲ್ಲಿ ಒಮ್ಮೆ 'ಭೋಜ್ ಉತ್ಸವ' ನಡಿಸಬೇಕು.

86.ಪ್ರ. ದೇವಸ್ಥಾನದಲ್ಲಿ ಭಕ್ತರು ಪ್ರಾರ್ಥನೆ ಮಾಡಲು ಯಾವರೀತಿ ನಿಲ್ಲಬೇಕು ?

ಉ. ಇರುವ ಜಾಗ ಮತ್ತು ಸೇರಿರುವ ಭಕ್ತ ಸಮೂಹವನ್ನು ನೋಡಿ 9 9, 12 12 ಇತ್ಯಾದಿ ಕ್ರಮದಲ್ಲಿ ನಿಲ್ಲಬೇಕು – 9 ಜನರು ಒಂದು ಸಾಲಿನಲ್ಲಿ ಒಬ್ಬರ ಪಕ್ಕದಲ್ಲಿ ಒಬ್ಬರು ನಿಲ್ಲಬೇಕು, ಅದೇ ರೀತಿ ಮುಂದಿನ ಸಾಲಿನಲ್ಲಿ ನಿಂತಿರುವವರ ಹಿಂದೆ ಎರಡನೆಯ ಸಾಲು ಮಾಡಬೇಕು.

87. ಪ್ರ. ದೇವಸ್ಥಾನದಲ್ಲಿ ಮಹಿಳಾಭಕ್ತರು ನಿಲ್ಲುವ ಉತ್ತಮವಾದ ಸ್ಥಾನ ಯಾವುದು ?

ಉ. ಬಂದಿರುವ ಭಕ್ತ ಸಮೂಹವನ್ನು ನೋಡಿಕೊಂಡು ಎಡಬದಿಯ ಸಾಲುಗಳಲ್ಲಿ ಮಹಿಳಾ ಭಕ್ತ ವೃಂದ ನಿಲ್ಲಬೇಕು.

88.ಪ್ರ. ದಿನ ನಿತ್ಯ ಮಾಡುವ ಪ್ರಾರ್ಥನೆಯ ಪ್ರಾಮುಖ್ಯತೆ ಏನು ?

ಉ. ಮಹತ್ತಾದ ಸಂಪತ್ತನ್ನು ಪಡೆಯಲು ಪ್ರಾರ್ಥನೆ ಒಂದು ಅವ್ಯಕ್ತ ಉಪಕರಣವಾಗಿದೆ. ಪ್ರಾಪಂಚಿಕ ವ್ಯವಹಾರದಲ್ಲಿ ಮತ್ತು ಪರಲೋಕದಲ್ಲಿ ಎಲ್ಲ ರೀತಿಯ ಯಶಸ್ಸನ್ನು ದೊರಕಿಸಿ ಕೊಡುತ್ತದೆ. ಒಬ್ಬ ವ್ಯಕ್ತಿಯ ಯಶಸ್ಸಾಗಲೀ ಸೋಲಾಗಲೀ ನೂರು ವರುಷಗಳ ನಂತರ ಜ್ಞಾಪಕ ವಿಲ್ಲದೆ ಹೋಗುತ್ತದೆ ಆದರೆ ಅವನು ಮಾಡಿದ ಪ್ರಾರ್ಥನೆ ಮಾತ್ರ ಪರಲೋಕದಲ್ಲಿ ಮಾರ್ಗದರ್ಶನ ಮಾಡುತ್ತದೆ.

89.ಪ್ರ. ಪರಮೇಶ್ವರನ್ನು ನೋಡುವುದು ಹೇಗೆ ?

ಉ. ಪರಮೇಶ್ವರನನ್ನು ಕಾಣಲು ಯಾರಿಗೆ ತವಕವಿರುತ್ತದೆಯೋ ಅವರನ್ನು ಕಾಣಲು ಪರಮೇಶ್ವರನೂ ತವಕಿಸುತ್ತಾನೆ.

90.ಪ್ರ. ಪರಮೇಶ್ವರನ ಗೌರವವನ್ನು ಕಾಪಾಡಲು ಅನ್ಯಮತೀಯರನ್ನು ದ್ವೇಷಿಸಬೇಕೆ ?

ಉ. ಅಜ್ಞಾನಿಯೂ, ಆತ್ಮಸ್ತುತಿಯ ಹುಚ್ಚು ಇರುವವನು ಮಾತ್ರ ತಾನೇ ರಕ್ಷಕನೆಂದು ಪರಮೇಶ್ವರನ ಗೌರವವನ್ನು ಕಸಿದುಕೊಂಡು, ಪರಮೇಶ್ವರನೇ ಎಲ್ಲ ಪಂಗಡದ ಸೃಷ್ಟಿಕರ್ತನೂ ಅವರ ಧಾರ್ಮಿಕ ಆಚರಣೆಗಳನ್ನು ಕೊಡಮಾಡಿದವನೂ ಎಂಬುದನ್ನು ಅಲ್ಲಗಳೆಯುತ್ತಾನೆ. ಪರಮೇಶ್ವರನ ಇಚ್ಛೆ ಇಲ್ಲದಿದ್ದರೆ ಯಾರು ತಾನೇ ಅಸ್ತಿತ್ವದಲ್ಲಿರಲು ಸಾಧ್ಯ.

91.ಪ್ರ. ಸ್ವರ್ಗಕ್ಕೆ ಮತ್ತು ನರಕಕ್ಕೆಯಾರು ಹೋಗುತ್ತಾರೆ ?

ಉ. ಪ್ರಪಂಚದಲ್ಲಿ ಸುರ ಮತ್ತು ಅಸುರ ಎಂಬ ಎರಡು ರೀತಿಯ ಜನರಿದ್ದಾರೆ. ಕಷ್ಟಪಟ್ಟು ದುಡಿದು ಸಂಪತ್ತನ್ನು ಸೃಷ್ಟಿಸಿ, ಪ್ರಪಂಚವು ಸಂತೋಷದಿಂದಲೂ ಶಾಂತಿಯುತ ವಾಗಿಯೂ ಇರುವಂತೆ ಅದನ್ನು ಇತರರೊಂದಿಗೆ ಹಂಚಿಕೊಳ್ಳವವರು ಸುರರು. ಅವರು ಪರಮೇಶ್ವರನಿಂದ ಸೃಷ್ಟಿಸಲ್ಪಟ್ಟವರು. ಅವರಿಗೆ ಸ್ವರ್ಗದಲ್ಲಿ ಶಾಶ್ವತ ನೆಲೆ ಇರುತ್ತದೆ.

ಪರಮೇಶ್ವರನ ಜನರ ಸಂಪತ್ತನ್ನು ಕಿತ್ತು ಕೊಳ್ಳುವ ಮತ್ತು ದ್ವೇಷವನ್ನು ಹರಡುತ್ತಾ ಹಾಗೂ ಭೀತಿ ಹುಟ್ಟಿಸುವವರು ಅಸುರರು. ಅವರು ಸೈತಾನನ ಗುಣಗಳ ಮೂರ್ತರೂಪವಾಗಿದ್ದು ಶಾಶ್ವತವಾಗಿ ನರಕದಲ್ಲಿರುತ್ತಾರೆ.

92.ಪ್ರ. ಒಂದು ಅಪರಾಧ ಅಥವಾ ಪಾಪವನ್ನು ಮಾಡಿ ಪೂಜೆ ಮಾಡುವುದರಿಂದಾಗಲೀ ಅಥವಾ ದೇವರಿಗೆ ಕಾಣಿಕೆ ನೀಡುವುದರಿಂದಾಗಲೀ ಶಿಕ್ಷೆ ಕಡಿಮೆಯಾಗುತ್ತದೆಯೇ ?

ಉ. ಪರಮೇಶ್ವರನಾಗಲೀ ಅಥವಾ ಯಾವುದೇ ದೇವತೆಯಾಗಲೀ ಋಷುವತ್ತಿನಿಂದ ಪ್ರಭಾವಿತರಾಗುವುದಿಲ್ಲ. ಪೂಜೆಯಿಂದ ಅರ್ಚಕರ ಅವಶ್ಯಕತೆಗೆ ಸಹಾಯವಾಗುತ್ತದೆ. ನಿಷ್ಕಪಟವಾಗಿ ಪಶ್ಚಾತ್ತಾಪ ಪಡುವುದರಿಂದ, ತೊಂದರೆಗೊಳಗಾದವರಿಗೆ ಸಾಕಷ್ಟು ಪರಿಹಾರ ನೀಡುವುದರಿಂದ ಮತ್ತು ನಿಯಮಿತವಾಗಿ ಪ್ರಾರ್ಥನೆಮಾಡುವುದರಿಂದ ಪರಮೇಶ್ವರನ ಪ್ರೀತಿ ಹಾಗೂ ಕರುಣೆ ಪುನಃ ಸಿಕ್ಕುತ್ತದೆ.

93.ಪ್ರ. ಕ್ರಾಂತಿಗೆ ಹೋಲಿಸಿದರೆ ಹಿಂದೂಗಳ ಸಹನಶೀಲತೆಯ ಮೂರ್ತರೂಪ ರಲ್ಲವೇ ?

ಉ. ಒಂದು ಸಾವಿರ ವರುಷಗಳಷ್ಟುಕಾಲ ಹಿಂದೂಗಳು ವಿದೇಶಿಯ ಆಡಳಿತಗಾರರ ಅಡಿಯಾಳಾಗಿದ್ದರು. ಅವರು ಒಗ್ಗಟ್ಟಿನಿಂದಿರಲಿಲ್ಲವಾಗಿ ಎದುರುನಿಂತು ಹೋರಾಡುವ ಧೈರ್ಯವಿರಲಿಲ್ಲ. ಕ್ರಾಂತಿಮಾಡುವ ಬದಲು ಅಹಿಂಸೆ ಮತ್ತು ಶಾಂತಿಪ್ರಿಯತೆಯ ಹೆಸರಿನಲ್ಲಿ ತಮ್ಮ ನಿತ್ಯದ ಗೌರವಹೀನ ಅಸ್ತಿತ್ವವನ್ನು ಮರೆಮಾಡಿಕೊಂಡಿದ್ದರು ಮತ್ತು ಹಿಂದೂ ಸಮಾಜವನ್ನು ನಿರ್ವೀಯರ ವೀರಾಗ್ರಣಿಯನ್ನಾಗಿ ಮಾಡುವ ತತ್ವಗಳನ್ನು ಪ್ರತಿಪಾದಿಸಿದರು ಮತ್ತು ತಮ್ಮಮೇಲೆಂಗಿದ ಪಾಶವೀಕೃತ್ಯಗಳನ್ನು ಸಹಿಸುವ ತಮ್ಮ ಅಗಾಧವಾದ ಸಾಮರ್ಥ್ಯದ ಬಗ್ಗೆ ಹೆಮ್ಮೆ ಪಡುತ್ತಿದ್ದರು.

94.ಪ್ರ. ಪರಮೇಶ್ವರನಿಗೆ ಸಮಸ್ಯೆಗಳನ್ನು ತಂದೊಡ್ಡುವ ಸೈತಾನನನ್ನು ಹಿಂದೂಗಳು ಯಾವ ರೀತಿ ನಿರ್ಮೂಲನ ಮಾಡಬಹುದು ?

ಉ. ಪರಮೇಶ್ವರನು ಅಪರಿಮಿತವಾದ ಶಕ್ತಿಯುಳ್ಳವನೆಂದು ಹಿಂದೂಗಳು ನಂಬುತ್ತಾರೆ ಮತ್ತು ಸೈತಾನನು ಪರಮೇಶ್ವರನಿಗೆ ಸರಿಸಾಟಿಯಿಲ್ಲವೆಂದೂ ತಿಳಿದಿದ್ದಾರೆ. ಪರಮೇಶ್ವರನ ರಾಜ್ಯದಲ್ಲಿ ಸೈತಾನನ ಅಸ್ತಿತ್ವವನ್ನು ಒಪ್ಪುವ ಮತ್ತು ಅವನು ಪರಮೇಶ್ವರನಿಗೆ ಸಮಸ್ಯೆಗಳನ್ನೊಡ್ಡುತ್ತಾನೆ ಎಂದು ನಂಬುವವರು ಪರಮೇಶ್ವರನು ಅಸಹಾಯಕನೆಂದೂ ಮತ್ತು ಮಿತವಾದ ಶಕ್ತಿಯುಳ್ಳವನೆಂದೂ ನಂಬುತ್ತಾರೆ. ಆದರೆ ಪರಮೇಶ್ವರನು ಸರ್ವಶಕ್ತ. ಅವನು ಸರ್ವಶಕ್ತನಾದರೆ ತಾರ್ಕಿಕವಾಗಿ ಸೈತಾನನು ಇರಲು ಮತ್ತು ಸಮಸ್ಯೆಗಳನ್ನು ಒಡ್ಡಲು ಸಾಧ್ಯವಿಲ್ಲ.

ಸೈತಾನ ಮತ್ತು ಅವನ ಕೆಲಸಗಳು ಮಾನವ ಇಂದ್ರಿಯಗೋಚರ ವಸ್ತುಗಳಾಗಿವೆ. ಪರಮೇಶ್ವರನು ನಮಗೆ ಬುದ್ಧಿವಂತಿಕೆ, ವ್ಯವಹಾರ ಜ್ಞಾನ ಮತ್ತು ಯುಕ್ತಾ ಯುಕ್ತಾ ಪರಿಜ್ಞಾನವನ್ನು ನೀಡಿದ್ದಾನೆ. ಮಾನವನಾದರೋ ತನ್ನ ಶಾರೀರಿಕ ತೃಪ್ತಿಯನ್ನು ಪಡೆಯುವ ಅತಿಆಸೆ, ಅಧಿಕಾರದಾಹ, ಸಂಪತ್ತನ್ನು ಕೂಡಿ ಹಾಕುವ ಆಸೆ ಇತ್ಯಾದಿಗಳಿಂದಾಗಿ ಸೈತಾನನಾಗ ಬಯಸುತ್ತಾನೆ.

95 ಪ್ರ. ನಿಯಮಿತವಾಗಿ ಪರಮೇಶ್ವರನ ಪ್ರಾರ್ಥನೆ ಮಾಡದಿದ್ದರೆ ಅವನು ಕೋಪಗೊಳ್ಳುತ್ತಾನೆಯೇ ?

ಉ. ಮನುಷ್ಯನು ನಿರಂತರ ಪ್ರಾರ್ಥನೆ ಮಾಡಬೇಕೆಂದಿದ್ದರೆ, ಅವನನ್ನು ಭೂಮಿಗೆ ಕಳುಹಿಸುವ ಬದಲು ತನ್ನ ಪರಮೇಶ್ವರನು ತನ್ನ ಬಳಿಯೇ ಇರಿಸಿಕೊಳ್ಳುತ್ತಿದ್ದನು. ಪರಮೇಶ್ವರನು ಈ ಸಣ್ಣ ವಿಷಯಗಳ ಬಗ್ಗೆ ಚಿಂತಿಸಿದಷ್ಟು ಶ್ರೇಷ್ಠವಾದ ಅಸ್ತಿತ್ವವುಳ್ಳವನಾಗಿದ್ದಾನೆ. ಆದರೆ ಮನುಷ್ಯನು ಬುದ್ಧಿವಂತನಾದರಿಂದ ಪ್ರಾರ್ಥನೆ ಮಾಡುವ ಅವಕಾಶ ಹೊಂದಿದ್ದಾನೆ. ಪ್ರಾರ್ಥನೆಯು ಇಹದ ಬದುಕಿನ ಎಲ್ಲ ಸ್ಥಳಗಳಲ್ಲೂ ಯಶಸನ್ನು ಪಡೆಯಲು ಉತ್ತೇಜನ ನೀಡುತ್ತದೆ ಮತ್ತು ಪರಲೋಕಕ್ಕೂ ಅವಶ್ಯ. ಪರಮೇಶ್ವರನಿಗೆ ಒಂದು ಗಂಟೆ ಪ್ರಾರ್ಥನೆ ಸಲ್ಲಿಸುವುದರಿಂದ ಅವನಿಲ್ಲದ ಒಂದು ಜೀವಮಾನ ಪೂರ್ತಿ ಮಾಡುವ ಸಾಧನೆಗಿಂತ ಹೆಚ್ಚಿನದನ್ನು ಸಾಧಿಸಬಹುದಾಗಿದೆ.

96.ಪ್ರ. ಪರಮೇಶ್ವರನ ಸಾಮ್ರಾಜ್ಯದಲ್ಲಿ ಕೆಲವರು ಒಳ್ಳೆಯವರಾಗಿ, ಕೆಲವರು ಕೆಟ್ಟವರಾಗಿ, ಕೆಲವರು ಸಂತರಾಗಿ, ಕೆಲವರು ಭಯೋತ್ಪಾದಕರಾಗಿರುತ್ತಾರೆ ಏಕೆ ?

ಉ. ಭೂಮಿಯ ಈ ಜೀವನ ಒಂದು ತರಬೇತಿ ಕೇಂದ್ರವಿದ್ದಂತೆ. ಮನುಷ್ಯರಿಗೆ ಬುದ್ಧಿವಂತಿಕೆ ಮತ್ತು ಯುಕ್ತಾಯುಕ್ತಾತೆಯ ಶಕ್ತಿಯನ್ನು ನೀಡಲಾಗಿದೆ. ಇಲ್ಲಿನಮಗೆ ನಾವೇ ತರಬೇತಿ ಕೊಟ್ಟುಕೊಂಡು ನಮ್ಮ ಜೀವನದ ಮಾರ್ಗವನ್ನು ನಿಶ್ಚಯಿಸಿಕೊಳ್ಳುತ್ತೇವೆ. ಇಲ್ಲಿರುವ ಅಲ್ಪಕಾಲದ ಜೀವನದಿಂದಾಗಿ ಸ್ವರ್ಗದ ಅಥವಾ ನರಕದಲ್ಲಿನ ನಮ್ಮ ಸ್ಥಾನದ ಬಗ್ಗೆ ನಿರ್ಣಯವಾಗುತ್ತದೆ.

97.ಪ್ರ. ಎಲ್ಲ ಮನುಷ್ಯರೂ ಆಸ್ತಿಕರಾಗಿ ಪರಿವರ್ತನೆ ಹೊಂದುವುದರಿಂದ ಪರಮೇಶ್ವರನಿಗೆ ಸಂತೋಷ ವಾಗುತ್ತದೆಯೆ ?

ಉ. ಎಲ್ಲ ಮಾನವರೂ ತನ್ನನ್ನೇ ಗೌರವಿಸಬೇಕೆಂದು ಪರಮೇಶ್ವರನ ಇಚ್ಛೆಯಾಗಿದ್ದರೆ ಅವನು ಸರ್ವಶಕ್ತನಾದುದರಿಂದ ಅದೇ ರೀತಿ ಆಗುವಂತೆ ಮಾಡುತ್ತಿದ್ದ. ಇತರ ಧರ್ಮದವರನ್ನು ತಮ್ಮ ಧರ್ಮಕ್ಕೆ ಆಮಿಷ ತೋರಿಸಿ ಅಥವಾ ಬಲವಂತದಿಂದ ಮತಾಂತರ ಮಾಡಿಸುವವರು ಪರಮೇಶ್ವರನನ್ನು ಅವಮಾನಪಡಿಸುತ್ತಾರೆ.

ಪರಮೇಶ್ವರನಿಗೆ ಇತರ ಧರ್ಮಗಳು ಅಸಂತೋಷ ವುಂಟುಮಾಡುವದಾದರೆ ಅವನು ಬೇರೆ ಬೇರೆ ಮಾನವ ಜನಾಂಗಗಳು ಬೇರೆ ಬೇರೆ ರೀತಿಯಲ್ಲಿ ಪೂಜಿಸುವಂತೆ ಮಾಡುತ್ತಿರಲಿಲ್ಲ. ಎಲ್ಲರೂ ಸ್ವಾಭಾವಿಕವಾಗಿ ಅವನ ಹೆಸರನ್ನೇ ಹೇಳುತ್ತಿದ್ದರು. ಬೇರೆ ಬೇರೆ ಧರ್ಮದವರು ಅವರವರ ಧರ್ಮದಲ್ಲಿ ಹೇಳಿದಂತೆಯೇ ಪೂಜಿಸಬೇಕೆಂಬುದು ಅವನ ಇಚ್ಛೆಯಾಗಿದೆ. ಆದರೆ ಯಾವುದೇ ರೀತಿಯಲ್ಲಿ ಪ್ರಾರ್ಥನೆ ಮಾಡಿದರೂ ಅದು ಅವನಿಗೇ ಸೇರುತ್ತದೆ.

98.ಪ್ರ. ಒಬ್ಬ ವ್ಯಕ್ತಿಗೆ ಮೋಕ್ಷ ಪ್ರಾಪ್ತಿಯಾಬೇಕಾದಲ್ಲಿ ಪರಮೇಶ್ವರನ ಜವಾಬ್ದಾರಿ ಏನು ?

ಉ. ಒಬ್ಬ ವ್ಯಕ್ತಿಗೆ ಮೋಕ್ಷ ಪ್ರಾಪ್ತಿಯಾಗುವಲ್ಲಿ ಪರಮೇಶ್ವರನನ್ನು ಜವಾಬ್ದಾರಿಯಿಂದ ವೇದಮಂತ್ರಗಳು ವಿಮುಕ್ತ ಗೊಳಿಸಿವೆ. ಮೋಕ್ಷ ಪ್ರಾಪ್ತಿಯು ಅವನವನ ಕರ್ಮದ ಫಲವೇ ಆಗಿದೆ.

99. ಪ್ರ.ಕೃಷ್ಣನಂತಹ ದೇವರು ತನ್ನ ಶಕ್ತಿಯನ್ನು ಉಪಯೋಗಿಸಿ ಹಿಂದೂ ಜನರು ಬಡತನ ಮತ್ತು ಅನಾರೋಗ್ಯ ವಿಲ್ಲದಂತೆ ಏಕೆ ಬದಲಿಸಲಿಲ್ಲ ?

ಉ. ಮಾನವ ಜನಾಂಗದ ಮೇಲೆ 'ನಿಯೋಗಿ'ಯಾಗಿ (agent), 'ಪೋಷಕನಾಗಿ'(guardian) ಅಥವಾ'ನಿರಂಕುಶ ಅಧಿಕಾರ ಹೊಂದಿನವನಾಗಿ' ನಡೆದುಕೊಳ್ಳದಂತೆ ದೇವತೆಗಳನ್ನು ಶ್ಲೋಕಗಳು ಪದೇ ಪದೇ ಎಚ್ಚರಿಸುತ್ತಾ, ದೇವರ ಸಂದೇಶವನ್ನು ಬುದ್ಧಿಮಾತುಗಳಿಂದ, ಪ್ರವಚನದ ಮೂಲಕ ಮತ್ತು ನಿಷ್ಕಪಟ ನಡವಳಿಕೆಯ ಮೂಲಕ ತಿಳಿಸುವುದೇ ಅವರ ಏಕೈಕ ಕರ್ತವ್ಯವೆಂದು ಅವರ ಕೆಲಸವನ್ನು ಮಿತಗೊಳಿಸಿದೆ. ಹೀಗಾಗಿ ಶ್ರೀಕೃಷ್ಣನನ್ನೂ ಸೇರಿದಂತೆ ಎಲ್ಲ ದೇವತೆಗಳು ಪರಮೇಶ್ವರನ ಅಧಿಕಾರವನ್ನು ಕಸಿದುಕೊಳ್ಳುವುದು ಅಸಾಧ್ಯ.

100.ಪ್ರ. ಹಿಂದೂ ಸ್ತ್ರೀಯು ಸಂಪ್ರದಾಯದಂತೆ ಉಡುಪು ಧರಿಸದಿದ್ದರೆ ಪರಮೇಶ್ವರನು ಅಸಂತೊಷಗೊಳ್ಳುತ್ತಾನೆಯೇ ?

ಉ. ಪರಮೇಶ್ವರನ ಸಂತೋಷ ಅಥವಾ ಅಸಂತೋಷಕ್ಕೂ ಉಡಿಗೆಗೂ ಯಾವುದೇ ಸಂಬಂಧವಿಲ್ಲ. ಸ್ತ್ರೀಯರು ಧರಿಸಬೇಕಾದ ಉಡುಪಿನ ಬಗ್ಗೆ ನಿಯಮವನ್ನು ಶಿಫಾರಸು ಮಾಡುವುದು ಸಮಾಜದ ಪುರುಷರ ಸ್ವಭಾವ ಮತ್ತು ನಡತೆಯನ್ನುಪ್ರತಿಬಿಂಬಿಸುತ್ತದೆ. ವಿದ್ಯಾವಂತರೂ ಮತ್ತು ನಾಗರೀಕರೂ ಆದ ಪುರುಷರಿದ್ದಲ್ಲಿ ಹಿಂದೂ ಸ್ತ್ರೀಯರು ತಮ್ಮದೇ ಆದ ಉಡುಪಿನ ನಿಯಮವನ್ನು ನಿಯಮಿಸಿಕೊಳ್ಳುವ ಸ್ವಾತಂತ್ರವನ್ನು ಪಡೆಯುತ್ತಾರೆ.

101.ಪ್ರ. ಹಿಂದೂ ಧರ್ಮದ ಚಿಹ್ನೆಗಳನ್ನು ಪ್ರದರ್ಶಿಸ ಬೇಕೇ ?

ಉ. ತಾನು ಹಿಂದೂ ಎಂದೂ ತೋರಿಸುವ ಚಿಹ್ನೆಯನ್ನು ಸಿಗುವ ಎಲ್ಲ ಅವಕಾಶಗಳನ್ನು ಉಪಯೋಗಿಸಿ ಪ್ರದರ್ಶಿಸ ಬೇಕು. ತನ್ನ ಧರ್ಮದ ಬಗ್ಗೆ ಅವಕಾಶಸಿಕ್ಕಿದಾಗಲೆಲ್ಲ ಮಾತನಾಡಬೇಕು ಮತ್ತು ಅದರ

ಸಂದೇಶವನ್ನು ನೀಡಬೇಕು. ಈ ರೀತಿ ಮಾಡುವುದರಿಂದ ಪರಮೇಶ್ವರನು ಸಂತೋಷಗೊಳ್ಳುವಂತಹ ಸೇವೆಯನ್ನು ಮಾಡುತ್ತೀರಿ.

102.ಪ್ರ.ಹಿಂದೂಗಳಿಗೆ ಅಪೇಕ್ಷಣೀಯವಾದ ಮತ್ತು ನೈತಿಕವಾದ ಆಹಾರದ ಅಭ್ಯಾಸ ಯಾವುದು ?

ಉ. ವೇದಗಳ ಕಾಲದಿಂದಲೂ ಹಿಂದೂಗಳಲ್ಲಿ ಶಾಖಾಹಾರಿಗಳು ಮತ್ತು ಮಾಂಸಾಹಾರಿಗಳೂ ಇದ್ದರು. ಬೇಕಾದಷ್ಟು ತರಕಾರಿ ಮತ್ತು ಹಣ್ಣುಗಳನ್ನು ಬೆಳೆಯುವ ಕಡೆ ಶಾಖಾಹಾರಿಗಳು ಹೆಚ್ಚಾಗಿದ್ದರು, ಕೆಲವು ಪ್ರದೇಶಗಳಲ್ಲಿ ಹುಲ್ಲು ಕೂಡ ಬೆಳೆಯುವುದಿಲ್ಲ, ಇಂತಹಕಡೆ ಬದುಕಬೇಕಾದರೆ ಮಾಂಸಾಹಾರಿಗಳಾಗಲೇ ಬೇಕು. ಬದುಕಿನ ನೈತಿಕತೆಗೂ ಆಹಾರದ ಅಭ್ಯಾಸಕ್ಕೂ ಸಂಬಂಧವಿಲ್ಲ.

103.ಪ್ರ. ಗೋಮಾಂಸವನ್ನು ತಿನ್ನುವವರಿಗೆ ಭಾರತದಲ್ಲಿ ಯಾವಶಿಕ್ಷೆ ಇದೆ ?

ಉ. ಭಾರತದ ಕೃಷಿ ಕ್ಷೇತ್ರ ಮತ್ತು ಆರ್ಥಿಕತೆಯಲ್ಲಿ ಮುಖ್ಯ ಪಾತ್ರ ವಹಿಸುತ್ತಿರುವ ದನಗಳ ಹತ್ಯೆಯನ್ನು ನಿಷೇಧಿಸಬೇಕು. ಜನಸಂಖ್ಯೆ ಹೆಚ್ಚಾಗಿರುವ ಬಡತನ ಮತ್ತು ಹಸಿವು ಹೆಚ್ಚಾಗಿರುವ ಭಾರತದಲ್ಲಿ ಆಹಾರಕ್ಕಾಗಿ ಗೋಹತ್ಯೆ ಮಾಡಲು ಅನುಮತಿನೀಡಿದರೆ ಅದು ತಿಂದು ಮುಗಿಯುತ್ತದೆ ಆದರೆ ಇದರಿಂದಾಗಿ ಬೆಳೆ ಹಾನಿಯಾಗಿ ಹಸಿವಿನಿಂದ ಬಡ ಜನತೆ ಸಾಯುತ್ತದೆ. ಗ್ರಾಮೀಣ ಬಡ ಜನತೆಯನ್ನು ಉಳಿಸಲು ಮತ್ತು ಕೃಷಿಗಾಗಿ ದನಗಳನ್ನು ರಕ್ಷಿಸಬೇಕು. ಧಾರ್ಮಿಕವಾಗಿ ಗೋಹತ್ಯೆ ನಿಷೇಧಿಸುವುದು ಜನತೆ ಹಸಿವಿನಿಂದ ಸಾಯುವುದನ್ನು ತಪ್ಪಿಸುವುದಕ್ಕಾಗಿ ಆಗಿದೆ.

104. ಕೆಲವು ಹಿಂದೂ ದೇವತೆಗಳಿಗೆ ಅನೇಕ ಕೈಗಳು ಮತ್ತು ತಲೆಗಳು ಇರುತ್ತದೆ ಏಕೆ ?

ಉ. ಆಯುಧಗಳ ಉಪಯೋಗ ಅಥವಾ ತಿಳುವಳಿಕೆ ಬಗ್ಗೆ ಹೇಳುವಾಗ ಅತಿಮಾನುಷ ಸಾಧನೆಯ ಬಗ್ಗೆ ಕಥೆಹೇಳುವವರು ದೇವತೆಗಳನ್ನು ಕುರಿತು ದಂತಕಥೆಗಳನ್ನು ಸೃಷ್ಟಿಸಿದರು, ಇದನ್ನು ಅತ್ಯುತ್ಸಾಹವುಳ್ಳ ಕಲಾವಿದರು ಮತ್ತು ಶಿಲ್ಪಿಗಳು ಕಲ್ಪನೆಗೆ ಮತ್ತು ಅಲಂಕಾರಿಕ ವರ್ಣನೆಗೆ ಹೊಂದುವಂತೆ ಅಸಹಜವಾದ ರೂಪಗಳನ್ನು ಕೊಟ್ಟು ರಚಿಸಿದರು. ಎಲ್ಲ ದೇವತೆಗಳೂ ಮನುಷ್ಯರೇ ಆಗಿದ್ದು ಸ್ವಾಭಾವಿಕವಾದ ನಿಯಮಗಳನ್ನು ಮೀರಿರಲಿಲ್ಲ. ಎಲ್ಲದೇವತೆಗಳಿಗೂ ಒಂದು ತಲೆ ಮತ್ತು ಎರಡು ಕೈಗಳು ಇದ್ದುವು. ಈ ಕೆಳಗಿನ ಸ್ತೋತ್ರದಲ್ಲಿ ಅದನ್ನು ವಿವರಿಸಿದ್ದಾರೆ :

त्रिमस्तकानां ज्ञानम् एकशिरे अवस्थितं
चतुर्बाहुतुल्यबलं द्विहस्ते रोपितम् ॥
भक्तेच्छापूरणार्थं पुनः पुनः आविर्भूतम्
प्रणमामि त्वां हि ईश्वरप्रेरितदूतम् ।

ತ್ರಿಮಸ್ತ ಕಾನಾಂ ಜ್ಞಾನಮ್ ಏಕಶಿರೇ ಅವಸ್ಥಿತಂ ।
ಚತುರ್ಬಾಹುತುಲ್ಯ ಬಲಂ ದ್ವಿಹಸ್ತೆ ರೋಪಿತಮ್ ॥

ಭಕ್ತೇಚ್ಛಾಪೂರ್ಣಾರ್ಥಂ ಪುನಃ ಪುನಃ ಆವಿರ್ಭೂತಮ್।
ಪ್ರಣಮಾಮಿ ತ್ವಾಂ ಹಿ ಈಶ್ವರಪ್ರೇರಿತದೂತಮ್ ॥

ಓ ಪರಮೇಶ್ವರನೇ ನೀನು ಆಗಾಗ ಮನುಷ್ಯ ರೂಪದಲ್ಲಿ ಪ್ರವಾದಿಗಳನ್ನು ಕಳುಹಿಸುತ್ತಿದ್ದಿಯೇ.

ಅವರು ಬಹಳ ಬುದ್ದಿವಂತರಾಗಿದ್ದು ಒಂದೇ ಶಿರವಿದ್ದರೂ ಮೂರು ಶಿರಗಳ ಸಾಮರ್ಥ್ಯವನ್ನು ಹೊಂದಿದ್ದಾರೆ. ಅವರ ಎರಡು ಕೈಗಳು ಶಕ್ತಿಶಾಲಿಯಾಗಿದ್ದು ನಾಲ್ಕು ಕೈಗಳು ಕೆಲಸಮಾಡುತ್ತಿವೆಯೋ ಎನ್ನುವಂತೆ ಕೆಲಸಮಾಡುತ್ತವೆ.

105.ಪ್ರ. ಕೆಲವು ದೇವತೆಗಳನ್ನು ಉದಾ: ಇಂದ್ರಾ ಲಂಪಟರಂತೆ ಬಣ್ಣಿಸಲಾಗಿದೆ, ಆದರೂ ಅವರನ್ನು ಗೌರವಿಸಲಾಗುತ್ತದೆ ಏಕೆ ?

ಉ. ತನ್ನ ದೇಹಶಕ್ತಿಯಲ್ಲಿ ಮತ್ತು ಯದ್ಧ ಕೌಶಲ್ಯದಲ್ಲಿ ಇಂದ್ರನು ಶ್ರೇಷ್ಟನಾಗಿದ್ದನು ಅವನು ದೂರದೃಷ್ಟಿಯಿರುವ ರಾಜಕೀಯ ಪ್ರತಿಭೆ ಉಳ್ಳವನಾಗಿದ್ದನು ಆದರೆ ತನ್ನ ಕಾಮನೆಗಳ ಮೇಲೆ ನಿಯಂತ್ರಣ ಹೊಂದಿರಲಿಲ್ಲವಾಗಿ ಬಹಳಷ್ಟು ಹಗರಣಗಳಲ್ಲಿ ಸಿಕ್ಕಿಕೊಂಡನು. ಹಿಂದೂಗಳು ಇಂದ್ರನ ಅತಿಮಾನುಷ ಗುಣಗಳನ್ನು ಗೌರವಿಸುತ್ತಾರೆ ಆದರೆ ಹಗರಣಗಳನ್ನಲ್ಲ. ಇಂದ್ರನ ಕಥೆಯಿಂದ ಪ್ರತಿಭಾವಂತನು ಪರಿಪೂರ್ಣನಲ್ಲ ಎಂಬ ಪಾಠವನ್ನು ಕಲಿಯಬೇಕು

(1)ಒಳ್ಳೆಯ ಶಸ್ತ್ರ ಚಿಕಿತ್ಸಕನು ಆದಾಯಕರವನ್ನು ಕಟ್ಟದೆ ದೇಶಕ್ಕೆ ದ್ರೋಹ ಮಾಡುವ ಬಹಳಷ್ಟು ಉದಾಹರಣೆಗಳು ನಮ್ಮಲ್ಲಿದೆ (2) ಆಲ್ಬರ್ಟ್ ಐನ್‌ಸ್ಟೀನರು ಒಬ್ಬ ಶ್ರೇಷ್ಠ ವಿಜ್ಞಾನಿ ಯಾಗಿದ್ದರಾದರೂ ತಮ್ಮ ಹೆಂಡತಿಗೆ ಮೋಸಮಾಡಿ ಇನ್ನೊಬ್ಬ ಹೆಂಗಸನ್ನು ಮದುವೆಯಾಗಿದ್ದರು.

ಇಂತಹ ಸಂದರ್ಭಗಳಲ್ಲಿ ವೈಯುಕ್ತಿಕ ಲೋಪಗಳಿದ್ದರೂ ತಮ್ಮ ಪ್ರತಿಭೆ ಮತ್ತು ಕೊಡುಗೆಯಿಂದಾಗಿ ಜನರ ಗೌರವ ಪಡೆದರು. ಇಂದ್ರನ ಕಥೆ ಇದಕ್ಕೆ ಹೊರತಾದುದಲ್ಲ.

106.ಪ್ರ. ಮೋಕ್ಷಕ್ಕೆ ಬೇರೆ ಬೇರೆ ದಾರಿ ಇದೆಯೆಂದು ನಂಬುವವರನ್ನು ಹಿಂದೂಗಳು ಯಾವರೀತಿ ನಡೆಸಿಕೊಳ್ಳ ಬೇಕು ?

ಉ. ಮೋಕ್ಷಕ್ಕೆ ಬೇರೆ ದಾರಿ ಇದೆಯೆಂದು ನಂಬುವವರನ್ನು ಸೌಜನ್ಯದಿಂದ ನಡೆಸಿಕೊಳ್ಳ ಬೇಕು.

107.ಪ್ರ. ಒಬ್ಬ ಹಿಂದೂವಿಗೆ ಯಾವಕೆಲಸವು ಗೌರಯುತವಾದುದು ?

ಉ. ತನ್ನ ಸಾಮರ್ಥ್ಯ ಮತ್ತು ಪ್ರಾಮಾಣಿಕತೆಯಿಂದ ನಿಷ್ಕಪಟವಾಗಿ ಕರ್ತವ್ಯವನ್ನು ನಿಭಾಯಿಸುವ ಯಾವುದೇ ಕೆಲಸವು ಗೌರವಯುತವಾದುದು. ಆದರೆ ದೈಹಿಕ ಶ್ರಮದಿಂದ ಕೆಲಸಮಾಡುವವರು ಪರಮೇಶ್ವರನಿಗೆ ಅತ್ಯಂತ ಪ್ರೀತಿ ಪಾತ್ರರು. ಉದ್ಯಮಶೀಲತೆ ಇದ್ದು ವ್ಯಾಪಾರಮಾಡುವವರು ಪರಮೇಶ್ವರನಿಗೆ ಸಂತೋಷ ಉಂಟುಮಾಡುತ್ತಾರೆ, ಏಕೆಂದರೆ ಅವರು ಸಂಪತ್ತನ್ನು ಸೃಷ್ಟಿಸಿ ಮುಂದಿನ ಪೀಳಿಗೆಗೆ ಬಿಟ್ಟು ಹೋಗುತ್ತಾರೆ.

108.ಪ್ರ. ಹಿಂದೂತ್ವವು ಮುಂದುವರೆಯಲು ಮತ್ತು ಏಳಿಗೆ ಹೊಂದಲು ಯಾವ ಜನಾಂಗ ಹೆಚ್ಚಿನ ಕೊಡುಗೆ ನೀಡಿದೆ ?

ಉ. ಪರಮೇಶ್ವರನು ತನ್ನ ಸೃಷ್ಟಿಯನ್ನು ಪ್ರೀತಿಸುತ್ತಾನೆ ಮತ್ತು ಅವರು ಆರ್ಥಿಕವಾಗಿ ಚೆನ್ನಾಗಿರುವುದನ್ನು ಕಂಡು ಸಂತೋಷಿಸುತ್ತಾನೆ. ಕುಶಲಕೆಲಸಗಾರರು ಮತ್ತು ಕೆಲಸಗಾರರು ಅತಿ ಹೆಚ್ಚಿನ ಕೊಡುಗೆಯನ್ನು ನೀಡಿರುತ್ತಾರೆ, ಎರಡನೆಯದಾಗಿ ಉದ್ಯಮಿಗಳು, ಶಿಕ್ಷಣ ತಜ್ಞರು ಮತ್ತು ರಾಜಕಾರಣಿಗಳು ಮೂರನೆಯ ಸ್ಥಾನವನ್ನು ಪಡೆದುಕೊಳ್ಳುತ್ತಾರೆ, ಉಳಿದೆಲ್ಲ ಉದ್ಯೋಗವು ನಾಲ್ಕನೇಯ ಸ್ಥಾನವನ್ನು ಪಡೆಯುತ್ತದೆ. ಆದರೆ ರಾಜಕೀಯ ಕಾರಣಗಳಿಂದಾಗಿ ಸಂಪತ್ತಿನ ವಿತರಣೆಯು ಆರ್ಥಿಕತೆಗೆ () ನೀಡಿದ ಕೊಡುಗೆಯ ಪ್ರಮಾಣಕ್ಕೆ ತಕ್ಕಂತಿರಲಿಲ್ಲ. ಹಿಂದೂಗಳು

ಈ ವಿನ್ಯಾಸವನ್ನು ಸರಿಪಡಿಸಬೇಕು.

109.ಪ್ರ. ಯಾವ ಆರು ವಿಷಯಗಳ ಮೇಲೆ ಮನುಷ್ಯನು ಭರವಸೆ ಇಡಬಾರದು ?

ಉ. ಪರಮೇಶ್ವರನ ಆಜ್ಞೆಯಂತೆ ಈ ಆರು ನಂಬಲು ಅರ್ಹವಲ್ಲದ ವಿಷಯಗಳ ಮೇಲೆ ಭರವಸೆ ಇಡಬಾರದು.: (1) ರಾಜನ ಭರವಸೆ (2) ಬೆಂಕಿಯ ಹರಡುವಿಕೆ (3)ಗಾಳಿ ಬೀಸುವ ದಿಕ್ಕು (4) ನೀರಿನ ಆಳ (5) ನಾಸ್ತಿಕ ನಾದ ಮನುಷ್ಯ (6)ಅಸಹನೆಯುಳ್ಳ ಅನ್ಯಧರ್ಮೀಯ

110.ಪ್ರ. ವಿಜ್ಞಾನಕ್ಕೂ ಧರ್ಮಕ್ಕೂ ಘರ್ಷಣೆ ಇದೆಯೇ ?

ಉ. ವಿಜ್ಞಾನವು ಜಗತ್ತಿನ ಭೌತಿಕ ವಿವರಣೆಯನ್ನು ಕಂಡುಹಿಡಿಯುವ ಅಭ್ಯಾಸವಾಗಿದ್ದು ಅದರಿಂದ ಸಿಗುವ ತಿಳುವಳಿಕೆಯನ್ನು ಪರಮೇಶ್ವರನ ಪ್ರಪಂಚವನ್ನು ಉತ್ತಮ ಗೊಳಿಸುತ್ತದೆ. ಹಿಂದೂತ್ವದಲ್ಲಿ ವಿಜ್ಞಾನಕ್ಕೂ ಧರ್ಮಕ್ಕೂ ಸರಿಯಾದ ರೀತಿಯಲ್ಲಿ ಘರ್ಷಣೆ ಇರುವುದಿಲ್ಲ. ಕೆಲವು ಠಕ್ಕರಾದ ಪ್ರವಾದಿಗಳು ಪರಮೇಶ್ವರನೊಂದಿಗೆ ಮನುಷ್ಯರು ನೇರವಾಗಿ ಸಂಪರ್ಕ ಹೊಂದಬಹುದೆಂಬ ವಿಚಾರವನ್ನು ಪ್ರಸಾರಮಾಡಿದುದೇ ವಿಜ್ಞಾನಕ್ಕೂ ಧರ್ಮಕ್ಕೂ ನಡುವೆ ಘರ್ಷಣೆ ಏರ್ಪಡಲು ಕಾರಣವಾಗಿದೆ. ಪರಮೇಶ್ವರನು ನಿರಾಕಾರನು, ವರ್ಣನೆ ಅಥವಾ ಬಣ್ಣವಿಲ್ಲದವನಾದುದರಿಂದ ಯಾರು ಅವನೊಂದಿಗೆ ಮಾತನಾಡುವ ಪ್ರಶ್ನೆಯೇ ಇಲ್ಲ.

111.ಪ್ರ. ಮನುಷ್ಯನನ್ನು ಯಾರು ಸೃಷ್ಟಿಸಿದರು ಮತ್ತು ಪ್ರಾಚೀನ ಮನುಷ್ಯ ಯಾವರೀತಿ ಜೀವಿಸುತ್ತಿದ್ದ ?

ಉ. ಒಂದು ಮಿಲಿಯ ವರುಷಗಳಿಗೂ ಮೊದಲು ವಿಕಸನ ಪ್ರತಿಕ್ರಿಯಯ ವಿಧಾನದಲ್ಲಿ ಮಾನವ ಜನಾಂಗವು ಭೂಗ್ರಹದಲ್ಲಿ ಅಸ್ತಿತ್ವಕ್ಕೆ ಬಂತು. ಪ್ರಾಚೀನ ಮನುಷ್ಯರಿಗೆ ಪರಮೇಶ್ವರನ ಮತ್ತು ಎಲ್ಲ ಕಾರಣಕ್ಕೆ ಕಾರಣೀಭೂತನಾದವನ ಬಗ್ಗೆ ತಿಳುವಳಿಕೆ ಇರಲಿಲ್ಲ. ಜನರು ಗುಂಪಾಗಿ ಅಥವಾ ಬುಡಕಟ್ಟುಗಳಾಗಿ ಜೀವನ ನಡೆಸುತ್ತಿದ್ದರು. ಪ್ರಾಣಿ ಬೇಟೆ, ಹಣ್ಣುಗಳನ್ನು ಕಿತ್ತಿ ತಿನ್ನುವುದು, ಮತ್ತು ಬೇರೆಗುಂಪಿನ ಸಂಪತ್ತು ಮತ್ತು ಸ್ತ್ರೀಯರನ್ನು ಕಸಿದು ಕೊಳ್ಳುವಂತಹ ಅನಾಗರೀಕ ಜೀವನವನ್ನು ನಡೆಸುತ್ತಿದ್ದರು.

112.ಪ್ರ. ಮಾನವನನ್ನು ರಕ್ಷಿಸಲು ಪರಮೇಶ್ವರನು ಯಾವಾಗ ಬಂದಿದ್ದನು ?

ಉ. ಪರಮೇಶ್ವರನು ಎಲ್ಲ ಸೃಷ್ಟಿಯು ಅಸ್ತಿತ್ವಕ್ಕೆ ಬಂದಾಗಿನಿಂದಲೂ ಇದ್ದನು ಅದರೆ ಅಜ್ಞಾನಿಗಳಾದ ಮನುಷ್ಯರಿಗೆ ಅದು ತಿಳಿದಿರಲಿಲ್ಲ. ಪರಮೇಶ್ವರನು ಆಗಾಗ ಪ್ರವಾದಿಗಳನ್ನು ಕಳುಹಿಸುತ್ತಿದ್ದರೂ ಅವರು ತಿಳಿಯ ಪಡಿಸುವಂತಹ ಭಾಷೆ ಇಲ್ಲದುದರಿಂದ ಪರಿಣಾಮ ಕಾರಿಯಾಗಿರಲಿಲ್ಲ. ಜನಗಳು ಬುಡಕಟ್ಟುಗಳಿಗೆ ಸೇರಿದವರೂ, ಕ್ರೂರಿಗಳು ಮತ್ತು ಬೇರೆ ಮನುಷ್ಯರನ್ನು ಕಂಡರೆ ಹೆದರುವವರೂ ಆಗಿದ್ದರು. ಅವರು ಬುಡಕಟ್ಟಿನ ಮುಖ್ಯಸ್ಥನನ್ನು ಹೊರತುಪಡಿಸಿ ಇತರರನ್ನು ನಂಬುತ್ತಿರಲಿಲ್ಲ. ಅವರಿಗೆ ನೈಸರ್ಗಿಕ ವಿಪತ್ತು, ರೋಗ, ಕ್ರೂರಮೃಗಗಳು ಹಾಗೂ ಬೇರೆ ಗುಂಪಿನವರು/ಬುಡಕಟ್ಟಿನ ವರನ್ನು ಕಂಡು ಹೆದರುತ್ತಿದ್ದರು. ಆಹಾರ ಅಥವಾ ಪ್ರಾಣಿ ಬಲಿ ಕೊಡುವುದರಿಂದ ಈ ವಿಪತ್ತುಗಳಿಂದ ಮುಕ್ತರಾಗ ಬಹುದೆಂದು ತಿಳಿದಿದ್ದರು. ಅವರ ಕಲ್ಪನೆಯಲ್ಲಿ ದೇವರೆಂದರೆ ದೊಡ್ಡ ರಾಜ ಅಥವಾ ಬುಡಕಟ್ಟಿನ ಮುಖ್ಯಸ್ಥನೆಂದೂ ಅವರಿಗೆತಾವು ಪೂರ್ಣ ನಿಷ್ಠೆಯಿಂದ ಇರಬೇಕೆಂದೂ ಅವನ ಅನುಯಾಯಿಗಳಾಗಿ ಸ್ವತಂತ್ರವಾಗಿ ಯೋಚಿಸಿದರೆ ರಾಜನು ಪ್ರತಿಕಾರ ಮಾಡುವನೆಂದೂ ತಿಳಿದಿದ್ದರು. ಸುಮಾರು 20000 ವರುಷಗಳ ಹಿಂದೆ ಪರಮೇಶ್ವರನು ಮಾನವಕುಲಕ್ಕೆ ಸಹಾಯ ಮಾಡಲು ನಿರ್ಧರಿಸಿದಾಗ ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಪ್ರವಾದಿಗಳು ಈ ಪ್ರಪಂಚಕ್ಕೆ

ಬಂದರು. ಅವರು ಭರತ ಖಂಡವನ್ನು ಒಂದುಗೊಡಿಸಿ ಪರಮೇಶ್ವರನ ಹಾಗೂ ಅವನ ಆದೇಶಗಳ ಬಗ್ಗೆಯೂ ತಿಳುವಳಿಕೆ ನೀಡಿದರು. ವೇದಗಳ ಪ್ರತಿಪಾದನೆ ಮಾಡಿದರು. ಸನಾತನ ಧರ್ಮವನ್ನು ಸ್ಥಾಪಿಸಿದರು ಹಾಗೂ ಮಾನವರನ್ನು ಮೃಗಯಾ–ಅಸ್ತಿತ್ವದಿದ ಉಳಿಸಿದರು.

113.ಪ್ರ. ಬುಡಕಟ್ಟು ಜನಾಂಗದ ದೇವರಿಗೂ ಪರಮೇಶ್ವರನಿಗೂ ವ್ಯತ್ಯಾಸವೇನು ?

ಉ. ಬುಡಕಟ್ಟು ಜನಾಂಗದ ದೇವರು ಹುಸಿ ದೇವರು. ಅದು ಅಸೂಯೆಯಿಂದ ಕೂಡಿದ ರಾಜಕೀಯ ಮುಖಂಡರಂತೆ – ತಮ್ಮ ಮುಂದಾಳತ್ವವನ್ನು ಹೆಚ್ಚಿನ ಸಂಖ್ಯೆಯಲ್ಲಿ ಜನ ಬೆಂಬಲಿಸುವಂತೆ ಮಾಡಲು ಅವರಿಗೆ ಅನೇಕವಿಧದ ನೈತಿಕವಾದ ಹಾಗೂ ಅನೈತಿಕವಾದ ಪ್ರಯೋಜನದ ಭರವಸೆ ನೀಡುವವರು. ಅವರ ಬೆಂಬಲಿಗರು ಅವರ ಮುಂದಾಳತ್ವವನ್ನು ಒಪ್ಪದಿರುವವರನ್ನು ಕೊಲೆ, ಸುಲಿಗೆ, ಅತ್ಯಾಚಾರ ಅಥವಾ ಆಮಿಷಗಳನ್ನು ಒಡ್ಡಿ ಬಲವಂತವಾಗಿ ಗೆಲ್ಲುತ್ತಿದ್ದರು.

ನಿಜವಾದ ದೇವರ – ಪರಮೇಶ್ವರ–ಅನುಯಾಯಿಗಳಿಗೆ ಈ ಪ್ರಪಂಚದಲ್ಲಿ ಸಂಸ್ಕಾರಯುತವಾದ ಸಭ್ಯ ಬದುಕನ್ನು ನಡೆಸಲು ಬೇಕಾದ ಪರಮೇಶ್ವರನ ಆದೇಶಗಳು ತಿಳಿದಿರುತ್ತದೆ. ಅವರಿಗೆ ಸ್ವರ್ಗಕ್ಕೆ ಹೋಗುವ ಹತ್ತಿರದ ದಾರಿಯಬಗ್ಗೆ ಶಿಕ್ಷಣ ಸಿಕ್ಕಿರುತ್ತದೆ. ಅವರ ಸಂಖ್ಯೆಯನ್ನು (ಆಸ್ತಿಕರ) ಹೆಚ್ಚಿಸಲು ಬಲವಂತವಾಗಲೀ ಆಮಿಷವಾಗಲೀ ಬೇಕಾಗುವುದಿಲ್ಲ.

114.ಪ್ರ. ಭೋಜ್ ಉತ್ಸವವೆಂದರೆ ಏನು ? ಅದರಿಂದ ಏನು ಪ್ರಯೋಜನ ?

ಉ. ಭೋಜ್ ಉತ್ಸವವೆಂದರೆ ಧಾರ್ಮಿಕ ಸಮಾಜದ ರಾತ್ರಿ ಭೋಜನ. ಅದನ್ನು ಪೌರ್ಣಮಿದಿವಸ ಹಗಲಿನಲ್ಲಿ ಉಪವಾಸ ವಿದ್ದು ರಾತ್ರಿ ಆಚರಿಸ ಬೇಕು. ಭೋಜನವನ್ನು ಸ್ನೇಹಿತರು, ಸಂಬಂಧಿಕರು, ಹಿತೈಷಿಗಳು ಮತ್ತು ಪರಿಚಿತರು ಪಾಳಿಯ ಮೇಲೆ ಪ್ರಾಯೋಜಿಸ ಬಹುದು. ಭೋಜ್ ಉತ್ಸವವನ್ನು ವ್ಯವಸ್ಥೆ ಮಾಡುವವರಾಗಲೀ ಅಥವಾ ಅದರಲ್ಲಿ ಭಾಗವಹಿಸುವವರಾಗಲೀ ಸ್ವರ್ಗಕ್ಕೆ ಹೋಗುತ್ತಾರೆ ಮತ್ತು ತಮ್ಮ ಮಕ್ಕಳ ಸುರಕ್ಷೆ ಹಾಗೂ ಭದ್ರತೆಯನ್ನು ನಿಶ್ಚಿತ ಗೊಳಿಸುತ್ತಾರಲ್ಲದೆ ಸಂಪತ್ತನ್ನೂ ಸಂಪಾದಿಸುತ್ತಾರೆ. ಈ ಉತ್ಸವವನ್ನು ಎಲ್ಲ ಹಿಂದೂಗಳೂ ಕಡ್ಡಾಯವಾಗಿ ಆಚರಿಸಬೇಕು. ಆಹಾರವನ್ನು ತೆಗೆದುಕೊಳ್ಳುವ ಮೊದಲು ಪರಮೇಶ್ವರನಿಗೂ ಮತ್ತು ಎಲ್ಲಾ ಪಿತೃಗಳಿಗೂ (ಸ್ತ್ರೀಪುರುಷರಿಬ್ಬರಿಗೂ) ಕೃತಜ್ಞತೆ ಸಲ್ಲಿಸಬೇಕು. ಭೋಜ್ ಉತ್ಸವವು ಯಜ್ಞಗಳನ್ನು ಮಾಡಿ ಪಡೆಯುವ ಫಲಗಳಿಗಿಂತ ಉತ್ತಮ ಫಲನೀಡುತ್ತದೆ ಎಂದು ವೇದಗಳಲ್ಲಿ ಹೇಳಿದೆ.

115. ಪ್ರ. ಮೃತನ ವಾರಸು ದಾರರಿಗೆ ಆಸ್ತಿಯನ್ನು ಯಾವರೀತಿ ಹಂಚ ಬೇಕು ?

ಉ. ಎಲ್ಲ ಸಂಪತ್ತು ಪರಮೇಶ್ವರನಿಗೆ ಮತ್ತು ಅವರ ಸೃಷ್ಟಿಗೆ ಸೇರಿದ್ದು. ಮನುಷ್ಯರು ತಮ್ಮ ಬುದ್ಧಿವಂತಿಕೆ ಮತ್ತು ದುಡಿಮೆಯ ಹಾಗೂಸಿಗುವ ಅವಕಾಶಗಳ ಸಂಯೋಜನೆಯಿಂದ ಸಂಪತ್ತನ್ನು ಸೃಷ್ಟಿಸುತ್ತಾರೆ. ಹೀಗಾಗಿ ಮೃತನ ವಾರಸುದಾರರಿಗೆ ಅವನ ಆಸ್ತಿಯ ಮೇಲೆ ಮಿತವಾದ ಹಕ್ಕಿರುತ್ತದೆ. ಮೃತನ/ಳ ಆಸ್ತಿಯ ಹಕ್ಕು ಗಂಡ/ಹೆಂಡತಿಗೆ ಸೇರುತ್ತದೆ. ಅವರ ಮರಣಾನಂತರ ಮಕ್ಕಳಿಗೆ ಸಮಪಾಲು ಬರುತ್ತದೆ ಆದರೆ ಪಾಲು ಮಾಡುವಾಗ ಆಸ್ತಿಯು ಆರ್ಥಿಕವಾಗಿ ನಷ್ಟಕ್ಕೊಳಗಾಗದಂತೆ ಗಮನವಿರಿಸಬೇಕು. ಸ್ಥಿರಾಸ್ಥಿಯು ಗಂಡು ಮಕ್ಕಳಿಗೂ ಚರಾಸ್ತಿಯು ಹೆಣ್ಣು ಮಕ್ಕಳಿಗೂ ಸಿಕ್ಕ ಬೇಕು.

ಹೆಣ್ಣು ಮಕ್ಕಳು ಮದುವೆಯಾಗಿ ಬೇರೊಂದು ಕುಟುಂಬಕ್ಕೆ ಸೇರುವುದರಿಂದ ಆ ಕುಟುಂಬದ ಸ್ಥಿರ ಆಸ್ತಿಯಲ್ಲಿ ಹಕ್ಕು ಪಡೆಯುತ್ತಾರೆ. ಆದರೆ ಒಬ್ಬ ಹೆಣ್ಣುಮಗಳು ಮದುವೆಯಾಗದೆ ಹೇಗೇ ಉಳಿದ

ಪಕ್ಷದಲ್ಲಿ ಅಥವಾ ವಿಧವೆಯಾಗಿದ್ದರೆ ಸ್ಥಿರಾಸ್ಥಿಯಲ್ಲಿ ಗಂಡು ಮಕ್ಕಳೊಂದಿಗೆ ಸಮಪಾಲು ಪಡೆಯಬೇಕು.

ಒಂದುವೇಳೆ ಸಮವಾಗಿ ಪಾಲು ಮಾಡಲಾಗದಿದ್ದರೆ, ಆಸ್ತಿಯ ಮೌಲ್ಯವನ್ನು ನಿರ್ಧರಿಸಿ ಹೆಣ್ಣು ಮಕ್ಕಳಿಗೆ ಅವರ ಪಾಲಿನ ಆಸ್ತಿಯ ಕ್ರಯವನ್ನು ಕೊಡಬೇಕು. ಆಸ್ತಿ ಪಾಲು ಮಾಡು ವಾಗ ಬರಬಹುದಾನ ಭಿನ್ನಾಭಿಪ್ರಾಯಗಳನ್ನು ತಪ್ಪಿಸಲು ಸಮಾಜದ ಗೌರವಾನ್ವಿತರನ್ನು ಪಂಚಾಯಿತಿ ದಾರರನ್ನಾಗಿ ಕರೆಸಬಹುದು. ಯಾವುದೇ ವಾರಸುದಾರನೂ ತನ್ನ ವಾರಿನ ಆಸ್ತಿಯನ್ನು ಮಾರುವುದಿದ್ದರೆ ಅದನ್ನು ಕೊಳ್ಳುವ ಮೊದಲ ಅವಕಾಶವನ್ನು ಉಳಿದ ಪಾಲುದಾರರಿಗೆ ಕೊಡಬೇಕು. ಸಂಧಾನಮಾಡಲು ,ಸಾಧ್ಯವಾಗ ದಂತಹ ಭಿನ್ನಾಭಿಪ್ರಾಯಗಳುಂಟಾದರೆ ದೇಶದ ಕಾನೂನಿನಂತೆ ನಡೆದುಕೊಳ್ಳ ಬೇಕು.

116.ಪ್ರ. ಒಬ್ಬನು/ಒಬ್ಬಳು ಉತ್ತಮ ಹಿಂದೂವಾಗಿ ಹೇಗೆ ಪರಿವರ್ತನಗೊಳ್ಳಬಹುದು ?

ಉ. ಹಿಂದೂವಾಗಬೇಕಾದರೆ ಹಿಂದೂತ್ವದ ಮೂಲತತ್ವಗಳನ್ನು ಅನುಸರಿಸ ಬೇಕು ಮತ್ತು ಈ ಕೆಳಗಿನಂತೆ ಪ್ರತಿಜ್ಞೆ ಮಾಡಬೇಕು (1) ಸ್ತ್ರೀ ಪುರುಷರು ಪರಮೇಶ್ವನಿಂದ ಸಮಾನವಾಗಿ ಪ್ರೀತಿ ಸಲ್ಪಡುವವರು ಹಾಗೂ ಯಾರಿಗೂ ಜೀವನವನ್ನು ಅನುಭವಿಸುವ ಹೆಚ್ಚಿನ ಹಕ್ಕು ಇರುವುದಿಲ್ಲ (2) ಮಾನವ ಜನಾಂಗದ ಎಲ್ಲ ಜನರೂ; ಪ್ರಾಣಿಗಳು ಮತ್ತು ಪ್ರಕೃತಿಯು ಪರಮೇಶ್ವರನಿಂದ ಸೃಷ್ಟಿಸಲ್ಪಟ್ಟಿದೆ; ಯಾವುದೇ ಜನಾಂಗವು ಅವನ ಇಚ್ಚೆಗೆ ವಿರುದ್ಧವಾಗಿ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ ಮತ್ತು ಯಾವುದೇ ಜನಾಂಗವನ್ನು ನಾಸ್ತಿಕರೆಂದು ಪರಿಗಣಿಸುವುದು ಮೂರ್ಖತನ (3) ಪರಮೇಶ್ವರನು ಮನುಷ್ಯರಿಗೆ ಅವರು ಕಷ್ಟಪಟ್ಟು, ಜವಾಬ್ದಾರಿಯಿಂದ, ಶ್ರದ್ಧೆಯಿಂದ, ಮತ್ತು ದಯಯಿಂದ ಕೆಲಸಮಾಡಿ ಭೂಮಿಯಲ್ಲಿರುವಾಗ ಒಳ್ಳೆಯ ಜೀವನನಡೆಸುವ ಅರ್ಹತೆ ದೊರೆತು ಮರಣಾನಂತರ ಸ್ವರ್ಗ ಪ್ರಾಪ್ತಿಯಾಗಿ ನಿರಂತರ ಸುಖವನ್ನು ಪಡೆಯುವುದಕ್ಕಾಗಿ ಕೈಕಾಲು ಮತ್ತು ಬುದ್ಧಿಯನ್ನು ಕೊಟ್ಟಿರುತ್ತಾನೆ (ಮನುಷ್ಯರು ಮಾಡುವ ಕುಕೃತ್ಯ ಮತ್ತು ಮೂರ್ಖ ನಡತೆಗೆ ಪರಮೇಶ್ವರನು ಜವಾಬ್ದಾರನಲ್ಲಿ (4) ಪ್ರತಿ ಯೊಬ್ಬ ಮನುಷ್ಯನೂ ದಿವಸದಲ್ಲಿ ಎರಡುಸಾರಿ ಹದಿನೈದು ಸ್ತೋತ್ರ (ಮಂತ್ರ)ಗಳನ್ನು ಹೇಳಬೇಕು, ದಿವಸಕ್ಕೆ ಒಂದುಸಾರಿಯಾದರೂ ಕನಿಷ್ಠ ಹತ್ತು ನಿಮಿಷವಾದರೂ ಪ್ರಾಣಾಯಾಮ ಮಾಡಬೇಕು ಮತ್ತು ಭೋಜ್ ಉತ್ಸವದಲ್ಲಿ ಪಾಲ್ಗೊಳ್ಳ ಬೇಕು (5) ಧೈರ್ಯವಂತರಾಗಿ ಮತ್ತು ಎಲ್ಲ ಹೇಡಿತನವನ್ನು ತಿರಸ್ಕರಿಸ ಬೇಕು (6) ಜೀವನದಲ್ಲಿ ಮಾರ್ಗದರ್ಶನ ಬೇಕಾದಾಗ ಗೀತೆ ಮತ್ತು ವೇದ ಪಾರಾಯಣ ಮಾಡ ಬೇಕು.

ನಿಮ್ಮಲ್ಲಿ ಯಾರು ನಿಮ್ಮ ಧರ್ಮವನ್ನು ಪಸರಿಸಲು ಮತ್ತು ಮನನೋಯಿಸುವರಿಂದ ರಕ್ಷಿಸಲು ಪ್ರಯತ್ನಿಸುತ್ತೀರೋ ಅಂತಹವರಿಗೆ ಸ್ವರ್ಗದಲ್ಲಿ ಸುಖ ಮತ್ತು ಸಂತೋಷ ಪ್ರಾಪ್ತಿ ಯಾಗುತ್ತದೆ.

# ವೇದ ಧರ್ಮ

ವೇದವು ಪಾಪವನ್ನು ಅಂಗೀಕರಿಸುವುದಿಲ್ಲ, ಅದು ತಪ್ಪುಗಳನ್ನು ಗುರುತಿಸುತ್ತದೆ ಮತ್ತು ತನ್ನನ್ನು ತಾನೇ ಬಲಹೀನ ಹಾಗು ಪಾಪಿ ಎನ್ನುವುದೇ ಗಣನೀಯವಾದ ತಪ್ಪು ಎಂದು ಹೇಳುತ್ತದೆ. ವೇದ ಧರ್ಮವು ಪ್ರಪಂಚದಲ್ಲಿರುವ ಎಲ್ಲ ಧಾರ್ಮಿಕ ಚಟುವಟಿಕೆಗಳೆಲ್ಲೇ ಪುರಾತನ ವಾದುದು.

ಭಾರತದಲ್ಲಿ ವೇದವನ್ನು ಕ್ರಿ.ಪೂ.18000 ದಿಂದಲೂ ಪಠಿಸುತ್ತಿದ್ದಾರೆ. ಹಿಂದೂ ಧರ್ಮವು ಸುಮಾರು 20000 ವರುಷಗಳಷ್ಟು ಹಳೆಯದಾಗಿದ್ದು ನಾಗರೀಕ ಪ್ರಪಂಚದಲ್ಲಿ ಧರ್ಮದ ಪ್ರಾರಂಭ ಇದಾರಿಂದಾಗಿದೆ. ಈ ಧರ್ಮವನ್ನು 'ಸನಾತನ ಧರ್ಮ' – ಶಾಶ್ವತವಾದ ಜೀವನ ಮಾರ್ಗ– ಎನ್ನುತ್ತಿದ್ದರು.

ಸನಾತನ ಧರ್ಮವು ಕ್ರಿ.ಪೂ. 3500ರವರೆಗೆ ಅಬಾಧಿತವಾಗಿತ್ತು. ಕ್ರಿ.ಪೂ. 3500ರ ಸುಮಾರಿಗೆ ವಾಯುವ್ಯದ ಗಡಿಯಿಂದ ಭಾರತದಮೇಲೆ ಧಾಳಿ ನಡೆಯಿತು. ಧಾಳಿಕೋರರು ಭಾರತೀಯರನ್ನು ''ಹಿಂದೂಗಳು'' – ಸಿಂಧೂ ನದಿಯ ತೀರದ ನಾಗರೀಕತೆ – ಎಂದು ಕರೆದರು. ಧಾಳಿಕೋರರು ನೀಡಿದ ಹೆಸರು ಉಳಿಯಿತು. ಇದರಿಂದಾಗಿ ಸನಾತನ ಧರ್ಮವು ಕ್ರಮೇಣ ಹಿಂದೂ ಧರ್ಮ/ಹಿಂದುತ್ವ ಎಂದು ಕರೆಯಲ್ಪಟ್ಟಿತು. ಧರ್ಮ ಎಂದರೆ ಒಳ್ಳೆಯ ಜೀವನ ಮಾರ್ಗ ಎಂದು ಅರ್ಥ.

ಈ ಧಾಳಿ ನಡೆದ ಸಮಯದಿಂದ ಕಲಿಯುಗದ ಪ್ರಾರಂಭವಾಯಿತು ಎಂದು ನಂಬಲಾಗಿದೆ. ಈ ಸಮಯದಿಂದ ಧಾರ್ಮಿಕ ಸ್ತೋತ್ರಗಳ ಮಿಶ್ರಣವಾಗಿ ವೇದಗಳ ಪವಿತ್ರತೆ ಕಡಿಮೆಯಾಯಿತು ಮೂಲ ವೇದಕ್ಕೆ ವೈಜ್ಞಾನಿಕ ಮತ್ತು ತಾತ್ವಿಕ ತಳಹದಿ ಇತ್ತು. ವೇದ ಧರ್ಮವು ಭಾರತಕ್ಕೆ ವೈಜ್ಞಾನಿಕ ಮತ್ತು ತಾತ್ವಿಕ ತಳಹಯನ್ನು ನೀಡಿತ್ತು. ಅತ್ಯುನ್ನತವಾದ ಮಾನವೀಯ ಮೌಲ್ಯ ಮತ್ತು ಸೃಷ್ಟಿಯಲ್ಲಿನ ಎಲ್ಲ ವರ್ಗಗಳ ಮೇಲೆ ಕರುಣೆ ಇರುವ ಮೌಲ್ಯಗಳ ವಿಕಸನವಾಗಿತ್ತು.

ಅಲೌಕಿಕ ಶಕ್ತಿಯೇ ವೇದಕ್ಕಿರುವ ಬಲ. ಅದು ಕಾಯಿಲೆಗಳನ್ನು ಗುಣಪಡಿಸುತ್ತದೆ ಮತ್ತು ಅದನ್ನು ಪಠಿಸುವವರ ಕುಟುಂಬ ಮತ್ತು ಸ್ನೇಹಿತರ ಸುತ್ತ ಸುರಕ್ಷಾ ಬಲೆಯನ್ನು ಹರಡುತ್ತದೆ. ಈ ಸತ್ಯಾಂಶವು ಇಲ್ಲಿಯವರೆಗೆ ನಡೆದಿರುವ ಕೆಲವು ಪ್ರಯೋಗಗಳಿಂದ ಸಾಬೀತಾಗಿದ್ದರೂ ಈ ಪವಾಡಕ್ಕೆ ಕಾರಣಗಳನ್ನು ವಿವರಿಸಲಾಗಿಲ್ಲ.

ವೇದವನ್ನು ಸಾರ್ವಜನಿಕ ಸ್ಥಳಗಳಲ್ಲಿ ಸಾಮೂಹಿಕವಾಗಿ ಪಠಿಸುವುದರಿಂದ ಅಂತ್ಯ ಸಮೀಪವಾಗಿರುವ ರೋಗಿ ಗಳಗೆ ಬಹಳಷ್ಟು ಸಾರಿ ಮರುಜೀವ ಬಂದಿರುತ್ತದೆ. ವೇದಗಳನ್ನು ನಿಯಮಿತವಾಗಿ ಹೇಳುವುದರಿಂದ ಮತ್ತು ಅದರಲ್ಲಿ ಹೇಳಿರುವಂತೆ ನಡೆದುಕ್ಕೊಳ್ಳುವುದರಿಂದ ಶಾಂತಿ, ಸ್ಥೈರ್ಯ ಮತ್ತು ಯಶಸ್ಸು, ಲಭಿಸುತ್ತದೆ ಎಂಬ ನಂಬಿಕೆ ಇದೆ.

ವೇದಗಳ ಪ್ರಾರಂಭಕ್ಕೆ ಸಂಬಂಧಪಟ್ಟಂತೆ ಬಹಳ ಹೇಳಿಕೆಗಳಿವೆ. ಬ್ರಹ್ಮನ ಉಸಿರಿನಿಂದ ವೇದಗಳ ಆವಿಷ್ಕಾರವಾಯಿತು ಎಂಬುದು ಈ ಹೇಳಿಕೆಗಳಲ್ಲಿ ಒಂದು. ವೇದವು ಋಷಿಗಳಿಂದ ಮೌಖಿಕವಾಗಿ ಪ್ರಕಟಿಸಲ್ಪಟ್ಟಿತು ಎಂಬುವುದನ್ನು ಒಪ್ಪುತ್ತಾರೆ. ಕ್ರಿ.ಪೂ. 18000 ದಿಂದ ಕ್ರಿ.ಶ. 1000 ದವರೆಗಿನ ಅವಧಿಯಲ್ಲಿ ವೇದವು ಪ್ರಭುತ್ವವನ್ನು ಹೊಂದಿತ್ತು ನಂತರ ಇದ್ದಕ್ಕಿದ್ದ ಹಾಗೆ ಶೂನ್ಯ ಸ್ಥಿತಿ ಏರ್ಪಟ್ಟಿತು. ಈಗ ಜರ್ಮನರು ಮತ್ತು ಬ್ರಿಟಿಷರಿಂದ ಬರೆದ ವೇದಗಳಿವೆ, ಅವು ಧರ್ಮದ ಆಚರಣೆಗೆ ಸಂಬಂಧಪಟ್ಟಿದ್ದಾಗಿದೆ. ವೇದದ ಪರಂಪರೆಯ ಉಗಮ ಮತ್ತು ಕಾಲಾವಧಿಯ ಕುರಿತು ಖಚಿತವಾದ ಕಾಲಗಣನೆಯ ನಿರ್ಣಯ ಸಾಧ್ಯ ವಿಲ್ಲ ; ಐತಿಹ್ಯವು ವೇದದ ಪರಂಪರೆಯ ಬಗ್ಗೆ ಬಹಳಷ್ಟು ಹೇಳುತ್ತ ದಾದರೂ ಅದರ ಬಗ್ಗೆ ಇರುವ ಮೂಲಪಾಠದ ಪರಂಪರೆಗಳು– ಉದಾ: ಐತರೇಯ ಮತ್ತು ಸಾಂಖ್ಯಾಯನ; ಋಗ್ವೇದ, ಆಪಸ್ತಂಭ,

ಯಜುರ್ವೇದ ಪರಂಪರೆಯ ಬೌದಾಯನ ಶಾಖೆ – ಹೊರತು ಪಡಿಸಿದರೆ ಬೇರೆ ಮಾಹಿತಿ ಲಭ್ಯವಿಲ್ಲ. ಬಹಳ ಮುಖ್ಯವಾದ ಮೂಲಪಾಠಗಳೆಂದರೆ ನಾಲ್ಕು ವೇದ ಸಂಹಿತೆಗಳೇ – ಋಗ್ವೇದ, ಯಜುರ್ವೇದ ಸಾಮವೇದ ಮತ್ತು ಅಥರ್ವವೇದ.

ಏಷ್ಯ ಮೈನರ್ ಮತ್ತು ಯೂರೋಪಿನ ಧಾಳಿಕೋರರು ವೇದ ಧರ್ಮದ ಅವನತಿಗೆ ಕಾರಣರಾದರು. ಅವರು ಕ್ರಿ.ಪೂ. 3500ರ ಸುಮಾರಿಗೆ ಇಂಡಸ್ ನದಿಯ ಮೇಲ್ಭಾಗದ ತೀರಪ್ರದೇಶಗಳ ಮೇಲೆ ಧಾಳಿ ನಡಿಸಿದರು. ಮೂಲ ನಂಬಿಕೆಯ ಪ್ರಕಾರ ಈ ಕಾಲಮಾನವು ಕ್ರಿ.ಪೂ. 18000 ಎಂದು ಹೇಳ ಲಾಗಿದೆ. ಕ್ರಿ.ಪೂ.4500ರಿಂದ ಕ್ರಿ.ಪೂ. 35000 ಕಾಲದಲ್ಲಿ ವೇದಗಳು ಇರಾನ್‌ನ ಜೊರಾಷ್ಟ್ರ ತತ್ವದ ಮೇಲೆ ತಮ್ಮ ಪ್ರಭಾವ ಬೇರಿತ್ತು

ಮೂಲ ವೇದಗಳು ಏಕದೇವ ಸ್ವರೂಪ ಉಳ್ಳದ್ದಾಗಿದ್ದುವು. ಇರಾನೀಯರ ಸೂರ್ಯ ಮತ್ತು ಇಂದ್ರ ಪೂಜೆ ಹಾಗೂ ಧರ್ಮದ ಆಚರಣೆಗಳೊಡನೆ ಬೆರೆಯುವಂತೆ ಒತ್ತಾಯ ಮಾಡಲಾಯಿತು. ಧಾರ್ಮಿಕ ಭಾವನೆಗಳ ವಿನಿಯದಿಂದಾಗಿ ಭಾರತದಲ್ಲಿರುವ ಚಿನ್ನದ ನಿಕ್ಷೇಪ ಮತ್ತು ಸಂಪತ್ತಿನ ಬಗ್ಗೆ ವಿದೇಶೀಯರಿಗೆ ಸುಳಿವು ದೊರೆತು ದಾಳಿ ನಡೆಸಿದರು. ಅವರೊಂದಿಗೆ ಅವರ ಧರ್ಮ ಮತ್ತು ಸಂಪ್ರದಾಯಗಳೂ ಬಂದು ಅದನ್ನು ಇಲ್ಲಿನವರ ಮೇಲೆ ಬಲವಂತವಾಗಿ ಹೇರಿದರು.

ಹಿಂದೂಗಳು ಯಾವಾಗಲೂ ಅಹಿಂಸಾ ವಾದಿಗಳಾಗಿದ್ದು ಶಾಂತಿಯುತ ಸಹಬಾಳ್ವೆ ನಡೆಸುತ್ತಿದ್ದವರಾಗಿದ್ದರು ಮತ್ತು ಸಮರಕಲೆ, ಆತ್ಮರಕ್ಷಣೆ ಹಾಗೂ ಶಿಸ್ತಿನೆ ಪ್ರಾಮುಖ್ಯತೆ ನೀಡಿದವರಾಗಿರಲಿಲ್ಲ. ಹೀಗಾಗಿ ಅವರು ಯಾವಾಗಲೂ ಶಕ್ತಿಶಾಲಿಗಳಾಗಿರಲಿಲ್ಲ ಮತ್ತು ಆಕ್ರಮಣಕಾರದೆ ಸ್ವಾದೀನಕ್ಕೆ ಒಳಗಾ ಗುತ್ತಿದ್ದರು. ವೇದಗಳ ಬಹುಭಾಗವನ್ನು ಆಕ್ರಮಣಕಾರರು ಸುಟ್ಟು ಹಾಕಿದರು. ಇದರಿಂದ ವೇದ ಗ್ರಂಥಗಳೊಡನೆ ಕೆಲವು ವಿದ್ವಾಂಸರು ಭಾರತದ ಉತ್ತರದ ಕೊನೆಗೊ ಕೆಲವು ವಿದ್ವಾಂಸರು ಭಾರತದ ದಕ್ಷಿಣದ ಕೊನೆಗೂ ಓಡಿಹೋದರು.

ವೇದಗಳಲ್ಲಿ ಅತ್ಯಂತ ಪ್ರಾಚೀನವಾದದ್ದು ಋಗ್ವೇದ ಸಂಹಿತೆ. ಹೆಚ್ಚಿನ ಮಂತ್ರಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಒಬ್ಬ ದೇವರನ್ನು ಕುರಿತಾಗಿದೆ. ಋಗ್ವೇದ ಮಂತ್ರಗಳು ಈಶ್ವರರನ್ನು ಅರ್ಥ ಮಾಡಿಕೊಳ್ಳುವ ಉದ್ದೇಶ ಹೊಂದಿದೆ.

ಸಾಮವೇದ ಮಂತ್ರಗಳು ಬಹಳವಾಗಿ ಋಗ್ವೇದದಿಂದ ಆರಿಸಿದ ಮಂತ್ರಗಳಾಗಿದ್ದು. ಈಶ್ವರನ ಸಂದೇಶವು ಜನಗಳಿಗೆ ಆಕರ್ಷಕವಾಗಿಯೂ ಮತ್ತು ಶುಬಕರವಾಗಿಯೂ ತಿಳಿಸಲ್ಪಡಲಿ ಎಂಬ ಉದ್ದೇಶ ದಿಂದ ಅದರ ಮಂತ್ರಗಳಗೆ ಸ್ವರವನ್ನು ಅಳವಡಿಸಲಾಗಿದೆ. ಯಜುರ್ವೇದವು ಶಾಸ್ತ್ರೋಕ್ತ ವಿಧಿಗಳ ಕುರಿತಾಗಿದೆ. ಅಥರ್ವ ವೇದವು ಪ್ರಾಪಂಚಿಕ ವಿಷಯಗಳನ್ನು ಕುರಿತಾಗಿದೆ.

ಕಾಲಾನುಕ್ರಮದಲ್ಲಿ ಬ್ರಾಹ್ಮಣಗಳು (ಭಾಷ್ಯ) ವೇದಗಳ ನಂತರದ ಸ್ಥಾನವನ್ನು ಪಡೆಯುತ್ತವೆ. ಬ್ರಾಹ್ಮಣಗಳು ಗದ್ಯ ಪುಸ್ತಕವಾಗಿದ್ದು. ಬೇರೆ ಬೇರೆ ವೇದಗಳಿಂದ ಪ್ರತ್ಯೇಕವಾಗಿ ಸಂಗ್ರಹಿಸಲ್ಪಟ್ಟದಾಗಿದೆ. ಆವು ವಿಧಿ ವಿಧಾನಗಳ ಆಚರಣೆಗೆ ಸಂಬಂಧಿಸಿದ ಸೂತ್ರಗಳ ಅರ್ಥ ವಿವರಣೆಯನ್ನು ನೀಡುತ್ತದೆ.

ಕ್ರಿ.ಪೂ. 12000ದಲ್ಲಿ ರಚಿತವಾದ ‘ಅರಣ್ಯಕ’ಗಳನ್ನು ಅವುಗಳಲ್ಲಿರುವ ಗೌಪ್ಯ ವಿಷಯಗಳ ಅಥವಾ ಮಾಂತ್ರಿಕ ಗುಣಗಳಿಂದಾಗಿ ಕಾಡಿನಲ್ಲಿ ಸಮಾಜದಿಂದ ದೂರ ಓದ ಬೇಕೆಂಬ ಉದ್ದೇಶದಿಂದ ರಚಿಸಲಾಗಿತ್ತು. ಅರಣ್ಯಕಗಳಲ್ಲಿ ಬಹಳವಾಗಿ ವಿಧಿ ವಿಧಾನಗಳ ಆಚರಣೆಯ ಸಾಂಕೇತಿಕ ವಿವರಣೆಗಳಿವೆ. ಕೊನೆಯದಾಗಿ, ಬಹು ಮುಖ್ಯವಾದವು ಉಪನಿಷತ್ತುಗಳು (ಕ್ರಿ.ಪೂ.16000–1000)

ಉಪನಿಷತ್ತುಗಳು ಸಾಮಾನ್ಯವಾಗಿ ಚಿಕ್ಕ ಪಠ್ಯಗಳಾಗಿರುತ್ತವೆ. ಬೋಧನೆಗಳ ಸಾರಾಂಶವನ್ನು ಅವುಗಳಲ್ಲಿ ಹೇಳಲಾಗಿದೆ. ಜನಗಳಿಗೆ ನೀತಿಗಳು ಸುಲಭವಾಗಿ ಅರ್ಥವಾಗುವಂತೆ ದೃಷ್ಟಾಂತಗಳನ್ನು ನೀಡಿ ಅಥವಾ ಸಂಭಾಷಣೆಗಳ ಮೂಲಕ ತಿಳಿಯ ಪಡಿಸಲಾಗದೆ. ಹದಿಮೂರು ವೈದಿಕ ಉಪನಿಷತ್ತುಗಳು ಮುಖ್ಯವಾದವು ಉಳಿದವು (ಸಮಾರು 100) ವೇದಕಾಲದ ನಂತರವಾದರೂ ವೇದಗಳಿಂದ ಪ್ರಭಾವ ಹೊಂದಿದವಾಗಿವೆ.

ಸಂಹಿತೆಗಳು, ಬ್ರಾಹ್ಮಣಗಳು, ಅರಣ್ಯಕಗಳು ಮತ್ತು ಉಪನಿಷತ್ತುಗಳನ್ನು 'ಶೃತಿ'ಗಳು ಎಂದೂಕರೆಯಲಾಗುತ್ತದೆ. 'ಶೃತಿ' ಎಂದರೆ 'ಕೇಳಲ್ಪಟ್ಟ' ಅಥವಾ ದೈವಿಕವಾಗಿ ಪ್ರಕಟಗೊಂಡ ಸಾಹಿತ್ಯವಾಗಿದೆ.

ವೇದಗಳ ಪಠನವು ಅಲೌಕಿಕವಾದ ಶಕ್ತಿಯನ್ನು ನೀಡುತ್ತದೆ. ಸಾವಿರಾರು ಪುರುಷಗಳಿಂದ ವಿದೇಶಿಯರು ನಮ್ಮನ್ನಾಳಿದರೂ ವೈದಿಕ ಭಾರತವು ಹಿಂದೂತ್ವವನ್ನೇ ಪಾಲಿಸುತ್ತಿರುವುದೇ ಅಲೌಕಿಕ ಶಕ್ತಿಯನ್ನು ಪಡೆಯುವ ವಾದಕ್ಕೆ ನಿದರ್ಶನವಾಗಿದೆ. ಬೇರೆ ದೇಶಗಳು ಆಕ್ರಮಣಕಾರರ ಧರ್ಮದ ಒತ್ತಡವನ್ನು ತಾಳಲಾರದೆ ಅವರ ಧರ್ಮಕ್ಕೇ ಮತಾಂತರ ಹೊಂದಿರುತ್ತಾರೆ. ವೇದ ಪಠನವು ಭಾರತೀಯರಿಗೆ ಕಳವಳಗೊಳ್ಳದಂತೆ ಇರಲು ಬೇಕಾದ ಅತಿಮಾನುಷ ಶಕ್ತಿಯನ್ನು ನೀಡಿರುತ್ತದೆ. ಹಿಂದೂ ತತ್ವವಾದವನ್ನು ಗೌರವಿಸಲು ಈ ಕೆಳಗೆ ಹೇಳಿರುವ ವೇದಮಂತ್ರಗಳನ್ನು ಓದಿ, ಆಗಾಗ ಹೇಳುತ್ತಾ ಇರಬಹುದು.

# ವೇದ ಮಂತ್ರಗಳು

वेदोऽखिलो-धर्ममूलम् ॥1॥

ವೇದೋಽಖಿಲೋ ಧರ್ಮಮೂಲಮ್ ॥1॥

ವೇದಗಳು ಧರ್ಮದ ಮೂಲ ವಾಗಿವೆ.

मधु मे जिहवायां दधातु परमश्वर ।
येनाऽहं सर्वप्रियः सर्वजनेभ्यः भूयासम् ॥2॥

ಮಧು ಮೇ ಜಿಹ್ವಾಯಾಂ ದಧಾತು ಪರಮೇಶ್ವರ ।
ಯೇನಾಽಹಂ ಸರ್ವಪ್ರಿಯಃ ಸರ್ವಜನೇಭ್ಯಃ ಭೂಯಾಸಮ್ ॥2॥

ನನ್ನ ನಾಲಿಗೆಯು ಮಧುರವಾಗಿರುವಂತೆ ಮಾಡು ಇದರಿಂದಾಗಿ ನಾನು ಜನಗಳ ಹತ್ತಿರ ಒಳ್ಳೆಯ ಮಾತುಗಳನ್ನಾಡಬಹುದು

नासदासीन्नो सदासीत् तदानीं नासीद्रजो नो व्योमा परो यत् ।
किमावरीवः कुह कस्य शर्मन्नम्भः किमासीद् गहनं गभीरम् ॥
न मृत्युरासीदमृतं न तर्हि न रात्रया अह्न आसीत् प्रकेतः ।
आनीदवातं स्वधया तदेकं तस्माद्धान्यन्न परः किं चनासः ॥
तमः आसीत् तमसा गूळहमग्रे ऽप्रकेतं सलिलं सर्वमा इदम् ।
तुच्छयेनाभ्वपिहितं यदासीत् तपसस्तन्महिनाजायतैकम् ॥3॥

ನಾಸದಾಸಿನ್ನೋ ಸದಾಸಿತ್ ತದಾನೀಂ ನಾಸಿದ್ರೇಜೋ ನೋ ವ್ಯೋಮಾ ಪರೋ ಯುತ್ ।
ಕಿಮಾವರೀವಃ ಕುಹ ಕಸ್ಯ ಶರ್ಮನಂಭಃ ಕಿಮಾಸೀದ್ ಗಹನಂ ಗಭೀರಮ್ ॥

ನ ಮೃತ್ಯುರಾಸೀತಮೃತಂ ನ ತರ್ಹಿನ ರಾತ್ರಯಾ ಅಹ್ನ ಆಸೀತ್ ಪ್ರಹೀತಃ ।
ಆನೀದವಾತಂ ಸ್ವಧಯಾತದೇಕಂ ತಸ್ಮಾಧಾನ್ಯನ್ನ ಪರಃ ಕಿಂಚನಾಸಃ ॥
ತಮಃ ಆಸೀತ್ ತಮಸಾ ಗೂಳಹಮಗ್ರೇ ಪ್ರಕೇತಂ ಸಲಿಲಂ ಸರ್ವಮಾ ಇದಮ್ ।
ತುಚ್ಛಯೇನಾಭ ಪಿಹಿತಂ ಯದಾಸೀತ್ ತಪಸಸ್ತನ್ಮಹಿನಾಜಾಯತೈಕಮ್ ॥3॥

ಆಗ (ಸೃಷ್ಟಿಪೂರ್ವದಲ್ಲಿ) ಅಸ್ತಿತ್ವವಾಗಲೀ ಅನಾಸ್ತಿತ್ವವಾಗಲೀ ವ್ಯಕ್ತ ವಾಗಿರಲಿಲ್ಲ, ಯಾ ಭೂಮಿಯಾಗಲೀ, ಆಕಾಶವಾಗಲೀ ಇರಲಿಲ್ಲ.

ಹಾಗಾದರೆ ಎಲ್ಲಕಡೆ ವ್ಯಾಪಿಸಿದ್ದ ಪರಮ ಸುಖವನ್ನು ಯಾವ ಪರದೆ ಮುಟ್ಟತ್ತು ? ಗಾರುಡಿಗನಿಂದ ಎರಚಲ್ಪಟ್ಟ ವಿಪುಲವಾದ ನೀರೆ ? ಆಳ ನೋಡಲು ಸಾಧ್ಯವಾಗದ ಅದರ ಆಳ ಎಷ್ಟಿತ್ತು ?

ಆಗ ಸಾವಾಗಲೀ ಅಮರತ್ವವಾಗಲೀ ಇರಲಿಲ್ಲ ಅಥವಾ ದಿನ ರಾತ್ರಿಗಳ ಸುಳಿವಿರಲಿಲ್ಲ ಆದರೆ ಆಗ ಒಂದು

ಉಸಿರಾಡದ ತತ್ವ – ತನ್ನದೇ ಪೋಷಣೆ ಶಕ್ತಿಯಿಂದ ಇರಬಲ್ಲ – ಮಾತ್ರವಿತ್ತು. ಆಗ ಕರಾಳವಾದ ಕತ್ತಲಿನಿಂದ ಆವೃತವಾದ ಗುರುತಿಲ್ಲದ ಸುತ್ತಲೂ ಜಲರಾಶಿಯಿಂದ ಕೂಡಿದ ಕತ್ತಲು (ಅಜ್ಞಾನ, ಅವಿದ್ಯ, ಮಾಯೆ) ಆವರಿಸಿತ್ತು.

ಸರ್ವ ವ್ಯಾಪಿಯಾದ ಅಸ್ತಿತ್ವವು ಈ ರೀತಿಯಾಗಿ ಅಜ್ಞಾನದ ಪರದೆಯಲ್ಲಿ ಸತ್ವರಹಿತವಾಗಿ ಮತ್ತು ನಿಷ್ಪ್ರಯೋಜಕವಾಗಿ ಇರಲಾಗಿ ಭವ್ಯವಾಗಿ ಬೆಳೆಯುತ್ತಿರುವ ಈ ಅಜ್ಞಾನದಿಂದ ಪ್ರಥಮಜ ಅಥವಾ ಹಿರಣ್ಯಗರ್ಭ ಎನ್ನುವ ಜೀವ ಗೋಚರಿಸಿತು.

यत्रागिश्चन्द्रमा: सूर्यो वातस्तिष्ठन्त्यर्पिता:
स्कम्भं तं ब्रूहि कतम: स्विदेव स:
यस्य त्रयस्त्रिंशद्देवा अङ्गेसर्वे समाहिता ॥4॥

ಯತ್ರಾಗಿಶ್ಚಂದ್ರಮಾ: ಸೂರ್ಯೋ ವಾತಸ್ತಿಷ್ಠಂತ್ಯರ್ಪಿತ:
ಸ್ಕಂಭಂ ತಂ ಬ್ರೂಹಿ ಕತಮ: ಸ್ವದೇವ ಸ:
ಯಸ್ಯ ತ್ರಯಸ್ತ್ರಿಂಶದ್ದೇವಾ ಅಂಗೇಸರ್ವೇ ಸಮಾಹಿತಾ ॥4॥

ಜಗತ್ತಿನ ಆಶ್ರಯದಾತಯಾರು; ಅಗ್ನಿ, ಚಂದ್ರ, ಸೂರ್ಯ ಮತ್ತು ವಾತ ಯಾರನ್ನು ಅವಲಂಬಿಸುತ್ತಾರೆ ? ಅವನ ಭವ್ಯವಾದ ಪ್ರತಿಬಿಂಬದಲ್ಲಿ ಮೂವತ್ತಮೂರು ದೇವತೆಗಳಿದ್ದಾರೆ.

पुण्डरीकं नवद्वारं त्रिभिर्गुणैरावृतम् ।
तस्मिन् यद् यक्षमात्मवत् तद् वै ब्रह्मविदो विदु: ॥5॥

ಪುಂಡರೀಕಂ ನವದ್ವಾರಂ ತ್ರಿಭಿರ್ಗುಣೈತರಾವೃತಮ್ ।
ತಸ್ಮಿನ್ ಯದ್ ಯಕ್ಷಮಾತ್ಮವತ್ ತದ್ ವೈ ಬ್ರಹ್ಮವಿದೋ ವಿದು: ॥5॥

ಮನುಷ್ಯ ದೇಹವು ನವದ್ವಾರವುಳ್ಳದ್ದಾಗಿದ್ದೆ. ಮೂರು ಗುಣಗಳು (ಸತ್ವ, ರಜಸ್, ತಮಸ್) ಸಹಜವಾಗಿದ್ದು, ದೇಹದಲ್ಲಿ ವ್ಯಾಪಿಸಿದ್ದು ಅದನ್ನು ನಿಯಂತ್ರಿಸುತ್ತದೆ. ದೇಹದಲ್ಲಿರುವ ಹೃದಯವನ್ನು ಕಮಲ ಸದೃಶವಾಗಿದ್ದು ಅದರಲ್ಲಿ ಪೂಜಿಸುವ ಚೈತನ್ಯವಿರುತ್ತದೆ. ಬ್ರಹ್ಮಸಾಕ್ಷಾತ್ಕಾರವಾದವರಿಗೆ ಆ ಚೈತನ್ಯವೇ ಆತ್ಮವೆಂದು ತಿಳಿದಿರುತ್ತದೆ.

ईश्वर: परमैकस्वरूप: ॥
स नित्य:सर्वव्यापी विभुरनादिरनन्तश्च स निराकारो निरूपो वर्णनातीतो निष्कम्पश्च ।
द्व चित् शब्दरूपेण स आत्मानं प्रकाशयति स विधाता
कारणानां कारणं तथा सर्वशक्तिमान् तदिच्छापुरणाय कस्यापि सहायस्य प्रयोजनं न वर्तते
यतो द्वितीय: कोऽपि नास्ति ॥6॥

ಈಶ್ವರ ಪರಮೈಕಸ್ವರೂಪ: ॥
ಸ ನಿತ್ಯ: ಸರ್ವವ್ಯಾಪಿ ವಿಭುರನಾದಿರಂತಶ್ಚಸ ನಿರಾಕರೋನಿರೂಪೋವರ್ಣನಾತೀತೋ ನಿಷ್ಕಂಪುಶ್ಚ
ಕ್ವಚಿತ್ ಶಬ್ದರೂಪೇಣ ಸ ಆತ್ಮಾನಂ ಪ್ರಕಾಶಯತಿ ಸ ವಿಧಾತಾ
ಕಾರಣಾಂ ಕಾರಣಂಶ ಕಥಾ ಸರ್ವಶಕ್ತಿಮಾನ್ ತದಿಚ್ಛಾಪೂರಣಾಯ ಕಸ್ಯಾಪಿ ಸಹಾಯಸ್ಯ

ಪ್ರಯೋಜನಂ ನ ವರ್ತತೇ

ಯತೀ ದ್ವಿತೀಯ: ಕೋಽಪಿ ನಾಸ್ತಿ ॥6॥

ಪರಮೇಶ್ವರನು ಶ್ರೇಷ್ಠವಾದ ಅಸ್ತಿತ್ವವುಳ್ಳವನು. ಅವನು ಪರಿಪೂರ್ಣ, ಸರ್ವವ್ಯಾಪಿ ಮತ್ತು ಅನಂತ. ಅವನು ಆದ್ಯಂತಗಳಿಲ್ಲದವನು. ಅವನಿಗೆ ರೂಪ, ಬಣ್ಣ ಅಥವಾ ವರ್ಣನೆಗಳಿಲ್ಲ, ಕೆಲವೊಮ್ಮೆ ಶಬ್ದರೂಪದಲ್ಲಿ ವ್ಯಕ್ತವಾಗುತ್ತಾನೆ, ಅವನು ಸೃಷ್ಟಿಕರ್ತನು, ಎಲ್ಲ ಕಾರಣಗಳಿಗೂ ಕಾರಣೆಭೂತನು ಅವನು ಸರ್ವಶಕ್ತನಾಗಿದ್ದು ತನ್ನ ಅಪೇಕ್ಷೆಗಳನ್ನು ಪೂರ್ತಿ ಗೊಳಿಸಲು ಯಾರ ಸಹಾಯದ ಅವಶ್ಯಕತೆ ಇಲ್ಲ ಏಕೆ ? ಅವನೊಬ್ಬನೇ ,ಸದಾ ಅಸ್ತಿತ್ವದಲ್ಲಿರುವವನಾದಕಾರಣ

केचित् तत्सायुज्यं लभन्ते, केचिच्च विरहेण वियुज्यन्ते ।

तस्येच्छया सर्वं घटते, तेन विना क: कार्यकरणे समर्थ: ? ॥7॥

ಕೇಚಿತ್ ತತ್ಸಾಯುಜ್ಯಂ ಲಭಂತೇ, ಕೇಚಿಚ್ಚ ವಿರಹೇಣ ವಿಯುಜ್ಯಂತೇ ।

ತಸ್ಯೇಚ್ಛಯಾ ಸರ್ವಘಟತೇ, ತೇನ ವಿನಾ ಕಃ ಕಾರ್ಯಕರಣೆ ಸಮರ್ಥಃ ? ॥7॥

ಕೆಲವರು ಅವನಲ್ಲಿ ಐಕ್ಯವಾಗುತ್ತಾರೆ, ಕೆಲವರು ಅವನನ್ನು ಅಗಲುತ್ತಾರೆ, ಅವನ ಅಪೇಕ್ಷೆಗಳು ಈಡೆರುತ್ತವೆ. ಅವನಿಲ್ಲದೆ ಯಾರಿಂದ ಇದನ್ನೆಲ್ಲಾ ಮಾಡಲು ಸಾಧ್ಯ ?

स वा एष महानज आत्माऽजरोऽमरोऽमृतोऽभयो

ब्रह्माभयं वै ब्रह्म भवति य एवं वेद ॥8॥

ಸ ವಾ ಏಷ ಮಹಾನಜ ಆತ್ಮಾಽಜರೋಽಮರೋಽಮೃತೋಽಭಯೋ

ಬ್ರಹ್ಮಾಭಯಂ ವೈ ಬ್ರಹ್ಮ ಭವತಿ ಯ ಏವಂ ವೇದ ॥8॥

ಆತ್ಮನು ಅಪೇಕ್ಷಾರಹಿತನು ಯಾವುದರ ಕೊರತೆ ಇಲ್ಲದವನು, ಸಾವಿಗೆ ಅಂಜದವನು, ಆತ್ಮನು ಅಜರ, ಅಮರ ಮತ್ತು ಚಿರ ಯೌವನವುಳ್ಳವನು. ಇದನ್ನು ತಿಳಿದವನು. ಬ್ರಹ್ಮತ್ವವನ್ನು ಪಡೆಯುತ್ತಾನೆ.

एक एवास्ति नापरो विश्वभुवनस्य स्रष्ढा ।

पालयिता च संहर्त्ताच पुनरपि सृजनाय तत्

एतदेव दिव्यत्वमीशस्य भास्वत् वर्चसममेयम् ॥9॥

ಏಕ ಏವಾಸ್ತಿ ನಾಪರೋ ವಿಶ್ವಭುವನಸ್ಯ ಸೃಷ್ಟಾ।

ಪಾಲಯಿತಾ ಚ ಸಂಹರ್ತ್ತಾಚ ಪುನರಪಿ ಸೃಜನಾಯ ತತ್

ಏತದೇವ ದಿವ್ಯತ್ವಮೀಶಸ್ಯ ಭಾಸ್ವತ್ ವರ್ಚಸಮಮೇಯಮ್ ॥9॥

ಒಬ್ಬನಿಂದಲೇ ಈ ವಿಶ್ವದ ಸೃಷ್ಟಿಯಾಗುತ್ತದೆ, ಅವನಿಂದಲೇ ಅದರ ರಕ್ಷಣೆ ಮತ್ತು ಪುನಃ ಸೃಷ್ಟಿಗಾಗಿ ಅದರ ನಾಶವಾಗುತ್ತದೆ. ಇದುವೇ ಅವನ ಅಪಾರವನಾಗಿ ಕಂಗೊಳಿಸುವ ಭವ್ಯವಾದ ದೈವತ್ವವಾಗಿದೆ.

ईश्वरस्तस्यैव दूतरूपेण पृथिव्यां प्रेरयति देवान्

तस्माच्च प्रभवति मडें·लं समासेनेह मनुष्यमंडले ॥10॥

ಈಶ್ವರಸ್ತಸ್ಯೈವ ದೂತರೂಪೇಣ ವೃಥಿವ್ಯಾಂ ಪ್ರೇರಯತಿ ದೇವಾನ್
ತಸ್ಮಾಚ್ಚ ಪ್ರಭವತಿ ಮಂಗಲಂ ಸಮಾಸೇನೇಹ ಮನುಷ್ಯ ಮಂಡಲೇ ।।10।।

ದೇವತೆಗಳನ್ನು ಪರಮೇಶ್ವರನು ಪ್ರಪಂಚಕ್ಕೆ ತನ್ನ ದೂತರನ್ನಾಗಿ ಕಳುಹಿಸುತ್ತಾನೆ, ಇದರಿಂದ ಮಾನವ ಜನಾಂಗಕ್ಕೆ ಹೆಚ್ಚಿನ ಶುಭಫಲಗಳು ಪ್ರಾಪ್ತ ವಾಗುತ್ತದೆ.

यथाकामं वा उत्तिष्ठन् वा अनन्यमनसा स्तूयमानश्च भगवन्तम्
सायं प्रातश्च स्व-समाजेन सार्द्धम्
प्रार्थनां कुर्वीताहर्निशं भगवत्-सकाशम् ॥
प्रार्थनया क्षीयते सर्वपापं प्राप्स्यते च स्वर्गम्
भुयिष्ठं परिमार्जनेन लौहमलं यथा प्रयाति
अयश्च भवति परिशुद्धम् ॥11॥

ಯಥಾಕಾಮಂ ವಾ ಉತ್ತಿಷ್ಠನ್ ವಾ ಅನನ್ಯಮನಸಾ ಸ್ತೂಯಮಾನಶ್ಚ ಭಗವಂತಮ್
ಸಾಯಂಪ್ರಾತಶ್ಚ ಸ್ವ - ಸಮಾಜೇನ ಸಾರ್ಧಮ್
ಪ್ರಾರ್ಥನಂ ಕುರ್ವೀ ತಾಹರ್ನಿಶಂ ಭಗವತ್ - ಸಕಾಶಮ್ ।।
ಪ್ರಾರ್ಥನಯಾ ಕ್ಷೀಯತೇ ಸರ್ವಪಾಪಂ ಪ್ರಾಪ್ಸ್ಯತೇ ಚ ಸ್ವರ್ಗಮ್
ಭುಯಿಷ್ಠಂ ಪರಿಮಾರ್ಜನೇನ ಲೌಹಮಲಂ ಯಥಾ ಪ್ರಯಾತಿ
ಅಯಶ್ಚ ಭವತಿ ಪರಿಶುದ್ಧಮ್ ।।11।।

ಪ್ರಾತಃ ಸಾಯಂ ಏಕಾಗ್ರತೆಯಿಂದ ನಿಂತುಕೊಂಡು ಪರಮೇಶ್ವರನ ಪ್ರಾರ್ಥನೆ ಮಾಡಬೇಕು ಸ್ತೋತ್ರವನ್ನು ಸಾಮೂಹಿಕವಾಗಿ ಪ್ರಾರ್ಥಿಸಬೇಕು. ಪ್ರಾರ್ಥನೆಯು ಸ್ವರ್ಗಕ್ಕೆದಾರಿಯಾಗಿದೆ. ಮೆರುಗು ನೀಡುವುದರಿಂದ ಲೋಹಕ್ಕೆ ಹಿಡಿದ ತುಕ್ಕನ್ನು ತೆಗೆಯುವಂತೆ ನಿಯಮಿತವಾಗಿ ಪ್ರಾರ್ಥನೆ ಮಾಡುವುದರಿಂದ ಪಾಪವು ಕಡಿಮೆಯಾಗುತ್ತದೆ.

सर्वेऽत्र जन्मना अमृतस्य पुत्रा अपापविद्धाश्च ते ।
क्वचित् कल्मषं च कृत्वा केचिदात्मानं क्लेदयन्ति ॥12॥

ಸರ್ವೇಽತ್ರ ಜನ್ಮನ ಅಮೃತಸ್ಯ ಪುತ್ರಾ ಅಪಾಪವಿದ್ಧಾಶ್ಚತೇ ।
ಕ್ವಚಿತ್ ಕಲ್ಮಷಂ ಚ ಕೃತ್ವಾ ಕೇಚಿದಾತ್ಮಾನಂ ಕ್ಲೇದಯಂತಿ ।।12।।

ಎಲ್ಲ ಜೀವಿಗಳು ಹುಟ್ಟುವಾಗ ಪಾಪರಹಿತರಾಗಿಯೂ ಮತ್ತು ಅಮೃತ ಸಹಿತವಾಗಿಯೂ ಹಾಗೂ ತನ್ನ ಪಾಪ ಕೃತ್ಯಗಳಿಂದ ತಾತ್ಕಾಲಿಕವಾಗಿ ಅಪವಿತ್ರವಾಗಿ ಕಳಂಕಗೊಂಡರೂ ತನ್ನ ಮೂಲ ಪವಿತ್ರತೆಯನ್ನು ಸಂರಕ್ಷಿಸಿ ಕೊಂಡಿರುತ್ತದೆ.

उच्चो वा नीची वा न कोऽपि जनः ।
न च नितरां पापकृन् न वा पवित्रस्वरूपः ॥
ईश्वरकरुणया कश्चित् महत्वं लभते ।

तदिच्छया ऋद्धद्मा जायते कश्चित्, श्रमेण तु कश्चिदभ्येति पदमुन्नतम् ॥13॥

ಉಚ್ಚೋ ವಾ ನೀಚೋ ವಾಂ ನ ಕೋಽಪಿ ಜನಃ ।

ನ ಚ ನಿತರಾಂ ಪಾಪಕೃನ್ ನ ವಾ ಪವಿತ್ರಸ್ವರೂಪಃ ॥

ಈಶ್ವರಕರುಣಯಾ ನಿಶ್ಚಿತ್ ಮಹತ್ವಂ ಲಭತೇ ।

ತದಿಚ್ಛಯಾ ಋದ್ಧಸ್ಚ ಜಾಯತೆ ಕಶ್ಚಿತ್ ಶ್ರಮೇಣ ತು ಕಶ್ಚಿದಭ್ಯೇತಿ ಪದಮುನ್ನತಮ್ ॥13॥

ಯಾವ ಮನುಷ್ಯನೂ ಉಚ್ಚ ಅಥವಾ ನೀಚನಲ್ಲ, ಯಾರೂ ಶಿಕ್ಷೆಗೊಳಿಗಾದ ಪಾಪಿಯಲ್ಲ ಅಥವಾ ಪವಿತ್ರ ಜೀವಿಯಲ್ಲ. ಪರಮೇಶ್ವರನ ದಯೆಯಿಂದ ಶ್ರೇಷ್ಠತೆಯನ್ನು ಪಡೆಯುತ್ತಾನೆ. ಅವನ ಸಂಕಲ್ಪದಿಂದಲ್ಲೇ ಪುಟ್ಟುವಾಗಲೇ ಯಶಸ್ಸನ್ನು ಪಡೆದಿರುತ್ತಾನೆ ಉಳಿದವರು ಅದಕ್ಕಾಗಿ ಶ್ರಮ ಪಡಬೇಕಾಗುತ್ತದೆ.

यत्र यत्र मे मनो गच्छति दृश्यते प्रभुम् ।

तस्य कृपां विना न कोऽपि मुक्तिमर्हति ॥14॥

ಯತ್ರ ಯತ್ರ ಮೇ ಮನೋ ಗಚ್ಛತಿ ದೃಶ್ಯತೇ ಪ್ರಭುಮ್ ।

ತಸ್ಯ ಕೃಪಾಂ ವಿನಾ ನ ಕೋಽಪಿ ಮುಕ್ತಿಮರ್ಹತಿ ॥14॥

ಯಾವ ಕಡೆಯಲ್ಲಿ ನೋಡಿದರೂ ಪರಮೇಶ್ವರನು ಕಾಣುತ್ತಾನೆ. ಅವನ ದಯೆ ಇಲ್ಲದೆ ಮೋಕ್ಷ ಪಡೆಯಲು ಸಾಧ್ಯವಿಲ್ಲ

अक्लेशेन वै सम्भवति ईश्वरस्य गुणकीर्तनम्

तद् गुणानांच निरूपणं तु क्लेशकरमेव प्रतीयते ।

गुरोः कृपया एव तज् ज्ञानमेवाधिगम्यते ॥15॥

ಅಕ್ಲೇಶೇನ ವೈ ಸಂಭವತಿ ಈಶ್ವರಸ್ಯ ಗುಣಕೀರ್ತನಮ್

ತದ್ ಗುಣಾನಾಂಚ ನಿರೂಪಣಂ ತು ಕ್ಲೇಶಕರಮೇವ ಪ್ರತೀಯತೇ

ಗುರೋಃ ಕೃಪಯಾ ಏವ ತಜ್ ಜ್ಞಾನಮೇ ವಾಧಿಗಮ್ಯತೇ ॥15॥

ಪರಮೇಶ್ವರನನ್ನು ಸುತ್ತಿಸುವುದು ಸುಲಭ ಆದರೆ ಅದರ ರಹಸ್ಯದ ಆಳ ಅಳೆಯುವುದು. ಕಷ್ಟಕರವಾದ ವಿಷಯ, ಗುರು (ಆಧ್ಯಾತ್ಮದ) ವಿನ ದಯೆಯಿಂದ ಅದು ಮನಸ್ಸಿನಲ್ಲಿ ಅಚ್ಚಳಿಯದೆ ನಿಂತು ಅದರ ಫಲ ಸುಲಭವಾಗಿ ಸಿಕ್ಕುತ್ತದೆ.

वेनस्तत्पश्यन्विश्वा भुवनानि विद्वान् यत्र विश्वं भवत्येकनीडम् ।

यस्मिन्निदं सं च विचैति ओत:प्रोतश्च प्रजासु ॥16॥

ವೇನಸ್ತತ್‌ಪಶ್ಯನ್ವಿಸ್ವಾ ಭುವನಾನಿ ವಿದ್ವಾನ್ ಯತ್ರ ವಿಶ್ವಂ ಭವತ್ಯೇಕನೀಡಮ್ ।

ಯಸ್ಮಿನ್ನಿದಂ ಸಂಚ ವಿಚೈತಿ ಒತಃಪ್ರೋತಶ್ಚ ಪ್ರಜಾಸು ॥16॥

ಚಲಿಸುತ್ತಿರುವ ಮತ್ತು ನಿಂತಿರುವ (ಸ್ಥಿತಿ), ನಡೆಯುತ್ತಿರುವ, ಈಜುವವ ಮತ್ತು ಹಾರುವ ಎಲ್ಲ ಜೀವಿಗಳಿಗೂ ಒಬ್ಬನೇದೇವರು. ಈ ವಿಶ್ವದಲ್ಲಿ ಇವೆಲ್ಲವೂ ಒಂದಾಗುತ್ತದೆ ಮತ್ತು ಅದರಿಂದಲೇ ಎಲ್ಲವೂ ಗೋಚರಿಸುತ್ತದೆ.

अमोघाशिषस्तस्मिन्नेव सदैव सन्ति परमेश्वरस्य ।
यो जानाति दु:खत्रयजर्जरो मनुष्येह संसारे ॥
स एव ज्ञातुमर्हति दु:खत्रयस्य हेतवश्च परा–निवृत्तेरुपायश्च तस्य
स वै विजानाति संसारसागरस्य गहनं रहस्यम् ॥17॥

ಅಮೋಘಾಶಿಷಸಟ್ತಸ್ಮಿನ್ನೇವ ಸದೈವ ಸಂತಿ ಪರಮೇಶ್ವರಸ್ಯ ।
ಯೋಜಾನಾತಿ ದುಃಖತ್ರಯಜರ್ಜರೋ ಮನುಷ್ಯೆಹ ಸಂಸಾರೇ ॥
ಸ ಏವ ಜ್ಞಾತುಮರ್ಹತಿ ದುಃಖತ್ರಯಸ್ಯ ಹೇತವಶ್ಚ ಪರಾ–ನಿವೃತ್ತೇರುಪಾಯಶ್ಚ ತಸ್ಯ
ಸ ವೈ ವಿಜಾನಾತಿ ಸಂಸಾರಸಾಗರಸ್ಯ ಗಹನಂ ರಹಸ್ಯಂ ॥17॥

ದುಃಖದ ಅಸ್ತಿತ್ವ, ಅದರ ಕಾರಣ, ಅದಕ್ಕೆ ಪರಿಹಾರವನ್ನು ಗುರುತಿಸಿದವನನ್ನು ಜೀವನದ ರಹಸ್ಯದ ಆಳವನ್ನು ನೋಡಿದವ ನೆಂದು ಪರಮೇಶ್ವರನು ಅನುಗ್ರಹಿಸುತಾನೆ.

वेदपठनं, पुरोहितेभ्यो दानं, यज्ञस्तापशीतादिकैरात्मपीड़नम्
अमृतत्त्वलाभाय तपश्चरणमित्यादिकं मोहग्रस्तं परिशुद्धं न करोति ॥18॥

ವೇದ ಪಠನಂ, ಪುರೋಹಿತೇಭ್ಯೋದಾನಂ ಯಜ್ಞಸ್ತಾಪಶೀತಾದಿಕೈರಾತ್ಮಪೀಡನಮ್
ಅಮೃತತ್ವಲಾಭಾಯ ತಮಶ್ಚರಣಮಿತ್ಯಾದಿಕಂ ಮೋಹಗ್ರಸ್ತಂ ಪರಿಶುದ್ಧಂ ನ ಕರೋತಿ ॥18॥

ಅಮರತ್ವ ಸಿಗಲು ವೇದ ಪಠನ, ಪುರೋಹಿತರಿಗೆ ಕೊಡುವದಾನ ಅಥವಾ ಪರಮೇಶ್ವರನ್ನು ಕುರಿತು ಮಾಡುವ ಯಜ್ಞ, ಬಿಜಲು ಅಥವಾ ಸಿಲಿಯಲ್ಲಿ ಮಾಡುವ ತಪಸ್ಸುಗಳಿಂದ ಪಾಪ ವಿಮೋಚನೆಯಾಗದು, ಭ್ರಮ ನಿರಸನವಾದರೆ ಮಾತ್ರ ಸಾಧ್ಯ.

श्रद्धया पूजितो वै ईश्वरोस्मत्प्रार्थनां पूरयति ।
हे प्रियतम! तवैव सुरक्षाश्रितानां श्रुभैषणां च गृहाण ॥19॥

ಶ್ರದ್ಧಯಾ ಪೂಜಿತೋ ವೈ ಈಶ್ವರೋಸ್ಮತ್ಪ್ರಾರ್ಥನಾಂ ಪೂರಯತಿ ।
ಹೇ ಪ್ರಿಯತಮ ! ತವೈವ ಸುರಕ್ಷಾಶ್ರಿತಾನಾಂ ಶೃಭೈಷಣಾಂ ಚ ಗೃಹಣ ॥19॥

ನಾವು ಗೌರವದಿಂದ ಪೂಜಿಸಿ ಅರ್ಪಿಸುವ ಪ್ರತಿಯಂದು ಪ್ರಾರ್ಥನೆಯನ್ನು ಪರಮೇಶ್ವರನು ಒಪ್ಪಿಸಿಕೊಳ್ಳುತ್ತಾನೆ. ಓ ಪರಮಪೂಜ್ಯನೇ, ನಿನ್ನ ರಕ್ಷಣೆಯಲ್ಲಿರಿಸಿಕೊಂಡಿರುವ ನಮ್ಮ ಪವಿತ್ರ ಪ್ರಾರ್ಥನೆಯನ್ನು ಒಪ್ಪಿಸಿಕೊ.

अन्तश्चरन्ति मनसि कामास्तेम्यो उदितानि
सर्वाणि त्तेष्टितानि कर्माणि इहलोके ॥
एतान् कामान् विलोक्यते विधात्रा ईशलोके
नराणां शुभाशुभ–कर्मफल–विधानकाले ॥
तीक्ष्णभाषणरताश्च ये, ये चातिदर्पपरायणा:
तेषाम् कृते स्वर्गी भवति पराङमुख: सर्वदा ॥20॥

ಅಂತಶ್ಚರಂತಿ ಮನಸಿ ಕಾಮಾಸ್ತೇಭ್ಯೋ ಉದಿತಾನಿ
ಸರ್ವಾಣಿ ತ್ತೈಷ್ಟಿತಾನಿ ಕರ್ಮಾಣಿ ಇಹಲೋಕೇ ॥
ಏತಾನ್ ಕಾಮಾನ್ ವಿಲೋಕ್ಯತೇ ವಿಧಾತ್ರಾ, ಈಶಲೋಕೇ
ನರಾಣಾಂ ಶುಭಾಶುಭಾ–ಕರ್ಮ ಫಲ–ವಿಧಾನಕಾಲೇ ॥
ತೀಕ್ಷ್ಣಬಾಷಣರತಾಶ್ಚ ಯೇ ಯೇ ಚಾತಿದರ್ಪ ಪರಾಯಣಾಃ
ತೇಷಾಮ್ ಕೃತೇ ಸ್ವರ್ಗೀ ಭವತಿ ಪರಾಂಙ್ಮುಖಃ ಸರ್ವದಾ ॥20॥

ಪರಮೇಶ್ವರನ ರಾಜ್ಯದಲ್ಲಿ ಎಲ್ಲ ಕೃತ್ಯಗಳ ಹಿಂದಿರುವ ಪ್ರೇರಣೆ ಹಾಗೂ ಪ್ರೋತ್ಸಾಹಗಳನ್ನು ಗಣಿಸಿ ತೀರ್ಮಾನಕ್ಕೆ ಬರಲಾಗುತ್ತದೆ. ದುರಹಂಕಾರಿಗಳು ಮತ್ತು ಜೋರಾಗಿ ಮಾತಾಡುವವರಿಗೆ ಅವನ ಲೋಕಕ್ಕೆ ಪ್ರವೇಶವಿಲ್ಲ.

नायमात्मा प्रवचनेन लभ्यः न मेधया न बहुधा श्रुतेन ।
यमेवैष वृणुते तेन लभ्यस्तस्यैष आत्मा विवृणुते तनुं स्वाम् ॥21॥

ನಾಯಮಾತ್ಮಾ ಪ್ರವಚನೇನ ಲಭ್ಯಃ ನ ಮೇಧಯಾ ನ ಬಹುಧಾ ಶ್ರುತೇನ ।
ಯಮ್ಮೈವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನುಂ ಸ್ವಾಮ್ ॥21॥

ಪರಮೇಶ್ವರನನ್ನು ವಿವರಣಾತ್ಮಕ ಪ್ರವಚನದಿಂದಾಗಲೀ, ಬುದ್ಧಿಶಕ್ತಿಯಿಂದಾಗಲೀ, ಅಥವಾ ಸೂಕ್ತಗಳನ್ನು ಕೇಳುವುದರಿಂದಾಗಲೀ ತಿಳಿಯುವುದು ಅಸಾಧ್ಯ. ಯಾರನ್ನು ಪ್ರೀತಿ ಪೂರ್ವಕವಾಗಿ ಅವನು ಒಪ್ಪುತ್ತಾನೋ ಅಂಥಹವನಿಗೆ ಮಾತ್ರ ಪರಮೇಶ್ವರನ ಸಾಕ್ಷಾತ್ಕಾರವಾಗುತ್ತದೆ.

शुभेषणा सत्यमक्रोधश्च शुद्धता सत्यवादिता
प्रेम–दयादयो गुणैरन्विताश्च ये जनाः ईश्वरस्तेषां प्रसीदति ॥22॥

ಶುಭೇಷಣಾ ಸತ್ಯಮಕ್ರೋಧಶ್ಚ ಶುದ್ಧತಾ ಸತ್ಯವಾದಿತಾ
ಪ್ರೇಮ–ದಯಾದಯೋ ಗುಣೈರನ್ವಿತಾಶ್ಚ ಯೇ ಜನಾಃ ಈಶ್ವರಸ್ತೋಷಾಂ ಪ್ರಸೀದತಿ ॥22॥

ಸದ್ಭಾವನೆ, ಪ್ರೇಮ, ಸತ್ಯಸಂಧತೆ, ಪವಿತ್ರತೆ ಮತ್ತು ಕರುಣೆ ಈ ಗುಣಲಕ್ಷಣಗಳು ಇರುವವರನ್ನು ಪರಮೇಶ್ವರನು ಪ್ರೀತಿಸುತ್ತಾನೆ.

यावन्नैव आस्था ईश्वरे भवति पूर्णा
तावन्नाकपृष्ठं च भवति सुदुस्तरम्
सा आस्था च तावन्न याति पूर्णतां यावदास्तिकेषु न जायते प्रीतिः ॥23॥

ಯಾವನ್ನೈವ ಆಸ್ಥಾ ಈಶ್ವರೇ ಭವತಿ ಪೂರ್ಣಾ
ತಾವನ್ನಾಕ ಪೃಷ್ಠಂ ಚ ಭವತಿ ಸುದುಸ್ತರಮ್
ಸಾ ಆಸ್ಥಾ ಚ ತಾವನ್ನ ಯಾತಿ ಪೂರ್ಣತಾಂ ಯಾವದಾಸ್ತಿಕೇಷು ನ ಜಾಯತೇ ಪ್ರೀತಿ ॥23॥

ನೀವು ನಂಬಿಕೆ ಇಲ್ಲದೆ ಸ್ವಗ್ರಕ್ಕೆ ಹೋಗಲಾಗುವುದಿಲ್ಲ. ಪರಮೇಶ್ವರನಲ್ಲಿ ನಂಬಿಕೆ ಇರುವವರನ್ನೆಲ್ಲ ನೀವು ಪ್ರೀತಿಸದಿದ್ದರೆ ನಿಮ್ಮ ನಂಬಿಕೆ ಪರಿಪೂರ್ಣವಾಗುವು ದಿಲ್ಲ.

प्रतिनियतं प्रार्थनां कुर्वीत सदा तदर्थभावनया सह ।
ततो वै दृश्वते भगवदुद्भासं भाग्यश्रीश्च भवति प्रसन्ना ॥24॥

ಪ್ರತಿನಿಯತಂ ಪ್ರಾರ್ಥನಂ ಕುರ್ವೀತಸದಾ ತದರ್ಥ ಭಾವನಯಾ ಸಹ ।
ತತೋವೈ ದೃಶ್ವತೇ ಭಗವದುದ್ಭಾಸಂ ಭಾಗ್ಯಶ್ರೀಶ್ಚ ಭವತಿ ಪ್ರಸನ್ನಾ ॥24॥

ಪ್ರತಿನಿತ್ಯವೂ ನಿಯಮಿತವಾಗಿ ಪ್ರಾರ್ಥನೆ ಮಾಡುತ್ತಿರಿ, ಪರಮೇಶ್ವರನ ಕೃಪೆಯ ಭಾಗ್ಯ ನಿಮ್ಮ ಮೇಲಾಗುತ್ತದೆ.

दर्शन–गणितशास्त्रपारगानां भगवत्–प्रेषितमहाजनानाम्
प्रतिवोधसुकरं तु भगवत्–सृष्टिरहस्यं गहनं गभीरम् ॥
यश्च यस्य धर्ममार्गस्ततः प्रतीपगमनमीश्वरस्यासहनीयम् ॥25॥

ದರ್ಶನ–ಗಣಿತಶಾಸ್ತ್ರಪಾರಗಾನಾಂ ಭಗವತ್–ಪ್ರೇಷಿತ ಮಹಾಜನಾನಾಮ್
ಪ್ರತಿವೋಧಸುಕರಂ ತು ಭಗವತ್–ಸೃಷ್ಟಿರಹಸ್ಯಂ ಗಹನಂ ಗಭೀರಮ್ ॥
ಯಶ್ಚ ಯಸ್ಯ ಧರ್ಮಮಾರ್ಗಸ್ತತಃ ಪ್ರತೀಪಗಮನಮೀಶ್ವರಸ್ಯಾಸಹನೀಯಮ್ ॥25॥

ತತ್ವಜ್ಞಾನಿಗಳಿಗೆ, ಗಣಿತಕೋವಿದರಿಗೆ ಮತ್ತು ಪ್ರವಾದಿಗಳು ಪರಮೇಶ್ವರನ ಸೃಷ್ಟಿಯ ಆಳವನ್ನು ಸುಲಭವಾಗಿ ತಿಳಿಯಬಲ್ಲರು. ಅವನು ಋಜುಮಾರ್ಗವನ್ನು ಅತಿಕ್ರಮಿಸುವುದನ್ನು ಸಹಿಸುವುದಿಲ್ಲ.

पापरहिताश्च भूत्वा श्रद्धया सेवामहे ईश्वरं नित्यम् ।
महान् वै ईश्वरो धी–हीनानां धियं यः प्रचोदयति ॥
तद्वदिहलोके वर्त्तते यः प्राज्ञो धी–सम्पत्समृद्धः ।
स एव नयेत् सुपथा यावदल्पज्ञान् जनान् पृथिव्याम् ॥26॥

ಪಾಪರಹಿತಾಶ್ಚ ಭೂತ್ವಾ ಶ್ರದ್ಧಯಾ ಸೇವಾಮಹೇ ಈಶ್ವರಂ ನಿತ್ಯಮ್ ।
ಮಹಾನ್ ವೈ ಈಶ್ವರೋ ಧೀ–ಹೀನಾನಾಂ ಧಿಯಂಯಃ ಪ್ರಚೋದಯತಿ ॥
ತದ್ವದಿಹಲೋಕೇ ವರ್ತತೇಯಃ ಪ್ರಾಜ್ಞೋ ಧೀ–ಸಂಪತ್ಸಮೃದ್ಧಃ ।
ಸ ಏವ ನಯೇತ್ ಸುಪಥಾ ಯಾವದಲ್ಪಜ್ಞಾನ್ ಜನಾನ್ ಪೃಥಿವ್ಯಾಮ್ ॥26॥

ಪಾಪರಹಿತರಾಗಿ ಪರಮೇಶ್ವರನನ್ನು ಭಕ್ತಿಯಿಂದ ಸೇವಿಸೋಣ. ಉದಾರಿಯಾದ ಪರಮೇಶ್ವರನು ಯೋಚನೆಮಾಡದವರ ಬುದ್ಧಿಯನ್ನು ಜಾಗೃತಗೊಳಿಸುತ್ತಾನೆ. ಅದೇರೀತಿ ಇಹಲೋಕದಲ್ಲಿ ಬುದ್ಧಿವಂತನಾದವನು ತಿಳುವಳಿಕೆ ಇಲ್ಲದವರನ್ನು ಋಜುಮಾರ್ಗದಲ್ಲಿ ಹೋಗುವಂತೆ ಮಾರ್ಗದರ್ಶನ ಮಾಡಬೇಕು.

ईश्वरस्य महद्दानं विवेको विद्यते नृणाम् ।
तस्मादधिकतरं समर्थसाधनमिष्टतरं वा न किंचनास्ति
तत्त्ववीधाय सम्यक् ॥27॥

ಈಶ್ವರಸ್ಯ ಮಹದ್ದಾನಂ ವಿವೇಕೋ ವಿದ್ಯತೇ ನೃಣಾಮ್ ।
ತಸ್ಮಾದಧಿಕತರಂ ಸಮರ್ಥಸಾಧನಮಿಷ್ಟಂತರಂ ವಾ ನ ಕಿಂಚನಾಸ್ತಿ
ತತ್ವವಿಧಾಯ ಸಂಯಕ್ ॥27॥

ವಿವೇಕವು ಪರಮೇಶ್ವರನು ಮಾನವರಿಗೆ ನೀಡಿರುವ ಶ್ರೇಷ್ಠವಾದ ಕೊಡುಗೆಯಾಗಿದೆ ಮತ್ತು ಸತ್ಯದ ಪೂರ್ಣ ಸಾಕ್ಷಾತ್ಕಾರವಾಗಲು ಇದಕ್ಕಿಂತ ಹೆಚ್ಚಿನ ಅಪೇಕ್ಷೆ ಅಗತ್ಯವಿಲ್ಲ.

नगत एव धरामेति, नगत्मा प्रतिगच्छति ।
यद्दैवविहितं कर्म तत्तु साध्यं प्रयतत्तः ॥28॥

ನಗ್ನ ಏವ ಧರಾಮೇತಿ ನಗ್ನಶ್ಚ ಪ್ರತಿಗಚ್ಛತಿ ।
ಯುದ್ದೈವವಿಹಿತಂ ಕರ್ಮ ತತ್ತು ಸಾಧ್ಯಂ ಪ್ರಯತ್ನತಃ ॥28॥

ಭೂಮಿಗೆ ಬರುವಾಗ ನಗ್ನ ರಾಗಿರುತ್ತೇವೇ, ಇಲ್ಲಿಂದ ಹೋಗುವಾಗಲೂ ನಗ್ನರಾಗಿರುತ್ತೇವೆ. ಪ್ರತಿಯೊಬ್ಬನೂ ದೈವ ನಿಯಾಮಕದಂತೆ ತನಗೆ ವಿಧಿಸಿದ ಕೆಲಸವನ್ನು ಮಾಡಬೇಕು.

स एव सुखी सदैव यः स्वार्थपरतामत्येति सर्वशः
सत्यं तेनैव लव्धं शान्तिः शाश्वती तेनैव चाप्ता ॥29॥

ಸ ಏವ ಸುಖೀ ಸದೈವ ಯಃ ಸ್ವಾರ್ಥಪರತಾಮತ್ಯೇತಿ ಸರ್ವಶಃ
ಸತ್ಯಂ ತೇನೈವ ಲಬ್ಧಂ ಶಾಂತಿಃ ಶಾಶ್ವತೀ ತೇನೈವ ಚಾಪ್ತಾ ॥29॥

ಸ್ವಾರ್ಥವನ್ನು ಜಯಿಸಿದವನು ಸುಖಿ; ಅವನಿಗೆ ಶಾಂತಿ ಲಭಿಸುತ್ತದೆ ಮತ್ತು ಸತ್ಯದ ಅರಿವಾಗುತ್तದೆ.

जीवनं यथाप्तं तमेव वरेण्यमिति विचिन्त्य
गतासूनां च पूरणशक्यं धर्मानुगं यस्य जीवितम् ।
जरया पीड्यमानोऽपि यस्तामभिनन्दति च
तेनैव लम्यं भगवत्-प्रसादं दीर्धमायुश्नोति ध्रुवम् ॥30॥

ಜೀವನಂ ಯಥಾಪ್ತಂ ತಮೇವ ವರೇಣ್ಯಮಿತಿ ವಿಚಿಂತ್ಯ
ಗತಾಸೂನಾಂ ಚ ಪೂರಣಶಕ್ಯಂ ಧರ್ಮಾನುಗಂ ಯಸ್ಯ ಜೀವಿತಮ್ ।
ಜರಯಾ ಪೀಡ್ಯಮಾನೋಽಪಿ ಯಸ್ತಾಮಭಿನಂದತಿ ಚ
ತೇನೈವ ಲಭ್ಯಂ ಭಗವತ್-ಪ್ರಸಾದಂ ದೀರ್ಘಮಾಯಶ್ನೀತೆ ಧ್ರುವಂ ॥30॥

ಜೀವನ ಕಳೆಯುತ್ತಾ ವೃದ್ಧಾಪ್ಯ ಬಂದಾಗ ಅವನ್ನೂ ಸಂತೋಷಪೂರ್ವಕವಾಗಿ ಸ್ವೀಕರಿಸಬೇಕು. ದೀರ್ಘಯುಷ್ಯ ನೀಡೆಂದು ಪ್ರಾರ್ಥಿಸಿ.

ये विश्वासनिर्वाहं कुर्वन्ति स्व-वचनात् कदापि न प्रविचलन्ति
ईश्वरनाम्ना कृतां प्रतिज्ञां निर्वाहयन्ति ते वै विश्वास-परायणाः ॥31॥

ಯೇ ವಿಶ್ವಾಸ ನಿರ್ವಾಹಂ ಕುರ್ವಂತಿ ಸ್ವ–ವಚನಾತ್ ಕದಾಪಿನಪ್ರವಿಚಲಂತಿ
ಈಶ್ವರನಾಮ್ನಾ ಕೃತಾಂ ಪ್ರತಿಜ್ಞಾಂ ನಿರ್ವಾಹಯಂತಿತೇವೈ ವಿಶ್ವಾಸ–ಪರಾಯಣಾಃ ।।31।।

ಪರಮೇಶ್ವರನಲ್ಲಿ ನಿಜವಾಗಿ ನಿಷ್ಠೆಯುಳ್ಳವರು ವಚನ ಬದ್ಧರಾಗಿದ್ದು ಯಾವುದೇಕಾರಣಕ್ಕೂ ಅದರಿಂದ ವಿಮುಖರಾಗುವು ದಿಲ್ಲಮತ್ತು ಈಶ್ವರನ ಹೆಸರಿನಲ್ಲಿ ಮಾಡಿದ ಪ್ರತಿಜ್ಞೆಯನ್ನು ನೆರವೇರಿಸಿಯೇ ತೀರುತ್ತಾರೆ.

प्रीतिं विना भगवद्भक्तेषु श्रद्धा नैव परिपूर्यति
श्रद्धां विना नूनं भवति स्वर्गः प्रवेशदुस्करः ॥32॥

ಪ್ರೀತಿಂವಿನಾ ಭಗವದ್‌ಭಕ್ತೇಷು ಶ್ರದ್ಧಾ ನೈವ ಪರಿಪೂರ್ಯತಿ
ಶ್ರದ್ಧಾ ವಿನಾ ನೂನಂ ಭವತಿ ಸ್ವರ್ಗಃ ಪ್ರವೇಶದುಸ್ಕರಃ ।।32।।

ಪರಮೇಶ್ವರನ ಮೇಲೇ ಗೌರವ ವಿಲ್ಲದಿದ್ದರೆ ಸ್ವರ್ಗಕ್ಕೆ ಹೋಗಲಾಗುವುದಿಲ್ಲ ಮತ್ತು ಪರಮೇಶ್ವರನ ಭಕ್ತರನ್ನು ಪ್ರೀತಿಸದಿದ್ದರೆ ನಿಮ್ಮ ಗೌರವವು ಪರಿಪೂರ್ಣವಾಗುವುದಿಲ್ಲ.

यदा सन्तोषमाप्नोति सत्कार्यीण असत्कार्यीण क्लिश्यति
तदैव हि भवेन्नरः सत्यं सत्यमीश्वरास्थितः ॥33॥

ಯದಾ ಸಂತೋಷಮಾಪ್ನೋತಿ ಸತ್ಕಾರ್ಯೇಣ ಅಸತ್ಕಾರ್ಯೇಣ ಕ್ಲಿಶ್ಯತಿ
ತದೈವ ಹಿ ಭವೇನ್ನರಃ ಸತ್ಯಂ ಸತ್ಯಮೀಶ್ವರಾಸ್ಥಿತಃ ।।33।।

ಒಳ್ಳೆಯ ಕೆಲಸವನ್ನು ಮಾಡಿದಾಗ ಸಂತಸಪಡುವ, ಪಾಪಕೃತ್ಯವನ್ನು ಮಾಡಿದಾಗ ದುಃಖಪಡುವ ಗುಣವುಳ್ಳವರಾಗಿದ್ದರೆ ನೀವು ಪರಮೇಶ್ವರನಿಗೆ ಪ್ರಾಮಾಣಿಕವಾಗಿ ನಡೆದುಕೊಳ್ಳುವವರಾಗಿರುತ್ತೀರಿ.

अन्नं यो ददाति बुभूक्षितेभ्यः पीडितानां भवति सहायकः
दुःखार्त्तान् समाश्लिष्यति तस्यैव ईशः प्रसीदति ॥34॥

ಅನ್ನಂ ಯೋ ದದಾತಿ ಬುಭೂಕ್ಷಿತೇಭ್ಯಃ ಪೀಡಿತಾನಾಂ ಭವತಿ ಸಹಾಯಕಃ
ದುಃಖಾರ್ತಾನ್ ಸಮಾಶ್ಲಿಷ್ಯತಿ ತಸ್ಯೈವ ಈಶಃ ಪ್ರಸೀದತಿ ।।34।।

ಹಸಿದವರಿಗೆ ಅನ್ನ ನೀಡಿದರೆ, ಕಷ್ಟದಲ್ಲಿರುವವರಿಗೆ ಸಹಾಯಮಾಡಿದರೆ, ದುಃಖದಲ್ಲಿದ್ದವರಿಗೆ ಸಾಂತ್ವನ ನೀಡಿದರೆ, ಅನ್ಯಾಯವಾದವರಿಗೆ ನ್ಯಾಯ ದೊರಕಿಸಿ ಕೊಟ್ಟರೆ ಈಶ್ವರನಿಗೆ ಸಂತೋಷವಾಗುತ್ತದೆ.

क्षंन्तव्याः सर्वजीवाश्चा नापि शप्तव्या अरातयश्च ।
एवं ये मन्यन्ते तेषां प्रसीदति केशवः ॥35॥

ಕ್ಷಂತವ್ಯಃ ಸರ್ವಜೀವಾಶ್ಚ ನಾಪಿ ಶಪ್ತವ್ಯಾ ಅರಾತಯಶ್ಚ ।
ಏವಂ ಯೇ ಮನ್ಯಂತೇ ತೇಷಾಂ ಪ್ರಸೀದತಿ ಕೇಶವಃ ।।35।।

ಎಲ್ಲ ಜೀವಿಗಳಿಗೆ ಕರುಣೆ ತೋರುವ, ಎದುರಾಳಿಗಳಿಗೆ ಶಾಪ ನೀಡದ ಗುಣವುಳ್ಳವರನ್ನು ಕಂಡು ಪರಮೇಶ್ವರನು ಸಂತೋಷಿಸುತ್ತಾನೆ.

यद् ददाति दक्षिणहस्तेन तन्न वामो विजानीयात्
एवं समाचरेत् बुध एष ईशानुशासनम् ॥36॥

ಯದ್ ದದಾತಿ ದಕ್ಷಿಣ ಹಸ್ತೇನ ತನ್ನ ವಾಮೋ ವಿಜಾನೀಯಾತ್
ಏವಂ ಸಮಾಚರೇತ್ ಬುಧ ಏಷ ಈಶಾನುಶಾಸನಮ್ ॥36।

ಬಲಗೈನಿಂದ ಮಾಡಿದ ದಾನವು ಎಡಗೈಗೆ ತಿಳಿಯಬಾರದು - ಇದೇ ಉತ್ತಮ ರೀತಿಯದಾನ. ಇದೇ ಪರಮೇಶ್ವರನ ಅನುಶಾಸನ.

परत्र प्रयाते नरे कर्म च तस्य नूनं विरमति इहलोके ।
तथापि तस्य त्राण–दान–जानप्रसारणादि सुकृतस्य कीर्त्या
सुचिरं जीवति स हृदयेषु जनानां प्रीत्या च तमनुचरंति जनाः ॥
येन केन प्रकारेण को हि नाम नु जीवति ।
परेषामुपकारार्थं यज्जीवति स जीवति ॥37॥

ಪರತ್ರ ಪ್ರಯಾತೇ ನರೇ ಕರ್ಮ ಚ ತಸ್ಯ ನೂನಂ ವಿರಮತಿ ಇಹಲೋಕೆ ।
ತಥಾಪಿ ತಸ್ಯ ತ್ರಾಣ–ದಾನ–ಜ್ಞಾನಪ್ರಸಾರಣಾದಿ ಸುಕೃತಸ್ಯ ಕೀರ್ತ್ಯಾ
ಸುಚಿರಂ ಜೀವತಿ ಸ ಹೃದಯೇಷು ಜನಾನಾಂ ಪ್ರಿತ್ಯಾ ಚ ತಮನುಚರಂತೆ ಜನಾಃ
ಯೆನಾ ಕೇನ ಪ್ರಕಾರೇಣ ಕೋ ಹಿ ನಾಮ ನು ಜೀವತಿ ।
ಪರೇಷಾಮುಪಕಾರಾರ್ಥಂ ಯಜ್ಜೀವತಿ ಸ ಜೀವತಿ ॥37॥

ಒಬ್ಬ ಮನುಷ್ಯನು ಸತ್ತನಂತರ ಈ ಪ್ರಪಂಚದಲ್ಲಿನ ಅವನ ಕೆಲಸಗಳು ನಿಲ್ಲುತ್ತವೆ ಆದರೆ ಅವನು ಮಾಡಿದ ಉತ್ತಮ ಕೆಲಸಗಳ - ಧರ್ಮ ಕಾರ್ಯಗಳು, ಜ್ಞಾನ ಪ್ರಸಾರಕ್ಕಾಗಿ ಪಟ್ಟ ಶ್ರಮ - ಚಿರಸ್ಥಾಯಿಯಾಗಿ ಉಳಿದು ಜ್ಞಾನೋದಯವನ್ನು ನೀಡಿ ಅವನನ್ನು ಅನುಸರಿಸುವಂತೆ ಮಾಡುತ್ತದೆ. ಒಬ್ಬ ಮನುಷ್ಯ ಯಾವುದೇ ರೀತಿ ಜೀವಿಸಬಹುದು ಆದರೆ ಇನ್ನೊಬ್ಬರ ಒಳಿತಿಗಾಗಿ ಜೀವಿಸುವವನು ನಿಜವಾದ ಜೀವನ ನಡೆಸುತ್ತಾನೆ.

ईश्वरसृष्टौ जगति क्रोधद्वेषौ दूरतः परिहर ।
यतो हि द्वावेतै मनुष्याणां सुकृतं ग्रसतः निर्मूलयतश्च
यथा अगिर्तरिन्धनं दहति भस्मीभूतं करोति च ॥38॥

ಈಶ್ವರ ಸೃಷ್ಟಾ ಜಗತಿ ಕ್ರೋಧ ದ್ವೇಷೌ ದೂರತಃ ಪರಿಹರ ।
ಯತೋ ಹಿ ದ್ವಾವೇತ್ವೆ ಮನುಷ್ಯಾಣಾಂ ಸುಕೃತಗ್ರಸತಃ ನಿರ್ಮೂಲಯತಶ್ಚ
ಯಥಾ ಅಗ್ಗಿರಿಂಧನಂ ದಹತಿ ಭಸ್ಮೀಭೂತಂ ಕರೋತಿ ಚ ॥38॥

ಪರಮೇಶ್ವರನ ಸಾಮ್ರಾಜ್ಯದಲ್ಲಿ ಕೋಪ ಮತ್ತು ವೈರತ್ವದಿಂದ ದೂರವಾಗಿರಬೇಕು, ಅವು ಬೆಂಕಿಯು ಇಂಧನವನ್ನು ಸುಟ್ಟು ಬೂದಿಮಾಡುವಂತೆ ನಾವು ಮಾಡಿದ ಒಳ್ಳೆಯ ಕೆಲಸಗಳ ಫಲವನ್ನು ಸುಡುತ್ತವೆ.

माता तु सदा स्नेहार्द्रचित्ता नितरां सन्तान–वत्सला ।
सादरं यथा क्रोडे गृह्णाति रुरुद्यमानं निजपुत्रम् ॥

ईश्वरस्तु सदा भक्तवत्सलः करुणाघनविग्रहः ।
आत्मनि गृह्णाति तथा भक्तस्यश्रद्धया कृतां स्तुतिम् ॥39॥

ಮಾತಾ ತು ಸದಾ ಸ್ನೇಹಾರ್ದ್ರಚಿತ್ತಾ ನಿತರಾಂ ಸಂತಾನ ವತ್ಸಲಾ ।
ಸಾದರಂ ಯಥಾ ಕ್ರೋಡೇ ಗೃಹ್ಣಾತಿ ರುರುದ್ಯಮಾನಂ ನಿಜಪುತ್ರಮ್ ॥
ಈಶ್ವರಸ್ತು ಸದಾ ಭಕ್ತವತ್ಸಲಃ ಕರುಣಾಘನವಿಗ್ರಹಃ ।
ಆತ್ಮನಿ ಗೃಹಾನಿ ತಥಾ ಭಕ್ತಸ್ಯಶ್ರದ್ಧಯಾ ಕೃತಂ ಸ್ತುತಿಮ್ ॥39॥

ಅಳುತ್ತಿರುವ ಮಗುವನ್ನು ತಾಯಿಯು ಪ್ರೀತಿಯಿಂದ ಸೆಳೆದು ಕೊಳ್ಳುವಂತೆ ಭಕ್ತವತ್ಸಲ ನಾದ ಕರುಣಾಮಯಿಯಾದ ಪರಮೇಶ್ವರನು ತನ್ನ ಭಕ್ತರು ಶ್ರದ್ದೆಯಿಂದ ಮಾಡುವ ಸ್ತುತಿಗಳನ್ನು ಸ್ವೀಕರಿಸುತ್ತಾನೆ.

इन्द्रं मित्रं वरुणमगित्माहुरथो दिव्यः स सुपर्णो गरुत्मान् ।
एकं सद् विप्रा बहुधा वदंत्यगितं यमं मातरिश्वानमाहुः ॥40॥

ಇಂದ್ರಂ ಮಿತ್ರಂ ವರುಣಮಗ್ನಿಮಾಹುರಥೋ ದಿವ್ಯಃ ಸ ಸುಪರ್ಣೋಗರುತ್ಮಾನಃ ।
ಏಕಂ ಸದ್ ವಿಪ್ರಾ ಬಹುಧಾ ವದಂತ್ಯಗ್ನಿ ಯಮಂ ಮಾತರಿಶ್ವಾನಮಾಹುಃ ॥40॥

ಇಂದ್ರ, ಮಿತ್ರ, ವರುಣ, ಅಗ್ನಿ ಮತ್ತು ಪೂಜ್ಯವಾದ ಗುರುತ್ಮಾನ ಅವರೆಲ್ಲರೂ ಋಷಿಗಳಿಂದ ಬೇರೆ ಬೇರೆ ಹೆಸರಿನಿಂದ ಕರೆಯಲ್ಪಡುವ – ಅಗ್ನಿ, ಯಮ, ಮಾತರಿಶ್ವ ಇತ್ಯಾದಿ – ಒಂದೇ ನಿಜಸ್ವರೂಪನಾದ ಭಗವಂತನ ಪ್ರತಿಬಿಂಬವೇ ಆಗಿದ್ದಾರೆ.

उषाकाले अनुदये संध्यायां चास्तमिते रवौ देवं समुपासीत मन्दिरे ।
ध्यायमानश्च तस्य महिमानं देवस्य सायुज्यं प्रार्थय समाजेन सह ॥41॥

ಉಷಾಕಾಲೇ ಅನುದಯೇ ಸಂಧ್ಯಾಯಾಂ ಚಾಸ್ತಮಿತೇ ರವೌ ದೇವಂ ಸಮುಪಾಸೀತ ಮಂದಿರೇ ।
ಧ್ಯಾಯ ಮಾನಶ್ಚ ತಸ್ಯ ಮಹಿಮಾನಂ ದೇವಸ್ಯ ಸಾಯುಜ್ಯಂ ಪ್ರಾರ್ಥಯ ಸಮಾಜೇನ ಸಹ ॥41॥

ಉಷಃ ಕಾಲದಲ್ಲಿ ಮತ್ತು ಸೂರ್ಯಾಸ್ತದ ನಂತರ ಸಮುದಾಯದ ಸದಸ್ಯರೊಂದಿಗೆ ದೇವಸ್ಥಾನದಲ್ಲಿ ದೇವರ ಪ್ರಾರ್ಥನೆ ಮಾಡಿ ಮತ್ತು ಅವನ ಮಹಿಮೆಯನ್ನು ಕುರಿತು ಧ್ಯಾನ ಮಾಡಿ.

यस्यापि प्रेमातिशयमस्ति ईश्वर–दर्शनायाचिरात् ।
ईश्वरस्यापि प्रेमातिशयं भवति स्वरूप–प्रदर्शनाय तम् ॥42॥

ಯಸ್ಯಾಪಿ ಪ್ರೇಮಾತಿಶಯಮಸ್ತಿ ಈಶ್ವರ ದರ್ಶನಾಯಾಚಿರಾತ್ ।
ಈಶ್ವರಸ್ಯಾಪಿ ಪ್ರೇಮಾತಿಶಯಂ ಭವತಿ ಸ್ವರೂಪ–ಪ್ರದರ್ಶನಾಯ ತಮ್ ॥42॥

ಯಾರು ಪ್ರೇಮಾತಿಶಯದಿಂದ ಪರಮೇಶ್ವರನ ದರ್ಶನ ಪಡೆಯಲು ಬಯಸುತ್ತಾರೋ ಅವರಿಗೆ ದರ್ಶನ ನೀಡಲು ಅವನೂ ಪ್ರೇಮಾತಿಶಯದಿಂದ ದರ್ಶನ ನೀಡಬಯಸುತ್ತಾನೆ.

यत्र यत्रापि पृथिव्यां वर्त्तते विद्वान् भगवत्–सेवकोत्तमः ।
ज्ञानान्वेषणाय गन्तव्यं तत्तत् स्थानं तीर्थभूतं पवित्रम् ॥43॥

ಯತ್ರ ಯತ್ರಾಪಿ ಪೃಥಿವ್ಯಾಂ ವರ್ತತೇ ವಿದ್ವಾನ್ ಭಗವತ್-ಸೇವಕೋತ್ತಮಃ।
ಜ್ಞಾನಾನ್ವೇಷಣಾಯ ಗಂತವ್ಯಂ ತತ್ತತ್ ಸ್ಥಾನಂ ತೀರ್ಥಭೂತಂ ಪವಿತ್ರಮ್ ॥43॥

ಜ್ಞಾನಾರ್ಜನೆ ಮಾಡುತ್ತಾ ಜ್ಞಾನಿಗಳು ಪ್ರಪಂಚದ ಯಾವುದೇ ಮೂಲೆಯಿಲ್ಲಿದ್ದರೂ ಅವರನ್ನು ಹುಡುಕಿಕೊಂಡು ಹೋಗಬೇಕು. ಏಕೆಂದರೆ ಅವರಿಂದ ಪರಮೇಶ್ವರನ ಸೇವೆ ಚೆನ್ನಾಗಿ ನಡೆಯುತ್ತದೆ ಮತ್ತು ಅವರಿರುವ ಜಾಗವೂ ಪವಿತ್ರವಾದುದಾಗಿರುತ್ತದೆ.

ज्ञानमाहर, ज्ञानवान् वै सदसद् विवेकमेति ।
ऋतं च चरितुं शक्नुयान् मर्त्ये, गतिनिर्देशमाप्नुयात् च स्वर्गलोके ॥44॥

ಜ್ಞಾನಮಾಹರ ಜ್ಞಾನವಾನ್ ವೈ ಸದಸದ್ ವಿವೇಕಮೇತಿ
ಋತಂ ಚ ಚರಿತುಂ ಶಕ್ನುಯಾನ್ ಮರ್ತ್ಯೇ ಗತಿನಿರ್ದೇಶಮಾಪ್ನುಯಾತ್ ಚ ಸ್ವರ್ಗಲೋಕೇ ॥44॥

ಜ್ಞಾನ ಸಂಪಾದನೆ ಮಾಡಿರಿ, ಅದರಿಂದ ತಪ್ಪು ಸರಿಗಳ ವ್ಯತ್ಯಾಸಗಳು ತಿಳಿದು ಇಹ ಲೋಕದಲ್ಲೂ ಪರಲೋಕದಲ್ಲೂ ಸರಿಯಾದ ನಿರ್ಧಾರಕ್ಕೆ ಬರಲು ಸಾಧ್ಯವಾಗುತ್ತದೆ.

तिष्ठास्मिन् जगत्यां नलिनीदलगतजलविन्दुवत्
वित्तं वर्धय, मा भव तदासक्तः
कथं त्वमिह ईश्वरेण प्ररितो यदि न कर्त्तुं जगत् ऋद्धतरम् ! 45॥

ತಿಷ್ಠಾಸ್ಮಿನ್ ಜಗತ್ಯಾಂ ನಲಿನೀದಲಗತಜಲಬಿಂದುವತ್
ವಿತ್ತಂ ವರ್ಧಯ ಮಾ ಭವ ತದಾಸಕ್ತಃ
ಕಥಂ ತ್ವಮಿಹ ಈಶ್ವರೇಣ ಪ್ರೇರಿತೋ ಯದಿ ನ ಕರ್ತುಂ ಜಗತ್ ಋದ್ಧತರಮ್ ॥45॥

ಪ್ರಪಂಚದಲ್ಲಿ ತಾವರೆಯ ಹೂವಿನಮೇಲೆ ಇರುವ ನೀರಿನ ಹನಿಯಂತೆ ಇರಬೇಕು, ಸಂಪತ್ತನ್ನು ವೃದ್ದಿಸಬೇಕು ಆದರೆ ವ್ಯಾಮೋಹವಿರಬಾರದು ಏಕೆಂದರೆ ಪರಮೇಶ್ವರನು ನಿಮ್ಮನ್ನು ಪ್ರಪಂಚದ ಸಂಪತ್ತನ್ನು ವೃದ್ಧಿಸುವುದಕ್ಕಾಗಿ ಕಳುಹಿಸಿದ್ದಾನೆ.

यदि भवति अन्विष्टं शाश्वतमानन्दम्
भूमानन्दस्वरूपात् प्रार्थय आनन्दमश्नुते ध्रुवम् ॥46॥

ಯದಿ ಭವತಿ ಅನ್ವಿಷ್ಟಂ ಶಾಶ್ವತಮಾನಂದಮ್
ಭೂಮಾನಂದಸ್ವರೂಪಾತ್ ಪ್ರಾರ್ಥಯ ಆನಂದಮಶ್ನುತೇ ಧ್ರುವಮ್ ॥46॥

ಬ್ರಹ್ಮಾನಂದವನ್ನು ಅರಸುತ್ತಿರುವವರು ಅದನ್ನು ಪಡೆಯಲು ಸರ್ವ ವ್ಯಾಪಿಯಾದ ಚೈತನ್ಯಕ್ಕೆ ಪ್ರಾರ್ಥನೆ ಸಲ್ಲಿಸಬೇಕು.

यस्याचाराः नीतिधर्मनियताद्भिान्तनं च उत्तमं तत्त्वविकाशकरम्
पितरौ तथाचार्याद्भा यस्मात् पूजा च सेवा च यथाविधि-प्राप्ताः

यस्तु स्व–दोषाण् विशोधनाय स्वयमेव यतते सर्वदा
स भवति ईश्वरस्य परमप्रेमप्रसादभाजनमिति न संशयम् ॥47॥

ಯಸ್ಯಾಚಾರಾ : ನೀತಿಧರ್ಮನಿಯತಾಶ್ಚಿಂತನಂ ಚ ಉತ್ತಮಂ ತತ್ವವಿಕಾಶಕರಮ್
ಪಿತರೌ ತಥಾಚಾರ್ಯಾಶ್ಚ ಯಸ್ಮಾತ್ ಪೂಜಾ ಚ ಸೇವಾ ಚ ಯಥಾವಿಧಿ–ಪ್ರಾಪ್ತಾಃ
ಯಸ್ತು ಸ್ವ–ದೋಷಧನಾಯ ಸ್ವಯಮೇವ ಯತತೇ ಸರ್ವದಾ
ಸ ಭವತಿ ಈಶ್ವರಸ್ಯ ಪರಮಪ್ರೇಮಪ್ರಸಾದಭಾಜನಮಿತಿ ನ ಸಂಶಯಮ್ ॥47॥

ನೀತಿಭೋಧೆಯನ್ನು ಪಾಲಿಸು ವವರನ್ನು, ಒಳ್ಳೆಯ ಚಿಂತನೆಗಳನ್ನು ಸುಸಂಸ್ಕೃತವಾಗಿ ಅಭಿವೃದ್ಧಿ ಪಡಿಸುವವರನ್ನು, ಮಾತಾಪತೃಗಳನ್ನು ಗೌರವಿಸಿ ಅವರ ಮತ್ತು ಗುರುಗಳ ,ಸೇವೆ ಮಾಡುವವರನ್ನು ಹಾಗೂ ತನ್ನ ತಪ್ಪನ್ನು ತಿದ್ದಿಕೊಳ್ಳುವವರನ್ನು ಪರಮೇಶ್ವರನು ಪ್ರೀತಿಸುತ್ತಾನೆ.

महत् वै सत्यं मधुमच्च, सत्ये स्थिते पापान्मुच्यते
सत्याद् वलवत्तरो न कश्चिादपि त्राता विद्यते भुतले ॥48॥

ಮಹತ್ ವೈ ಸತ್ಯಂ ಮಧುಮಚ್ಚ ಸತ್ಯೇ ಸ್ಥಿತೇ ಪಾಪಾನ್ಮುಚ್ಯತೇ
ಸತ್ಯಾದ್ ಬಲವತ್ತರೋ ನ ಕಶ್ಚಿದಪಿ ತ್ರಾತಾ ವಿದ್ಯತೇ ಭೂತಲೇ ॥48॥

ಸತ್ಯವು ಮಧುರವಾದುದು ಮತ್ತು ಉದಾರವಾದುದು ಸತ್ಯವು ನಿಮ್ಮನ್ನು ಪಾಪಗಳಿಂದ ವಿಮೋಚನೆ ಮಾಡಬಲ್ಲದು. ನಿಮ್ಮನ್ನು ಉದ್ಧಾರಮಾಡಲು ಸತ್ಯಕ್ಕಿಂತ ಬಲವತ್ತರವಾದುದು ಯಾವುದೂ ಇಲ್ಲ.

मनो हि सर्वकरणानां ज्येष्ठं च श्रेष्ठं च ।
मनः–प्रभवा हि प्रवृत्तिराद्या चेष्टितानां कर्मणाम् ॥
सर्वे भावपदार्थाद्मा मनस्येव प्रजायन्ते ॥49॥

ಮನೋಹಿ ಸರ್ವಕಾರಣಾನಾಂ ಜ್ಯೇಷ್ಠಂ ಚ ಶ್ರೇಷ್ಠಂ ಚ ।
ಮನಃ ಪ್ರಭವಾ ಹಿ ಪ್ರವೃತ್ತಿರಾದ್ಯಾ ಚೇಷ್ಟಿತಾನಾಂ ಕರ್ಮಣಾಮ್ ॥
ಸರ್ವೇ ಭಾವಪದಾರ್ಥಾಶ್ಚ ಮನಸ್ಯೇವ ಪ್ರಜಾಯಂತೀ ॥49॥

ಎಲ್ಲ ಚಟುವಟಿಕೆಗಳಿಗೂ ಮನಸ್ಸೇಕಾರಣ; ಎಲ್ಲ ಇಂದ್ರಿಯಶಕ್ತಿ ಗಳಲ್ಲಿ ಮನಸ್ಸು ಶ್ರೇಷ್ಠವಾದುದು. ಎಲ್ಲ ಭಾವನೆಗಳಿಗೂ ಮನಸ್ಸೇ ಮೂಲ.

ईश्वरस्य जीवानां हितार्थं य उत्सृज्यति जीवनं कर्म च
स भवतु प्रेमास्पदं सर्वजनानाम् ।
ईश्वरे तु संशयं यस्य स भवतु घृणाभाजनम् ॥50॥

ಈಶ್ವರಸ್ಯ ಜೀವಾನಾಂ ಹಿತಾರ್ಥಂ ಯ ಉತ್ಸೃಜ್ಯತಿ ಜೀವನಂ ಕರ್ಮ ಚ
ಸ ಭವತು ಪ್ರೇಮಾಸ್ಪದಂ ಸರ್ವ ಜನಾನಾಮ್ ।
ಈಶ್ವರೇ ತು ಸಂಶಯಂ ಯಸ್ಯ ಸ ಭವತು ಘೃಣಾಭಾಜನಮ್ ॥50॥

ಪರಮೇಶ್ವರನ ಸೃಷ್ಟಿಯಲ್ಲಿರುವ ಜೀವಿಗಳಿಗಾಗಿ ತನ್ನ ಜೀವನವನ್ನು ಮೀಸಲಿಡುವವನನ್ನು ಪ್ರೀತಿಸಿರಿ ಆದರೆ ಪರಮೇಶ್ವರನನ್ನು ಸಂಶಯಿಸುವವರನ್ನು ದ್ವೇಷಿಸಿ.

ईश्वरे परलोके च यस्यास्ति दृढमतिः ।
तेन न कर्त्तव्यं हिंसनं प्रतिवेशिनं कायेन मनसा वापि ॥51॥

ಈಶ್ವರೇ ಪರಲೋಕೇ ಚ ಯಸ್ಯಾಸ್ತಿ ದೃಢಮತಿಃ ।
ತೇನ್ ನ ಕರ್ತವ್ಯಂ ಹಿಂಸನಂ ಪ್ರತಿವೇಶಿನಂ ಕಾಯೇನ ಮನಸಾ ವಾಪಿ ॥51॥

ಪರಮೇಶ್ವರನಲ್ಲಿ ಮತ್ತು ಜನ್ಮಾಂತರದಲ್ಲಿ ದೃಢವಾದ ನಂಬಿಕೆ ಉಳ್ಳವರು ಇತರರಿಗೆ ಕಾಯಾ ಮತ್ತು ಮನಸಾ ಹಾನಿ ಮಾರಬಾರದು.

प्रतिवेशिनां कमपि क्षुधार्त्त पश्यन् तमभुक्तं त्यक्त्वा
धार्मिको जनः स्वयं तु भुरिभोजनं कर्त्तुं न शक्नोति ॥52॥

ಪ್ರತಿವೇಶಿನಾಂ ಕಮಪಿ ಕ್ಷುಧಾರ್ತ್ತಂ ಪಶ್ಯನ್ ತಮಭುಕ್ತಂ ತ್ಯ ಕ್ತ್ವ
ಧಾರ್ಮಿಕೋಜನಃ ಸ್ವಯಂ ತು ಭೂರಿಭೋಜನಂ ಕರ್ತುಂ ನ ಶಕ್ನೋತಿ ॥52॥

ನಿಜವಾದ ಧಾರ್ಮಿಕನು ನೆರೆಹೊರೆಯವರು ಹಸಿವಿನಿಂದ ನರಳುತ್ತಿರಲು ತಾನು ಮಾತ್ರ ಭೂರಿಭೋಜನ ಮಾಡಲು ಮನಸ್ಸು ಮಾಡುವುದಿಲ್ಲ.

जिह्वा यस्य मर्मघातिनी निन्द्यवाक्–भाषणरता ।
यो भवति सदा परपीडन–शोषण–प्रवृत्तिमनस्कः ॥
धर्मानुष्टानादपि न तस्य निष्कृतिः स्यात् कदाचन ।
न कुत्रापि तस्य हिताय प्रायश्चित्तोऽपि विधीयते ॥53॥

ಜಿಹ್ವಾ ಯಸ್ಯ ಮರ್ಮಘಾತಿನೀ ನಿಂದ್ಯಾ ವಾಕ್–ಭಾಷಣರತಾ ।
ಯೋ ಭವತಿ ಸದಾ ಪರಪೀಡನ–ಶೋಷಣ–ಪ್ರವೃತ್ತಿಮನಸ್ಥಃ ॥
ಧರ್ಮಾನುಷ್ಠಾನಾದಪಿ ನ ತಸ್ಯ ನಿಷ್ಕೃತಿಃ ಸ್ಯಾತ್ ಕದಾಚನ ।
ನ ಕೃತಾಪಿ ತಸ್ಯ ಹಿತಾಯ ಪ್ರಾಯಶ್ಚಿತ್ತೋಽಪಿ ವಿಧೀಯತೇ ॥53॥

ನಿಂದಾತ್ಮಕವಾದ ನಾಲಿಗೆಯ ಪ್ರತೀಕಾರ ಮತ್ತು ದುರಾಶೆಯ ಮನಸ್ಸಿನ ತಪ್ಪುಗಳನ್ನು ಎಷ್ಟೇ ಧಾರ್ಮಿಕ ಕೆಲಸಗಳನ್ನಾಗಲೀ ಅಥವಾ ತಪಸ್ಸನ್ನಾಗಲೀ ಮಾಡಿದರೂ ಪ್ರಾಯಶ್ಚಿತ್ತ ವಾಗುವುದಿಲ್ಲ.

प्राज्ञश्च विचक्षणश्च स एवास्ते संयता यस्येन्द्रियभोगवासना
यस्यास्ति च पारितोषिके विरक्तिः ॥
स वै मोहान्धकारे निमग्नो अन्धवदज्ञः प्रचरति संसारे
यो भोगलालसापूरणे ताडितोऽपि क्षमां याचते ईश्वरान्मृषा ॥54॥

ಪ್ರಾಜ್ಞಶ್ಚ ವಿಚಕ್ಷಣಶ್ಚ ಸ ಏವಾಸ್ತೇ ಸಂಯತಾ ಯಸ್ಯೇಂದ್ರಿಯಭೋಗವಾಸನಾ
ಯಸ್ಯಾಸ್ತಿ ಚ ಪಾರಿತೋಷಿಕೇ ವಿರಕ್ತಿಃ ।।
ಸ ವೈ ಮೋಹಾಂಧಕಾರೀ ನಿಮಗ್ನೋ ಅಂಧವದಜ್ಞಃ ಪ್ರಚರತಿ ಸಂಸಾರೇ
ಯೋ ಭೋಗಲಾಲಸಾಪೂರಣೋ ತಾಡಿತೋಽಪಿ ಕ್ಷಮಾಯಾಚತೇ ಈಶ್ವರಾನ್ಮೃಷಾ ।।54।।

ತನ್ನ ಕಾಮನೆಗಳನ್ನು ನಿಯಂತ್ರಣದಲ್ಲಿರಿಸಿ ಕೊಂಡವನು ಮತ್ತು ಪ್ರತಿಫಲದಲ್ಲಿ ವಿರಕ್ತಿ ಉಳ್ಳವನು ಬುದ್ಧಿವಂತನೂ ಮತ್ತು ವಿವೇಕ ಉಳ್ಳವನು. ತನ್ನ ಭೋಗಲಾಲಸೆಗಳ ಹಸಿವನ್ನು ಪೂರೈಸಿಕೊಳ್ಳುತ್ತಾ ದೇವರಲ್ಲಿ ಕ್ಷಮೆಗಾಗಿ ಪ್ರಾರ್ಥಿಸುವವನು ಅಜ್ಞಾನಿಯು.

कुतश्चिद् देशादागतं वा काचन जनजातिजातं वा
ईश्वरादभयप्रार्थिनं शरणार्थिनमाश्रयं प्रदेयं मंगलं च विधेयम् ॥55॥

ಕುತಶ್ಚಿದ್ ದೇಶಾದಾಗತಂ ವಾ ಕಾಚನ ಜನಜಾತಿಜಾತಂ ವಾ
ಈಶ್ವರಾಭಯಪ್ರಾರ್ಥಿನಂ ಶರಣಾರ್ಥಿನಮಾಶ್ರಯಂ ಪ್ರದೇಯಂ ಮಂಗಲಂ ಚ ವಿಧೇಯಮ್ ।।55।।

ಪ್ರಪಂಚದ ಯಾವುದೇ ಭಾಗದ ಅಥವಾ ಯಾವುದೇ ಜನಾಂಗದ ಯಾರೇ ಆಗಲಿ ಪರಮೇಶ್ವರನ ಅಭಯಬೇಡಿ ಆಶ್ರಯವನ್ನು ಬಯಸಿದರೆ ಅಂತಹ ಶರಣಾರ್ಥಿಗೆ ಆಶ್ರಯವನ್ನು ನೀಡಿ ಒಳ್ಳೆಯದಾಗುವಂತೆ ಮಾಡಬೇಕು.

ईश्वरं केवलं भयं कुर्वाणः सर्वापदि विपदि चैव
न कस्मादपरात् स विभेति निर्भयं जीवतीति ध्रुवम् ॥56॥

ಈಶ್ವರಂ ಕೇವಲಂ ಭಯಂ ಕುರ್ವಾಣಃ ಸರ್ವಾಪದಿ ವಿಪದಿ ಚೈವ
ನಕಸ್ಮಾದಪರಾತ್ ಸ ವಿಭೇತಿ ನಿರ್ಭಯಂ ಜೀವತೀತಿ ಧ್ರುವಮ್ ।।56।।

ದೇವರಲ್ಲಿ ಮಾತ್ರ ಹೆದಂಕೆ ಇರುವವನಿಗೆ ಇನ್ನು ಯಾರದೇ ಅಥವಾ ಯಾವುದೇ ಆಪತ್ತು ಅಥವಾ ವಿಪತ್ತಿನ ಹೆದರಿಕೆ ಇರುವುದಿಲ್ಲ.

अतिप्राकृतक्रियासिद्धाश्च ईश्वरस्य मांगल्यवार्त्तावहाश्च केवलम् ।
ते च श्रद्धार्हा स्तथापि उपास्यस्तु एक एवाद्वितीयः परमेश्वरः ॥57॥

ಅತಿಪ್ರಾಕೃತಕ್ರಿಯಾಶ್ಚ ಈಶ್ವರಸ್ಯ ಮಾಂಗಲ್ಯವಾರ್ತಾವಹಾಶ್ಚ ಕೇವಲಮ್ ।
ತೇಚ ಶ್ರದ್ಧಾರ್ಹ ಸ್ತಥಾಪಿ ಉಪಾಸ್ಯಸ್ತು ಏಕವವಾದ್ವಿತೀಯಃ ಪರಮೇಶ್ವರಃ ।।57।।

ಪವಾಡಗಳನ್ನು ಮಾಡ ಬಲ್ಲವರು ಪರಮೇಶ್ವರನ ಮಂಗಲವಾರ್ತೆಗಳನ್ನು ತರುವ ದೂತರಾಗಿದ್ದಾರೆ. ಅವರನ್ನು ಗೌರವಿಸಬೇಕು ಆದರೆ ಪೂಜಾದಿಗಳನ್ನು ಮಾತ್ರ ಪರಮಶ್ರೇಷ್ಠನಾದ ಪರಮೇಸ್ವರ ನಿಗೇ ಮೀಸಲಾಗಿಡಬೇಕು.

विभवे सति तु यो नृशंसो विधिं विहाय चरति जीवनम् ।
अन्यायवृत्तश्च भिक्षामाददाति तं प्रति ईश्वरो भवति पराङ्मुखः ॥58॥

ವಿಭವೇ ಸತಿ ತು ಯೋ ನೃಶಂಸೋ ವಿಧಿಂ ವಿಹಾಯ ಚರತಿ ಜೀವನಮ್ ।
ಅನ್ಯಾಯವೃತ್ತಶ್ಚ ಭಿಕ್ಷಾಮಾದದಾತಿ ತಂ ಪ್ರತಿ ಈಶ್ವರೋಭವತಿ ಪರಾಙ್ಮುಖಮ್ ।।58।।

ಹೃದಯ ಹೀನರು ಮತ್ತು ನೀತಿ ನಿಯಮಗಳನ್ನು ಗೌರವಿಸದಿರುವವರು, ಇತರರಿಗೆ ಕೆಡುಕು ಮಾಡುವವರು ಹಾಗೂ ಧನಿಕನಾಗಿದ್ದರೂ ಮತ್ತಷ್ಟು ಧನಕ್ಕಾಗಿ ಬೇಡುವವರಿಂದ ಪರಮೇಶ್ವರನು ವಿಮುಖನಾಗುತ್ತಾನೆ.

क्लान्तानां हृदयं य आलादयति आर्त्तानां क्लेशं च ।
यो दूरीकरोति स स्वर्गस्य लभते राजमार्गम् ॥59॥

ಕಾಲಾಂತಾನಾಂ ಹೃದಯಂ ಯ ಆಹ್ಲಾಯತಿ ಆರ್ತಾನಾಂ ಕ್ಲೇಶಂ ಚ ।
ಯೋ ದೂರೀಕರೋತಿ ಸ ಸ್ವರ್ಗಸ್ಯ ಲಭತೇ ರಾಜಮಾರ್ಗಮ್ ।।59।।

ಬೇಸತ್ತವರ ಹೃದಯಕ್ಕೆ ಸಂತೋಷವನ್ನುಂಟು ಮಾಡುವ, ತೊಂದರೆಯನ್ನು ಅನುಭವಿಸುತ್ತಿರುವವರ ವೇದನೆಗಳನ್ನು ತೊಡೆದು ಹಾಕುವವರಿಗೆ ಸ್ವರ್ಗದ ರಾಜಮಾರ್ಗವು ತೆರೆದಿರುತ್ತದೆ.

यः समर्थयते विश्वस्तान् आर्त्तानां च सहायकः ।
स पश्येत् स्वर्गद्वारमपावृतम् ईश्वरमपि सहायकम् ॥60॥

ಯಃ ಸಮರ್ಥಯತೇ ವಿಶ್ವಸ್ತಾನ್ ಆರ್ತಾನಾಂ ಚ ಸಹಾಯಕಃ ।
ಸ ಪಶ್ಯೇತ್ ಸ್ವರ್ಗದ್ವಾರಮಪಾವೃತಮ್ ಈಶ್ವರಮಪಿ ಸಹಾಯಕಮ್ ।।60।।

ಪರಮೇಶ್ವರನಲ್ಲಿ ನಂಬಿಕೆ ಇರುವವರನ್ನು ಬೆಂಬಲಿಸುವ ಮತ್ತು ಅತಿತೊಂದರೆಯಲ್ಲಿರುವವರಿಗೆ ಸಹಾಯ ಮಾಡುವವರಿಗೂ ಪರಮೇಶ್ವರನು ಸ್ವರ್ಗದ ದಾರಿಕೋರಲು ಸಹಾಯ ಮಾಡುತ್ತಾನೆ.

पृष्ठघातो व्यभिचारादपि भयंकरः । ईश्वरः पृष्ठघातिनं
तावन् न क्षमते यावदेवाहतस्य क्षमामसौ न लभेत ॥61॥

ಪೃಷ್ಠಘಾತೋ ವ್ಯಭಿಚಾರಾದಪಿ ಭಯಂಕರಃ । ಈಶ್ವರಃ ಪೃಷ್ಠಘಾತಿನಂ
ತಾವನ್ ಮ ಕ್ಷಮತೇ ಯಾವದೇವಾಹಕಸ್ಯ ಕ್ಷಮಾಮಸೌ ನ ಲಭೇತ ।।61।।

ಬೆನ್ನ ಹಿಂದೆ ನಿಂದಿಸುವುದು ವ್ಯಭಿಚಾರಕ್ಕಿಂತಲೂ ಘೋರವಾದುದು. ಈ ರೀತಿ ನಿಂದಿಸುವವರನ್ನು ಹಾನಿಗೊಳಗಾದವರು ಕ್ಷಮಿಸಿದರೆ ಮಾತ್ರ ಪರಮೇಶ್ವರನು ಕ್ಷಮಿಸುತ್ತಾನೆ.

यस्तु नाचरति भैक्ष्यं परिश्रमेण तु अर्जयति
स्वजीविकां पुरुषस्य तस्य ईश्वरः प्रसीदति ॥62॥

ಯಸ್ತು ನಾಚಾರತಿ ಭೈಕ್ಷ್ಯಂ ಪರಿಶ್ರಮೇಣ ತು ಅರ್ಜಯತಿ
ಸ್ವಜೀವಿಕಾಂ ಪುರುಷಸ್ಯ ತಸ್ಯ ಈಶ್ವರಃ ಪ್ರಸೀದತಿ ।।62।।

ಭಿಕ್ಷೆಯನ್ನು ಬೇಡದೇ ತನ್ನ ಸ್ವಂತ ಪರಿಶ್ರಮದಿಂದಲೇ ಜೀವನ ನಡಿಸುವವನ ಮೇಲೆ ಪರಮೇಶ್ವರನು ಕೃಪೆ ಕೋರುತ್ತಾನೆ.

यो ददाति अन्नं स्वजनाय स तवानुगत्यमर्हति
विरोधं तेन सह क्रियते चेत् ईश्वरो भवति विरक्तः ॥63॥

ಯೋದದಾತಿ ಅನ್ನಂ ಸ್ವಜನಾಯ ಸ ತವಾನುಗತ್ಯಮರ್ಹತಿ
ವಿರೋಧಂ ತೇನ ಸಹ ಕ್ರಿಯತೇ ಚೇತ್ ಈಶ್ವರೋಭವತಿ ವಿರಕ್ತಃ ॥63॥

ಸ್ವಜನರಿಗೆ ಅನ್ನ ನೀಡುವವನಿಗೆ ನಿಷ್ಠೆಯಿಂದಿರ ಬೇಕು ಅವರಹತ್ತಿರ ಹಗೆತನ ತೋರಿಸುವವರನ್ನು ಕಂಡರೆ ಪರಮೇಶ್ವರನು ಕೋಪಗೊಳ್ಳುತ್ತಾನೆ.

धनवान् पश्यतु धनवत्तरमुत्तरोत्तरम् ।
दरिद्रोऽपि पश्यतु दरिद्रतरमधः क्रमम् ।
एवमेव विचार्यं तारतम्येन ईश्वर-प्रसादम् ॥64॥

ಧನವಾನ್ ಪಶ್ಯತು ಧನವತ್ತರಮುತ್ತರೋತ್ತರಮ್ ।
ದರಿದ್ರೋऽಪಿ ಪಶ್ಯತು ದರಿದ್ರತರಮಧಃ ಕ್ರಮಮ್ ।
ಏವಮೇವ ವಿಚಾರ್ಯಂ ತಾರತಮ್ಯೇನ ಈಶ್ವರ-ಪ್ರಸಾದಮ್ ॥64॥

ಧನಿಕನಾದವನು ತನಗಿಂತಲೂ ಕಡಿಮೆ ಭಾಗ್ಯವಂತರನ್ನು, ಬಡವನಾದವನು ತನಗಿಂತಲೂ ಬಡವನನ್ನು ನೋಡಿ, ಪರಮೇಶ್ವರನು ತನಗೆ ಕರುಣಿಸಿರುವ ಭಾಗ್ಯಕ್ಕಾಗಿ ಸಂತೋಷಪಡಬೇಕು.

कामी इन्द्रियदासोऽस्ति कामभोगलालसा नीचत्वं नयति ।
निष्ठ जगति पद्मपत्रमिवांभसा। एतद्वै ईश्वरानुशासनम् ॥65॥

ಕಾಮಿ ಇಂದ್ರಿಯದಾಸೋऽಸ್ತಿ ಕಾಮಭೋಗಲಾಲಸೌ ನೀಚತ್ವಂ ನಯತಿ ।
ನಿಷ್ಠ ಜಗತಿ ಪದ್ಮಪತ್ರಮಿವಾಂಭಸಾ । ಏತದ್ವೈ ಈಶ್ವರಾನುಶಾಸನಮ್ ॥65॥

ಭೋಗಾಸಕ್ತನು ಅದರ ಸೆರೆಯಾಳಾಗುತ್ತಾನೆ, ಅತಿಯಾದ ಆಸೆ ಅವನತಿಗೆ ದಾರಿ. ಪರಮೇಶ್ವರನು ತಾವರೆಯ ಎಲೆಯ ಮೇಲಿನ ನೀರಿನ ಹನಿಯಂತೆ ಜಗತ್ತಿನಲ್ಲಿರಬೇಕೆಂಬ ಕಟ್ಟಳೆಯನ್ನು ವಿಧಿಸುತ್ತಾನೆ.

विषयसुखत्यागं वा समाजं प्रति यत् कर्त्तव्यम्
तत् त्यागं नैव त्यागमीश्वरप्रीणितम्
कामपाश-विमोचनमिति त्यागमीश्वरसम्मतम् ॥66॥

ವಿಷಯ ಸುಖತ್ಯಾಗಂ ವಾ ಸಮಾಜಂ ಪ್ರತಿ ಯತ್ ಕರ್ತವ್ಯಮ್
ತತ್ ತ್ಯಾಗಂ ನೈವ ತ್ಯಾಗಮೀಶ್ವರಪ್ರೀಣಿತಮ್
ಕಾಮಪಾಶ-ವಿಮೋಚನಮಿತಿ ತ್ಯಾಗಮೀಶ್ವರ ಸಮ್ಮತಮ್ ॥66॥

ಐಹಿಕ ಸುಖದಿಂದ ದೂರವಿರುವುದು ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಬಿಡುವುದು ಪರಮೇಶ್ವರನಿಗೆ ಪ್ರೀತಿಯಾಗುವುದಿಲ್ಲ, ಅವನು ಕಾಮನೆಗಳ ಹಿಡಿತದಿಂದ ಸ್ವತಂತ್ರರಾಗಿರುವ ವ್ಯಕ್ತಿಯನ್ನು ಗೌರವಿಸುತ್ತಾನೆ.

सत्यं यस्य व्रतोपवासं सन्तोषं तीर्थभूतम् ।
दिव्यज्ञानं ध्यानं च यज्ञस्वरूपम् ॥
दया च प्रतिमा यस्य क्षमा वै जपमाला ।
तस्य प्रसीदति ईश्वरः पुरतो नित्यम् ॥67॥

ಸತ್ಯಂ ಯಸ್ಯ ವ್ರತೋಪವಾಸಂ ಸಂತೋಷಂ ತೀರ್ಥಭೂತಮ್
ದಿವ್ಯಜ್ಞಾನಂ ಧ್ಯಾನಂ ಚ ಯಜ್ಞ ಸ್ವರೂಪಮ್
ದಯಾ ಚ ಪ್ರತಿಮಾ ಯಸ್ಯ ಕ್ಷಮಾ ವೈ ಜಪಮಾಲಾ ।
ತಸ್ಯ ಪ್ರಸೀದತಿ ಈಶ್ವರಃ ಪುರತೋ ನಿತ್ಯಮ್ ॥67॥

ಸತ್ಯವನ್ನು ಉಪವಾಸ ವ್ರತವನ್ನಾಗಿ ಆಚರಿಸುವುದನ್ನು. ತೃಪ್ತಿಯನ್ನು ಯಾತ್ರಾಸ್ಥಳವಾಗಿ ತಿಳಿಯುವುದನ್ನು, ಬ್ರಹ್ಮಜ್ಞಾನ ಮತ್ತು ಧ್ಯಾನವನ್ನು ಸ್ನಾನವನ್ನಾಗಿ ಸ್ವೀಕರಿಸುವುದನ್ನು, ಕರುಣೆಯನ್ನು ಪ್ರತಿಬಿಂಬವಾಗಿಯೂ ಮತ್ತು ಕ್ಷಮೆಯನ್ನು ಜಪಸರದಂತೆಯೂ ತಿಳಿಯುವವರು ಈಶ್ವರನ ಕೃಪೆಗೆ ಪಾತ್ರರಾಗುವವರಲ್ಲಿ ಅಗ್ರ ಸ್ಥಾನದಲ್ಲಿರುತ್ತಾರೆ.

हिंसनात् स्तेयादनृतात् विरतो भव । एष ईश्वरादेशः ॥68॥

ಹಿಂಸನಾತ್ ಸ್ತೇಯಾದನೃತಾತ್ ವಿರತೋ ಭವ । ಏಷ ಈಶ್ವರಾದೇಶಃ ॥68॥

ಹಿಂಸೆ ಮಾಡುವುದನ್ನು, ಕದಿಯುವುದನ್ನು ಮತ್ತು ಸುಳ್ಳುಹೇಳುವುದನ್ನು ಪರಮೇಶ್ವರನು ವಿಧಿಸಿಲ್ಲ.

ईश्वरं मा दूषय। स्वयं विचारय ।
स्वकृत-पापप्रजातं वै सर्वं तव दुःखभोगम् ॥69॥

ಈಶ್ವರಂ ಮಾ ದೂಷಯ । ಸ್ವಯಂ ವಿಚಾರಯ ।
ಸ್ವಕೃತ-ಪಾಪಪ್ರಜಾತಂ ವೈ ಸರ್ವಂ ತವ ದುಃಖಭೋಗಮ್ ॥69॥

ನೀವು ಅನುಭವಿಸುವ ಕಷ್ಟನಷ್ಟಗಳಿಗೆ ಪರಮೇಶ್ವರನನ್ನು ದೂಷಿಸದಿರಿ ಅವು ನೀವು ಮಾಡಿದ ಪಾಪಕೃತ್ಯಗಳ ಫಲವೆಂದು ತಿಳಿಯಿರಿ.

ईश्वरं न दूषय यदि तव वारिणा परिपूरितो दीपो अन्धकारं न दूरीकरोति
यदि वा विनष्टेन्धनेनागित्प्रज्ज्वलनस्य प्रचेष्टा विफला भवति ॥70॥

ಈಶ್ವರಂ ನ ದೂಷಯ ಯದಿ ತವ ವಾರಿಣಾ ಪರಿಪೂರಿತೋ ದೀಪೋ ಅಂಧಕಾರಂ ನ ದೂರಿಕರೋತಿ
ಯದಿ ವಾ ವಿನಷ್ಟೇಂಧನಾಗ್ನಿಪ್ರಜ್ವಲನಸ್ಯ ಪ್ರಚೇಷ್ಟಾ ವಿಫಲಾ ಭವತಿ ॥70॥

ನೀರನ್ನು ತುಂಬಿಸಿದ ದೀಪದಿಂದ ಕತ್ತಲೆಯನ್ನು ದೂರಮಾಡಲು ಸಾಧ್ಯವಾಗುವುದಿಲ್ಲ ಅಥವಾ ನಿಷ್ಪ್ರಯೋಜಕವಾದ ಕಟ್ಟಿಗೆಯಿಂದ ಬೆಂಕಿಯನ್ನು ಹೊತ್ತಿಸಲಾಗುವುದಿಲ್ಲ, ಇದಕ್ಕಾಗಿ ಪರಮೇಶ್ವರನನ್ನು ದೂರಬೇಡಿ.

यावत् तृष्णा स्थिता नृषु संसारसुखभोगस्य
तावद् वृथा तपश्चार्या ईश्वरलाभाय यदि वा कृता ॥71॥

ಯಾವತ್ ತೃಷ್ಣಾ ಸ್ಥಿತಾ ನೃಷು ಸಂಸಾರಸುಖಭೋಗಸ್ಯ
ತಾವದ್ ವೃಥಾ ತಪಶ್ಚರ್ಯಾ ಈಶ್ವರಲಾಭಾಯ ಯದಿ ವಾಕೃತಾ ॥71॥

ಐಹಿಕ ಭೋಗಗಳ ಅತಿಆಸೆಯಿಂದಾಗಿ ಈಶ್ವರನನ್ನು ಹೊಂದಲು ಮಾಡುವ ತಪ್ಪಸ್ಸು ಕೂಡಾ ವ್ಯರ್ಥವಾಗುತ್ತದೆ.

प्राणरक्षार्थमावश्यकीयद्रव्यजातस्य भोगं न तु पापम् ।
शारीरं स्वास्थ्यरक्षणं सदैव कर्त्तव्यं धर्मसाधनार्थम् ॥
तेन वै वर्त्तते प्रोज्ज्वलः प्रज्ञाप्रदीपः साध्यते चाघकृत्प्रतिरोधम् ॥72॥

ಪ್ರಾಣರಕ್ಷಾರ್ಥಮಾವಶ್ಯಕೀಯದ್ರವ್ಯಜಾತಸ್ಯ ಭೋಗಂ ನ ತು ಪಾಪಮ್ ।
ಶರೀರಂ ಸ್ವಾಸ್ಥ್ಯರಕ್ಷಣಂ ಸದೈವ ಕರ್ತವ್ಯಂ ಧರ್ಮಸಾಧನಾರ್ಥಮ್ ॥
ತೇನ ವೈ ವರ್ತತೇ ಪ್ರೋಜ್ವಲಃ ಪ್ರಜ್ಞಾಪ್ರದೀಪಃ ಸಾಧ್ಯತೇ ಚಾಘಕೃತಪ್ರತಿರೋಧಮ್ ॥72॥

ಜೀವನಾವಶ್ಯಗಳನ್ನು ಪೂರೈಸುವುದು ಕೆಟ್ಟದಲ್ಲ. ಧಾರ್ಮಿಕ ಕ್ರಿಯಗಳ ಆಚರಣೆಗಾಗಿ ದೇಹಾರೋಗ್ಯವನ್ನು ಕಾಪಾಡಬೇಕಾದುದು ಕರ್ತವ್ಯವೇಆಗಿದೆ, ಇಲ್ಲದಿದ್ದರೆ ಜ್ಞಾನ ದೀವಿಗೆಯನ್ನು ಉರಿಸುತ್ತಿರುವ ಕೆಲಸವನ್ನಾಗಲೀ ಅಥವಾ ಕೆಡುಕನ್ನುಂಟು ಮಾಡುವವರನ್ನು ತಡೆಯಲಾಗಲೀ ಸಾಧ್ಯವಾಗುವುದಿಲ್ಲ.

बोधे वा चिन्तायां कर्मणि वाचि वा
जीविकार्जने वा चेष्टायां शुद्धिलक्षणा स्यात्
सफला प्रार्थना कृता या ईश्वरसकाशम् ॥73॥

ಬೋಧೇ ವಾ ಚಿಂತಾಯಾಂ ಕರ್ಮಣಿ ವಾಚಿ ವಾ
ಜೀವಿಕಾರ್ಜನೇ ವಾ ಚೇಷ್ಟಾಯಾಂ ಶುದ್ಧಿಲಕ್ಷಣಾ ಸ್ಯಾತ್
ಸಫಲಾ ಪ್ರಾರ್ಥನಾ ಕೃತಾ ಯಾ ಈಶ್ವರಸಕಾಶಮ್॥73॥

ಪರಮೇಶ್ವರನಿಗೆ ಪ್ರಾರ್ಥನೆ ಸಲ್ಲಿಸುವುದರಿಂದ ಶುದ್ಧ ಜ್ಞಾನ, ಒಳ್ಳೆಯ ಆಲೋಚನೆ, ಮಾತು, ಕ್ರಿಯೆ, ಜೀವನೋಪಾಯ ಮತ್ತು ಪರಿಶ್ರಮವೆಂಬ ಫಲಗಳು ಲಭಿಸುತ್ತವೆ.

मत्स्यमांसवर्जनं दिगम्वरत्वं वा मस्तकमुण्डनम्
कर्दमालिप्ताङ्गं वाग्निहोत्रादिकं चैतानि
कानिचित् कर्माणि मोहग्रस्तं न विशुद्धं कुर्वन्ति ॥74॥

ಮತ್ಸ್ಯಮಾಂಸವರ್ಜನಂ ದಿಗಂಬರತ್ವಂ ವಾ ಮಸ್ತಕಮುಂಡನಮ್
ಕರ್ದದ್ಧಮಾಲಿಪ್ತಾಂಗಂ ವಾಗ್ನಿಹೋತ್ರಾದಿಕಂ ಚೈತಾನಿ
ಕಾನಿಚಿತ್ ಕರ್ಮಾಣಿ ಮೋಹಗ್ರಸ್ತಂ ನ ವಿಶುದ್ಧಂ ಕುರ್ವಂತಿ ॥74॥

ಮತ್ಸ್ಯ ಮಾಂಸ ತ್ಯಜಿಸುವುದರಿಂದಾಗಲೀ, ದಿಗಂಬರನಾಗಿರುವುದರಿಂದಾಗಲೀ, ತಲೆ ಬೋಳಿಸಿಕೊಳ್ಳುವುದರಿದಾಗಲೀ, ದೇಹಕ್ಕೆ ಮಣ್ಣನ್ನು ಬಳಿದು ಕೊಳ್ಳುವುದರಿಂದಾಗಲೀ,ಹೋಮಪವನಗಳನ್ನು ಮೂಡುವುದರಿಂದಾಗಲೀ, ಮೋಹಪಾಶದಲ್ಲಿ ಸಿಲುಕಿರುವವನು ಪರಿಶುದ್ಧನಾಗುವುದಿಲ್ಲ.

स एव विश्वासवान् यस्य वाचनं कर्म च
निरापदमिति मन्यन्ते भगवत्–प्रजावर्गाः ॥75॥

ಸ ಏವ ವಿಶ್ವಾಸವಾನ್ ಯಸ್ಯ ವಾಚನಂ ಕರ್ಮ ಚ
ನಿರಾಪನಮಿತಿ ಮನ್ಯಂತೇ ಭಗವತ್–ಪ್ರಜಾವರ್ಗಾಃ ॥75॥

ತನ್ನ ಮಾತು ಮತ್ತು ಕ್ರಿಯೆಯಿಂದ ಅಪಾಯ ಉಂಟುಮಾಡದವನೇ ಪರಮೇಶ್ವರನಲ್ಲಿ ವಿಶ್ವಾಸವುಳ್ಳವನು.

ये तु ईश्वर–कर्तृत्वे संशयन्ति कापुरुषाः
ते निकृष्टाः शत्रवश्चा ईश्वरस्य, तेषां महती विनष्टिः ॥76॥

ಯೇತು ಈಶ್ವರ ಕತೃತ್ವೇ ಸಂಶಯಂತಿ ಕಾಪುರುಷಾಃ
ತೇ ನಿಕೃಷ್ಟಾಃ ಶತ್ರ ವಶ್ಚ ಈಶ್ವರಸ್ಯ ತೇಷಾಂ ಮಹತೀ ವಿನಷ್ಟಿಃ ॥76॥

ಅಂಜುಬುರುಕರು ಮತ್ತು ಈಶ್ವರನ ಸಂಕಲ್ಪದಲ್ಲಿ ಸಂಶಯ ವಿರುವವರು ಅವನ ಶತ್ರುಗಳಾಗಿರುತ್ತಾರೆ. ಸಂಶಯವಿರುವವರು ನಾಶಹೊಂದುತ್ತಾರೆ.

सत्यमेव वाचं वदेत् प्रतिज्ञातं निर्वाहयेत् ।
न्यस्तदायं सम्पादयेत् मलिनवासनां च परित्यजेत् ॥77॥

ಸತ್ಯಮೇವ ವಾಚಂ ವದೇತ್ ಪ್ರತಿಜ್ಞಾತ್ ನಿರ್ವಾಹಯೇತ್
ನ್ಯಸ್ತದಾಯಂ ಸಂಪಾದಯೇತ್ ಮಲಿನವಾಸನಾಂಚ ಪರಿತ್ಯಜೇತ್ ॥77॥

ಸತ್ಯವನ್ನು ನುಡಿಯಿರಿ, ಕೊಟ್ಟ ಮಾತಿನಂತೆ ನಡೆಯರಿ ಮತ್ತು ನಿಮ್ಮ ಮೇಲಿನ ನಂಬಿಗೆಯ ಕರ್ತವ್ಯವನ್ನು ನಿರ್ವಹಿಸಿರಿ. ಅಪವಿತ್ರವಾದ ಆಸೆಗಳನ್ನು ಹೊಂದಿರ ಬೇಡಿ.

यावती स्नेहशीला माता सन्तानं प्रति भवति
तदधिको दयामयो भगवान् स्वयंसृष्टान् प्रजान् प्रति ॥
हिंसनं नार्हति प्रजानां यदि तन्न भवति चानिवार्यम्
खाद्यसंग्रहार्थ वा आत्मसंरक्षणार्थंमपरिहार्यम् ॥78॥

ಯಾವತೀ ಸ್ನೇಹಶೀಲಾ ಮಾತಾ ಸಂತಾನಂ ಪ್ರತಿ ಭವತಿ
ತದಧಿಕೋ ದಯಾಮಯೋ ಭಗವಾನ್ ಸ್ವಯಂ ಸೃಷ್ಟಾನ್ ಪ್ರಜಾನ್ ಪ್ರತಿಃ
ಹಿಂಸನಂ ನಾರ್ಹತಿ ಪ್ರಜಾನಾಂ ಯದಿ ತನ್ನ ಭವತಿ ಚಾನಿವಾರ್ಯಮ್
ಖಾದ್ಯಸಂಗ್ರಹಾರ್ಥ ವಾ ಆತ್ಮಸಂರಕ್ಷಣಾರ್ಥಂಮಪರಿಹಾರ್ಯಮ್ ॥78॥

ತನ್ನ ಸೃಷ್ಟಿಯ ಮೇಲೆ ಪರಮೇಶ್ವರನ ಕರುಣೆಯು ತನ್ನ ಮಗುವಿನಮೇಲೆ ತಾಯಯ ಪ್ರೀತಿಗಿಂತಲೂ

ಹೆಚ್ಚಾಗಿರುತ್ತದೆ. ಪರಮೇಶ್ವರನ ಸೃಷ್ಟಿಯನ್ನು ಆಹಾರ ಅಥವಾ ಆತ್ಮರಕ್ಷಣೆಗಾಗಿ ಅಲ್ಲದೇ ಬೇರಾವುದೇ ಕಾರಣಕ್ಕಾಗಿ ಹಾಳುಮಾಡದಿರಿ.

मनो यस्य पवित्रम् वासना च सुसंयता ।
श्लोकोच्चाराश्च मधुस्वनाः स एव भवितुमर्हति
प्रार्थनायां पुरोहितो यजमानेभ्यो वहुदत्तदक्षिणः ॥
कवोष्णमृदुवाक् वै स द्रावणे तु भवति शक्तः ।
यावदेव भ्रान्तिं श्रावकानां वा कुमतिं च तेषाम् ॥79॥

ಮನೋ ಯಸ್ಯ ಪವಿತ್ರಮ್ ವಾಸನಾ ಚ ಸುಸಂಯತಾ ।
ಶ್ಲೋಕೋಚ್ಚಾರಾಶ್ಚ ಮಧುಸ್ವನಾಃ ಸ ಏವ ಭವಿತುಮರ್ಹತಿ
ಪ್ರಾರ್ಥನಾಯಾಂ ಪುರೋಹಿತೋ ಯಜಮಾನೇಭ್ಯೋ ಬಹುದತ್ತದಕ್ಷಿಣಃ ॥
ಕವೋಷ್ಣ ಮೃದುವಾಕ್ ವೈ ಸದ್ರಾವಣೇ ತು ಭವತಿ ಶಕ್ತಃ ।
ಯಾವದೇವ ಭ್ರಾಂತಿಂ ಶ್ರಾವಕಾನಾಂ ವಾ ಕುಮತಿಂ ಚ ತೇಷಾಮ್ ॥79॥

ಶುದ್ಧ ಮನಸ್ಸುಳ್ಳ, ಕಾಮನೆಗಳಮೇಲೇ ನಿಯಂತ್ರಣವಿರುವ ಮತ್ತು ಸುಶ್ರಾವ್ಯವಾಗಿ ಶ್ಲೋಕಗಳನ್ನು ಹೇಳಬಲ್ಲವನು ಗುರುವಾಗಿ (ಪುರೋಹಿತನಾಗಿ) ಪ್ರಾರ್ಥನೆಯ ಮುಂದಾಳತ್ವವನ್ನು ವಹಿಸಬಹುದು, ಅಂತಹವರಿಗೆ ಪೋಷಕರು ಧಾರಾಳವಾಗಿ ನೀಡಬೇಕು. ಪುರೋಹಿತನಾದವನು ಮೃದುವಾಗಿ ಮಾತನಾಡುತ್ತಾ, ಕೇಳುಗರ ತಪ್ಪುಗಳನ್ನು ಮೃದುವಾಗಿಯೂ ಅನುಕಂಪ ದಿಂದಲೂ ಕೇಳುತ್ತಾ ಅವರ ದೋಷಯುಕ್ತ ಮನಸ್ಸಿನಲ್ಲಿರುವ ದೋಷಗಳು ಕರಗುಮತೆ ಮಾಡಬೇಕು.

विद्वत्वराणां भाषणश्रवणं चान्यान्
विज्ञानतत्त्वप्रवुद्धकरणमुच्यते च
धर्मकर्मानुष्ठानतुल्यं वा तदधिकवरदम् ॥80॥

ವಿದ್ಯತ್‌ವರಾಣಾಂ ಭಾಷಣ ಶ್ರವಣಂ ಚಾನ್ಯಾನ್
ವಿಜ್ಞಾನತತ್ವಪ್ರಬುದ್ಧಕರಣಮುಖ್ಯತೇ ಚ
ಧರ್ಮಕರ್ಮಾನುಷ್ಠಾನತುಲ್ಯಂ ವಾ ತದಧಿಕವರದಮ್ ॥80॥

ಜ್ಞಾನಿಗಳ ಮಾತನ್ನು ಕೇಳುವ ಮತ್ತು ಇತರರ ಮನಸ್ಸಿನಲ್ಲಿ ಜ್ಞಾನವನ್ನು ಕ್ರಮೇಣವಾಗಿ ಪ್ರಸರಿಸುವ ಕೆಲಸವು ಧಾರ್ಮಿಕ ಅನುಷ್ಠಾನ ಮಾಡುವುದಕ್ಕಿಂತ ಪ್ರಯೋಜನಕಾರಿಯಾದ ಕೆಲಸವಾಗಿದೆ.

मनीषिणां मसिविन्दुश्च वीराणां रक्तविन्दवः
उभयोऽपि पवित्रौ च अमृतोपमावुच्यते ॥81॥

ಮನೀಷಿಣಾಂ ಮಸಿಬಿಂದುಶ್ಚ ವೀರಣಾಂ ರಕ್ತಬಿಂದವಃ
ಉಭಯೋಽಪಿ ಪವಿತ್ರೌ ಚ ಅಮೃತೋಪಮಾವುಚ್ಯತೇ ॥81॥

ಜ್ಞಾನಿಗಳ ಬರಹದ ಮಸಿಬಿಂದುವು ಶೂರರ ರಕ್ತದ ಬಿಂದು ವಿನಷ್ಟೇ ಪವಿತ್ರವಾದುದು ಅಮೃತೋಪಮವಾದುದಾಗಿದೆ.

'सुखी भव ईश्वरप्रसादात्'-एवमुवाच्य मित्रमभिनन्द्येत् ।
स यदि साहाय्यं याचते तत् पार्श्वे स्थितो भव सर्वसम्पत् सह ॥82॥

ಸುಖೀ ಭವ ಈಶ್ವರಪ್ರಸಾದಾತ್ – ಏವಮುಚ್ಯ ಮಿತ್ರಮಭಿನಂದ್ಯೇತ್ ।
ಸ ಯದಿ ಸಾಹಾಯ್ಯಂ ಯಾಚಕೇ ತತ್ ಪಶ್ವೇ ್ ಸ್ಥಿತೋಭವ ಸರ್ವಸಂಪತ್ ಸಹ ॥82॥

ಸ್ನೇಹಿತನ ಹತ್ತಿರ ಕುಶಲ ಪ್ರಶ್ನೆಮಾಡುವಾಗ ಈಶ್ವರನ ಕೃಪೆಯನ್ನು ಜ್ಞಾಪಿಸಿರಿ ಸ್ನೇಹಿತನಿಗೆ ನಿಮ್ಮ ಸಹಾಯ ಬೇಕದಾಗ ನಿಮ್ಮೆಲ್ಲ ಸಂಪನ್ಮೂಲಗಳೊಂದಿಗೆ ಅವನಿಗೆ ಒತ್ತಾಸೆಯಾಗಿ ನಿಲ್ಲಿ.

ईश्वरः स्वयंशुक्रः स्निह्यति पवित्रजनमसंशयम् ।
दिवा उपोष्य नक्तं पावनं पङ्क्तिभोजनं स्वजनैः सह
एवं यस्तु पौर्णमासमाचरति तस्य वै ईश्वरः प्रसीदति ॥83॥

ಈಶ್ವರಃ ಸ್ವಯಂ ಶುಕ್ರಃ ಸ್ನೇಹ್ಯತಿ ಪವಿತ್ರ ಜನಮ ಸಂಶಯಮ್ ।
ದಿವಾ ಉಪೋಷ್ಯ ನಕ್ತಂ ಪಾವನಂ ಪಂಕ್ತಿ ಭೋಜನಂ ಸ್ವಜನೈಃ ಸಹ
ಏವಂ ಯಸ್ತು ಪೌರ್ಣಮಾಸಮಾಚರತಿ ತಸ್ಯ ವೈ ಈಶ್ವರಃ ಪ್ರಸೀದತೆ ॥83॥

ಪರಮೇಶ್ವರನು ಪರಿಶುದ್ಧನು ಮತ್ತು ಪರಿಶುದ್ಧರಾದವರನ್ನು ಪ್ರೀತಿಸುತ್ತಾನೆ. ಪೌರ್ಣಮಿ ದಿವಸದಂದು ಹಗಲಿನಲ್ಲಿ ಉಪವಾಸವಿದ್ದು ರಾತ್ರಿಯಲ್ಲಿ ಸಮಾಜ ಬಾಂಧವರೊಂದಿಗೆ ಭೋಜನ ಮಾಡುವವರನ್ನು ಕಂಡರೆ ಪರಮೇಶ್ವರನ್ನು ಪ್ರಸನ್ನನಾಗುತ್ತಾನೆ (ಈ ರೀತಿಯ ಆಚರಣೆಯನ್ನು ಭೋಜ್ ಉತ್ಸವ ವೆನ್ನುತ್ತಾರೆ.)

ईश्वरसृष्टेषु जीवेषु यो दयावान् तं प्रति ईश्वरोऽपि दयावान् ।
पशुवधश्चेदनिवार्यं तर्हि तान् स्वल्पतमा पीडा भीतिश्च देया ॥
एष ईश्वरादेशः ॥84॥

ಈಶ್ವರಸೃಷ್ಟೇಷು ಜೀವೇಷು ಯೋ ದಯಾವಾನ್ ತಂ ಪ್ರತಿ ಈಶ್ವರೋऽಪಿ ದಯಾವಾನ್
ಪಶುವಧಶ್ಚೇದನಿವಾರ್ಯಂ ತರ್ಹಿ ತಾನ್ ಸ್ವಲ್ಪತಮಾ ಪೀಡಾ ಭೀತಿಶ್ಚ ದೇಯಾ ॥84॥

ಪರಮೇಶ್ವರನಿಂದ ಸೃಷ್ಟಿಸಲ್ಪಟ್ಟ ಜೀವಿಗಳ ಮೇಲೆ ಯಾರು ದಯೆ ತೋರುತ್ತಾರೋ ಅವರ ಮೇಲೆ ಅವನೂ ದಯೆ ತೋರುತ್ತಾನೆ. ಪಶುವದೆ ಮಾಡುವುದು ಅನಿವಾರ್ಯವಾದಲ್ಲಿ ಕನಿಷ್ಠ ನೋವು ಮತ್ತು ಹೆದರಿಕೆ ಉಂಟಾಗುವ ರೀತಿಯಲ್ಲಿ ಮಾಡಬೇಕು.

आस्तिको न व्यभिचारी स्यात् परदारं नाभिगच्छेत् ।
न वदेत् प्रतिषिद्धं च सदा सत्ये स्थितो भवेत् ॥85॥

ಆಸ್ತಿಕೋ ನ ವ್ಯಭಿಚಾರೀ ಸ್ಯಾತ್ ಪರದಾರಂ ನಾಭಿಗಚ್ಛೇತ್
ನ ವದೇತ್ ಪ್ರತಿಷಿದ್ಧಂ ಚ ಸದಾ ಸತ್ಯೇ ಸ್ಥಿತೋಭವೇತ್ ॥85॥

ಆಸ್ತಿಕನಾದವನು ವ್ಯಭಿಚಾರ ಮಾಡಬಾರದು. ಅವರು ಪರಸ್ತ್ರೀಯನ್ನು ಬಯಸಬಾರದು. ಮತ್ತು ಅವಾಚ್ಯ ಶಬ್ದವನ್ನಾಡಬಾರದು ಹಾಗೂ ಯಾವಾಗಲೂ ಸತ್ಯವನ್ನು ಬಿಡಬಾರದು.

पशवश्च भगवत्-सृष्टाः । तान् प्रति सदयो भव ।
यतस्ते च मानुषीवाक्वाचने अशक्ताः ॥
क्षुधार्तेभ्यो तृष्णार्तेभ्यश्च खाद्यं पेयं च दीयताम् ।
ते नैव प्राप्तक्लमाः प्रपीडिताश्च भवन्तु ॥86॥

ಪಶವಶ್ಚ ಭಗವತ್-ಸೃಷ್ಟಾಃ। ತಾನ್ ಪ್ರತಿ ಸದಯೋ ಭವ।
ಯತಸ್ತೇ ಚ ಮಾನುಷೀವಾಕ್‌ವಾಚನೇ ಅಶಕ್ತಾಃ ॥
ಕ್ಷುದಾತೇಭ್ಯೋ ತೃಷ್ಣಾರ್ತೇಭ್ಯಶ್ಚ ಖಾದ್ಯಂ ಪೇಯಂ ಚ ದೀಯತಾಮ್।
ತೇ ನೈವ ಪ್ರಾಪ್ತಕ್ಲಮಾಃ ಪ್ರಪೀಡಿತಾಶ್ಚ ಭವಂತು ॥86॥

ಪ್ರಾಣಿಗಳು ಪರಮೇಶ್ವರನ ಸೃಷ್ಟಿ. ಅವು ಮಾತನಾಡದಿರುವುದರಿಂದ ಅವುಗಳಮೇಲೆ ಕರುಣೆ ಇರಲಿ. ಅವುಗಳ ಹಸಿವನ್ನು ನೀಗಿಸಲು ಆಹಾರ ಬಾಯಾರಿಕೆ ಶಮನ ಮಾಡಲು ನೀರನ್ನು ಕೊಡಿ. ಅವುಗಳನ್ನು ಹಿಂಸಿಸಬೇಡಿ, ದಣಿಸ ಬೇಡಿ.

श्रावकस्य वोधशक्तिं विभाव्य वक्तुमर्हति वाचम् ।
एषा वै भगवदिच्छा । सर्वविषये युगपदालोच्यमाने
न कश्चिद् विषयो न कस्यापि वोधं गम्यते । भ्रान्तिरेव जायते च ॥87॥

ಶ್ರಾವಕಸ್ಯ ಬೋಧಶಕ್ತಿಮ್ ವಿಭಾವ್ಯ ವಕ್ತುಮರ್ಹತಿ ವಾಚಮ್
ಏಷಾ ವೈ ಭಗವದಿಚ್ಛಾ। ಸರ್ವ ವಿಷಯೇ ಯುಗಪದಾಲೋಚ್ಯಮಾನೇ
ನ ಕಶ್ಚಿದ್ ವಿಷಯೋ ನ ಕಸ್ಯಾಪಿ ಭೋಧಂಗಮ್ಯತೇ। ಭ್ರಾಂತಿರೇವ ಜಾಯತೇಚ ॥87॥

ಇತರರ ಹತ್ತಿರ ಮಾತನಾಡುವಾಗ ಕೇಳುಗನ ಮನಸ್ಸಿನ ಸಾಮರ್ಥ್ಯನು ಗುಣವಾಗಿ ಮಾತನಾಡಬೇಕೆಂಬುದು ಪರಮೇಶ್ವರನ ಇಚ್ಚೆಗಯಾಗಿದೆ. ಎಲ್ಲ ವಿಷಯಗಳನ್ನು ಎಲ್ಲರ ಹತ್ತಿರ ಮಾತನಾಡಿದರೆ, ಕೆಲವರಿಗೆ ಕೆಲವು ವಿಷಯಗಳು ಅರ್ಥವಾಗದೆ. ಅಪಾರ್ಥಮಾಡಿಕ್ಕೊಳ್ಳುತ್ತಾರೆ.

अन्नं देहि क्षुधार्ताय शुक्षुषस्व आतुरं जनम् ।
कश्चिदन्यायेनावद्धश्चेत् कुरु तस्य वन्धनमोचनम् ॥88॥

ಅನ್ನಂ ದೇಹಿ ಕ್ಷುಧಾರ್ತಾಯ ಶುಕ್ಷುಷಸ್ವ ಆತುರಂ ಜನಮ್।
ಕಶ್ಚಿದನ್ಯಾಯೇನಾವದ್ಧಶ್ಚೇತ್ ಕುರು ತಸ್ಯ ಬಂಧನಮೋಚನಮ್ ॥88॥

ಹಸಿವಿನಿಂದ ಬಳಲುತ್ತಿರುವವರಿಗೆ ಆಹಾರ ನೀಡಿ ಮತ್ತು ಕಾಯಿಲೆಯಿಂದ ನರಳುತ್ತಿರುವವರನ್ನು ಕಂಡುಬನ್ನಿ ಮತ್ತು ಅನ್ಯಾಯವಾಗಿ ಸೆರೆಯಲ್ಲಿರುವವರನ್ನು ಬಿಡಿಸಿರಿ.

सहचराः पापकर्त्तारोऽपि यदि साहाय्यमुपयाचन्ते

पापान्निवार्य तान् कुरुस्व पापविरतान् ॥89॥

ಸಹಚರಾಃ ಪಾಪಕರ್ತಾರೋऽಪಿ ಯದಿ ಸಾಹಾಯ್ಯಮುಪಯಾಚಂತೇ ।

ಪಾಪನ್ನಿವಾರ್ಯ ತಾನ್ ಕುರುಸ್ವ ಪಾಪವಿರತಾನ್ ॥89॥

ಸಹಚರರು ಪಾಪಿಗಳಾದರೂ ಅವರಿಗೆ ಸಹಾಯಮಾಡಿರಿ. ಪಾಪಿಗಳಿಗೆ ಸಹಾಯ ಮಾಡುವಾಗ ಪಾಪ ಮಾಡದಂತೆ ತಡೆದು ಸಹಾಯಮಾಡಿ.

यो योग्यो यः समर्थश्च करोति कर्म च आत्मनो

परस्य च तत् सहायः प्रसन्नश्च स्वयं भवति ईश्वरः ॥90॥

ಯೋ ಯೋಗ್ಯೋ ಯಃ ಸಮರ್ಥಶ್ಚ ಕರೋತಿ ಕರ್ಮ ಚ ಆತ್ಮನೋ

ಪರಸ್ಯ ಚ ತತ್ ಸಹಾಯಃ ಪ್ರಸನ್ನಶ್ಚ ಸ್ವಯಂ ಭವತಿ ಈಶ್ವರಃ ॥90॥

ಶಕ್ತ ಮತ್ತು ಸಮರ್ಥನಾದವನು ತನಗಾಗಿ ಮತ್ತು ಇತರರಿಗಾಗಿ ಕೆಲಸಮಾಡಬೇಕು. ಅಂತಹವರಿಗೆ ಈಶ್ವರನು ಸಹಾಯಮಾಡಿ ಕೃಪೆದೋರುತ್ತಾನೆ.

ईश्वरलाभाय आत्मानं विद्धि

प्रतिजनस्य ज्ञानाहरणमवश्यं करणीयम् ॥91॥

ಈಶ್ವರಲಾಭಾಯ ಆತ್ಮಾನಂ ವಿದ್ಧಿ

ಪ್ರತಿಜನಸ್ಯ ಜ್ಞಾನಾಹರಣಮವಶ್ಯಂ ಕರಣೀಯಮ್ ॥91॥

ಪರಮೇಶ್ವರನ ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬುದನ್ನು ತಿಳಿದಿರಿ. ಪ್ರತಿಯೊಬ್ಬನೂ ಜ್ಞಾನ ಸಂಗ್ರಹ ಮಾಡುವುದು ಅವಶ್ಯಕ.

नारी तु समादरणीया । एष ईश्वरादेशः

सा वै भवति माता च कन्या च भगिनी वा ।

तां प्रति यत् कर्तव्यं तदकरणं नरकं नयति ॥92॥

ನಾರೀ ತು ಸಮಾದರಣೀಯಾ । ಏಷ ಈಶ್ವರಾದೇಶಃ

ಸಾ ವೈ ಭವತಿ ಮಾತಾ ಚ ಕನ್ಯಾ ಚ ಭಗಿನೀ ವಾ ।

ತಾಂ ಪ್ರತಿ ಯತ್ ಕರ್ತವ್ಯಂ ತದಕರಣಂ ನರಕಂ ನಯತಿ ॥92॥

ಸ್ತ್ರೀಯರನ್ನು ಆದರದಿಂದ ಕಾಣಬೇಕೆಂಬುದು ಪರಮೇಶ್ವರನ ಅಣತಿಯಾಗಿದೆ, ಏಕೆಂದರೆ ಅವರು ನಿಮ್ಮ ತಾಯಂದಿರಾಗಿರಬಹುದು, ಮಗಳಾಗಿರಬಹುದು ಅಥವಾ ಸಹೋದರಿಯರಾಗಿರಬಹುದು. ಸ್ತೀಯರಬಗ್ಗೆ ಬೇಜವಾಬ್ದಾರಿ ತೋರುವದರಿಂದ ನಿಮಗೆ ನರಕದ ದಾರಿಯು ತೆರೆದಿರುತ್ತೆತ್ತದೆ

प्रतिदानं वा पुनर्लाभमिच्छन् न कुरुस्व किमपि दानम्

एवमनिच्छन्नपि लभेत्तु पुण्यं जगदपिच भवति तव मित्रम् ॥93॥

ಪ್ರತಿದಾನಂ ವಾ ಪುನರ್ಲಾಭಮಿಚ್ಛನ್ ನ ಕುರುಸ್ವ ಕಿಮಪಿದಾನಮ್

ಏವಮನಿಚ್ಛನ್ನಪಿ ಲಭೇತು ಪುಣ್ಯಂ ಜಗದಪಿಚ ಭವತಿ ತವ ಮಿತ್ರಮ್ ॥93॥

ದಾನಮಾಡುವಾಗ ಪ್ರತಿಫಲಾಪೇಕ್ಷೆ ಅಥವಾ ಲಾಭವಾಗುತ್ತದೆಂಬ ನಿರೀಕ್ಷೆಯಿಂದ ಮಾಡಬಾರದು. ಈ ರೀತಿ ಮಾಡುವುದರಿಂದ ಇಚ್ಛೆ ಇಲ್ಲದಿದ್ದರೂ ಪುಣ್ಯ ಲಭ್ಯವಾಗುತ್ತದೆ ಮತ್ತು ಜಗತ್ತೇ ನಿಮ್ಮ ಮಿತ್ರನಾಗುತ್ತದೆ.

समुत्पन्ने विवादे तु विचारात् प्रागेव श्रोतव्यम्
उभयपक्षस्य वक्तव्यं यतो विस्पष्टं भवति तथ्यमवितथम् ॥94॥

ಸಮುತ್ಪನ್ನೇ ವಿವಾದೇ ತು ವಿಚಾರಾತ್ ಪ್ರಾಗೇವ ಶ್ರೋತವ್ಯಮ್
ಉಭಯಪಕ್ಷಸ್ಯ ವಕ್ತವ್ಯಂ ಯತೋ ವಿಸ್ಪಷ್ಟಂ ಭವತಿ ತಥ್ಯಮವಿತಥಮ್ ॥94॥

ಎರಡು ಪಕ್ಷಗಳವರೂ ವಿವಾದವನ್ನು ಇತ್ಯರ್ಥ ಮಾಡಿಕೊಡುವಂತೆ ನಿಮ್ಮ ಬಳಿ ಬಂದಾಗ ಇಬ್ಬರ ವಾದವನ್ನೂ ಕೇಳದೆ ವಿವಾದದ ಬಗ್ಗೆ ನಿರ್ಣಯ ನೀಡಬೇಡಿ ಏಕೆಂದರೆ ತಥ್ಯವೇನೆಂಬುದು ನಿಮಗೆ ತಿಳಿಯಬೇಕು (ನಂತರವೇ ನಿರ್ಣಯ).

यो जीवान् द्रुह्यति तेषामनिष्टं करोति च
सर्वजीवेषु यस्य मैत्रीभावना च नास्ति,
पतितः स समाजच्युतिमर्हति ॥95॥

ಯೋ ಜೀವಾನ್ ದುಹ್ಯತಿ ತೀಷಾಮನಿಷ್ಟಂ ಕರೋತಿ ಚ
ಸರ್ವಜೀವೇಷು ಯಸ್ಯ ಮೈತ್ರಿ ಭಾವನಾ ಚ ನಾಸ್ತಿ
ಪತಿತಃ ಸಸಮಾಜಚ್ಯುತಿ ಮರ್ಹತಿ ॥95॥

ಯಾರು ಇತರೆ ಜೀವಿಗಳಿಗೆ ತೊಂದರೆಯುಂಟು ಮಾಡುತ್ತಾರೋ ಮತ್ತು ಘಾಸಿಗೊಳಿಸುತ್ತಾರೋ, ಇತರೆ ಜೀವಿಗಳಬಗ್ಗೆ ಕರುಣೆ ತೋರುವುದಿಲ್ಲವೋ ಅವರನ್ನು ಜಾತಿ ಭ್ರಷ್ಟನೆಂದು ತಿಳಿಯಬೇಕು.

शौर्यं तु जगद्-विजयक्षमं जीवने च सुप्रतिष्ठा
कृतिषु च कीर्त्तिमेतत् सर्वमीश्वरानुग्रहे पूर्णतया निर्भरम्
निश्चितं वै निर्णयमेतद् आस्तिक्यवुद्धेर्विशिष्टलक्षणम् ॥96॥

ಶೌರ್ಯಂ ತು ಜಗದ್ವಿಜಯಕ್ಷಮಂ ಜೀವನೇ ಚ ಸುಪ್ರತಿಷ್ಠಾ
ಕೃತಿಷು ಚ ಕೀರ್ತಿಮೇತತ್ ಸರ್ವಮೀಶ್ವರಾನುಗ್ರಹೇ ಪೂರ್ಣತಯಾ ನಿರ್ಭರಮ್
ನಿಶ್ಚಿತಂ ವೈ ನಿರ್ಣಯಮೇತದ್ ಆಸ್ತಿಕ್ಯ ಬುದ್ಧೇರ್ವಿಶಿಷ್ಟ ಲಕ್ಷಣಮ್ ॥96॥

ಪ್ರಪಂಚವನ್ನು ಗೆಲ್ಲುವ ಧೈರ್ಯ ಹಾಗೂ ತನ್ನ ಜೀವನ ಮತ್ತು ಸಾಧನೆಗಳಲ್ಲಿ ಪರಮೇಶ್ವರನ ಅವಲಂಬನೆಯೇ ಆಸ್ತಿಕ ಬುದ್ಧಿಯುಳ್ಳವನ ವಿಶಿಷ್ಟ ಲಕ್ಷಣ ವಾಗಿರುತ್ತದೆ.

यावदायुस्तावदिह सदा दानशीलो नरः प्रेत्यास्माल्लोकात् ।
पश्यति स्वर्गद्वारं विशालं तस्य कृते उन्मुक्तमनर्गलम् ॥97॥

ಯಾವದಾಯುಸ್ತಾವದಿಹ ಸದಾ ದಾನಶೀಲೋ ನರಃ ಪ್ರೇತ್ಯಾಸ್ಮಾಲ್ಲೋಕಾತ್
ಪಶ್ಯತಿ ಸ್ವರ್ಗ ದ್ವಾರಂ ವಿಶಾಲಂ ತಸ್ಯ ಕೃತೇ ಉನ್ಮುಕ್ತಮನರ್ಗಲಮ್ ।।97।।

ಈ ಪ್ರಪಂಚದಲ್ಲಿ ಜೀವಿಸುರುವಷ್ಟು ಕಾಲ ದಾನಶೀಲನಾಗಿರುವ ಮನುಷ್ಯನು ಈ ಲೋಕವನ್ನು ಬಿಟ್ಟಾಗ ಸ್ವರ್ಗವ ಬಾಗಿಲು ತನಗಾಗಿ ತೆರೆದಿರುವುದನ್ನು ಕಾಣುತ್ತಾನೆ.

हृदयं यत् सदा जीवप्रेमपूरितं तदभीष्टतममिह संसारे ॥98॥

ಹೃದಯಂ ಯತ್ಸದಾ ಜೀವಪ್ರೇಮಪೂರಿತಂ ತದಭೀಷ್ಟತಮಮಿಹ ಸಂಸಾರೇ ।।98।।

ಪರಮೇಶ್ವರನ ಸೃಷ್ಟಿಯಲ್ಲಿರುವ ಎಲ್ಲವನ್ನು ಪ್ರೀತಿಸುವುದೇ ಈ ಪ್ರಪಂಚದಲ್ಲಿ ಅತಿ ಆವಶ್ಯಕವಾದುದು.

आस्ते भग आसीनस्य - चरैवेति चरैवेति ।
चरन् वै मधु विन्दति चरन् स्वादु उदुम्वरम् ॥
पश्य सुर्यस्य श्रेमाणं यो न तन्द्रयते चरन् ।
चरैवेति चरैवेति चरैवेति ॥99॥

ಅಸ್ತೇ ಭಗ ಅಸೀನಸ್ಯ ಚರೈವೇತಿ ಚರೈವೇತಿ ।
ಚರನ್ ವೈ ಮಧು ವಿಂದತಿ ಚರನ್ ಸ್ವಾದು ಉದುಂಬರಮ್ ।।
ಪಶ್ಯ ಸೂರ್ಯಸ್ಯ ಶ್ರೇಮಾಣಂ ಯೋನ ತಂದ್ರಯತೇ ಚರನ್ ।
ಚರೈವೇತಿ ಚರೈವೇತಿ ಚರೈವೇತಿ ।।99।।

ಒಬ್ಬನ ಅದೃಷ್ಟ ಅವನು ಕುಳಿತಿದ್ದರೆ ಕುಳಿತಿರುತ್ತದೆ ಆದುದರಿಂದ ಚಲಿಸುತ್ತಿರಬೇಕು. ಚಲಿಸುತ್ತಿರುವವರಿಗೆ ಜೇನು ದೊರಕುತ್ತದೆ. ಚಲಿಸುತ್ತಿದ್ದರೆ ಸಿಹಿಯಾದ ಉದಂಬರದ ಹಣ್ಣು ಸಿಕ್ಕುತ್ತದೆ. ನಿರಂತರ ಚಲಿಸುತ್ತಿರುವ ಸೂರ್ಯನ ಹೊಳಪು ಎಷ್ಟು ಸುಂದರವಾಗಿರುತ್ತದೆ. ನೋಡಿ, ಅವನಿಗೆ ದಣಿವೇ ಇಲ್ಲ. ಆದುದರಿಂದ ಯಾವಾಗಲೂ ಚಲಿಸುತ್ತಿರಿ.

ॐ भद्रं कर्णेभिः शृणुयाम देवाः । भद्रं पश्येमाक्षभिर्यजत्राः ।
स्थिरैरङ्गैस्तुष्टुवांसस्तनूभिः । व्यशेम देवहितं यदायुः ॥
ॐ शान्तिः शान्तिः शान्तिः ॥100॥

ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ । ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗಸ್ತುಷ್ಟುವಾಂಸಸ್ತೂ ನಿಭಿಃ ವ್ಯಶೇಮ ದೇವಹಿತಂ ಯದಾಯುಃ ।।
ಓಂ ಶಾಂತಿಃ ಶಾಂತಿಃ ಶಾಂತಿಃ ।।100।।

ಓ ಪರಮೇಶ್ವರನೆ ! ನಮ್ಮ ಕಿವಿಯಿಂದ ಒಳ್ಳೆಯ ಮಾತುಗಳನ್ನು ಕೇಳವಂತಾಗಲಿ, ನಮ್ಮ ಕಣ್ಣುಗಳು ಒಳ್ಳೆಯ ವಸ್ತುಗಳನ್ನು ನೋಡುವಂತಾಗಲಿ. ನಾವು ದೃಢವಾದ ದೇಹದಿಂದಲೂ ಮತ್ತು ಅವಯವದಿಂದ ನಿನ್ನ ಸ್ತೋತ್ರವನ್ನು ಮಾಡುವಂತಾಗಲಿ ಮತ್ತು ನೀನು ವಿಧಿಸಿರುವಂತೆ ಪೂರ್ಣ ಆಯುಷ್ಯವನ್ನು ಜೀವಿಸುವಂತಾಗಲಿ.

# ಶ್ರೀ ಕೃಷ್ಣ ಮತ್ತು ಭಗವದ್ಗೀತೆ

मुकं करोति वाचालं, पंगुं लंघयते गिरिम् ।
यत् कृपा तमहं वन्दे, परमानन्द माधवम् ॥

ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇಗಿರಿಮ್
ಯತ್ ಕೃಪಾ ತಮಹಂ ವಂದೇ ಪರಮಾನಂದ ಮಾಧವಮ್ ।।

ಯಾವ ಪರಮಾತ್ಮನ ಕೃಪೆಯಿಂದ ಮೂಗನನ್ನು ವಾಕ್ಪಟುತ್ವ ಉಳ್ಳವನನ್ನಾಗಿಯೂ, ಕಾಲಿಲ್ಲದವನನ್ನು ಪರ್ವತವನ್ನು ಕೂಡ ದಾಟುವ ಸಾಮರ್ಥ್ಯ ಉಳ್ಳವನನ್ನಾಗಿಯೂ ಮಾಡುವುದೋ, ಅಂತಹ ಪರಮಾನಂದ ಸ್ವರೂಪನಾದ ಮಾಧವನಿಗೆ ನಮಸ್ಕರಿಸುತ್ತೇನೆ.

ಶ್ರೀ ಕೃಷ್ಣನ ಜನನ ಕ್ರಿ.ಪೂ. 3500 ರಲ್ಲಿ ಮಥುರೆಯಲ್ಲಾಯಿತು. ಆಗ ಮಥುರೆಯನ್ನು ಕಂಸನೆಂಬ ರಾಜನು ಆಳುತ್ತಿದ್ದನು. ಕಂಸನು ಕೃಷ್ಣನ ಸೋದರ ಮಾವ. ಕೃಷ್ಣನು ವಸುದೇವದೇವಕಿಯರ ಎಂಟನೆಯ ಮಗು.

ಕಂಸನು ಒಬ್ಬ ನಿರಂಕುಶ ರಾಜನಾಗಿದ್ದನು. ಅವನು ತನ್ನ ತಂದೆ ಉಗ್ರಸೇನನನ್ನೇ ಸೆರೆಮನೆಯಲ್ಲಿ ಹಾಕಿ ಮಥುರೆಯ ಸಿಂಹಾಸನವನ್ನೇರಿದನು. ''ನಿನ್ನ ತಂಗಿ ದೇವಕಿಯ ಎಂಟನೆಯ ಮಗುವಿನಿಂದ ನಿನ್ನ ಮರಣ'' ಎಂಬ ಅಶರೀರವಾಣಿಯನ್ನು ತನ್ನ ತಂಗಿ ದೇವಕಿಯ ವಿವಾಹ ವಸುದೇವನೊಡನೆ ಆದ ಕೊಡಲೇ ಅವರನ್ನು ಸೆರೆಮನೆಗೆ ತಳ್ಳಿದನು.

ಪ್ರತಿಸಾರಿ ದೇವಕಿಗೆ ಪ್ರಸವವಾದ ಕೊಡಲೇ ಕಂಸನೇ ಸ್ವತಃ ಆ ಮಗುವನ್ನು ಕೊಲ್ಲುತ್ತಿದ್ದನು. ದೇವಕಿಯು ಎಂಟನೆಯಸಾರಿ ಗರ್ಭಧರಿಸಿದಾಗ ಶ್ರೀ ಮಹಾವಿಷ್ಣುವೇ ಅವಳ ಎಂಟನೆಯ ಮಗುವಾಗಿ ಜನಿಸಿದನು. ಈ ಮಗುವೇ ಶ್ರೀ ಕೃಷ್ಣ.

ಶ್ರೀ ಕೃಷ್ಣನ ಜನ್ಮವಾದ ರಾತ್ರಿಯು ಗುಡುಗು, ಬಿರುಗಾಳಿ, ಮಿಂಚು ಮತ್ತು ಪ್ರವಾಹದಿಂದ ಕೂಡಿತ್ತು. ಅವನು ಹುಟ್ಟಿದ ಸಮಯದಲ್ಲಿ ''ಈ ಮಗುವನ್ನು ಯಮುನಾ ನದಿಯ ಆಚೆ ದಡದಲ್ಲಿರುವ ಗೋಕುಲಕ್ಕೆ ತೆಗೆದುಕೊಂಡು ಹೋಗಿ ಬಿಟ್ಟು ಬರುವಂತೆ'' ಅಶರೀರವಾಣಿ ಕೇಳಿತು. ಅದರಂತೆ ವಸುದೇವನು ಮಗುವನ್ನು ಎತ್ತಿಕೊಂಡು ಹೊರಡಲು ಸೆರೆಮನೆಯ ಬಾಗಿಲುಗಳು ತಾನಾಗಿಯೇ ತೆರೆದುಕೊಂಡಿತು. ಯಮುನಾ ನದಿಯ ಹತ್ತಿರ ಬಂದಾಗ ಗಾಳಿ ಮತ್ತು ಬಿರುಗಾಳಿಯಿಂದಾಗಿ ಅಬ್ಬರದಿಂದ ಕೂಡಿದ್ದ ನದಿಯು ತಾನಾಗಿ ದಾರಿ ಮಾಡಿ ಕೊಟ್ಟಿತು.

ವಸುದೇವನು ಎದುರು ದಡವನ್ನು ಸೇರಿದಾಗ ಗೋಕುಲದಲ್ಲಿ ಎಲ್ಲರೂ ಗಾಢನಿದ್ದೆಯಲ್ಲಿದ್ದರು. ವಸುದೇವನು ಗೋಪಾಲಕರ ಮುಖಂಡನಾದ ನಂದನ ಹತ್ತಿರ ಮಗುವನ್ನು – ಕೃಷ್ಣನನ್ನು–ಕೊಟ್ಟನು, ಅವನು ಅದನ್ನು ಯಶೋಧೆಯ ಮಗ್ಗುಲಲ್ಲಿ ಮಲಗಿಸಿದನು. ಯಶೋಧೆ ಶ್ರೀ ಕೃಷ್ಣನ ಸಾಕು ತಾಯಿ. ಕೃಷ್ಣ ಎಂದರೆ ಕಪ್ಪು ಎಂದು ಅರ್ಥ. ಶ್ರೀ ಕೃಷ್ಣನ ಬಣ್ಣ ಕಪ್ಪು. ಹಿಂದೂಗಳಿಗೆ ಹೀಗಾಗಿ ಕಪ್ಪುವರ್ಣದ ಜನರ ಮೇಲೆ ವಿಶೇಷ ಪ್ರೀತಿ ಮತ್ತು ಗೌರವ ದೇವಕಿಯು ಎಂಟನೆಯ ಮಗುವಿಗೆ ಜನ್ಮ ನೀಡಿದ ಸುದ್ದಿ ತಿಳಿದ ಕಂಸನು ಕೊಡಲೇ

ಮಗುವನ್ನು ಕೊಲ್ಲಲು ಸೆರೆಮನೆಗೆ ಧಾವಿಸಿದನು. ತನ್ನನ್ನು ಕೊಲ್ಲಲು ಹುಟ್ಟಿರುವ ಮಗುವು ಬೃಂದಾವನದಲ್ಲಿ ಬೆಳೆಯುತ್ತಿರುವ ವಿಷಯವನ್ನು ತಿಳಿದು ರೊಚ್ಚಿಗೆದ್ದ ಕಂಸನು ಬೃಂದಾವನ ಹಾಗೂ ಅದರ ಸುತ್ತ ಮುತ್ತ ಹುಟ್ಟಿದ ಮಕ್ಕಳನ್ನು ಕೊಲ್ಲಲು ಆಜ್ಞೆ ಮಾಡಿದನು. 'ಸನಾತನ ಧರ್ಮ' ವನ್ನು ಪುನಃ ಪ್ರತಿಷ್ಠಾಪನೆ ಮಾಡಲು ಜನಿಸಿದ್ದ ಕೃಷ್ಣನು ಈ ಆಜ್ಞೆಯಿಂದಾಗಿ ಸುರಕ್ಷಿತವಾಗಿ ಪಾರಾದ ಮಾತ್ರವಲ್ಲ ಕಂಸನು ಕೃಷ್ಣನನ್ನು ಕೊಲ್ಲಲು ಮಾಡಿದ ಪ್ರಯತ್ನಗಳೆಲ್ಲ ವಿಫಲವಾಯಿತು. ಹೀಗಾಗಿ ಕಂಸನು ರಾಜಿ ಮಾಡಿಕೊಳ್ಳುವ ನೆಪದಿಂದ ಶ್ರೀ ಕೃಷ್ಣನನ್ನು ಅಕ್ರೂರನ ಮೂಲಕ ಮಥುರೆಗೆ ಕರೆಸಿಕೊಂಡನು.

ಕೃಷ್ಣನು ಮಥುರೆಗೆ ಬಂದಕೊಡಲೇ ತಾನು ನೇಮಿಸಿದ ಹಂತಕರಿಂದ ಅವನನ್ನು ಕೊಲ್ಲಿಸುವ ಪ್ರಯತ್ನ ಮಾಡಿದನು ಅದು ಫಲಿಸದಾಗ ಮದವೇರಿದ ಆನೆಯ ಮುಖಾಂತರ ಕೊಲ್ಲಿಸುವ ಯತ್ನ ಮಾಡಿದನು. ಆದರೆ ಕೃಷ್ಣನೇ ಕಂಸನನ್ನು ಮುಷ್ಠಿಯದ್ಧದಲ್ಲಿ ಕೊಂದು ಉಗ್ರಸೇನನನ್ನು ಪುನಃಸಿಹಾಸನದಲ್ಲಿ ಕೂರಿಸಿದನು.

ಶ್ರೀ ಕೃಷ್ಣನ ಬಾಲ್ಯದಲ್ಲಿ ಅವನನ್ನು ಕೊಲ್ಲುವ ಅಪಾಯಕಾರಿ ಪ್ರಯತ್ನಗಳು ಬಹಳನಡೆದವು. ಅವನು ಗೋವಳರು ಮತ್ತು ಗೋಪಿಕಯರ ಮಧ್ಯೆ ಬೃಂದಾವನದಲ್ಲಿ ಬೆಳೆದನು. ಅವನು ಚೆನ್ನಾಗಿ ಕೊಳಲನು ಬಾರಿಸುತ್ತಿದ್ದನು. ಅವನು ಬಾಲ್ಯದಲ್ಲಿ ತನ್ನ ಗೆಳೆಯರಿಗೆ (ಯೌವನದಲ್ಲಿರುವ ಹೆಚ್ಚಿನ ಉತ್ಸಾಹಮತ್ತು ಶಕ್ತಿಯನ್ನು ಸದುಪಯೋಗಪಡಿಸಿ ಕೊಳ್ಳಲು) ಕಲಿಸಿದ ನೃತ್ಯ ರೂಪಕ್ಕೆ 'ರಾಸ ಕ್ರೀಡೆ' ಎನ್ನುತ್ತಾರೆ. ಈಗಲೂ ಈ ನೃತ್ಯರೂಪವನ್ನು ಅಭ್ಯಾಸ ಮಾಡುತ್ತಾರೆ.

ರಾಧ ಎಂಬ ಗೋಪಿಕೆ ಕೃಷ್ಣನ ಆತ್ಮೀಯ ಗೆಳತಿ ಮತ್ತು ಅನುಯಾಯಿಯಾಗಿದ್ದಳು. ಶ್ರೀ ಕೃಷ್ಣನು ಹದಿನಾಲ್ಕನೆಯ ವರುಷದವರೆಗೆ ತನ್ನ ಬಾಲ್ಯವನ್ನು ಹಾಡು, ನೃತ್ಯ ಮತ್ತು ಬಾಲಲೀಲೆಗಳಲ್ಲಿಕಳೆದನು.

ತನ್ನ ಜೀವಮಾನವೆಲ್ಲ ಕೃಷ್ಣನು ಭಾಗ್ಯಹೀನರಿಗಾಗಿ ಹೋರಾಡಿದನು. ಈ ರೀತಿ ಮಾಡಲು ತನ್ನ ಕಾಲದ ಬಲಿಷ್ಠ ರಾಜಕಾರಣಿಗಳೊಂದಿಗೆ ನಿರಂತರ ಹೋರಾಡಬೇಕಾಯಿತು.

ಶ್ರೀ ಕೃಷ್ಣನಗುರಿ ಸನಾತನ ಧರ್ಮದ ಕೇಂದ್ರೀಕೃತ ವ್ಯವಸ್ಥೆಯನ್ನು ಸ್ಥಾಪಿಸುವ ಆಂದೋಲನವನ್ನು ಪ್ರಾರಂಭಿಸುವುದಾಗಿತ್ತು. ರಾಜನಾದ ಯುಧಿಷ್ಠಿರನನ್ನು ನ್ಯಾಯಪರವಾದ ರಾಜ್ಯವನ್ನು – ಕಡುಬಡವನೂ ಕೂಡ ಗೌರವಯುತವಾಗಿ ಜೀವಿಸುವ ಮತ್ತು ಸನಾತನಧರ್ಮದ ಕೇಂದ್ರೀಕೃತ ವ್ಯವಸ್ಥೆಯಲ್ಲಿನ್ಯಾಯವನ್ನು ಪಡೆಯುವಂತಾಗಬೇಕೆಂದು – ಸ್ಥಾಪಿಸುವ ಉದ್ದೇಶದಿಂದ ಬೆಂಬಲಿಸಿದನು.

ಶ್ರೀ ಕೃಷ್ಣನ ಕಾಲದಲ್ಲಿ ಬಲಿಷ್ಠನೂ ಕ್ರೂರಿಯೂ ಆದ ಜರಾಸಂಧ (ಕಂಸನ ಮಾವ) ಮಗಧ ದೇಶವನ್ನು ಆಳುತ್ತಿದ್ದನು. ಕಂಸನ ಸಾವಿನ ಸೇಡು ತೀರಿಸಲು ಕಾಲಯವ ಎಂಬ ವಾಯವ್ಯ ಪ್ರಾಂತದ ಬುಡಕಟ್ಟು ಜನಾಂಗದ ವಿದೇಶಿ ಮುಖಂಡನನ್ನು ಆಹ್ವಾನಿಸಿದನು. ಕಾಲಯವನು ತನ್ನ ಸೈನ್ಯದೊಂದಿಗೆ ಹಿಂದೂಕುಶ್ ಕಣಿವೆಯನ್ನು ದಾಟಿ ಬಂದು ಕೃಷ್ಣನ ಮಥುರೆಯ ಮೇಲೆ ದಾಳಿ ಮಾಡಿದನು. ಯುದ್ಧದಲ್ಲಿ ಕೃಷ್ಣನು ಕಾಲಯವನನ್ನು ಕೊಂದನು.

ಆದರೂ ಜರಾಸಂಧನು ಶ್ರೀ ಕೃಷ್ಣನ ಅನುಯಾಯಿಗಳನ್ನು ಹಿಂಸಿಸುವ, ಕೊಲ್ಲುವ, ಅಂಗಹೀನರನ್ನಾಗಿ ಮಾಡುವ, ಸೆರೆಮನೆಗೆ ಹಾಕುವ ಕೆಲಸವನ್ನು ನಿರಂತರವಾಗಿ ಮಾಡುತ್ತಲೇ ಇದ್ದನು. ನರಮೇಧ ನಡೆಸುವ ಉದ್ದೇಶದಿಂದ ಜರಾಸಂಧನು ಆಗಾಗ ಮಥುರೆಗೆ ಮುತ್ತಿಗೆ ಹಾಕಿದನು. ಮಥುರೆಗೆ ಬೇಕಾದ ದಿನ ನಿತ್ಯದ

ಅವಶ್ಯಕತೆಗಳ ಸರಬರಾಜನ್ನು ತಡೆಯಲು ಜರಾಸಂಧನು ಒಂದು ದೊಡ್ಡ ಸೈನ್ಯವನ್ನೇ ನೇಮಿಸಿದನು. ಪ್ರತಿಸಾರಿಯೂ ಶ್ರೀ ಕೃಷ್ಣನು ಧೈರ್ಯದಿಂದ ಕಾದಾಡಿ ಜರಾಸಂಧನನ್ನು ಸೋಲಿಸುತ್ತಿದ್ದನು.

ಜರಾಸಂಧನ ಹತ್ತಿರವಿರುವ ವಿಪುಲ ಧನ ಸಂಪತ್ತು ಮತ್ತು ಇತರ ಸಂಪನ್ಮೂಲಗಳನ್ನು ಗಣನೆಗೆ ತೆಗೆದುಕೊಂಡರೆ ಅವನನ್ನು ನಾಶಪಡಿಸಲು ದೀರ್ಘಕಾಲ ಬೇಕಾಗುವುದೆಂದು ಮನಗಂಡ ಕೃಷ್ಣನು ಇನ್ನಷ್ಟು ರಕ್ತಪಾತವನ್ನು ತಡೆಗಟ್ಟಬೇಕೆಂದು ನಿರ್ಧರಿಸಿದನು.

ಹೀಗಾಗಿ ಕೃಷ್ಣನು ತನ್ನ ಅನುಯಾಯಿಗಳೊಂದಿಗೆ ಮಥುರೆಯಿಂದ ಒಂದು ಸಾವಿರ ಮೈಲು ದೂರದಲ್ಲಿ – ಪಶ್ಚಿಮ ಕರಾವಳಿಯ ತೀರಕ್ಕೆ ವಲಸೆ ಹೊರಟು ದ್ವಾರಕಾ ನಗರವನ್ನು ಸ್ಥಾಪಿಸಿದನು.

ತಾನೇ ಸ್ವತಃ ಹೆಸರಾಂತ ಯೋಧನಾಗಿದ್ದರೂ, ಬುದ್ಧಿವಂತನಾದ ರಾಯ ಭಾರಿಯಾಗಿದ್ದರೂ, ಮುತ್ಸದ್ದಿಯಾಗಿದ್ದರೂ ಸಿಂಹಾಸನಕ್ಕೆ ಆಸೆ ಪಡದೆ ದ್ವಾರಕೆಯ ಆಡಳಿತವನ್ನು ಕೃಷ್ಣನು ತನ್ನ ವೃಷ್ಟಿ ಬಾಂಧವರಿಗೆ ವಹಿಸಿದ್ದನು.

ಭಾಗ್ಯಹೀನರಿಗೆ ನ್ಯಾಯ ದೊರಕಿಸುವಸಲುವಾಗಿ ಕೃಷ್ಣನು ಬಹಳಷ್ಟು ದುಷ್ಟ ರಾಜರನ್ನು ನಿಗ್ರಹಿಸಿದ್ದರೂ ಕೊಡ ತಾನು ಸಿಂಹಾಸನವನ್ನೇರಲಿಲ್ಲ. ತಾನು ನಿಗ್ರಹಿಸಿ ರಾಜ್ಯದ ಜನತೆಗೇ ಸಿಂಹಾಸನವನ್ನು ಕೊಟ್ಟು ಬಿಡುತ್ತಿದ್ದನು.

ತನ್ನ ಸ್ನೇಹಿತರ ಉತ್ಸಾಹಪೂರ್ವಕ ಬೇಡಿಕೆಯನ್ನು ಮನ್ನಿಸಿ ಬಹಳ ದೀರ್ಘ ಕಾಲದ ನಂತರ ತನ್ನ 53ನೇ ವಯಸ್ಸಿನಲ್ಲಿ ಕೃಷ್ಣನು ಬೃಂದಾವನಕ್ಕೆ ಭೇಟಿ ನೀಡಿದನು. ಅವನು ಬಂದಾಗ ಅಲ್ಲಿನ ಜನಗಳು ಅತ್ಯುತ್ಸಾಹದಿಂದ ಅವನ ರಥದ ಕುದುರೆಗಳನ್ನು ಬಿಚ್ಚಿ ರಥವನ್ನು ತಾವೇ ಎಳೆದರು. ಈ ಘಟನೆಯ ಜ್ಞಾಪಕಾರ್ಥವಾಗಿ ಈಗಲೂ 'ರಥ ಜಾತ್ರೆ'ಯನ್ನು ಆಚರಿಸುತ್ತಾರೆ.

ಶ್ರೀ ಕೃಷ್ಣನು ಯಾವಾಗಲೂ ತೀವ್ರತರವಾದ ಚಟುವಟಿಕೆಗಳ ನಡುವೆ ಇದ್ದರೂ ಶಾಂತವಾಗಿರುತ್ತಿದ್ದನು. ಅವನು ಯಾವಾಗಲೂ ತನಗೆ ತೊಂದರೆಯಾದರೂ, ಗಂಭೀರವಾದ ಪ್ರಚೋದನೆಗಳಿದ್ದರೂ ತನ್ನಪ್ರಾಣಕ್ಕೆ ಅಪಾಯಬಂದರೂ ಬಲಹೀನರ ಮತ್ತು ಭಾಗ್ಯಹೀನರ ಪರವಾಗಿರುತ್ತಿದ್ದನು.

ಪ್ರಾಗ್ಜ್ಯೋತಿಷಪುರದಲ್ಲಿದ್ದ ಒಬ್ಬ ದುಷ್ಟ ದೊರೆಯು ಸಾವಿರದ ಆರುನೂರು ಯುವತಿಯರನ್ನು ಅವನ ಸೇವೆ ಮಾಡುವ ಸಲುವಾಗಿ ಸೆರೆಮನೆಯಲ್ಲಿಟ್ಟಿದ್ದನು. ತನ್ನ ರಾಜ್ಯದ ಪ್ರಜೆಗಳನ್ನು ಬಹಳವಾಗಿ ಹಿಂಸಿಸುತ್ತಿದ್ದನು. ಪ್ರಜೆಗಳು ಕೃಷ್ಣನಿಗೆ ಮೊರೆ ಇಡಲಾಗಿ ಕೃಷ್ಣನು ಹೋರಾಟಮಾಡಿ ಪ್ರಾಗ್ಜ್ಯೋತಿಷಪುರದ ರಾಜನನ್ನು ಕೊಂದನು. ನಂತರ ರಾಜ್ಯವನ್ನು ಅವನ ಮಗನಿಗೇ ನೀಡಿದನು. ಸೆರೆಮನೆಯಲ್ಲಿದ್ದ ಸ್ತ್ರೀಯರನ್ನು ಬಿಡುಗಡೆ ಮಾಡಿದನಂತರ ಅವರನ್ನು ಸಾಕುವ ಮತ್ತು ಅವರ ಗೌರವನ್ನು ಕಾಪಾಡುವ ಪ್ರಶ್ನೆ ಬರುತ್ತದೆ. ಈ ಅಭಾಗಿನಿಯರ ಜೀವ ಮತ್ತು ಗೌರವವನ್ನು ಕಾಪಾಡುವ ಉದ್ದೇಶದಿಂದ ಅವರನ್ನು ತನ್ನ ಹೆಂಡತಿಯರಂತೆ ತಿಳಿದು ಅವರ ಜೀವನಕ್ಕೆ ವ್ಯವಸ್ಥೆ ಮಾಡುವ, ಅವರನ್ನು ರಕ್ಷಿಸುವ ಮತ್ತು ಅವನ ಹೆಂಡತಿಯರನ್ನು ಗೌರವಿಸುವಂತೆಯೇ ಗೌರವಿಸುವ ಜವಾಬ್ದಾರಿಯನ್ನು ಜನರೇ ಮಾಡಬೇಕೆಂದು ಸಾರ್ವಜನಿಕ ಸಭೆಯಲ್ಲಿ ಘೋಷಿಸುತ್ತಾನೆ. ಆದರೆ ಈ ಸ್ತ್ರೀಯರೊಂದಿಗೆ ದೈಹಿಕ ಸಂಬಂಧ ಶ್ರೀಕೃಷ್ಣನಿಗಿರಲಿಲ್ಲ.

ಶ್ರೀ ಕೃಷ್ಣನು ಘನವಾದ ವ್ಯಕ್ತಿತ್ವವುಳ್ಳವನಾಗಿದ್ದನು. ಅವನು ಬಹಳ ಕಾರುಣ್ಯಮಯಿಯೂ,

ಪ್ರೀತಿಪಾತ್ರನಾದವನೂ, ಪ್ರತಿಭಾವಂತಪಂಡಿತನೂ, ಶ್ರೇಷ್ಠ ಗಣಿತಜ್ಞನೂ ಶ್ರೇಷ್ಠ ವಿಜ್ಞಾನಿಯೂ ಕಲಾಕಾರನೂ ಮತ್ತು ಆಕರ್ಷಕವಾಗಿ ಕೊಳಲನ್ನು ಊದುವವನೂ ಆಗಿದ್ದನು. ಅವನು ಅತಿಬಲಿಷ್ಠನಾದ ವ್ಯಕ್ತಿಯೂ, ರಾಜಕೀಯ ಮತ್ಸದ್ದಿಯೂ ಮತ್ತು ಯಾರಿಂದಲೂ ಸೋಲಿಸಲ್ಪಡದ ಯೋಧನೂ ಆಗಿದ್ದನು.

ಶ್ರೀಕೃಷ್ಣನು ಸರಳ ಜೀವನ  ನಡೆಸುವ ಜನ ಸಮೂಹ ಇಷ್ಟಪಡುವ ವ್ಯಕ್ತಿ ಯಾಗಿದ್ದನು. ಶ್ರೀಕೃಷ್ಣನು ಪರಮೇಶ್ವರನ ಮಗನೆಂದು ಹಿಂದೂಗಳು ನಂಬುತ್ತಾರೆ. ಪರಮೇಶ್ವರನೇ ತನ್ನ ಮಗನಾದ ಶ್ರೀಕೃಷ್ಣನನ್ನು ಎಲ್ಲ ರೀತಿಯ ಕಷ್ಟಗಳನ್ನನುಭವಿಸಲು ಅದರಿಂದ ಜನಸಮೂಹದ ಕಷ್ಟಗಳನ್ನು ಕಡಿಮೆ ಮಾಡಲು, ಭೂಮಿಗೆ ಕಳುಹಿಸಿದನು. ಅರಮನೆಯಲ್ಲೇ ವಾಸಮಾಡುವ ಚಿನ್ನದ ಮಂಚದಲ್ಲೇ ಮಲಗುವ ಅವಕಾಶವಿದ್ದರೂ ಶ್ರೀಕೃಷ್ಣನು ಕಾಡಿನಲ್ಲಿ ಒಬ್ಬ ಸಾಮಾನ್ಯ ಮನುಷ್ಯನಂತೆ ಮರದ ಕೆಳಗೆ ಮಲಗುತ್ತಿದ್ದನು.

ಕ್ರಿ. ಪೂ. 3430  ರಲ್ಲಿ ಶ್ರೀಕೃಷ್ಣನು ಒಂದು ಮರದ ಕೆಳಗೆ ಮಲಗಿದ್ದನು. ದೂರದಿಂದ ಅವನ ಗುಲಾಬಿ ಬಣ್ಣದ ಪಾದವನ್ನು ದೂರದಿಂದ ನೋಡಿದ ಒಬ್ಬ ಬೇಡನು ಅದು ಒಂದು ಹಕ್ಕಿ ಎಂದು ತಿಳಿದು ಅದಕ್ಕೆ ಗುರಿ ಇಟ್ಟು ಒಂದು ವಿಷಪೂರಿತ ಬಾಣವನ್ನು ಹೊಡೆದನು. ನಂತರ ತನ್ನಿಂದಾಗೆ ಘೋರವಾದ ತಪ್ಪಿನ ಅರಿವಾಗಿ ದುಃಖ ಪೂರಿತನಾದ ಬೇಡನು ಆತ್ಮಹತ್ಯೆ ಮಾಡಿಕೊಳ್ಳ ಬೇಕೆಂದುಕೊಂಡನು, ಆದರೆ ಕೃಷ್ಣನು ಅವನನ್ನು ನಗು ನಗುತಾ ಹರಸಿ ತನ್ನ ದೇಹ ತ್ಯಾಗ ಮಾಡಿದನು.

ಶ್ರೀಕೃಷ್ಣನು ದೇಹ ತ್ಯಾಗ ಮಾಡಿ ಸಾವಿರಾರು ವರುಷಗಳಾದರೂ ಅವನ ನೆನಪು ಹಾಗೂ ಅವನ ಕೊಳಲಿನ ಮಧುರನಾದ ಕೋಟ್ಯಂತರ ಭಕ್ತರ ನೆನಪಿನಲ್ಲಿ ಇನ್ನೂ ಹಚ್ಚ ಹಸುರಾಗಿದೆ.

ಶ್ರೀಕೃಷ್ಣನನ್ನು ಬೇರೆ ಬೇರೆ ರೂಪದಲ್ಲಿ ಪೂಜಿಸುತ್ತಾರೆ. ಅವನು ಸ್ತ್ರೀಪುರುಷರ ಪ್ರೀತಿಪಾತ್ರನಾದ ಆದರ್ಶ, ಮಕ್ಕಳ ಮತ್ತು ವಯಸ್ಕರ ಆದರ್ಶ ಕೂಡ. ಅವನು 'ವಿರಕ್ತ ಸನ್ಯಾಸಿ' ಮತ್ತು ಆಶ್ಚರ್ಯಕರ ಗೃಹಸ್ಥನೂ ಹೌದು. ಅವನಿಗೆ ಎಲ್ಲರೀತಿಯ ಪ್ರಭಾವ ಮತ್ತು ಸಂಪತ್ತು ಇದ್ದರೂ ಅವನು ಆದರ್ಶಪ್ರಾಯವಾದ ತ್ಯಾಗಿಯಾಗಿ ಜೀವಿಸಿದನು.

ಶ್ರೀಕೃಷ್ಣನ ದೇಹಾವಸಾನವಾದನಂತರ ಸಮುದ್ರದ ತಳದಲ್ಲಿ ಉಂಟಾದ ಭೂಕಂಪದಿಂದಾಗಿ (ಕ್ರಿ. ಪೂ. 3430 ರಲ್ಲಿ) ದ್ವಾರಕೆ ಮತ್ತು ಅರಬ್ಬೀ ಸಮುದ್ರದ ತೀರಪ್ರದೇಶಕ್ಕೆ ಉಬ್ಬರದಲೆಗಳು ಅಪ್ಪಳಿಸಿದವು.

ಶ್ರೀಕೃಷ್ಣನು ಪರಮೇಶ್ವರನ ಪ್ರತಿನಿಧಿ, ಎಲ್ಲರ ವಿಮೋಚಕ. ಅವನನ್ನು ಪ್ರೀತಿಸುವವರಿಗೆ ಯಶಸ್ಸು, ಸಹಾಯ ಮತ್ತು ಶಾಂತಿಯನ್ನು ಕರುಣಿಸುತ್ತಾನೆ. ಬಡವರನ್ನು ಮತ್ತು ದುರ್ಬಲರನ್ನು ಅವನು ದಬ್ಬಾಳಿಕೆಯಿಂದ ರಕ್ಷಿಸುತ್ತಾನೆ. ಕಷ್ಟಪಡುವ ಬಡಜನತೆಗಾಗಿ ಅವನು ತನ್ನ ಸಂತೋಷವನ್ನು ತ್ಯಾಗ ಮಾಡಿದವನಾಗಿದ್ದಾನೆ. ಅವನು ರಾಜನಾಗಲು ಒಪ್ಪಲಿಲ್ಲ. ಅವನು ಯಾವಾಗಲೂ ಸಾಮಾನ್ಯ ಜನರ ಏಳ್ಗೆಯನ್ನೇ ಬಯಸುತ್ತಿದ್ದನು.

ತಮ್ಮನ್ನು ಶ್ರೀಕೃಷ್ಣನಿಗೆ ಒಪ್ಪಿಸಿಕೊಂಡವರ ಎಲ್ಲನೋವು ಮತ್ತು ಕಷ್ಟಗಳಿಂದ ಮುಕ್ತಿಪಡೆದು.

ತಮ್ಮನ್ನು ಶ್ರೀಕೃಷ್ಣನಿಗೆ ಒಪ್ಪಿಸಿ ಕೊಂಡವರ ಎಲ್ಲ ನೋವು ಮತ್ತು ಕಷ್ಟಗಳು ಪರಿಹಾರಗೊಂಡು ಅವರು ಸ್ವರ್ಗದಲ್ಲಿ ಪರಮೇಶ್ವರನ ಸಾಮೀಪ್ಯ ಪಡೆದು ಶಾಶ್ವತ ಸುಖವನ್ನು ಪಡೆಯುತ್ತಾರೆ. ನೀತಿ ನಿಷ್ಠೆಯುಳ್ಳನವರ ಕಷ್ಟವನ್ನು ಪರಿಹರಿಸುವುದಕ್ಕಾಗಿ ಪುನಃ ಅವತರಿಸುವುದಾಗಿ ಶ್ರೀಕೃಷ್ಣನೇ ಗೀತೆಯಲ್ಲಿ ಹೇಳಿದ್ದಾನೆ

यदा यदाहि धर्मस्य ग्लानिर्भवति भारत
अभ्युथानमधर्मस्य तदात्मानं सृजाम्यहम्
परित्रानाय साधूनाम् विनाशाय च दुष्कृताम्
धर्मसंस्थापनार्थाय सम्भवामि युगे युगे

ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥
ಪರಿತ್ರಾಣಾಯ ಸಾಧೂನಾಮ್ ವಿನಾಶಾಯ ಚ ದುಷ್ಕೃತಾಮ್ ।
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯಗೇ ॥

ಯಾವ ಯಾವ ಸಂದರ್ಭದಲ್ಲಿ ಧರ್ಮಕ್ಷಯ ವುಂಟಾಗುವುದೋ, ಮತ್ತು ಯಾವ ಕಾಲದಲ್ಲಿ ಅಧರ್ಮವೃದ್ಧಿ ಯಾಗುವುದೋ, ಆ ಸಮಯದಲ್ಲಿ ತಾನು ಶರೀರ ಧಾರಣೆ ಮಾಡುವುದಾಗಿ ಶ್ರೀಕೃಷ್ಣನು ತಿಳಿಸಿರುತ್ತಾನೆ. ಮುಂದುವರೆದು ಸತ್ಪುರುಷರ ರಕ್ಷಣೆಗಾಗಿಯೂ, ದುಷ್ಟರ ವಿನಾಶಕ್ಕಾಗಿಯೂ, ಮತ್ತು ಧರ್ಮವನ್ನು ಸ್ಥಾಪಿಸುವುದಕ್ಕಾಗಿಯೂ ಯುಗಯುಗದಲ್ಲೂ ತಾನು ಅವತರಿಸುವುದಾಗಿ ಶ್ರೀಕೃಷ್ಣನು ತಿಳಿಸಿದ್ದಾನೆ.

ಗೀತೆಯು ಹಿಂದೂ ಧರ್ಮದ ಜ್ಞಾನದ ನಿಧಿಯಾಗಿದೆ. ಅದು ಹಿಂದೂ ಧರ್ಮದ ಮುಖ್ಯ ಗ್ರಂಥವಾಗಿದೆ. ಅದರಿಂದ ಒಳ್ಳೆಯ ಹಿಂದೂ ಜೀವನ ಮಾರ್ಗದ ಬಗ್ಗೆ ಮಾರ್ಗದರ್ಶನ ಸಿಕ್ಕುತ್ತದೆ. ಇತರ ಧರ್ಮದವರೂ ಅದನ್ನು ಓದಿ ತಮ್ಮ ನಿತ್ಯ ಜೀವನದಲ್ಲಿ ಅದರಂತೆ ನಡೆದು ಕೊಳ್ಳಬಹುದು.

ಗೀತೆಯು ಶ್ರೀಕೃಷ್ಣನು ಅರ್ಜುನನಿಗೆ ಚಾರಿತ್ರಿಕವಾದ ಮಹಾಭಾರತದ ಯುದ್ಧದ ಮುನ್ನ ನೀಡಿದ ಧರ್ಮೋಪದೇಶದ ಸಂಗ್ರಹವಾಗಿದೆ. ಆ ಯುದ್ಧವು ಕೌರವ ಪಾಂಡವರ ನಡುವೆ ಕ್ರಿ.ಪೂ. 1500ರಲ್ಲಿ ಕುರುಕ್ಷೇತ್ರ (ದೆಹಲಿಯಿಂದ 100 ಕಿ.ಮೀ. ವಾಯುವ್ಯಕ್ಕೆ ಇದೆ)ದಲ್ಲಿ ನಡೆಯಿತು.

ಈ ಧರ್ಮೋಪದೇಶವನ್ನು ಕೊಡುವಾಗ ಶ್ರೀಕೃಷ್ಣನು ಅಲೌಕಿಕವಾದ ಸ್ವರೂಪ (ವಿಶ್ವರೂಪ ದರ್ಶನ) ದಲ್ಲಿದ್ದು ಪರವಶನಾಗಿ ಮಾತನಾಡುತ್ತಿದ್ದು ಅರ್ಜುನನ ಮುಖಾಂತರ ಪ್ರಪಂಚಕ್ಕೆ ಈ ಜ್ಞಾನವನ್ನು ನೀಡಿದನು. ಉತ್ತಮ ಜೀವನದ ಮಾರ್ಗವನ್ನು ಮತ್ತು ಪರಮೇಶ್ವರನನ್ನು ಹೊಂದುವ ಉತ್ತಮ ಮರ್ಗವನ್ನು ಶ್ರೀಕೃಷ್ಣನು ಗೀತೆಯ ಮೂಲಕ ಬೋಧಿಸಿದ್ದಾನೆ.

ಕರ್ಮ ಯೋಗವು ಜ್ಞಾನ ಯೋಗಕಿಂತಲೂ ಶ್ರೇಷ್ಠ ಎನ್ನುತ್ತಾನೆ ಶ್ರೀಕೃಷ್ಣ. ಪರಮೇಶ್ವರನು ಪರಮಶ್ರೇಷ್ಠ, ಅವಿಭಾಜ್ಯ ಮತ್ತು ಆದಿ ಅಂತ್ಯವಿಲ್ಲದವನು ಹಾಗೂ ಸರ್ವಕಾರಣೀಭೂತನು ಎಂದು ಶ್ರೀಕೃಷ್ಣನು ಹೇಳಿರುತ್ತಾನೆ.

ಜಾತಿ ಪದ್ಧತಿಯು ಅವನವನ ಸಾಮರ್ಥ್ಯವನ್ನು ಅವಲಂಬಿಸಿ ಮಾಡಿದ ಕೆಲಸದ ವರ್ಗೀಕರಣ ಎಂದು ಶ್ರೀಕೃಷ್ಣನು ವಿವರಿಸಿದ್ದಾನೆ. ಜಗತ್ತಿನ ಸಕಲವೂ ಪರಮೇಶ್ವರನ ಸೃಷ್ಟಿ ಎಂದು ಅವನು ಹೇಳಿದ್ದಾನೆ. ಪರಮೇಶ್ವರನು ಯಾರನ್ನಾದರೂ ಯಾವುದನ್ನಾದರೂ ದ್ವೇಷಿಸುತ್ತಿದ್ದರೆ ತಾನೇ ಅದನ್ನು ನಾಶಪಡಿಸುತ್ತಿದ್ದನೇ ಹೊರತು ಅದನ್ನು ನಾಶಪಡಿಸಲು ತನ್ನ ಅನುಯಾಯಿಗಳನ್ನು ಆಶ್ರಯಿಸುವುದಿಲ್ಲ.

ಕಪಟಿಗಳು ಮೋಕ್ಷವನ್ನು ಪಡೆಯುವುದಿಲ್ಲವೆಂದು ಗೀತೆಯು ಬೋಧಿಸುತ್ತದೆ. ನಮ್ಮ ಕರ್ತವ್ಯವನ್ನು ತಕ್ಷಣವೇ ಫಲ ಸಿಗಬೇಕೆಂದು ಬಯಸದೆ ಉತ್ತಮವಾಗಿ ನಿರ್ವಹಿಸಬೇಕೆಂದು ಗೀತೆಯು ಬೋಧಿಸುತ್ತದೆ. ನಾವು ಮಾಡಿದ ಕರ್ತವ್ಯದ ಪ್ರಮಾಣ ಮತ್ತು ಪರಿಸ್ಥಿತಿಗೆ ಅನುಗುಣವಾಗಿ ತಾನಾಗಿಯೇ ಫಲ ದೊರೆಯುತ್ತದೆ.ಪ್ರಾಪಂಚಿಕ ವಿಷಯಗಳನ್ನು ಬಿಡುವುದು – ಸನ್ಯಾಸ ತೆಗೆದುಕೊಳ್ಳುವುದು ಸುಲಭ ಆದರೆ ಅದು ಪರಮೇಶ್ವರನಿಗೆ ಹಿತವೆನಿಸುವುದಿಲ್ಲ ಎಂದು ಗೀತೆ ಹೇಳುತ್ತದೆ. ಶ್ರೀಕೃಷ್ಣನು ತನ್ನ ಅನುಯಾಯಿಗಳು ಜೀವನದ ಕಷ್ಟಗಳನ್ನು ಎದುರಿಸಿ ಕರ್ಮಯೋಗದಿಂದ (ಕಷ್ಟಪಟ್ಟು ಕೆಲಸ ಮಾಡುವುದರಿಂದ ಮತ್ತು ಬುದ್ಧಿವಂತಿಕೆಯ ಪ್ರಾಮಾಣಿಕ ಪರಿಶ್ರಮದಿಂದ) ಗೆಲ್ಲುವಂತೆ ಪ್ರೋತ್ಸಾಹಿಸುತ್ತಿದ್ದನು.

ನಿಜವಾದ ತಿಳುವಳಿಕೆಯು ಅಸತ್ಯವೆಂಬ ಧೂಮದ ಆವರಣದಿಂದ ಸುತ್ತುವರೆಯಲ್ಪಟ್ಟಿದೆ ಎಂದು ಗೀತೆ ಬೋಧಿಸುತ್ತದೆ. ಅಧಿಕಾರದಾಹವಿರುವ ಕಪಟಿಗಳು ಈ ಅಸತ್ಯವನ್ನು ಪಸರಿಸುವಂತೆ ಮಾಡುತ್ತಾರೆ. ಗೀತೆಯ ಮೂಲಪಾಠ 18 ಅಧ್ಯಾಯಗಳ 700 ಶ್ಲೋಕಗಳಿಂದ ಕೂಡಿದೆ. ಗೀತೆಯ ಕೆಲವು ಶ್ಲೋಕಗಳನ್ನು ಇಲ್ಲಿ ಕೊಟ್ಟಿದೆ.

# ಭಗವದ್ಗೀತೆಯ ಶ್ಲೋಕಗಳು

1

ये यथा मां प्रपद्यन्ते तांस्तथैव भजाम्यहम् ।
मम वर्त्मानुवर्तन्ते मनुष्याः पार्थ सर्वशः ।

ಯೇಯಥಾ ಮಾಂಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ।
ಮಮವರ್ತ್ಮಾऽನು ವರ್ತಂತೇ ಮನುಷ್ಯಾಃ ಪಾರ್ಥಸರ್ವಶಃ।

ಯಾರು ಯಾರು ಯಾವ ಯಾವ ಪ್ರಕಾರದಲ್ಲಿನನ್ನನ್ನು ಭಜಿಸುವರೋ, ಅವರನ್ನು ಇಷ್ಟಾರ್ಥ ಪ್ರದಾನದಿಂದ ನಾನು ಅದೇ ರೀತಿಯಲ್ಲಿ ಅನುಗ್ರಹಿಸುತ್ತೇನೆ.

2

कर्मण्येवाधिकारस्ते मा फलेषु कदाचन ।
मा कर्मफलहेतुर्भूर्मा ते सङ्गोऽस्त्वकर्मणि ।

ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ
ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋऽಸ್ತ್ವಕರ್ಮಣಿ॥

ಕರ್ಮದಲ್ಲಿಯೇ ನಿನಗೆ ಅಧಿಕಾರವಿರುವುದೇ ಹೊರತು ಕರ್ಮಫಲದಲ್ಲಿ ನಿನಗೆ ಅಧಿಕಾರವಿರುವುದಿಲ್ಲ. ಆದುದರಿಂದ ಕರ್ಮ ಫಲಾಕಾಂಕ್ಷಿಯಾಗಬೇಡ. ನಿಷ್ಕಾಮದಿಂದ ಕರ್ಮ ಮಾಡುವವನಾಗು.

3

यदा ते मोहकलिलं बुद्धिर्व्यतितरिष्यति ।
तदा गन्तासि निर्वेदं श्रोतव्यस्य श्रुतस्य च ।

ಯದಾ ತೇ ಮೋಹಕಲಿಲಂ ಬುದ್ಧಿರ್ವ್ಯತಿಕರಿಷ್ಯತಿ।
ತದಾ ಗಂತಾಸಿ ನಿರ್ವೇದಂ ಶ್ರೋತವ್ಯಸ್ಯ ಶ್ರುತಸ್ಯಚ॥

ಯಾವ ಸಮಯದಲ್ಲಿ ಅಜ್ಞಾನ ವೆಂಬ ಕಲ್ಮಷ ಕಲುಷಿತವಾದ ನಿನ್ನ ಬುದ್ಧಿಯು ಅದರಿಂದ ಉತ್ತೀರ್ಣವಾಗುವುದೋ, ಆಗ ಹಿಂದೆ ಕೇಳಿರುವ ಮತ್ತು ಮುಂದೆ ಕೇಳಬೇಕೆಂದಿರುವ ವಿಷಯಗಳಲ್ಲಿ ವೈರಾಗ್ಯವನ್ನು ಹೊಂದುತ್ತೀಯೆ.

4

नमः पुरस्तादथ पृष्ठतस्ते नमोऽस्तु ते सर्वत एव सर्व ।
अनन्तवीर्यामितविक्रमस्त्वं सर्वं समाप्नोषि ततोऽसि सर्वः ।

ನಮಃ ಪುರಸ್ತಾದಥ ಪೃಷ್ಠತಸ್ತೇ ನಮೋಸ್ತುತೇ ಸರ್ವತ ಏವ ಸರ್ವ ।
ಅನಂತವೀರ್ಯಾಮಿತ ವಿಕ್ರಮಸ್ತ್ವಂ ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ ॥

ಎಲೈ ಸರ್ವಸ್ವರೂಪನೇ ! ಅಗ್ರಭಾಗದಲ್ಲಿಯೂ, ಪೃಷ್ಠಭಾಗದಲ್ಲಿಯೂ, ಹಾಗೆಯೇ ಎಲ್ಲಾ ಕಡೆಯಲ್ಲಿಯೂ ನಿನಗೆ ನಮಸ್ಕಾರಗಳು: ನೀನು ಅಪರಿಮಿತವಾದ ವೀರ್ಯವುಳ್ಳವನೂ, ಮಿತಿ ಇಲ್ಲದಷ್ಟು ಪರಾಕ್ರಮವುಳ್ಳವನೂ ಆಗಿರುತ್ತೀಯೆ. ಸರ್ವಸ್ವರೂಪನಾದ ನೀನು ಈ ಜಗತ್ತೆಲ್ಲವನ್ನೂ ವ್ಯಾಪಿಸಿಕೊಂಡಿರುತ್ತೀಯೆ.

5

ज्ञेयं यत्तत्प्रवक्ष्यामि यज्ज्ञात्वामृतमश्नुते ।
अनादिमत्परं ब्रह्म न सत्तन्नासदुच्यते ।

ಜ್ಞೇಯಂ ಯತ್ತ್‌ಪ್ರವಕ್ಷ್ಯಾಮಿ ಯಜ್ಞಾತ್ವಾಮೃತಮಶ್ನುತೇ ।
ಅನಾದಿಮತ್ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ ॥

ಯಾವುದನ್ನು ತಿಳಿದುದೇ ಆದರೆ ಅಮೃತವಾದ ಮೋಕ್ಷವನ್ನು ಹೊಂದಬಹುದೋ, ಆಜ್ಞೇಯ ಸ್ವರೂಪನಾದ ಪರಮಾತ್ಮನ ಸ್ವರೂಪವನ್ನು ಹೇಳುವೆನು. ಬ್ರಹ್ಮನು ಅನಾದಿಯಾಗಿಯೂ,ಸರ್ವೋತ್ಕೃಷ್ಟವಾಗಿಯೂ, ಅವಿದ್ಯಾತತ್ಕಾರ್ಯರಹಿತವಾಗಿಯೂ ಇರುವುದೆಂಬುದಾಗಿ ಜ್ಞಾನಿಗಳಿಂದ ಹೇಳಲ್ಪಟ್ಟಿರುವುದು.

6

दिवि सूर्यसहस्रस्य भवेद्युगपदुत्थिता ।
यदि भाः सदृशी सा स्याद्भासस्तस्य महात्मनः ।

ದಿವಿ ಸೂರ್ಯಸಹಸ್ರಸ್ಯ ಭವೇದ್ಯುಗಪದುತ್ಥಿತಾ ।
ಯದಿ ಭಾಃ ಸದೃಶೀ ಸಾ ಸ್ಯಾದ್ಭಾಸಸ್ತಸ್ಯ ಮಹಾತ್ಮನಃ ॥

ಆಕಾಶದಲ್ಲಿ ಸಹಸ್ರ ಸೂರ್ಯರು ಏಕಕಾಲದಲ್ಲಿ ಒಂದುವೇಳೆ ಉದಯವಾದರೆ, ಈ ಮಹಾತ್ಮನಾದ ವಿಶ್ವರೂಪನ ಪ್ರಭೆಗೆ ಸಮಾನವಾದೀತು.

7

सर्वतः पाणिपादं तत्यर्वतोऽक्षिशिरोमुखम् ।
सर्वतः श्रुतिमल्लोके सर्वमावृत्य तिष्ठति ।

ಸರ್ವತಃ ಪಾಣಿಪಾದಂ ತತ್ಸರ್ವತೋಽಕ್ಷಿ ಶಿರೋಮುಖಮ್ ।
ಸರ್ವತಃ ಶ್ರುತಿಮಲ್ಲೋಕೇ ಸರ್ವ ಮಾವೃತ್ಯ ತಿಷ್ಠತಿ ॥

ಆ ಪರಬ್ರಹ್ಮವು ವಿಶ್ವಾಕಾರವಾಗಿಯೂ ಎಲ್ಲಾ ಕಡೆಗಳಲ್ಲಿಯೂ ಪಾಣಿಪಾದಗಳುಳ್ಳದ್ದಾಗಿಯೂ, ಸಮಸ್ತ ದಿಕ್ಕುಗಳಲ್ಲಿಯೂ ಶಿರೋಮುಖಗಳುಳ್ಳದ್ದಾಗಿಯೂ, ಮತ್ತು ಎಲ್ಲಾಕಡೆಯಲ್ಲಿಯೂ ಶ್ರೋತ್ರಗಳುಳ್ಳದ್ದಾಗಿಯೂ ಇರುವುದಲ್ಲದೆ, ಲೋಕದಲ್ಲಿ ಸಮಸ್ತವನ್ನೂ ಆವರಿಸಿಕೊಂಡಿರುವುದು.

8

नादत्ते कस्यचित्पापं न चैव सुकृतं विभुः ।
अज्ञानेनावृतं ज्ञानं तेन मुह्यन्ति जन्तवः ।

ನಾದತ್ತೇ ಕಸ್ಯಚಿತ್ಪಾಪಂ ನ ಚೈವ ಸುಕೃತಂ ವಿಭುಃ ।
ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ ॥

ಪರಮೇಶ್ವರನು ಯಾವುದೊಂದು ಜೀವನ ಪಾಪವನ್ನು ಗ್ರಹಿಸುವುದಿಲ್ಲ ಮತ್ತು ಪುಣ್ಯವನ್ನೂ ಕೂಡ ಗ್ರಹಿಸುವುದಿಲ್ಲ. ಆದರೆ ಅಜ್ಞಾನದಿಂದ ಆವರಿಸಲ್ಪಟ್ಟ ಯಾವ ಜ್ಞಾನವುಂಟೋ, ಅದರಿಂದ ಜೀವನು ಅವಿವೇಕವನ್ನು ಹೊಂದಿರುವನು.

9

ज्ञानेन तु तदज्ञानं येषां नाशितमात्मनः ।
तेषामादित्यवज्ज्ञानं प्रकाशयति तत्परम् ।

ಜ್ಞಾನೇನ ತು ತದಜ್ಞಾನಂ ಯೇಷಾಂನಾಶಿತಮಾತ್ಮನಃ ।
ತೇಷಾಮಾದಿತ್ಯವಜ್ಞಾನಂ ಪ್ರಕಾಶಯತಿ ತತ್ಪರಮ್ ॥

ಬ್ರಹ್ಮಾತ್ಮೈಕ್ಯ ಜ್ಞಾನದಿಂದ ಯಾವನ ಅಜ್ಞಾನವು ನಾಶವಾಗಿರುವುದೋ, ಆ ಪುರುಷನ ಜ್ಞಾನವು ಸೂರ್ಯನಂತೆ ಪರಬ್ರಹ್ಮವನ್ನು ಪ್ರಕಾಶಿಸುವುದು.

10

बलं बलवतां चाहं कामरागविवर्जितम् ।
धर्माविरुद्धो भूतेषु कामोऽस्मि भरतर्षभ ।

ಬಲಂ ಬಲವತಾಂ ಚಾಹಂ ಕಾಮರಾಗ ವಿವರ್ಜಿತಮ್ ।
ಧರ್ಮಾವಿರುದ್ಧೋ ಭೂತೇಷು ಕಾಮೋಸ್ಮಿ ಭರತರ್ಷಭ ॥

ಎಲೈ ಭರತಶ್ರೇಷ್ಠನೇ ! ಬಲಶಾಲಿಗಳಲ್ಲಿ ಕಾಮರಾಗಗಳಿಲ್ಲದ ಯಾವಬಲವುಂಟೋ ಆ ಬಲವು ನಾನಾಗಿರುವೆನು. ಪ್ರಾಣಿಗಳಲ್ಲಿ ಧರ್ಮವಿರುದ್ಧವಲ್ಲದ ಪ್ರಜೋತ್ಪತ್ತಿಗೆ ಹೇತುವಾದ ಯಾವ ಕಾಮವಿರುವುದೋ ಆ ಕಾಮವೂ ನಾನೇ ಆಗಿರುವೆನು.

11

उत्तमः पुरुषस्त्वन्यः परमात्मेत्युदाहृतः ।
यो लोकत्रयमाविश्य बिभर्त्यव्यय ईश्वरः ।

ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾ ವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥

ಯಾವ ಅವ್ಯಯನಾದ ಈಶ್ವರನು ಈ ಮೂರು ಲೋಕವನ್ನು ಪ್ರವೇಶಿಸಿ, ಸಮಸ್ತ ಪ್ರಾಣಿಗಳನ್ನು ಧಾರಣೆ ಮಾಡುವನೋ ಅವನೇ ಕ್ಷರಾಕ್ಷರಗಳಿಗಿಂದ ಭಿನ್ನವಾಗಿಯೂ, ಉತ್ತಮನಾಗಿಯೂ ಇರುವ ಪರಮ ಪುರುಷನೆಂಬುದಾಗಿ ಪ್ರಾಜ್ಞರಿಂದ ಹೇಳಲ್ಪಟ್ಟಿರುವನು.

12

मूढग्राहेणात्मनो यत्पीडया क्रियते तपः ।
परस्योत्सादनार्थं वा तत्तामसमुदाहृतम् ।

ಮೂಢಗ್ರಾಹೇಣಾತ್ಮನೋ ಯತ್ಪೀಡಯಾಕ್ರಿಯತೇ ತಪಃ ।
ಪರಸ್ಯೋತ್ಸಾದನಾರ್ಥಂ ವಾ ತತ್ತಾಮಸಮುದಾಹೃತಮ್ ॥

ಯಾವ ತಪಸ್ಸು ದುರಾಗ್ರಹದಿಂದಲೂ ಶರೀರ ಪೀಡೆಯಿಂದಲೂ ಮಾಡಲ್ಪಡುವುದೋ, ಅದು ತಾಮಸವೆಂಬುದಾಗಿ ಪ್ರಾಜ್ಞರಿಂದ ಹೇಳಲ್ಪಟ್ಟಿರುವುದು

13

दातव्यमिति यद्दानं दीयतेऽनुपकारिणे ।
देशे काले च पात्रे च तद्दानं सात्त्विकं स्मृतम् ।

ದಾತವ್ಯಮಿತಿ ಯದ್ದಾನಂ ದೀಯತೇऽನುಪಕಾರಿಣೇ।
ದೇಶೇ ಕಾಲೇಚ ಪಾತ್ರೇಚ ತದ್ದಾನಂ ಸಾತ್ವಿಕಂಸ್ಮೃತಮ್॥

ದಾನರ್ಹವಾಗಿರುವ ದಾನಗಳನ್ನು ಪ್ರತ್ಯುಪಕಾರ ಮಾಡಲಶಕ್ತನಾಗಿಯೂ, ಸತ್ಪಾತ್ರನಾಗಿಯೂ ಇರುವವನಿಗೆ ಪುಣ್ಯಕ್ಷೇತ್ರಗಳಲ್ಲಿ, ಪರ್ವಕಾಲದಲ್ಲಿ ಮಾಡಿದರೆ ಅಂತಹ ದಾನವನ್ನು ಸಾತ್ವಿಕ ದಾನ ವೆಂಬುದಾಗಿ ಹೇಳಲ್ಪಟ್ಟಿದೆ.

14

यत्तु प्रत्युपकारार्थं फलमुद्दिश्य वा पुनः ।
दीयते च परिक्लिष्टं तद्दानं राजसं स्मृतम् ।

ಯತ್ತು ಪ್ರತ್ಯುಪಕಾರಾರ್ಥಂ ಫಲಮುದ್ದಿಶ್ಯ ವಾ ಪುನಃ।
ದೀಯತೇ ಚ ಪರಿಕ್ಲಿಷ್ಟಂ ತದ್ದಾನಂ ರಾಜಸಂ ಸ್ಮೃತಮ್॥

ಪ್ರತ್ಯುಪಕಾರಾರ್ಥವಾಗಿಯೂ ಫಲಾಪೇಕ್ಷೆಯಿಂದ ಕೂಡಿರುವುದಾಗಿಯೂ, ಕ್ಲೇಶದಿಂದ ಕೂಡಿ ಮಾಡಲ್ಪಡುವ ದಾನವು ರಾಜಸವೆಂಬುದಾಗಿ ಹೇಳಲ್ಪಟ್ಟಿದೆ.

15

ईश्वरः सर्वभूतानां हृद्देशेऽर्जुन तिष्ठति ।
भ्रामयन्सर्वभूतानि यन्त्रारूढानि मायया ।

ಈಶ್ವರಃ ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಾಯಾ॥

ಎಲೈ ಅರ್ಜುನಾ! ಸಮಸ್ತ ಪ್ರಾಣಿಗಳ ಹೃದಯದಲ್ಲಿ ಈಶ್ವರನು ಅಂತರ್ಯಾಮಿರೂಪದಿಂದಿದ್ದು, ಶರೀರರೂಪವಾದ ಯಂತ್ರದಲ್ಲಿರುವ ಪ್ರಾಣಿಗಳನ್ನು ಅವರವರ ಕರ್ಮಾನುಸಾರವಾಗಿ ಮಾಯೆಯಿಂದ ತತ್ತತ್ಕರ್ಮಗಳಲ್ಲಿ ಪ್ರೇರಣೆ ಮಾಡುತ್ತಿರುವನು.

16

परस्तस्मात्तु भावोऽन्योऽव्यक्तोऽव्यक्तात्सनातनः ।
यः स सर्वेषु भूतेषु नश्यत्सु न विनश्यति

ಪರಸ್ತಸ್ಮಾತ್ತು ಭಾವೋಽನ್ಯೋಽವ್ಯಕ್ತೋಽ ವ್ಯಕ್ತಾತ್ಸನಾತನಃ।
ಯಃಸ ಸರ್ವೇಷು ಭೂತೇಷು ನಶ್ಯತ್ಸು ನ ವಿನಶ್ಯತಿ ॥

ಈ ಸಮಸ್ತ ಭೂತಗಳೂ ನಾಶವಾಗುವ ಪ್ರಳಯ ಕಾಲದಲ್ಲಿ ಯಾರು ನಾಶವಾಗದೆ ಇರುವನೋ, ಆ ಸನಾತನನಾದ ಪರಮಾತ್ಮನು ಸ್ಥೂಲ ಸೂಕ್ಷ್ಮ ಪ್ರಪಂಚಕ್ಕಿಂತ ಭಿನ್ನನಾಗಿರುವನು

17

अश्रद्धया हुतं दत्तं तपस्तप्तं कृतं च यत् ।
असदित्युच्यते पार्थ न च तत्प्रेत्य नो इह ।

ಅಶ್ರದ್ಧಯಾ ಹುತಂ ದತ್ತಂ ತಪಸ್ತಪ್ತಂ ಕೃತಂ ಚ ಯತ್।
ಅಸದಿತ್ಯುಚ್ಯತೇ ಪಾರ್ಥ ನ ಚ ತತ್ಪ್ರೇತ್ಯ ನೋ ಇಹ ॥

ಅಶ್ರದ್ಧೆಯಿಂದ ಮಾಡಲ್ಪಡುವ ಹವನವೂ, ದಾನವೂ, ತಪಸ್ಸು 'ಅಸತ್' ಎಂದು ಹೇಳಲಾಗುತ್ತದೆ. ಅದು ಇಹ ಲೋಕದಲ್ಲಿಯೂ, ಪರಲೋಕದಲ್ಲಿಯೂ ಸತ್ಫಲವನ್ನು ಕೊಡುವುದಿಲ್ಲ

18

यद्यदाचरति श्रेष्ठस्तत्तदेवेतरो जनः ।
स यत्प्रमाणं कुरुते लोकस्तदनुवर्तते ।

ಯದ್ಯದಾಚರತಿ ಶ್ರೇಷ್ಠಸ್ತತ್ತ ದೇವೇತರೋ ಜನಃ।
ಸಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥

ಶ್ರೇಷ್ಠ ಪುರುಷನು ಯಾವ ಯಾವ ಕರ್ಮವನ್ನು ಮಾಡುವನೋ, ಅವುಗಳನ್ನು ಇತರರೂ ನೋಡಿ ಅದನ್ನೇ ಆಚರಿಸುವರು. ಶ್ರೇಷ್ಠ ಪುರುಷನು ಯಾವ ಪ್ರಮಾಣವನ್ನು ಅಂಗೀಕರಿಸುವನೋ, ಅದನ್ನೇ ಇತರರೂ ಪ್ರಮಾಣವೆಂದು ನಂಬುತ್ತಾರೆ.

19

उत्सीदेयुरिमे लोका न कुर्यां कर्म चेदहम् ।
संकरस्य च कर्ता स्यामुपहन्यामिमाः प्रजाः ।

ಉತ್ಸೀದೇಯುರಿಮೇ ಲೋಕಾ ನ ಕುರ್ಯಾಂ ಕರ್ಮ ಚೇದಹಮ್ ।
ಸಂಕರಸ್ಯ ಚ ಕರ್ತಾ ಸ್ಯಾಮುಪಹನ್ಯಾಮಿಮಾಃ ಪ್ರಜಾಃ ॥

ಒಂದುವೇಳ ನಾನು (ಪರಮಾತ್ಮನು-ಈಶ್ವರ) ಕರ್ಮವನ್ನು ಮಾಡದೆ ಹೋದರೆ ನನ್ನ ಮಾರ್ಗವನ್ನು ನೋಡಿ ಅನುಸರಿಸುವವರನ್ನು ನಾನೇ ನಾಶಮಾಡತಕ್ಕವನಾಗುವೆನು. ಇದಲ್ಲದೆ ಅವರು ಮಾಡುವ ಸ್ವಧರ್ಮ ತ್ಯಾಗದಿಂದಾಗುವ ವರ್ಣಸಂಕರವೇ ಮುಂತಾದ ದೋಷಗಳಿಗೆ ನಾನೇ ಕಾರಣನಾಗುವೆನು.

20

इन्द्रियाणि पराण्याहुरिन्द्रियेभ्यः परं मनः ।
मनसस्तु परा बुद्धिर्यो बुद्धेः परतस्तु सः ।

ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಯೋ ಬುದ್ಧೇಃ ಪರತಸ್ತು ಸಃ ॥

ಈ ಸ್ಥೂಲ ಶರೀರಕ್ಕಿಂತಲೂ ಶ್ರೋತ್ರಾದಿ ಇಂದ್ರಿಯಗಳು ಶ್ರೇಷ್ಠ. ಇಂದ್ರಿಯಗಳಿಗಿಂತಲೂ ಮನವು ಉತ್ಕೃಷ್ಟ. ಮನಸ್ಸಿಗಿಂತ ಬುದ್ಧಿ ಶ್ರೇಷ್ಠ. ಬುದ್ಧಿಗಿಂತ ಯಾವುದು ಶ್ರೇಷ್ಠವಾಗಿರುವುದೋ ಅದೇ ಆತ್ಮ ಎಂಬುದಾಗಿ ಶ್ರುತಿಗಳು ಹೇಳಿವೆ.

21

ब्राह्मणक्षत्रियविशां शुद्राणां च परंतप ।
कर्माणि प्रविभक्तानि स्वभावप्रभवैर्गुणैः ।

ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ ।
ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವ ಪ್ರಭವೈರ್ಗುಣೈಃ ॥

ಸಂಸ್ಕಾರ ವಿಶೇಷದಿಂದ ಹುಟ್ಟಿದ ಸತ್ವಾದಿ ಗುಣ ಭೇದದಿಂದ ಬ್ರಾಹ್ಮಣಾದಿ ವರ್ಣಗಳಿಗೆ ಮುಂದೆ ನಿರೂಪಿಸಲ್ಪಡುವ ಕರ್ಮಗಳು ನನ್ನಿಂದ ವಿಭಜಿಸಲ್ಪಟ್ಟಿವೆ.

22

संन्यासस्तु महाबाहो दु:खमाप्तुमयोगत: ।
योगयुक्तो मुनिर्ब्रह्म नचिरेणाधिगच्छति ।

ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ।
ಯೋಗಯುಕ್ತೋ ಮುನಿರ್ಬ್ರಹ್ಮ ನಚಿರೇಣಾಧಿಗಚ್ಛತಿ ॥

ನಿಷ್ಕಾಮ ಕರ್ಮಾನುಷ್ಠಾನ ವಿಲ್ಲದೆ, ಮಲಿನಾಂತಃ ಕರಣವುಳ್ಳವನಿಂದ ಮಾಡಲ್ಪಡುವ ಕೇವಲ ಸಂನ್ಯಾಸವು ದುಃಖವನ್ನೇ ಕೊಡುವುದು. ನಿಷ್ಕಾಮಕರ್ಮಯೋಗ ಯುಕ್ತನಾದ ಮುನಿಯು ಶೀಘ್ರವಾಗಿ ಶುದ್ಧಾಂತಃ ಕರಣವುಳ್ಳವನಾಗಿ ಜ್ಞಾನವನ್ನು ಪಡೆದು ಬ್ರಹ್ಮಭಾವವನ್ನು ಹೊಂದುವನು.

23

न कर्तृत्वं न कर्माणि लोकस्य सृजति प्रभु: ।
न कर्मफलसंयोगं स्वभावस्तु प्रवर्तते ।

ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ।
ನ ಕರ್ಮಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ ॥

ಪರಮಾತ್ಮನು (ಈಶ್ವರನು) ದೇಹಾದಿಗಳ ಕರ್ತೃತ್ವವನ್ನೂ ಹುಟ್ಟಿಸುವುದಿಲ್ಲ, ಮತ್ತು ಕರ್ಮಗಳನ್ನು ಹುಟ್ಟಿಸುವುದಿಲ್ಲ, ಇನ್ನು ಕರ್ಮಗಳ ಫಲದ ಸಂಬಂಧವನ್ನೂ ಸಹ ಹುಟ್ಟಿಸುವುದಿಲ್ಲ. ಏಕೆಂದರೆ, ಅವಿದ್ಯೆಯೇ ಎಲ್ಲಾ ಕಾರ್ಯಗಳನ್ನೂ ಮಾಡುವುದರಲ್ಲಿ ಪ್ರವರ್ತಿಸುವುದು.

24

सर्वकर्माण्यपि सदा कुर्वाणो मद्व्यपाश्रय: ।
मत्प्रसादादवाप्नोति शाश्वतं पदमव्ययम् ।

ಸರ್ವ ಕರ್ಮಾಣ್ಯಪಿ ಸದಾ ಕುರ್ವಾಣೋ ಮದ್ವ್ಯಪಾಶ್ರಯಃ।
ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಮ್ ॥

ನನ್ನನ್ನು ಆಶ್ರಯಸಿರುವ ಭಕ್ತನು ಸದಾ ಎಲ್ಲ ಕರ್ಮಗಳನ್ನು ಮಾಡುವವನಾವರೂ, ನನ್ನ ಪ್ರಸಾದದಿಂದ ಶಾಶ್ವತವಾಗಿಯೂ, ಅವ್ಯಯವಾಗಿಯೂ ಇರುವ ಪರಮಪದವೆಂಬ ಮೋಕ್ಷವನ್ನು ಪಡೆಯುವನು.

25

नियतं कुरु कर्म त्वं कर्म ज्यायो ह्यकर्मणः ।
शरीरयात्रापि च ते न प्रसिद्ध्येदकर्मणः ।

ನಿಯತಂ ಕುರು ಕರ್ಮ ತ್ವಂ ಜ್ಯಾಯೋ ಹ್ಯಕರ್ಮಣಃ।
ಶರೀರ ಯತ್ರಾಪಿ ಚ ತೇನ ಪ್ರಸಿದ್ಧ್ಯೇದ ಕರ್ಮಣಃ।।

ಕರ್ಮವನ್ನು ಮಾಡದೆ ಇರುವುದಕ್ಕಿಂತ ಸಮಸ್ತ ಕರ್ಮಗಳನ್ನೂ ಈಶ್ವರಾರ್ಪಣ ಬುದ್ಧಿಯಿಂದ ಮಾಡುವುದು ಶ್ರೇಷ್ಠವಾಗಿರುವ ಕಾರಣ ವಿಹಿತಕರ್ಮಗಳನ್ನು ನೀನು ಮಾಡು. ಕರ್ಮವನ್ನು ಮಾಡದೆ ಇರುವ ನಿನಗೆ ಶರೀರ ನಿರ್ವಾಹವೂ ಕೂಡ ಆಗಲಾರದು.

26

मोघाशा मोघकर्माणो मोघज्ञाना विचेतसः ।
राक्षसीमासुरीं चैव प्रकृतिं मोहिनीं श्रिताः ।

ಮೋಘಾಶಾ ಮೋಘಕರ್ಮಣೋ ಮೋಘಜ್ಞಾನ ವಿಚೇತಸಃ।
ರಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ ।।

ನಿಷ್ಫಲವಾದ ಆಶೆಯೂ. ನಿಷ್ಫಲವಾದ ಕರ್ಮವೂ, ನಿಷ್ಫಲವಾದ ಜ್ಞಾನವೂ ಯಾರಿಗಿರುವುದೋ, ಇಂತಹ ವಿಚಾರ ಹೀನರಾದವರು ರಾಕ್ಷಸೀ, ಆಸುರೀ, ಮತ್ತು ಮೋಹಿನೀ ಪ್ರಕೃತಿಯನ್ನೇ ಆಶ್ರಯಸಿರುವರು.

27

यान्ति देवव्रता देवान्पितॄन्यान्ति पितृव्रताः ।
भुतानि यान्ति भूतेज्या यान्ति मद्याजिनोऽपि माम् ।

ಯಾಂತಿ ದೇವವ್ರತಾ ದೇವಾನ್ ಪಿತೄನ್‌ಯಾಂತಿ ಪಿತೃ ವ್ರತಾಃ।
ಭೂತಾನಿ ಯಾಂತಿ ಭೂತೇಜ್ಯಾ ಯಾಂತಿ ಮದ್ಯಾಜಿನೋಪಿಮಾಮ್ ।।

ದೇವಭಕ್ತರಾದವರು ದೇವತಗಳನ್ನು ಹೊಂದುತ್ತಾರೆ. ಅರ್ಯಮಾದಿ ಪಿತೃ ಭಕ್ತರಾದವರು ಪಿತೃಗಳನ್ನು ಹೊಂದುವರು. ಭೂತಗಣಗಳ ಭಕ್ತರು ಅವರನ್ನೇ ಸೇರುತ್ತಾರೆ. ನನ್ನ ಭಕ್ತರಾದರೋ ನನ್ನನ್ನೇ ಸೇರುವರು.

28

य: सर्वत्रानभिस्नेहस्तत्तत्प्राप्य शुभाशुभम् ।
नाभिनन्दति न द्वेष्टि तस्य प्रज्ञा प्रतिष्ठिता ।

ಯಃ ಸರ್ವತ್ರಾನಭಿಸ್ನೇಹಸ್ತತ್ತತ್ ಪ್ರಾಪ್ಯ ಶುಭಾಶುಭಮ್ ।
ನಾಭಿನಂಂದತಿ ನ ದ್ವೇಷ್ಟಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥

ಯಾವನು ಸಮಸ್ತ ವಿಷಯಗಳಲ್ಲಿ ಪ್ರೀತಿಯಿಲ್ಲದವನಾಗಿಯೂ, ಪ್ರಾರಬ್ಧಾನುಸಾರವಾಗಿ ಪ್ರಾಪ್ತವಾಗುವ ಶುಭಾಶುಭಗಳನ್ನು ಪ್ರೀತಿಸದೆಯೂ, ದ್ವೇಷಿಸದೆಯೂ ಇರುವನೋ, ಅವನ ಪ್ರಜ್ಞೆಯು ಸ್ಥಿರವಾಗಿರುವುದು.

29

क्रोधाद्भवति सम्मोह: सम्मोहात्स्मृतिविभ्रम: ।
स्मृतिभ्रंशाद्बुद्धिनाशो बुद्धिनाशात्प्रणश्यति ।

ಕ್ರೋಧಾದ್ಭವತಿ ಸಮ್ಮೋಹಃ ಸಮ್ಮೋಹಾತ್ ಸ್ಮೃತಿ ವಿಭ್ರಮಃ ।
ಸ್ಮೃತಿ ಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥

ಕ್ರೋಧ ದಿಂದ ಅವಿವೇಕವುಂಟಾಗುವುದು. ಅವಿವೇಕದಿಂದ ಸ್ಮೃತಿಭ್ರಂಶ (ಮರವು) ಉಂಟಾಗುವುದು. ಸ್ಮೃತಿ ಭ್ರಂಶದಿಂದ ಧಾರಣಾ ಶಕ್ತಿ ಯುಳ್ಳ ಬುದ್ಧಿಯು ನಾಶವಾಗುವುದು. ಅದರಿಂದ ಸರ್ವವೂ ನಾಶವಾಗುವುದು.

30

न कर्मणामनारम्भान्नैष्कर्म्यं पुरुषोऽश्नुते ।
न च संन्यासनादेव सिद्धिं समधिगच्छति ।

ಮ ಕರ್ಮಾಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ।
ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ॥

ನಿಷ್ಕಾಮ ಕರ್ಮವನ್ನು ಮಾಡಿ ಅಂತಃಕರಣ ಶುದ್ಧಿ ಪಡೆಯದೆ. ಕೇವಲ ಸಂನ್ಯಾಸ ಮಾತ್ರ ....

31

न हि कश्चित्क्षणमपि जातु तिष्ठत्यकर्मकृत् ।
कार्यते ह्यवशः कर्म सर्वः प्रकृतिजैर्गुणैः ।

ನ ಹಿ ಕಶ್ಚಿತ್‌ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।
ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥

ಜ್ಞಾನಿಯಾಗಲಿ ಅಜ್ಞಾನಿಯಾಗಲಿ ಅವರವರ ಸಂಸ್ಕಾರಕ್ಕನುಗುಣವಾಗಿ ಕರ್ಮಗಳನ್ನು ಯಾವಾಗಲೂ ಮಾಡುತ್ತಿರುವರು. ಯಾವಾಗಲೂ ಕರ್ಮವನ್ನು ಮಾಡದೆ ಯಾವ ಪ್ರಾಣಿಯೂ ಒಂದು ಕ್ಷಣವಾದರೂ ಸುಮ್ಮನೇ ಇರುವುದಿಲ್ಲ.

32

तस्मादसक्तः सततं कार्यं कर्म समाचर ।
असकत्ये ह्याचरन्कर्म परमाप्नोति पुरुषः ।

ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚಾರ ।
ಅಸಕ್ತೋಹ್ಯಾಚರನ್ ಕರ್ಮ ಪರಮಾಪ್ನೋತಿ ಪುರುಷ ॥

ಫಲದ ಅಪೇಕ್ಷೆ ಇಲ್ಲದೆ ವಿಧ್ಯುಕ್ತವಾದ ನಿತ್ಯನೈಮಿತ್ತಿಕವಾದ ಕರ್ಮಗಳನ್ನು ಮಾಡುವವನಾಗು. ಈ ರೀತಿ ಕರ್ಮ ಮಾಡುವವನು ಶುದ್ಧವಾದ ಅಂತಃಕರಣ ಉಳ್ಳವನಾಗಿ ಜ್ಞಾನವನ್ನು ಪಡೆದು ಮೋಕ್ಷವನ್ನು ಹೊಂದುತ್ತಾನೆ.

33

य इमं परमं गुह्यं मद्भक्तष्वभिधास्यति ।
भक्तिं मयि परां कृत्वा मामेवैष्यत्यसंशयः ।

ಯ ಇಮಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ ।
ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯಸಂಶಯಃ ॥

ಅತ್ಯಂತ ಗೋಪ್ಯವಾದ ಈ ಗೀತಾ ಶಾಸ್ತ್ರವನ್ನು ನನ್ನಲ್ಲಿ ಭಕ್ತಿ ಉಳ್ಳವನಾಗಿ, ಭಕ್ತರಿಗೆ ಯಾರು ಉಪದೇಶಿಸುವನೋ, ಅವನು ನಿಸ್ಸಂಶಯವಾಗಿ ನನ್ನನ್ನು ಸೇರುತ್ತಾನೆ.

34

चातुर्वर्ण्यं मया सृष्टं गुणकर्मविभागशः ।
तस्य कर्तारमपि मां विद्ध्यकर्तारमव्ययम् ।

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ।
ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್ ॥

ಪರಮೇಶ್ವರನಾದ ನನ್ನಿಂದ ಗುಣ, ಕರ್ಮ, ವಿಭಾಗದಿಂದ ಬ್ರಾಹ್ಮಣಾದಿ ನಾಲ್ಕುವರ್ಣಗಳೂ ಸೃಷ್ಟಿಸಲ್ಪಟ್ಟವು. ಈ ರೀತಿಯಾಗಿ ಸೃಷ್ಟಿಗೆ ನಾನು ಕರ್ತನಾದರೂ ವಾಸ್ತವದಲ್ಲಿ ನನ್ನನ್ನು ಅಕರ್ತನೆಂತಲೂ, ಅವ್ಯಯನೆಂತಲೂ ತಿಳಿಯುವವನಾಗು.

35

श्रेयान्स्वधर्मो विगुणः परधर्मात्स्वनुष्ठितात् ।
स्वधर्मे निधनं श्रेयः परधर्मो भयावहः ।

ಶ್ರೇಯಾನ್ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥

ವೈಕಲ್ಯವಿಲ್ಲದೆ ಆಚರಿಸುವ ಪರಧರ್ಮಕ್ಕಿಂತಲೂ ಕಿಂಚಿತ್ ಅಂಗವೈಕಲ್ಯದಿಂದ ಕೂಡಿದ ಸ್ವಧರ್ಮವು ಶ್ರೇಯಸಾಧನವೆನಿಸುವುದು. ಸ್ವಧರ್ಮಾನುಷ್ಠಾನದಲ್ಲಿದ್ದು ಮೃತವಾಗುವವನು ಶ್ರೇಯಸ್ಸನ್ನು ಪಡೆಯುವನು. ಪರಧರ್ಮವಾದರೋ ಭಯವನ್ನುಂಟು ಮಾಡುವುದು.

36

संन्यासः कर्मयोगश्च निःश्रेयसकरावुभौ ।
तयोस्तु कर्मसंन्यासात्कर्मयोगो विशिष्यते ।

ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾವುಭೌ ।
ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ ॥

ಸನ್ಯಾಸವೂ ಕರ್ಮಯೋಗವೂ ಎರಡೂ ಮೋಕ್ಷಕ್ಕೆ ಹೇತುವಾಗಿರುವುವು. ಅವುಗಳಲ್ಲಿ ಕರ್ಮಸಂನ್ಯಾಸಿಕ್ಕಿಂತ ಕರ್ಮಯೋಗವೇ ಶ್ರೇಷ್ಠ.

37

सांख्ययोगौ पृथग्बालाः प्रवदन्ति न पण्डिताः ।
एकमप्यास्थितः सम्यगुभयोर्विन्दते फलम् ।

ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದಂತಿ ನ ಪಂಡಿತಾಃ ।
ಏಕಮಪ್ಯಾಸ್ಥಿತಃ ಸಮ್ಯಗುಭಯೋರ್ವಿಂದತೇ ಫಲಮ್ ॥

ಸನ್ಯಾಸ ಮತ್ತು ಕರ್ಮಯೋಗಗಳೆರಡನ್ನು ವಿರುದ್ಧ ಫಲವುಳ್ಳವುಗಳೆಂದು ವಿಚಾರವಿಲ್ಲದವರು ಹೇಳುವರು. ವಿಚಾರವಂತರಾದ ಜ್ಞಾನಿಗಳು ಹೀಗೆ ಹೇಳುವುದಿಲ್ಲ – ಕಾರಣ ಅವೆರಡರಲ್ಲಿ ಒಂದನ್ನಾದರೂ ಚೆನ್ನಾಗಿ ಆಚರಿಸುವ ಪುರುಷನು ಅವೆರಡಕ್ಕೂ ಫಲವಾದ ಮೋಕ್ಷವನ್ನು ಪಡೆಯುವನು.

38

नियतं सङ्गरहितमरागद्वेषतः कृतम् ।
अफलप्रेप्सुना कर्म यत्तत्सात्त्विकमुच्यते ।

ನಿಯತಂ ಸಂಗರಹಿತಮರಾಗದ್ವೇಷತಃ ಕೃತಮ್ ।
ಅಫಲಪ್ರೇಪ್ಸುನಾ ಕರ್ಮ ಯತ್ತತ್ಸಾತ್ತ್ವಿಕಮುಚ್ಯತೇ ॥

ಕರ್ತೃತಾಭಿಮಾನವೂ, ಫಲಾಪೇಕ್ಷೆಯೂ ಇಲ್ಲದವನಿಂದ ರಾಗದ್ವೇಷರಹಿತವಾಗಿ ಮಾಡಲ್ಪಡುವ ನಿತ್ಯ ನೈಮಿತ್ತಿಕ ಕರ್ಮಗಳು ಸಾತ್ವಿಕವೆನಿಸುವುವು.

39

रागी कर्मफलप्रेप्सुर्लुब्धो हिंसात्मकोऽशुचिः ।
हर्षशोकान्वितः कर्ता राजसः परिकीर्तितः ।

ರಾಗೀ ಕರ್ಮಫಲಪ್ರೇಪ್ಸುರ್ಲುಬ್ಧೋ ಹಿಂಸಾತ್ಮಕೋಽಶುಚಿಃ ।
ಹರ್ಷಶೋಕಾನ್ವಿತಃ ರಾಜಸಃ ಪರಿಕೀರ್ತಿತಃ ॥

ಪುತ್ರ ಧನಾದಿಗಳಲ್ಲಿ ಪ್ರೇಮವುಳ್ಳವನಾಗಿಯೂ, ಕರ್ಮಫಲವನ್ನು ಅಪೇಕ್ಷಿಸುವವನಾಗಿಯೂ, ಹಿಂಸೆಯಲ್ಲಿ ಹಿಂಜರಿದವನಾಗಿಯೂ, ಪರಧನಾಪೇಕ್ಷೆಯುಳ್ಳವನಾಗಿಯೂ, ಶುಭ್ರೆಯಿಲ್ಲದೆ ಸಂತೋಷ ದುಃಖಗಳಿಂದ ಕೂಡಿದವನಾಗಿಯೂ ಇರುವವನು ರಾಜಸನೆನಿಸಿಕೊಳ್ಳುತ್ತಾನೆ.

40

यतः प्रवृत्तिर्भूतानां येन सर्वमिदं ततम् ।
स्वकर्मणा तमभ्यर्च्य सिद्धिं विन्दति मानवः

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥

ಯಾವ ಪರಮಾತ್ಮನಿಂದ ಈ ಸಮಸ್ತ ಪ್ರಾಣಿಗಳು ಉತ್ಪನ್ನವಾಗಿರುವುವೋ, ಯಾವ ಪರಮಾತ್ಮನಿಂದ ಈ ಸರ್ವ ಪ್ರಪಂಚವೂ ವ್ಯಾಪ್ತವಾಗಿರುವುದೋ, ಸ್ವಕರ್ಮದಿಂದ ಆ ಪರಮಾತ್ಮನನ್ನು ಪೂಜಿಸಿದ ಮನುಷ್ಯನು ಈಶ್ವರ ಪ್ರಸಾದರೂಪವಾದ ಸಿದ್ಧಿಯನ್ನು ಹೊಂದುವನು.

41

कर्मेन्द्रियाणि संयम्य य आस्ते मनसा स्मरन् ।
इन्द्रियार्थान्विमूढात्मा मिथ्याचारः स उच्यते ।

ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರನ್ ।
ಇಂದ್ರಿಯಾರ್ಥಾನ್ ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ ॥

ಯಾವ ಮೂಢನು ವಾಗಾದಿ ಕರ್ಮೇಂದ್ರಿಯಗಳನ್ನು ನಿಗ್ರಹಿಸಿಕೊಂಡು ವಿಷಯಾದಿಗಳನ್ನು ಮನಸ್ಸಿನಲ್ಲಿ ಸ್ಮರಿಸುತ್ತಾ ಇರುವನೋ, ಅವನು ಕಪಟಿ (ಮಿಥ್ಯಾಚಾರಿ) ಎಂದು ಹೇಳಲ್ಪಡುವನು.

42

अधिष्ठानं तथा कर्ता करणं च पृथग्विधम् ।
विविधाश्च पृथक्चेष्टा दैवं चैवात्र पञ्चमम् ।

ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿದಮ್ ।
ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಮ್ ॥

ಸರ್ವ ಕರ್ಮಗಳ ಸಿದ್ಧಿಗಾಗಿ ಐದು ಕಾರಣಗಳು ಹೇಳಲ್ಪಟ್ಟಿವೆ. ಅವುಯಾವು ವೆಂದರೆ – ಶರೀರ ಅಂತಃಕರಣ ವಿಶಿಷ್ಟವಾದ ಕರ್ತೃ, ಇಂದ್ರಿಯ ಮತ್ತು ಮನಸ್ಸು, ಪ್ರಾಣಾದಿ ಪಂಚವಾಯುಗಳು, ಐದನೆಯದಾದ ಈಶ್ವರ ಸಂಕಲ್ಪ.

43

यज्ञदानतपःकर्म न त्याज्यं कार्यमेव तत् ।
यज्ञो दानं तपश्चैव पावनानि मनीषिणाम् ।

ಯಜ್ಞದಾನತಪಃ ಕರ್ಮ ನ ತ್ಯಾಜ್ಯಂ ಕಾರ್ಯಮೇವತತ್ ।
ಯಜ್ಞೋದಾನಂ ತಪಶ್ಚೈವ ಪಾವನಾನಿ ಮನಿಷಿಣಾಮ್ ॥

ಯಜ್ಞ, ದಾನ, ತಪಸ್ಸು ಮುಂತಾದ ಉತ್ತಮ ಕರ್ಮಗಳು ತ್ಯಾಜ್ಯವಲ್ಲವು. ಅವು ಪ್ರತಿಯೊಬ್ಬರಿಗೂ ಕರ್ತವ್ಯವೇ ಆಗಿರುವುದು. ಅವು ಪಾವನಕರವಾದುದಾಗಿದೆ.

44

दु:खमित्येव यत्कर्म कायक्लेशभयात्त्यजेत् ।
स कृत्वा राजसं त्यागं नैव त्यागफलं लभेत् ।

ದುಃಖಮಿತ್ಯೇವ ಯತ್ಕರ್ಮ ಕಾಯಕ್ಲೇಶ ಭಯಾತ್ತ್ಯಜೇತ್ ।
ಸ ಕೃತ್ವಾ ರಾಜಸಂ ತ್ಯಾಗಂ ನೈವ ತ್ಯಾಗಫಲಂ ಲಭೇತ್ ॥

ಕಾಯಕ್ಲೇಶಭಯದಿಂದ ದುಃಖಕರವೆಂಬುದಾಗಿ ತಿಳಿದು ನಿತ್ಯನೈಮಿತ್ತಿಕ ಕರ್ಮಗಳನ್ನು ತ್ಯಾಗಮಾಡುವುದರಿಂದ ತ್ಯಾಗದಿಂದ ಆಗುವ ಫಲವು ನಿಜವಾಗಿಯೂ ದೊರೆಯದ ಕಾರಣ ಆ ತ್ಯಾಗವು ರಾಜಸಿಕ ವೆನಿಸುವುದು.

45

न हि देहभृता शक्यं त्यक्तुं कर्माण्यशेषतः ।
यस्तु कर्मफलत्यागी स त्यागीत्यभिधीयते ।

ನ ಹಿ ದೇಹಭೃತಾ ಶಕ್ಯಂ ತ್ಯಕ್ತುಂ ಕರ್ಮಾಣ್ಯಶೇಷತಃ ।
ಯಸ್ತು ಕರ್ಮಫಲತ್ಯಾಗೀ ಸ ತ್ಯಾಗೀತ್ಯಭಿಧೀಯತೇ ॥

ದೇಹಧಾರಿಯಾದವನಿಂದ ಯಾವುದೇ ಕರ್ಮವನ್ನು ಮಾಡಲಿರಲಾಗುವುದೇ ಇಲ್ಲ. ಆದ್ದರಿಂದ ನಿತ್ಯನೈಮಿತ್ತಿಕವಾದ ಕರ್ಮಗಳನ್ನು ಮಾಡಿ, ಆಕರ್ಮ ಫಲವನ್ನು ಯಾರು ತ್ಯಾಗ ಮಾಡುವನೋ, ಅವನೇ ತ್ಯಾಗಿ ಎಂಬುದಾಗಿ ಕರೆಯಲ್ಪಡುವನು.

46

इदं ते नातपस्काय नाभक्ताय कदाचन ।
न चाशुश्रूषवे वाच्यं न च मां योऽभ्यसूयति ।

ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ ।
ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋಽಭ್ಯಸೂಯತಿ ॥

ಈ ಗೀತಾಶಾಸ್ತ್ರವನ್ನು ಇಂದ್ರಿಯ ನಿಗ್ರಹ ವಿಲ್ಲದವನಿಗೂ, ಈಶ್ವರನಲ್ಲಿ ಭಕ್ತಿ ಯಿಲ್ಲದವನಿಗೂ, ಗುರು ಶುಶ್ರೂಷೆ ಮಾಡದವನಿಗೂ, ಪರಮೇಶ್ವರನಾದ ನನ್ನಲ್ಲಿ ಅಸೂಯೆಯುಳ್ಳವನಿಗೂ ಯಾವ ಸಂದರ್ಭದಲ್ಲಿಯೂ ಹೇಳಲಾಗದು.

47

अश्रद्दधानाः पुरुषा धर्मस्यास्य परंतप ।
अप्राप्य मां निवर्तन्ते मृत्युसंसारवर्त्मनि ।

ಅಶ್ರದ್ದಧಾನಾಃ ಪುರುಷಾ ಧರ್ಮಸ್ಯಾಸ್ಯ ಪರಂತಪ ।
ಅಪ್ರಾಪ್ಯ ಮಾಂ ನಿವರ್ತಂತೇ ಮೃತ್ಯು ಸಂಸಾರವರ್ತನಿ ॥

ಈ ತತ್ವಜ್ಞಾನವೆಂಬ ಪರಮ ಧರ್ಮವನ್ನು ಅಶ್ರದ್ಧೆಯಿಂದ ಅನುಷ್ಠಿಸದೆ ಇರುವ ಜನಗಳು ನನ್ನನ್ನು ಸೇರದೆ, ಜನನಮರಣ ಪ್ರವಾಹ ರೂಪವಾದ ಸಂಸಾರಮಾರ್ಗದಲ್ಲಿ ಹೋಗಿ ಸೇರುವರು.

48

क्लैब्यं मा स्म गमः पार्थ नैतत्त्वय्युपपद्यते ।
क्षुद्रं हृदयदौर्बल्यं त्यक्त्वोत्तिष्ठ परंतप ।

ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್‌ತ್ವಯ್ಯುಪಪದ್ಯತೇ ।
ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥

ಪಾರ್ಥ ತುಚ್ಛವಾದ ಹೃದಯ ದೌರ್ಬಲ್ಯವನ್ನುಂಟುಮಾಡುವ ಕಾತರ್ಯವನ್ನು ಹೊಂದಬೇಡ. ಎಲೈ ಶತ್ರು ತಾಪಕನೇ! ನಿನ್ನಂತಹ ಶೂರನಿಗೆ ಇದುತಕ್ಕುದಲ್ಲ.

# ಪ್ರತಿದಿನ ಹಿಂದೂ ಆದವನು ಮಾಡಲೇ ಬೇಕಾದ ಪ್ರಾರ್ಥನೆ

(ಈಶ್ವರನ ಅನುಗ್ರಹ ಪಡೆಯಲು ಮಾಡುವ ಪ್ರಾರ್ಥನೆ)

ಎಲ್ಲ ಹಿಂದೂಗಳು ದಿವಸದಲ್ಲಿ ಎರಡುಸಾರಿ ಪ್ರಾಣಾಯಾಮವನ್ನು (ಬೆಳಿಗ್ಗೆ ಮತ್ತು ಸಾಯಂಕಾಲ) ಮಾಡಬೇಕು ಹಾಗೂ ಈ ಕೆಳಗಿನ ಮಂತ್ರ/ಶ್ಲೋಕಗಳನ್ನು ಹೇಳಬೇಕು. ಪ್ರತಿಯೊಬ್ಬ ಗಂಡಸು, ಹೆಂಗಸು ಹಾಗೂ ಹತ್ತು ವರುಷ ವಯಸ್ಸು ದಾಟಿದ ಮಕ್ಕಳು ಕನಿಷ್ಠ ಪಕ್ಷ ಈ ಕೆಳಗಿನ ಮಂತ್ರಗಳನ್ನು ಹೇಳ ಬೇಕು. ಈ ಮಂತ್ರಗಳನ್ನು ಕೇಳುವಹಾಗೆ ರಾಗಬದ್ಧವಾಗಿ ಹೇಳಿದರೆ, ಹೇಳಿದವರಿಗೆ ಆರೋಗ್ಯ, ಧನ, ಶಕ್ತಿ, ಶಾಂತಿ ಮತ್ತು ಆನಂದಗಳು ಲಭಿಸುತ್ತವೆ. ಇದನ್ನು ಹೇಳಿದ ವರಿಗೆ ತಾನು ಮಾಡುವ ಕೆಲಸದಲ್ಲಿ ಯಶಸ್ಸು ದೊರೆತು ಸುಖವಾದ ಜೀವನ ನಡೆಸುತ್ತಾರೆಂಬ ನಂಬಿಕೆ ಇದೆ. ಇದನ್ನು ಯಾವ ಸಮಯದಲ್ಲಾದರೂ, ಯಾವ ಸ್ಥಳದಲ್ಲಾದರೂ ಹೇಳಬಹುದಾದರೂ ಸುಪ್ರಭಾತದ ಸಮಯದಲ್ಲಿ ಮತ್ತು ಮುಸ್ಸಂಜೆ ಸಮಯದಲ್ಲಿ ದೇವಸ್ಥಾನದಲ್ಲಿ ಅಥವಾ ಹೂತೋಟದಲ್ಲಿ ಸಾಮೂಹಿಕವಾಗಿ ಹೇಳಿದರೆ ಬಹಳ ಪರಿಣಾಮ ಕಾರಿಯಾಗಿರುತ್ತದೆ. ಸಹಸ್ರಾರು ವರುಷಗಳಿಂದ ಈ ಮಂತ್ರಗಳು ಶಕ್ತಿಶಾಲಿಯಾದುದೆಂದು ರುಜುವಾತಾಗಿದೆ. ರಾಗವಾಗಿ ಹೇಳುವುದರಿಂದ ಅಲೌಕಿಕ ಕಂಪನಗಳು ಉಂಟಾಗಿ ಹೇಳುತ್ತಿರುವವರ ಸುತ್ತ ಕಣ್ಣಿಗೆಕಾಣದ ರಕ್ಷಾ ಕವಚವನ್ನು ನೀಡುತ್ತದೆ. ಆಧುನಿಕ ವಿಜ್ಞಾನವು ಈ ಮಂತ್ರಗಳ ಸಾಮರ್ಥ್ಯವನ್ನು ಇನ್ನೂ ಬಯಲು ಮಾಡಿಲ್ಲ. ಹಿಂದೂ ಅಲ್ಲದಿರುವವನೂ ಕೂಡ ಈ ಮಂತ್ರಗಳನ್ನು ಹೇಳಿ ಅದರ ಪ್ರಯೋಜನ ಪಡೆಯಬಹುದು.

**ॐ** श्री विष्णु: **ॐ** श्री विष्णु: **ॐ** श्री विष्णु:
**ॐ** भूर्भुव: स्व: तत्सवितुर्वरेण्यं भर्गो देवस्य धीमहि ।
धियो यो न: प्रचोदयात् ॥

ಓಂ ಶ್ರೀ ವಿಷ್ಣುಃ ಓಂ ಶ್ರೀ ವಿಷ್ಣುಃ ಓಂ ಶ್ರೀ ವಿಷ್ಣುಃ
ಓಂ ಭೂರ್ಭುವಃ ಸ್ವಃ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ।
ಧಿಯೋ ಯೋ ನಃ ಪ್ರಚೋದಯಾತ್ ।।

**ॐ** जवाकुसुमसंकाशं काश्यपेयं महाद्युतिम् ।
ध्वान्तारिं सर्वपापघ्नं प्रणतोऽस्मि दिवाकरम् ॥

ಓಂ ಜಪಾಕುಸುಮಸಂಕಾಶಂ ಕಾಶ್ಯಪೇಯಂ ಮಹಾದ್ಯುತಿಮ್ ।
ಧ್ವಾಂತಾರಿಂ ಸರ್ವಪಾಪಘ್ನಂ ಪ್ರಣತೋಽಸ್ಮಿ ದಿವಾಕರಮ್ ।।

**ॐ** वक्रतुण्ड महाकाय सूर्यकोटिसमप्रभ

निर्विघ्नं कुरू मे देव सर्वकार्येषु सर्वदा ॥

**ॐ** नमो गणपतये । **ॐ** नमो गणपतये ॥

ಓಂ ವಕ್ರತುಂಡ ಮಹಾಕಾಯ ಸೂರ್ಯಕೋಟಿಸಮಪ್ರಭ
ನಿರ್ವಿಘ್ನಂ ಕುರು ಮೇ ದೇವ ಸರ್ವಕಾರ್ಯೇಷು ಸರ್ವದಾ ॥
ಓಂನಮೋಗಣಪತಯೇ । ಓಂನಮೋಗಣಪತಯೇ ॥

**ॐ** बन्दे सर्वभूते विराजमानम् ईश्वरम् एकमेवाद्वितीयम् ।
प्रणमामि देवरूपेण तान् सर्वान् ईश्वरप्रेरितदूतान् ॥
ईश्वर–प्रेरिता दूता आगच्छन्ति देवरूपेण पुनः पुनः ।
तन्मध्ये श्रेष्ठत्रयं ब्रह्माविष्णुमहेश्वराः ॥

ಓಂ ವಂದೇ ಸರ್ವಭೂತೇ ವಿರಾಜಮಾನಮ್ ಈಶ್ವರಮ್ ಏಕಮೇವಾದ್ವಿತೀಯಮ್ ।
ಪ್ರಣಮಾಮಿ ಧೇವರೂಪೇಣ ತಾನ್ ಸರ್ವಾನ್ ಈಶ್ವರ ಪ್ರೇರಿತದೂತಾನ್ ॥
ಈಶ್ವರ–ಪ್ರೇರಿತ ದೂತಾ ಆಗಚ್ಛಂತಿ ದೇವರೂಪೇಣ ಪುನಃ ಪುನಃ ।
ತನ್ಮಧ್ಯೇ ಶ್ರೇಷ್ಠತ್ರಯಂ ಬ್ರಹ್ಮವಿಷ್ಣುಮಹೇಶ್ವರಾಃ ॥

**ॐ** नमो ब्रह्मण्य देवाय गो ब्राह्मण हिताय च ।
जगद्धिताय कृष्णाय गोविन्दाय नमो नमः ॥

ಓಂ ನಮೋ ಬ್ರಹ್ಮಣ್ಯೇದೇವಾಯ ಗೋ ಬ್ರಾಹ್ಮಣ ಹಿತಾಯ ಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥

**ॐ** कृष्णाय वासुदेवाय हरये परमात्मने ।
प्रणत क्लेशनाशाय गोविन्दाय नमो नमः ॥

ಓಂ ಕೃಷ್ಣಾಯ ವಾಸುದೇವಾಯ ಹರಯೇ ಪರಮಾತ್ಮನೇ ।
ಪ್ರಣತ ಕ್ಲೇಶನಾಶಾಯ ಗೋವಿಂದಾಯ ನಮೋ ನಮಃ ॥

**ॐ** नागेन्द्रहाराय त्रिलोचनाय भस्माङ्गरागाय महेश्वराय ।
नित्याय शुद्धाय दिगम्वराय तस्मै नकाराय नमः शिवाय ॥

ಓಂ ನಾಗೇಂದ್ರಹಾರಾಯ ತ್ರಿಲೋಚನಾಯ ಭಸ್ಮಾಂಗರಾಗಾಯ ಮಹೇಶ್ವರಾಯ ।
ನಿತ್ಯಾಯ ಶುದ್ಧಾಯ ದಿಗಂಬರಾಯ ತಸ್ಮೈ ನಕಾರಾಯ ನಮಃ ಶಿವಾಯ ॥

**ॐ** मन्दाकिनी सलिल–चन्दनचर्चिताय
नन्दीश्वर–प्रमथनाथ–महेश्वराय ।
मन्दारपुष्प–बहुपुष्प सुपुजिताय तस्मै मकाराय नमः शिवाय ॥

ಓಂ ಮಂದಾಕಿನೀ ಸಲೀಲ-ಚಂದನಚರ್ಚಿತಾಯ।
ನಂದೀಶ್ವರ-ಪ್ರಮಥನಾಥ-ಮಹೇಶ್ವರಾಯ।
ಮಂದಾರಪುಷ್ಪ-ಬಹುಪುಷ್ಪ ಸುಪೂಜಿತಾಯ ತಸ್ಮೈ ಮಕಾರಾಯ ನಮಃ ಶಿವಾಯ॥

**ॐ** नमः शिवाय शान्ताय कारणत्रयहेतवे ।
निवेदयामि चात्मानं त्वं गतिः परमेश्वरः ॥

ಓಂ ನಮಃ ಶಿವಾಯ ಶಾಂತಾಯ ಕಾರಣತ್ರಯಹೇತವೇ।
ನಿವೇದಯಾಮಿ ಚಾತ್ಮಾನಾಂ ತ್ವಂ ಗತಿಃ ಪರಮೇಶ್ವರಃ॥

**ॐ** त्रयंम्बकं यजामहे सुगन्धिं पुष्टिवर्धनम् ।
उर्वारुकमिव बन्धनान्मृत्योर्मुक्षीय मामृतात् ॥

ಓಂ ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಮ್।
ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯ ಮಾಮೃತಾತ್॥

**ॐ** सर्वमडें·लमडें·ल्यें, शिवे सर्वार्थसाधिके ।
शरण्ये त्र्यम्बके गौरि नारायणि नमोऽस्तु ते!

ಓಂ ಸರ್ವಮಂಗಲಮಾಂಗಲ್ಯೆ ಶಿವೇ ಸರ್ವಾರ್ಥಸಾಧಿಕೇ।
ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣಿ ನಮೋಸ್ತು ತೇ॥

**ॐ** त्रिमस्तकानां ज्ञानम् एकशिरे अवस्थितं ।
चतुर्बाहुतुल्यबलं द्विहस्ते रोपितम् ॥
भक्तेच्छापूरणार्थं पुनः पुनः आविर्भूतम् ।
प्रणमामि तं हि ईश्वरप्रेरितदूतम् ॥

ಓಂ ತ್ರಿಮಸ್ತಕಾನಾಂ ಜ್ಞಾನಮ್ ಏಕಶಿರೇ ಅವಸ್ಥಿತಂ।
ಚತುರ್ಬಾಹುತುಲ್ಯಬಲಂ ದ್ವಿಹಸ್ತೇ ರೋಪಿತಮ್॥
ಭಕ್ತೇಚ್ಛಾಪೂರಣಾರ್ಥ ಪುನಃ ಪುನಃ ಆವಿರ್ಭೂತಮ್।
ಪ್ರಣಮಾಮಿ ತಂ ಹಿ ಈಶ್ವರಪ್ರೇರಿತದೂತಮ್॥

**ॐ** य आस्तिको धर्मनिष्ठः स वै शूरो न नास्तिकः ।

नास्तिक: कापुरुषोऽभुत् पृथिव्यां परिधावति ॥
एकाशं स्वोपार्जनेस्य देयम् दीनजनाय ।
यो भुंजीत-स्वयमेव, स मोघं केवलादी च ॥

ಓಂ ಯ ಆಸ್ತಿಕೋ ಧರ್ಮನಿಷ್ಠಃ ಸ ವೈ ಶೂರೋ ನ ನಾಸ್ತಿಕಃ।
ನಾಸ್ತಿಕಃ ಕಾಪುರೂಷೋಽಭುತ್ ಪೃಥಿವ್ಯಾಂ ಪರಿಧಾವತಿ ॥
ಏಕಾಶಂ ಸ್ವೋಪರ್ಜನೇಸ್ಯ ದೇಯಮ್ ದೀನಜನಾಯ।
ಯೋ ಭುಂಜೀತ-ಸ್ವಯಮೇವ ಸ ಮೋಘಂ ಕೇವಲಾದೀ ಚ ॥

ॐ ईशा वास्यमिदं सर्वं यत् किञ्च जगत्यां जगत् ।

तेन त्यक्तेन भुञ्जीथा मा गृध: कस्यस्विद्धनम् ॥

ಓಂ ಈಶಾವಾಸ್ಯಮಿದಂ ಸರ್ವಂ ಯತ್ ಕಿಂಚ ಜಗತ್ಯಾಂ ಜಗತ್।
ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಾಸ್ವಿದ್ಧನಮ್ ॥

ॐ त्वमेव माता च पिता त्वमेव, त्वमेव वन्धुश्च सखा त्वमेव ।
त्वमेव विद्या द्रविणं त्वमेव, त्वमेव सर्वं मम देवदेव ॥

ಓಂ ತ್ವಮೇವ ಮಾತಾ ಚ ಪಿತಾ ತ್ವಮೇವ ತ್ವಮೇವ, ಬಂಧುಶ್ಚ ಸಖಾ ತ್ವಮೇವ।
ತ್ವಮೇವ ವಿದ್ಯಾ ದ್ರವಿಣಂ ತ್ವಮೇವ ತ್ವಮೇವ ಸರ್ವಂ ಮಮ ದೇವದೇವ ॥

ಪ್ರತಿಯೊಬ್ಬ ಹಿಂದೂ (ಗಂಡಸಾಗಲಿ, ಹೆಂಗಸಾಗಲಿ) ವಿನ ಕನಿಷ್ಠ ಧಾರ್ಮಿಕ ಕರ್ತವ್ಯವೇನೆಂದರೆ (1) ಈ ಹದಿನೈದು ಮಂತ್ರಗಳನ್ನು ಹೇಳುವುದು (2) ಪ್ರಾಣಾಯಾಮ ಮಾಡುವುದು ಮತ್ತು (3) ಭೋಜ್ ಎಂಬ ಉತ್ಸವ (ಪ್ರಶ್ನೆ 114-ಈ ಮೊದಲು ಬಂದ ಸ್ಮೃತಿ ಅಧ್ಯಾಯ ನೋಡಿ)ವನ್ನು ಆಚರಿಸುವುದು. ಈ ಹದಿನೈದು ಮಂತ್ರಗಳನ್ನು ಹೇಳಿದ ನಂತರ ಕನಿಷ್ಠ 10 ನಿಮಿಷಗಳ ಕಾಲ ಪ್ರಾಣಾಯಾಮವನ್ನು ಕುರ್ಚಿಯಲ್ಲಿ ಅಥವಾ ನೆಲದಲ್ಲಿ ಪದ್ಮಾಸನದಲ್ಲಿ ಕುಳಿತು - ಮಾಡಬೇಕು. ಸಮಯಾಭವದಿಂದ ಮಂತ್ರ ಹೇಳಿದ ಕೊಡಲೇ ಮಾಡಲು ಆಗದಿದ್ದರೆ ದಿವಸದಲ್ಲಿ ಒಂದು ಸಾರಿಯಾದರೂ ಪ್ರಾಣಾಯಾಮ ಮಾಡಬೇಕು. ಪ್ರಾಣಾಯಾಮ ಮಾಡುವಾಗ ಬೆನ್ನು ನೇರವಾಗಿರಲಿ ಮತ್ತು ದೇಹವು ಆರಾಮ (relase) ವಾಗಿರಬೇಕು ಮತ್ತು ಮನಸ್ಸಿನಲ್ಲಿ ಯಾವುದೇ ಆಲೋಚನೆ/ಯೋಚನೆ ಇರಬಾರದು. ಪ್ರಾಣಾಯಾಮವನ್ನು ಮಾಡುವಾಗ ಮಂತ್ರಗಳನ್ನು ಹೇಳುತ್ತಿದ್ದರೆ ಇಹಲೋಕದಲ್ಲೂ ಪರಲೋಕದಲ್ಲೂ ನಿಮ್ಮ ಸ್ಥಿತಿ ಉತ್ತಮವಾಗಿರುತ್ತದೆ.

ಪ್ರಾಣಾಯಾಮವನ್ನು ಬಹಳ ಸುಲಭವಾಗಿ ಮಾಡಬಹುದು. ಮೂಗಿನ ಬಲ ಹೊರಳೆಯನ್ನು ಹೆಬ್ಬೆರಳಿನಿಂದ ಮುಟ್ಟಿಕೊಂಡು ಉಸಿರನ್ನು ನಿಧಾನವಾಗಿ ಒಳಗೆಳೆದುಕೊಳ್ಳಿ (ಎಷ್ಟು ಸಾಧ್ಯವಾಗುತ್ತದೋ ಅಷ್ಟು); ತೋರು ಬೆರಳಿನಿಂದ ಎಡ ಹೊರಳೆಯನ್ನು ಮುಟ್ಟಿಕೊಂಡು ಬಲಹೆರಳೆ ಯಿಂದ ಹೆಬ್ಬೆರಳನ್ನು ತೆಗೆದು ಉಸಿರನ್ನು ಬಿಡಿ; ನಂತರ ಬಲಹೆರಳೆಯಿಂದ ಉಸಿರೆಳೆದುಕೊಂಡು ಎಡಹೊರಳೆಯಿಂದ ಉಸಿರನ್ನು ಬಿಡಿ. ಇದೇ ರೀತಿ

ಕನಿಷ್ಠ ಪಕ್ಷ 10 ನಿಮಿಷಗಳ ಕಾಲ ಈ ರೀತಿ ಅಭ್ಯಾಸಮಾಡಿರಿ. ಯೋಗ ಹೇಳಿ ಕೊಡುವ ಉಪಾಧ್ಯಾಯರಿಂದಲೂ ಹೇಳಿಸಿಕೊಳ್ಳಬಹುದು.

ಧಾರ್ಮಿಕ ಕ್ರಿಯಗಳ ಅಭ್ಯಾಸ ಮಾಡುವ ಹಿಂದೂಗಳಿಗೆ ಆರೋಗ್ಯ, ಗೌರವ, ಧನ, ರಕ್ಷಣೆಗಳು ಇಹಜನ್ಮದಲ್ಲಿಯೂ ಪರಲೋಕದಲ್ಲೂ (ಸ್ಮೃತಿಗಳು ಪ್ರಶ್ನೋತ್ತರದ ಪ್ರಶ್ನೆ 91 ನೋಡಿ) ಸಿಗುತ್ತದೆ. ಈಶ್ವರನೊಬ್ಬನೇ ಪರಮಶ್ರೇಷ್ಠನಾದವನಾಗಿದ್ದು ಈ ಸುವ್ಯವಸ್ಥಿತ ವಿಶ್ವದ ಸೃಷ್ಟಿ ಮತ್ತು ಸಂರಕ್ಷಣೆ ಮಾಡುವುವವನೆಂದು ಎಲ್ಲ ಧರ್ಮನಿಷ್ಠ ವ್ಯಕ್ತಿಯೂ ಮನಗಾಣ ಬೇಕು. ಈಶ್ವರನು ನಮ್ಮ ಮೇಲೆ ನಿಗಾಇಟ್ಟಿದ್ದು ನಮ್ಮ ಪ್ರಾರ್ಥನೆಗಳಿಗೆ ಸ್ಪಂದಿಸುತ್ತಾನೆ. ಈಶ್ವರನು ವೈಜ್ಞಾನಿಕ ಪರಿಶೀಲನೆಗೆ ಅತೀತನಾದವನಾಗಿದ್ದಾನೆಂಬುದು ಪೂರ್ವ ಸಂಕಲ್ಪ.

ಮಂತ್ರಗಳನ್ನು ಹೇಳುವವನು ಮತ್ತು ಅವನ ಪ್ರೀತಿಪಾತ್ರರು ಎಲ್ಲರೀತಿಯ ಅರಿಷ್ಟದಿಂದ ರಕ್ಷಿಸಲ್ಪಡುತ್ತಾರೆ. ಮೇಲಿನ ಹದಿನೈದು ಮಂತ್ರಗಳು ಸಾಧಾರಣದಮಟ್ಟಿಗೆ ಸಾಕಾಗುತ್ತದೆ. ಆದರೆ ಸಮಯದ ಅಭಾವವಿಲ್ಲದವರು .................

# 7. ಭಜನೆ - ದೇವರಸ್ತುತಿ

ದೇವರ ಸ್ತುತಿ ಮಾಡುವುದಕ್ಕೆ ಭಜನೆ ಎನ್ನುತ್ತೇವೆ. ಭಜನೆಯನ್ನು ಸಾಮಾಜಿಕ ಮತ್ತು ಧಾರ್ಮಿಕ ಸಭೆಗಳಲ್ಲಿ ಸಾಮೂಹಿಕವಾಗಿ ಮಾಡುವುದು ಒಳ್ಳೆಯದು.

भजतामीशं जपतामीशं समवेतं सर्व जनेषु रे
नाशित सर्व प्रभेदजनो ईशमनसि खलु स वसति रे ॥
भजतामीशं जपतामीशं समवेतं सर्व जनेषु रे
य विश्वसिति परमेश्वरं भयहीनः खलु स भवति रे ॥
भजतामीशं जपतामीशं समवेतं सर्व जनेषु रे
यः करोति स्वधर्म रक्षामीश मनसि खलु स वसति रे ॥
भजतामीशं जपतामीशं समवेतं सर्व जनेषु रे
यः पूजयति परमेश्वरं–अमर लोकं खलु स गच्छति रे ॥

ಭಜತಾಮೀಶಂ ಜಪತಾಮೀಶಂ ಸಮವೇತಂ ಸರ್ವ ಜನೇಷು ರೇ

ನಾಶಿತ ಸರ್ವ ಪ್ರಭೇದಜನೋ ಈಶ ಮನಸಿ ಖಲು ಸ ವಸತಿ ರೇ ।।

ಭಜತಾಮೀಶಂ ಜಪತಾಮೀಶಂ ಸಮವೇತಂ ಸರ್ವ ಜನೇಷು ರೇ

ಯ ವಿಶ್ವಸಿತಿ ಪರಮೇಶ್ವರಂ ಭಯಹೀನಃ ಖಲು ಸ ಭವತಿ ರೇ ।।

ಭಜತಾಮೀಶಂ ಜಪತಾಮೀಶಂ ಸಮವೇತಂ ಸರ್ವ ಜನೇಷು ರೇ

ಯಃ ಕರೋತಿ ಸ್ವಧರ್ಮ ರಕ್ಷಮೀಶ ಮನಸಿ ಖಲು ಸ ವವತಿ ರೇ ।।

ಭಜತಾಮೀಶಂ ಜಪತಾಮೀಶಂ ಸಮವೇತಂ ಸರ್ವ ಜನೇಷು ರೇ

ಯಃ ಪೂಜಯತಿ ಪರಮೇಶ್ವರ ಅಮರ ಲೋಕಂ ಖಲು ಸ ಗಚ್ಛತಿ ರೇ ।।

# 8. ಸ್ವರ್ಗ ಮತ್ತು ನರಕ

ಸ್ವರ್ಗ ಮತ್ತು ಸ್ವರ್ಗ ಸುಖ ಸಂತೋಷಗಳಿಗೆ ಏಳು ಮಜಲುಗಳಿವೆ. ಈಶ್ವರನು ಮನುಷ್ಯ ಧೈರ್ಯವಾಗಿ ಜೀವಿಸಿ ತನಗೆ ಪ್ರಿಯವಾದ ಧ್ಯೇಯ ಮತ್ತು ಉದ್ದೇಶ್ಯಗಳಿಗಾಗಿ ಹೋರಾಟ ನಡೆಸಲು ಅವನನ್ನು ಭೂಮಿಗೆ ಕಳುಹಿಸುತ್ತಾನೆ.

ಅವನನ್ನು ನಂಬುವವರು ಅವನ ಜನರಿಗೆ ಒಳ್ಳೆಯದನ್ನೆ ಮಾಡುವ ಮತ್ತು ಅವನ ಆಜ್ಞೆಗೆ ಹೆದರುವಂತೆ ಮಾಡಬೇಕೆಂಬುದು ಅವನ ಇಚ್ಛೆ. ಪ್ರಪಂಚದಲ್ಲಿ ತನ್ನ ವಿಫಲತೆಗಾಗಿ ಕೊರಗುತ್ತಿರುವ ಸ್ವರ್ಗದ ಕೆಳ ಮಜಲುಗಳಲ್ಲಿರುವ ಜೀವಿಗಳು ಪುನರ್ಜನ್ಮಪಡೆಯುತ್ತಾರೆ. ಅಂಥಹ ಜೀವಿಗಳು ಅವರು ಬಿಟ್ಟು ಬಂದಿರುವ ಪ್ರಪಂಚದಲ್ಲಿ ಒಳ್ಳೆಯ ಕೆಲಸವನ್ನು ಮಾಡಲು ಇನ್ನೊಂದು ಅವಕಾಶವನ್ನು ಕೊಡುವಂತೆ ಈಶ್ವರನ ಹತ್ತಿರ ಬೇಡುತ್ತಿರುತ್ತಾರೆ.

ಈಶ್ವರನಕೋಪಕ್ಕೆ ಹೆದರುವವನೂ, ದಿನನಿತ್ಯದ ಪ್ರಾರ್ಥನೆಯನ್ನು ವಿನೀತನಾಗಿ ಮಾಡುವವನೂ, ನಿಯಮಬದ್ಧವಾಗಿ ಪ್ರಾಣಾಯಾಮ ಮಾಡುವವನೂ, ಪ್ರತಿ ತಿಂಗಳೂ ಭೋಜ್ ಉತ್ಸವದಲ್ಲಿ ಭಾಗವಹಿಸುವ/ಉತ್ಸವವನ್ನು ಏರ್ಪಡಿಸುವವನು, ಈ ಪ್ರಪಂಚವನ್ನು ಒಳ್ಳೆಯದನ್ನಾಗಿ ಮಾಡಲು ಕಷ್ಟಪಟ್ಟು ಕೆಲಸ ಮಾಡುವವನು, ಕಷ್ಟದಲ್ಲಿರುವವನಿಗೆ ಸಹಾಯ ಮಾಡುವವನು, ದೇಶದ ಕಾನೂನನ್ನು ಗೌರವಿಸುವವನು, ಹಾಗೂ ಅವಶ್ಯಕತೆ ಇರುವವರಿಗೆ ಸಹಾಯ ಮಾಡುವವನೂ ಆದ ಭಕ್ತನಿಗೆ ಸ್ವರ್ಗದ ಅಂತಿಮ ಮಜಲನ್ನು ಧೈರ್ಯವಾಗಿ ತಲುಪಲು ಆಗುತ್ತದೆ.

ಸ್ವರ್ಗದಲ್ಲಿ ಅವನಿಗಾಗಿ ಸಮುದ್ರವು ಎದುರುಗಡೆ ಇರುವ ಹಿಂಬದಿಯಲ್ಲಿ ಹಿಮಾಚ್ಛಾದಿಕವಾದ ಪರ್ವತವಿರುವಂತಹ ವಾಸಸ್ಥಳವನ್ನು ಈಶ್ವರನು ಕೊಡುತ್ತಾನೆ. ಇಂತಹ ಭಕ್ತನಿಗೆ ಅವನನ್ನು ಪ್ರೀತಿಸುವ, ಗೌರವಿಸುವ ಸ್ನೇಹಿತರು ಇದ್ದು, ಸಂತೋಷವನ್ನು ಮತ್ತು ನಿಜವಾದ ಜ್ಞಾನವನ್ನು ಪಡೆಯುತ್ತಾನೆ.

ಇಂತಹ ಭಕ್ತನಿಗೆ ರುಚಿರುಚಿಯಾದ ಆಹಾರವು ಸಿಗುತ್ತದೆ, ಆಕರ್ಷಣೀಯವಾದ, ಆರೋಗ್ಯಯುತಳಾದ ಮತ್ತು ಆಹ್ಲಾದಕರಳಾದ ಸಂಗಾತಿ ದೊರೆತು ತೃಪ್ತಿಕರವಾದ ದಾಂಪತ್ಯ ಜೀವನ (ಗೀತೆ ಶ್ಲೋ॥ ನೋಡಿ) ನಡೆಸಲು ಸಾಧ್ಯವಾಗುತ್ತದೆ.

ಅವನಿಗೆ ಬೇಕಾದ ಒಳ್ಳೆಯ ವಸ್ತುಗಳು ಬೇಕೆನಿಸಿದಾಗ ಸಿಗುತ್ತದೆ. ಅವನು ಯಾವಾಗಲೂ ಈಶ್ವರನ ಹತ್ತಿರವೇ ಇದುಧ ಉತ್ಕೃಷ್ಟವಾದ ಆನಂದವನ್ನು ಅನುಭವಿಸುತ್ತಾನೆ.

ಭಕ್ತರನ್ನು ದ್ವೇಷಿಸುವ/ಅವರಲ್ಲಿ ಶತ್ರುತ್ವವನ್ನು ತೋರಿಸುವವರು ನರಕಕ್ಕೆ ಹೋಗುತ್ತಾರೆ, ಅವರನ್ನು ಕುದಿಯುವ ಎಣ್ಣೆಯಲ್ಲಿ ಹಾಕಲಾಗುತ್ತದೆ, ಅವರಿಗೆ ಕುಷ್ಟರೋಗಿಯಾದ ಪತ್ನಿ ಸಿಗುತ್ತಾಳೆ, ಮುಳ್ಳಿಂದ ಕೂಡಿದ ಆಹಾರ ಸಿಕ್ಕುತ್ತದೆ ಮತ್ತು ಯಾವಾಗಲೂ ಬಾಯಾರಿಕೆ ಉಳ್ಳವರಾಗಿರುತ್ತಾರೆ. ಅವರು ಯಾತನೆಇಂದ ಕೂಡಿದ ರೋಗಿಗಳಾಗಿರುತ್ತಾರೆ ಮತ್ತು ಪಾಪಿಗಳ ಹಾಗೂ ದುಷ್ಟರ ಸಹವಾಸದಲ್ಲಿರುತ್ತಾರೆ.

ಈಶ್ವರನ ಕೋಪಕ್ಕೆ ಹೆದರದವರು, ಅವನ ಆಜ್ಞೆಯನ್ನು ಗೌರವಿಸದವರು, ಅವನ ಮೇಲೆ ಗೌರವವಿಲ್ಲದವರು ಮತ್ತು ಹಿಂದೂಗಳನ್ನು ಸುತ್ತು ವರೆಯಲು ತಮ್ಮನ್ನು ಉಪಯೋಗಿಸುವ ಅನ್ಯ (ಶತ್ರು) ಧರ್ಮೀಯರೊಡನೆ ಸೇರುವವರು ನರಕಕ್ಕೆ ಹೋಗುತ್ತಾರೆ.

ಈ ರೀತಿಯ ಪಂಚಮರು ಈಶ್ವರನನ್ನು ನಂಬುವವರ ಸಾಮೂಹಿಕ ಹತ್ಯೆಗೆ ಅಂಕುರಾರ್ಪಣ ಮಾಡುತ್ತಾರೆ. ಅವರ ನಡವಳಿಕೆ ಈಶ್ವರನನ್ನು ನಂಬುವವರ ಹತ್ಯೆಗೆ ಕಾರಣವಾಗುತ್ತದೆ. ಈ ರೀತಿ ನಡವಳಿಕೆ ಉಳ್ಳವರು ನರಕಕ್ಕೆ ಹೋಗುವುದು ದೈವ ನಿಯಾಮಕ.

ಯಾವುದೇ ಹಿಂದೂ ಭಕ್ತನು ಇಂತಹ ಪಂಚಮರಿಗೆ ನರಕದ ದಾರಿ ತೋರುವಲ್ಲಿ ಧೈರ್ಯವಾಗಿ ವರ್ತಿಸಿದಲ್ಲಿ ಅವರಿಗೆ ಸ್ವರ್ಗ ಪ್ರಾಪ್ತಿಯಾಗುತ್ತದೆ.

# 9. ವಿಗ್ರಹಾರಾಧನೆ

''ಪ್ರತಿ ಯೊಬ್ಬರೂ ರಾಜಾಧಿ ರಾಜನ – ಈಶ್ವರನ – ವಾರಸುದಾರ''

ಹಿಂದೂಗಳಿಗೆ ಈಶ್ವರ ನೊಬ್ಬನೇ ಪರಮಶ್ರೇಷ್ಠನು. ಜಗತ್ತಿನ ಎಲ್ಲ ರೂಪ ಆಕಾರಗಳು ಈ ಪರಮಶ್ರೇಷ್ಠನಿಂದ ಉಂಟಾದುದಾಗಿದೆ. ಪ್ರಪಂಚದ ಉಳಿವು ಅವನಿಂದಲೇ ಮತ್ತು ಅವನಲ್ಲಿಯೇ ಲೀನವಾಗುತ್ತದೆ. ಈಶ್ವರನು ಸರ್ವಶಕ್ತನೂ ಸರ್ವಾಂತರ್ಯಾಮಿಯೂ ಆಗಿದ್ದು ತನ್ನ ಕರ್ತವ್ಯಗಳನ್ನು ಮಾಡಲು ಅವನಿಗೆ ಯಾವುದೇ ಸಹಚರರ ಅಗತ್ಯವಿಲ್ಲ. ವೇದದಲ್ಲಿ ಹೇಳುವಂತೆ

ईश्वर: परमैकस्वरूप: ॥

स नित्य:सर्वव्यापी विभुरनादिरनन्तश्च स निराकारो निरूपो वर्णनातीतो निष्कम्पश्च ।

क्वचित् शब्दरूपेण स आत्मानं प्रकाशयति स विधाता

कारणानां कारणं तथा सर्वशक्तिमान् तदिच्छापुरणाय कस्यापि सहायस्य प्रयोजनं न वर्तते

यतो द्वितीय: कोऽपि नास्ति ॥

ಈಶ್ವರಃ ಪರಮೈಕಸ್ವರೂಪಃ ॥

ಸ ನಿತ್ಯಃ ಸರ್ವವ್ಯಾಪೀ ವಿಭುರನಾದಿರನಂತಶ್ಚ ಸ ನಿರಾಕಾರೋ ನಿರೂಪೋ

ವರ್ಣನಾತಿತೋ ನಿಷ್ಕಂಪಶ್ಚ।

ಕ್ವಚಿತ್ ಶಬ್ದರೂಪೇಣ ಸ ಆತ್ಮಾನಂ ಪ್ರಕಾಶಯತಿ ಸ ವಿಧಾತಾ

ಕಾರಣಾನಾಂ ಕಾರಣಂ ಕಥಾ ಸರ್ವಶಕ್ತಿ ಮಾನ್ ತದಿಚ್ಛಾ ಪೂರಣಾಯ ಕಸ್ಯಾಪಿ ಸಹಾಯಸ್ಯ

ಪ್ರಯೋಜನಂ ನ ವರ್ತತೇ

ಯದಿ ದ್ವಿತೀಯಃ ಕೋಽಪಿ ನಾಸ್ತಿ ॥

ಈಶ್ವರನು ಪರಮಶ್ರೇಷ್ಠವಾದ ಅಸ್ತಿತ್ವಉಳ್ಳವನು. ಅವನು ಪೂರ್ಣನು, ಸರ್ವ ವ್ಯಾಪಿಯು ಮತ್ತು ಅನಂತನು. ಅವನು ಆದಿ ಅಂತ್ಯ ವಿಲ್ಲದವನು. ಅವನು ನಿರಾಕಾರನು ಮತ್ತು ವರ್ಣನಾತೀತನು. ಕೆಲವೊಮ್ಮೆ ಶಬ್ದರೂಪನಾಗಿ ವ್ಯಕ್ತವಾಗುವವನು. ಅವನು ಸೃಷ್ಟಿಕರ್ತನು ಎಲ್ಲ ಕಾರಣ ಗಳಿಗೆ ಕಾರಣೀಭೂತನು. ಅವನು ಸರ್ವಶಕ್ತನು ಮತ್ತು ತನ್ನಿಚ್ಛೆಯನ್ನು ಕಾರ್ಯಗತಗೊಳಿಸಲು ಯಾರ ಸಹಾಯವೂ ಬೇಡದವನು.

ಈಶ್ವರ ಎಂಬ ಈ ಪರಮ ಶ್ರೇಷ್ಠನನ್ನು ವಿಷ್ಣು ಎಂದೂ ಕರೆಯುತ್ತಾರೆ. ವಿಷ್ಣು ಶಬ್ದವು 'ವಿಷ್'(ವ್ಯಾಪಿಸು) ಎಂಬ ಧಾತುವಿನಿಂದ ಉತ್ಪ ತ್ತಿಯಾಗಿದೆ. ವಿಷ್ಣುವು ಸರ್ವ ವ್ಯಾಪಿಯಾಗಿದ್ದು ಈಶ್ವರನು ಆದಿ ಅಂತ್ಯಗಳಿಲ್ಲಿದ್ದವನಾಗಿದ್ದಾನೆ.

ಈಶ್ವರನು ಸ್ವಯಂಭೂತ ಪರಮಶ್ರೇಷ್ಠವಾದ ಅಸ್ತಿತ್ವವುಳ್ಳ ಅವನನ್ನು ಮನುಷ್ಯರು ಈಶ್ವರನೆಂದು ಕರೆದರು. ಬೇರೆ ಬೇರೆ ಧರ್ಮದವರು ಅವನನ್ನು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ಹಿಂದೂಗಳು ಅವನನ್ನು ಈಶ್ವರ/ವಿಷ್ಣು/ಬ್ರಹ್ಮ ಇತ್ಯಾದಿ ಹೆಸರಿನಿಂದ ಕರೆಯುತ್ತಾರೆ. 'ಓಂ'(ॐ) ಅವನ ಲಾಂಛನ. ವೇದದಲ್ಲಿ ಹೇಳಿದಂತೆ.

ईश्वर: तस्य दूतरूपेण पृथिव्यां प्रेरयति देवान्
तस्माच्च मडें·लं मनुष्यत्वं प्रापतेति ॥

ಈಶ್ವರಃ ತಸ್ಯ ದೂತರೂಪೇಣ ಪೃಥಿವ್ಯಾಂ ಪ್ರೇರಯತಿ ದೇವಾನ್
ತಸ್ಮಾಚ್ಚ ಮಂಗಲಂ ಮನುಷ್ಯತ್ವಂ ಪ್ರಾಪ್ನೋತಿ ॥

ಮಾನವರಿಗೆ ಮಂಗಳವನ್ನುಂಟು ಮಾಡಲು ಈಶ್ವರನು ದೇವತೆಗಳನ್ನು (ತನ್ನ ಹರಿಕಾರರನ್ನಾಗಿ) ಪ್ರಪಂಚದ ಬೇರೆ ಬೇರೆ ಭಾಗಗಳಿಗೆ ಕಳುಹಿಸುತ್ತಾನೆ.

ಮನುಷ್ಯರು ಪ್ರಪಂಚದಲ್ಲಿ ಸಫಲವಾದ, ಸಮರಸವಾದ ಜೀವನ ನಡೆಸಲು ಹಾದಿತೋರಿಸುವ ಸಲುವಾಗಿ ಈಶ್ವರನು ತನ್ನ ಅಂಶದಿಂದ ಕೊಡಿದ ಪ್ರವಾದಿಗಳನ್ನು ಇಲ್ಲಿಗೆ ಕಳುಹಿಸುತ್ತಾನೆಂದು ಹಿಂದೂಗಳು ನಂಬುತ್ತಾರೆ.

ಹಿಂದೂಗಳು ಈ ಪ್ರವಾದಿಗಳನ್ನು ಈಶ್ವರನ ಪ್ರತಿರೂಪವೆಂದೆ ಪರಿಗಣಿಸುತ್ತಾರೆ. ಅವರನ್ನು ಬಹಳ ಪ್ರೀತಿಯಿಂದಲೂ ಗೌರವದಿಂದಲೂ ಕಾಣುತ್ತಾರೆ. ಭೂಮಿಯಲ್ಲಿ ತಮ್ಮ 'ಲೀಲೆ'ಗಳು (ಮನುಷ್ಯರಾಗಿ ಮತರಾಗಿ ನಡೆಸುವ ಈ ಲೋಕದ ವ್ಯವಹಾರ) ಮುಗಿದ ನಂತರ ಈ ಪ್ರತಿ ರೂಪಿಗಳು ಪುನಃ ಈಶ್ವರನಲ್ಲಿ ಐಕ್ಯರಾಗುತ್ತಾರೆಂದು ಹಿಂದೂಗಳು ನಂಬುತ್ತಾರೆ.

ಪ್ರಪಂಚದಲ್ಲಿ ದೇವತೆಗಳು ಇಲ್ಲದಿದ್ದರೂ ಅವರ ಸಹಾಯ ಮತ್ತು ಮಾರ್ಗದರ್ಶನ ದೊರಕುತ್ತದೆ ಎಂದು ಹಿಂದೂಗಳು ನಂಬುತ್ತಾರೆ. ದೇವತೆಗಳ ವಿಗ್ರಹಗಳನ್ನು ಮಾಡಿ ಅದರ ಮೂಲಕ (ಅದನ್ನು ಮಾಧ್ಯಮವಾಗಿ ಬಳಸಿ) **ಈಶ್ವರ**ನಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ.

ಹಿಂದೂಗಳಿಗೆ ವಿಗ್ರಹವು ಈಶ್ವರ ನಲ್ಲವೆಂದು ತಿಳಿದಿದೆ. ವಿಗ್ರಹವು **ಈಶ್ವರನನ್ನು** ಕುರಿತು ಏಕಾಗ್ರತೆ ಸಾಧಿಸಲು ಒಂದು ಮಾಧ್ಯಮ ಮಾತ್ರ ಮತ್ತು ಅದಕ್ಕೆ ಗೌರವವನ್ನು ತೋರಿಸುವುದು ಸರ್ವಶಕ್ತನಿಗೆ ನಮಗೆ ತಿಳಿದಿರುವ **ಈಶ್ವರ**ನ ಪ್ರತಿಮೆಯ ಮೂಲಕ ಸಲ್ಲಿಸುವ ಪ್ರಾರ್ಥನೆಯಾಗಿದೆ.

ಪ್ರಪಂಚದಲ್ಲಿ ಎಲ್ಲೇ ತನ್ನ ರಾಷ್ಟ್ರಧ್ವಜವು ಕಂಡಲ್ಲಿ ಅದಕ್ಕೆ ಆ ರಾಷ್ಟ್ರದ ಪ್ರಜೆ ಗೌರವ ಸಲ್ಲಿಸುತ್ತಾನೆ. ರಾಷ್ಟ್ರ ಧ್ವಜವು ಒಂದುತುಂಡು ಬಟ್ಟೆ ಮತ್ತು ಬಣ್ಣ ವಲ್ಲದೆ ರಾಷ್ಟ್ರವಲ್ಲ ಎಂದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೂ ಅದಕ್ಕೆ ಅವಮಾನವಾದರೆ ತನ್ನ ಜೀವ ಕೊಡಲೂ ಆ ರಾಷ್ಟ್ರದ ಪ್ರಜೆ ಸಿದ್ಧನಿರುತ್ತಾನೆ. ರಾಷ್ಟ್ರ ಧ್ವಜಕ್ಕೆ ಗೌರವ ತೋರಿಸುವುದೂ ಕೂಡ ಪ್ರತಿಮಾರಾಧನೆಯ ಒಂದು ಉದಾಹರಣೆ.

ಯಾರೆ ಆಗಲಿ ಕಲ್ಲಿನ ವಿಗ್ರಹವನ್ನು ಕುರಿತು ಪ್ರಾರ್ಥಿಸದೆ ಈಶ್ವರನನ್ನು ಕುರಿತು ಪ್ರಾರ್ಥಿಸುತ್ತಾರೆ. ಈ ಕಾರಣಕ್ಕಾಗಿ ಯಾವುದೇ ಮಂತ್ರವನ್ನು ಹೇಳುವ ಮೊದಲು 'ಓಂ' ಕಾರವನ್ನು ಹೇಳುತ್ತಾರೆ.

**ವಿಗ್ರಹವು ಮುಖ್ಯವಲ್ಲ ಎಂಬ ಕಾರಣಕ್ಕಾಗಿ ಪೂಜೆ ಮುಗಿದ ನಂತರ ಹಿಂದೂಗಳು ವಿಗ್ರಹವನ್ನು ನೀರಿನಲ್ಲಿ ಮುಳುಗಿಸುತ್ತಾರೆ. ಈಶ್ವರನ ಬಿಂಬವು ಮನಸ್ಸಿನ ಏಕಾಗ್ರತೆಗಳಿಸಲು ಉಪಯುಕ್ತ ವಾದುದಾಗಿದೆ.**

ದೇವತೆಗಳ ಕುರಿತು ಪುರಾಣಿಕರು ಆಯುಧಗಳ ಉಪಯೋಗದಲ್ಲಿ ಅತಿಮಾನುಷ ಸಾಧನೆಗಳು

ಅಥವಾ ಜ್ಞಾನ/ತಿಳುವಳಿಕೆಯ ವಿಷಯದಲ್ಲಿ ಉತ್ಪ್ರೇಕ್ಷೆ ಮಾಡಿರುತ್ತಾರೆ. ಇದೇ ರೀತಿಯಾಗಿ ಅತ್ಯುತ್ಸಾಹಿಗಳಾದ ಚಿತ್ರಕಾರರು ಮತ್ತು ಶಿಲ್ಪಿಗಳು ದೇವತೆಗಳಿಗೆ ಅಸ್ವಾಭಾವಿಕವಾದ ಆಕಾರವನ್ನು ತಮ್ಮ ಕಲ್ಪನೆಹಾಗೂ ಅಲಂಕಾರಿಕ ಚಾತುರ್ಯಕ್ಕನುಗುಣವಾಗಿ ಚಿತ್ರಿಸಿದ್ದಾರೆ. ಮಂತ್ರದಲ್ಲಿ ಹೇಳಿರುವಂತೆ :

**ॐ** त्रिमस्तकानां ज्ञानम् एकशिरे अवस्थितं ।
चतुर्बाहुतुल्यबलं द्विहस्ते रोपितम् ॥
भक्तेच्छापूरणार्थं पुनः पुनः आविर्भूतम् ।
प्रणमामि तं हि ईश्वरप्रेरितदूतम् ॥

ತ್ರಿಮಸ್ತಕಾನಾಂ ಜ್ಞಾನಮ್ ಏಕಶಿರೇ ಅವಸ್ಥಿತಂ ।
ಚತುರ್ಬಾಹುತುಲ್ಯ ಬಲಂ ದ್ವಿಹಸ್ತೇರೋಪಿತಮ್ ॥
ಭಕ್ತೇಛ್ಛಾಪೂರಣಾರ್ಥಂ ಪುನಃ ಪುನಃ ಆವಿರ್ಭೂರ್ತಮ್ ।
ಪ್ರಣಮಾಮಿ ತ್ವಾಂ ಹಿ ಈಶ್ವರಪ್ರೇರಿತದೂತಮ್ ॥

**ಓ ಈಶ್ವರನೇ ಮನುಷ್ಯರೂಪದಲ್ಲಿ ನೀನು ಪುನಃ ಪುನಃ ಕಳುಹಿಸಿದ ದೇವರು ಬುದ್ಧಿವಂತರಿದ್ದು ಅವರಿಗಿರುವ ಒಂದೇ ತಲೆ ಮೂರು ತಲೆಗಳು ಕೆಲಸ ಮಾಡುವ ಶಕ್ತಿ ಹೊಂದಿದೆ. ಅವರ ಎರಡೇ ಕೈಗಳು ನಾಲ್ಕು ಕೈಗಳ ಶಕ್ತಿಹೊಂದಿದೆ. ಅಂತಹ ಈಶ್ವರನ ದೂತರಿಗೆ ನಮಸ್ಕರಿಸುತ್ತೇವೆ.**

ಹಿಂದೂಗಳಿಗೆ ಕಳೆದ 20000 ವರುಷಗಳಲ್ಲಿ ಇಂತಹ ಬಹಳಷ್ಟು ದೇವರುಗಳನ್ನು ದಯಪಾಲಿಸಲಾಗಿದ್ದು. ಅವರನ್ನು ಆದಿದೇವತಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರ ಅವತಾರವೆಂದು ತಿಳಿಯುತ್ತಾರೆ. ಉದಾಹರಣೆಗೆ 5000 ವರುಷಗಳ ಹಿಂದೆ ಹುಟ್ಟಿದ ರಾಮ, 3500 ವರುಷಗಳ ಹಿಂದೆ ಹುಟ್ಟಿದ ಕೃಷ್ಣ ಇವರನ್ನು ವಿಷ್ಣುವಿನ ಅವತಾರವೆಂದು ಪ್ರೀತಿಯಿಂದ ಗೌರವಿಸುತ್ತಾರೆ.

ಒಬ್ಬ ಹಿಂದೂ ಈಶ್ವರನನ್ನು ಪ್ರೀತಿಸುತ್ತಾನೆ ಮತ್ತು ಅವನ ಹತ್ತಿರ ಇರಬಯಸುತ್ತಾನೆ. ವೇದಗಳನ್ನು ಮತ್ತು ಗೀತೆಯನ್ನು ಓದದ ಒಬ್ಬ ಸಾಮಾನ್ಯ ಹಿಂದು ವಿಗ್ರಹಗಳನ್ನು ಪೂಜಿಸುತ್ತಾನೆ. ವೇದಗಳನ್ನು ಮತ್ತು ಗೀತೆಯನ್ನು ತಿಳಿದವರು ಈಶ್ವರನು ಒಬ್ಬನೇ ಎಂದು ತಿಳಿದಿರುತ್ತಾರೆ.

ಹಿಂದುತ್ವವು ವಿಕಾಸ ಹೊಂದುತ್ತಿರುವಾಗ ಅದು ಪ್ರಪಂಚದ ಎಲ್ಲ ವರ್ಗದ ಜನರನ್ನು ಸ್ವೈರಿಸುವ, ಸಮವಾಗಿ ಕಾಣುವ ಮತ್ತು ಅವರ ಜೀವನ ಕ್ರಮವನ್ನು ಮತ್ತು ಅವರ ಪೂಜಾ, ವಿಗ್ರಹಗಳನ್ನು ಗೌರವಿಸುವ ಔದಾರ್ಯ ತೋರಿತು. ಈ ಕಾರಣದಿಂದಾಗಿ ಕೆಲವಾರು ವಿಗ್ರಹಗಳನ್ನು ಹಿಂದೂ ದೇವರ ವಿಗ್ರಹಗಳೆಂದು ಪರಿಗಣಿಸುತ್ತಾರೆ. ಹೀಗಾಗಿ ಕೆಲವು ಹಿಂದೂಗಳಿಂದ ಪೂಜಿಸಲ್ಪಡುವ ವಿಗ್ರಹಗಳ ಬಗ್ಗೆ ಇನ್ನು ಕೆಲವರಿಗೆ ತಿಳಿದೇ ಇರುವುದಿಲ್ಲ. ಪ್ರಾದೇಶಿಕ ಭಾಷೆಗನು ಗುಣವಾಗಿ ದೇವರ ಹೆಸರೂ ಬದಲಾಗುತ್ತದೆ.

ಆದರೆ ಹಿಂದೂಗಳು ಅವರು (ಈಶ್ವರ/ದೇವತೆ/ದೇವಡು/ಕಡವಳ್/ಇರೈವನ್), ಶ್ರೇಷ್ಠವಾದ ಅಸ್ತಿತ್ವವುಳ್ಳವನೂ, ಸರ್ವ ವ್ಯಾಪಿಯೂ, ಸರ್ವಶಕ್ತನೂ, ಎಲ್ಲ ಕಾರಣಗಳಿಗೆ ಕಾರಣೀಭೂತನೂ ಎಂಬ ವಿಷಯವನ್ನು ಏಕೀಭಾವದಿಂದ ನಂಬುತ್ತಾರೆ.

ಈಶ್ವರನಿಗೆ ಪ್ರಾರ್ಥನೆ ಸಲ್ಲಿಸುವುದರಿಂದ ಫಲ ದೊರೆಯುತ್ತದೆ ಎಂದು ಭಗವದ್ಗೀತೆಯ ಏಳನೆಯ ಅಧ್ಯಾಯನ ಇಪ್ಪತ್ತನೆಯ ಶ್ಲೋಕದಿಂದ ತಿಳಿಯಬಹುದಾಗಿದೆ. ಅದರೆ ಈ ಹಂತವನ್ನು ತಲುಪರಾಲಾದವರು ವಿಗ್ರಹಾರಾಧನೆ ಮಾಡುತ್ತಾರೆ:

कामैस्तैस्तैर्हतज्ञाना: प्रपद्यन्तेऽन्यदेवता: ।
तं तं नियममास्थाय प्रकृत्या नियता: स्वया ॥

ಕಾಮೈಸ್ತೈಸ್ತೈರ್ಹತಜ್ಞಾನಾಃ ಪ್ರಪದ್ಯಂತೇಽನ್ಯದೇವತಾಃ।
ತಂ ತಂ ನಿಯಮಮಾ ಸ್ಥಾಯ ಪ್ರಕೃತ್ಯಾ ನಿಯತಾಃ ಸ್ವಯಾ॥

ಸಕಾಮರಾದರು ಭಿನ್ನ ಭಿನ್ನವಾದ ಯಜ್ಞಾದಿ ಕರ್ಮಫಲಗಳಿಂದ ಅಪಹೃತ ಜ್ಞಾನವುಳ್ಳವರಾಗಿ, ಆಯಾಯ ನಿಯಮಗಳಿಗನುಸಾರ ತಮ್ಮ ತಮ್ಮ ಸಂಸ್ಕಾರಕ್ಕನು ಗುಣವಾಗಿ ಬೇರೆದೇವತೆಗಳನ್ನು ಪೂಜಿಸುತ್ತಾರೆ.

# ಜಾತಿ ಪದ್ಧತಿ

ಜಾತಿ ಎಂಬ ಸಾಮಾಜಿಕ ಶೋಷಣೆಯ ಮತ್ತು ನೈತಿಕ ಭ್ರಷ್ಟತೆಯ ಪದ್ಧತಿಯನ್ನು ಮಧ್ಯ ಏಷ್ಯದಿಂದ ಆಕ್ರಮಣಕಾರರು ಪ್ರಾರಂಭಿಸಿದರು. ಈ ಮೊದಲು ನಾಲ್ಕು ಸ್ಪಷ್ಟವಾದ ವರ್ಗೀಕರಣ ವಿತ್ತು.

ಋಗ್ವೇದದ ಆದಿಭಾಗದಲ್ಲಿ ಒಂದೇ ಕುಟುಂಬದ ಸದಸ್ಯರು ಬೇರೆ ಬೇರೆ ಉದ್ಯೋಗಗಳನ್ನು ಮಾಡುತ್ತಿದ್ದರು. ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡಿ ಅದರಲ್ಲೇ ಮುಂದುವರೆದವರನ್ನು ಬ್ರಾಹ್ಮಣರೆಂದು ಕರೆಯುತ್ತಿದ್ದರು, ಸಮರಕಲೆಯಲ್ಲಿ ಪರಿಣಿತರಾದವರನ್ನು ಕ್ಷತ್ರಿಯರೆಂದುಕರೆದರು, ಬುದ್ಧಿವಂತರಾಗಿದ್ದು ಬಹಳಷ್ಟು ಆಸ್ತಿ ಹೊಂದಿದ್ದು ಅಥವಾ ವ್ಯಾಪಾರದಲ್ಲಿ ತೊಡಗಿದ್ದರೆ ಅವರನ್ನು ವೈಶ್ಯರೆಂದು ಕರೆದರು, ಕಸುಬುದಾರರು ಮತ್ತು ಕುಶಲಕಲೆಗಳನ್ನು ತಿಳಿದವರನ್ನು ಶೂದ್ರ ಎನ್ನುತ್ತಿದ್ದರು.

ಸುಮಾರು ಕ್ರಿ. ಪೂ. 4500 ರಿಂದ ಕ್ರಿ. ಪೂ. 3500ರಲ್ಲಿ ಮಧ್ಯ ಏಷ್ಯಿಯದ ಕುದುರೆ ಸವಾರಿ ಮಾಡುವ ಯೋಧರು ಭಾರತದಮೇಲೆ ಧಾಳಿ ನಡೆಸಿದರು. ಈ ರೀತಿ ಬಂದ ಆಡಳಿತಗಾರರು ಆರ್ಥಿಕವಾಗಿ ವರ್ಗೀಕರಣವಾಗಿದ್ದ ಕೆಲಸಗಳನ್ನು ನಾಲ್ಕು ಮುಖ್ಯ ಜಾತಿಗಳಾಗಿ – ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ – ಬದಲಾಯಿಸಿದರು.

ಯಾವುದೇ ವಿದ್ಯಾಭ್ಯಾಸವಿಲ್ಲದೆ, ಕೌಶಲ್ಯವನ್ನು (skill)ಅರಿಯದ ವರ್ಗದಬಗ್ಗೆ ಈ ಹೊಸ ಆಡಳಿತಗಾರರಿಗೆ ಯಾವುದೇ ಆಸಕ್ತಿ ಇರಲಿಲ್ಲ. ಅವರನ್ನು ಅವರಷ್ಟಕ್ಕೆ ಇರಲು ಬಿಟ್ಟರು. ಈಗ ದಲಿತರೆಂದು ಕರೆಯುವವರೇ ಈ ವರ್ಗಕ್ಕೆ ಸೇರಿದವರು.

ಜಾತಿ ಪದ್ಧತಿಯು ಒಂದು ಸಾಮಾಜಿಕ ವ್ಯವಸ್ಥೆಯಾಗಿತ್ತು ಮತ್ತು ತಿಳುವಳಿಕೆ (knowledge) ಮತ್ತು ಕೌಶಲ್ಯವನ್ನು (skill)ತಂದೆ ಮತ್ತು ಮಕ್ಕಳಿಗೆ ಕಲಿಸಿಕೊಡುತ್ತಿದ್ದರು. ಆಗ ತಾಂತ್ರಿಕ ತರಬೇತಿ ಅಥವಾ ಶಾಲೆಗಳು ಇರಲಿಲ್ಲ. ಕಾಗದ ಅಥವಾ ಮುದ್ರಿಸಲ್ಪಟ್ಟ ಪುಸ್ತಕಗಳೂ ಇರಲಿಲ್ಲ. ಕೌಶಲ್ಯದ ತರಬೇತಿ ಮತ್ತು ತಿಳುವಳಿಕೆಯು ತಲೆಮಾರಿನಿಂದ ತಲೆಮಾರಿಗೆ ಮುಂದುವರೆಯುತ್ತಿತ್ತು. ಆದರೆ ಅಂತರ ಜಾತೀಯ ವರ್ಗಾವಣೆ ಬಳಕೆಯಲ್ಲಿತ್ತು.

ರಕ್ತ ಪಿಪಾಸುಗಳಾದ ದಾಳಿಕೋರರು ಶಾಂತಿಪ್ರಿಯವಾದ ದೇಶವನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿ ಯಾದರೂ ಜನರ ನೈತಿಕ ಬಲ ಮತ್ತು ದೃಢ ನಿಶ್ಚಯವನ್ನು ಸರಿಗಟ್ಟಲು ಸಾಧ್ಯವಾಗಲಿಲ್ಲ.

ಹೊಸ ಆಡಳಿತಗಾರರಾದ ದಾಳಿಕೋರರು ಜಾತಿ ಪದ್ಧತಿಯ ದುರುಪಯೋಗ ಪಡೆದು ಆರ್ಥಿಕವಾಗಿ ವಿಭಾಗವಾಗಿದ್ದ ಕಾರ್ಮಿಕ ವ್ಯವಸ್ಥೆ ( division of labour)ಯನ್ನು ಮಿಥ್ಯಾ ಧರ್ಮವನ್ನಾಗಿಸಿ ಅದಕ್ಕೇ ಧಾರ್ಮಿಕ ಅಂಗೀಕಾರವಿದೆಯೆಂಬಂತೆ ಆಡಳಿತ ನಡೆಸುತ್ತಿದ್ದರು. ಪ್ರಪಂಚದ ಎಲ್ಲಕಡೆ ಒಂದು ಸಾಮಾಜಿಕ ತಪ್ಪು ನಡೆದು ಅದು ದೀರ್ಘಕಾಲ ಆಚರಣೆಯಲ್ಲಿದ್ದರೆ ಅಂತಹ ಆಚರಣೆ ಯನ್ನೇ ಕಾನೂನೆಂಬಂತೆ ನಡೆದುಕೊಳ್ಳುವ ವಿಷಯವನ್ನು ನಾವು ಗಮನಿಸಬೇಕು.

ಜಾತಿ ಪದ್ಧತಿಯ ಬಿಗಿಯಾದ ಸಂಕುಚಿತ ವಿಭಾಗೀಕರಣ ಹಿಂದೂ ಸಮಾಜದ ಗುರುತರವಾದ

ತಪ್ಪಾಗಿತ್ತು. ಇದನ್ನು ತಲೆತಲಾಂತರದಿಂದ ಕುಟಿಲ ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ಜನರನ್ನು ಒಡೆದು ಆಳಲು ಉಪಯೋಗಿಸಿದರು. ಇದರಿಂದ ಪ್ರಯೋಜನ ಹೊಂದಿದ ಕೆಲವು ಗುಂಪಿನ ಜನ ಇದನ್ನು ಬೆಂಬಲಿಸುತ್ತಿದ್ದರು.

ಸನಾತನ ಧರ್ಮದ ತತ್ವಗಳು ಹಿಂದೂಗಳಿಗೆ ಪ್ರಚಂಡವಾದ ನೈತಿಕ ಬಲವನ್ನು ನೀಡಿತ್ತು. ಹೀಗಾಗಿ ದಾಳಿಕೋರರು ಅವರನ್ನು ಮತಾಂತರಗೊಳಿಸುವುದು ಬಹಳ ಕಷ್ಟವೆಂದು ಮನಗಂಡರು.

ಹೊಸ ಆಡಳಿತಗಾರರು ಹಿಂದೂ ಸಮಾಜವನ್ನು ಒಡೆಯಲು ಮತ್ತು ಬಲಹೀನವನ್ನಾಗಿಮಾಡಲು ಕಪಟಿಗಳ (ಮಿಥ್ಯಾಚಾರಿ) ಸಹಾಯವನ್ನು ಪಡೆಯುವಲ್ಲಿ ಸಫಲರಾದರು. ಧರ್ಮನಿಷ್ಠ ಮತ್ತು ಮಾನವತಾವಾದಿಗಳಂತೆ ನಟಿಸುವ, ಆದರೆ ನಿಜವಾಗಿ ಸಮಾಜವನ್ನು ತಮ್ಮ ಸ್ವಾರ್ಥಕ್ಕಾಗಿ ನಾಶಪಡಿಸುವ, ತಮ್ಮ ಅಹಂಭಾವ ಮತ್ತು ಲೋಭವನ್ನು ತೀರಿಸಿಕೊಂಡು ಅಧಿಕಾರಸ್ಥರನ್ನು ಸಂತೋಷಪಡಿಸುವವರನ್ನು ಕಪಟಿಗಳೆನ್ನುತ್ತಾರೆ. ಇವರು ಬಹಳಷ್ಟು ಸಾರಿ ಜನಗಳನ್ನು ತಪ್ಪುದಾರಿಗೆಳೆದು ದಾಳಿಕೋರರು ಒಳನುಗ್ಗಿ ಲೂಟಿ ಹೊಡೆಯಲು ಕಾರಣರಾದರು.

ಬಹಳಷ್ಟು ಜನರು ಅನಕ್ಷರಸ್ಥರೂ, ಅರಿವಿಲ್ಲದವರೂ, ತಪ್ಪಾದ ಮಾಹಿತಿಉಳ್ಳವರೂ ತುಂಬಾ ಬಡತನದಲ್ಲಿರುವರೂ ಆಗಿದ್ದರು. ಕಾಲಕ್ರಮೇಣ ಹೊಸ ಆಡಳಿತಗಾರರ ಆಸ್ಥಾನದಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ಸಂಖ್ಯೆಯೂ ಬೆಳೆದು. ಇರುವ ಅತ್ಯಲ್ಪ ಸಂಪನ್ಮೂಲಗಳನ್ನು ಕಬಳಿಸಲು ಸ್ಪರ್ಧೆ ಉಂಟಾಗಿ ಎಲ್ಲ ಪಂಗಡಗಳಲ್ಲೂ 'ಒಳಗುಂಪು' 'ಹೊರಗುಂಪು'ಗಳು ಬೆಳೆದುವು.

ಸಾವಿರಾರು ವರುಷಗಳ ಈ ಆರ್ಥಿಕ ವಿಭಜನೆಯಿಂದಾಗಿ ಜಾತಿಪದ್ಧತಿಯು ಒಂದು ಸಾಮಾಜಿಕ ಪಿಡುಗಾಯಿತು. ಕಪಟಿಗಳು ಈ ಶೋಷಣೆಯನ್ನು ನಿರಂತರ ಮುಂದುವರೆಯುವಂತೆ ಮಾಡುವ ಉದ್ದೇಶದಿಂದ ಅದಕ್ಕೆ ಧಾರ್ಮಿಕ ಬಣ್ಣನೀಡಿದರು.

ಗೀತೆಯು ಜಾತಿ ಪದ್ಧತಿಗೆ ವಿರೋಧ ವ್ಯಕ್ತಪಡಿಸುತ್ತಾ, ಜಾತಿಯು ವೃತ್ತಿಯಗುಣಗಳಿಗನುಸಾರವಾಗಿ ಮಾಡಿದ ಕೆಲಸಗಳ ವರ್ಗೀಕರಣ ಎಂದು ಸ್ಪಷ್ಟಪಡಿಸುತ್ತದೆ ಹಾಗೂ ಅದನ್ನು ಜನರೇ ವಿಭಾಗ ಮಾಡಿಕೊಂಡ ಕಾರ್ಮಿಕ ವ್ಯವಸ್ಥೆ (division of labour) ಎನ್ನುತ್ತದೆ. ಗೀತೆಯ ಈ ಕೆಳಗಿನ ಎರಡು ಶ್ಲೋಕಗಳನ್ನು ಗಮನಿಸಬಹುದು.

ब्राह्मणक्षत्रियविशां शुद्राणां च परंतप ।
कर्माणि प्रविभक्तानि स्वभावप्रभवैर्गुणैः ॥

ಬ್ರಾಹ್ಮಣ ಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ ।
ಕರ್ಮಾಣಿಪ್ರವಿಭಕ್ತಾನಿ ಸ್ವಭಾವಪ್ರಭವವೈರ್ಗುಣೈಃ ॥

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ನಿಶ್ಚಯಿಸಲು ಅವರವರ ವೃತ್ತಿಯಲ್ಲಿ ಪ್ರಕಟವಾದ ವೃತ್ತಿಯ ಗುಣವೇ ಕಾರಣ.

चातुर्वर्ण्यं मया सृष्टं गुणकर्मविभागशः ।
तस्य कर्तारमपि मां विद्ध्यकर्तारमव्ययम् ॥

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ।
ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್ ॥

ಪರಮೇಶ್ವರನಾದ ನನ್ನಿಂದ ಗುಣಕರ್ಮ ವಿಭಾಗದಿಂದ ಬ್ರಾಹ್ಮಣಾದಿ ನಾಲ್ಕುವರ್ಣಗಳೂ ಸೃಷ್ಟಿಸಲ್ಪಟ್ಟವು. ಈ ರೀತಿಯಾದ ಸೃಷ್ಟಿಗೆ ನಾನು ಕರ್ತನಾದರೂ ವಾಸ್ತವದಲ್ಲಿ ನನ್ನನ್ನು ಅಕರ್ತನೆಂತಲೂ, ಅವ್ಯಯನೆಂತಲೂ ತಿಳಿಯಬೇಕು.

ವಿವೇಚನೆ ಇಲ್ಲದ ರಾಜಕೀಯ ಮತ್ತು ಆರ್ಥಿಕ ನೀತಿಗಳಿಂದಾಗಿ ಧರ್ಮವು ಒಂದು ಕೊಳಚೆಗುಂಡಿ ಯಾಯಿತು. ಹಿಂದೂಗಳು ಒಂದು ಒಡೆದ ಮನೆಯಾದರು. ಸನಾತನ ಧರ್ಮ–ಹಿಂದೂತ್ವವು ಜಾತಿಪದ್ಧತಿಯನ್ನು ಒಂದು ಕಟ್ಟಳೆ ಎಂದು ಪರಿಗಣಿಸದಿದ್ದರೂ ಅದರ ಅನುಯಾಯಿಗಳು ಬಲಾತ್ಕಾರವಾಗಿ ಮತ್ತು ಅಜ್ಞಾನದಿಂದ ಆ ಪದ್ಧತಿಯನ್ನು ಸಹಿಸಿಕೊಂಡರು.

ಜಾತಿ ಪದ್ಧತಿಯನ್ನು ಖಂಡಿಸುವ ಮತ್ತು ಹಿಂದೂಗಳನ್ನು ಒಗ್ಗೂಡಿಸುವ ಕೆಲಸವನ್ನು ಮಾಡುವ ಯಾರೇ ಆಗಲಿ ಅಂತಹವರಿಗೆ ಶಾಶ್ವತವಾದ ಸ್ವರ್ಗ ಪ್ರಾಪ್ತಿಯಾಗುತ್ತದೆ ಎನ್ನಲಾಗಿದೆ.

ಜಾತಿ ಪದ್ಧತಿಯು ರಾಜಕೀಯ ಮತ್ತು ಆರ್ಥಿಕ ಶೋಷಣೆಯ ಪರಿಣಾಮವೇ ಹೊರತು ಧಾರ್ಮಿಕ ವಿಚಾರವಲ್ಲ ಎಂದು ತಿಳಿಯಲು ಕ್ರಿ.ಶ. 1200ರಲ್ಲಿ ಬಂಗಾಳದಲ್ಲಿ ನಡೆದ ಒಂದು ಘಟನೆಯನ್ನು ಉದಾಹರಿಸಬಹುದು. ಆ ಸಮಯದಲ್ಲಿ ಬಲ್ಲಾಳ ಸೇನ ನೆಂಬ ಒಬ್ಬ ಪ್ರಬಲವಾದ ರಾಜ ನಿದ್ದನು. ಅವನ ಕಾಲದಲ್ಲಿ ನಾಥಬ್ರಾಹ್ಮಣ (ರುದ್ರಜ ಬ್ರಾಹ್ಮಣರೆಂದೂ ಕರೆಯುತ್ತಿದ್ದರು) ರೆಂಬ ಅತ್ಯಂತ ಗೌರವಾನಿತ್ವ ಬ್ರಾಹ್ಮಣರು ರಾಜಪುರೋಹಿತರಾಗಿದ್ದರು.

ರಾಜ ಬಲ್ಲಾಳ ಸೇನನಿಗೆ ಪೀತಾಂಬರನಾಥನೆಂಬ ರಾಜಪುರೋಹಿತನಿದ್ದನು. ರಾಜನ ತಂದೆಯು ಮರಣವಾದಾಗ ರಾಜನು ಉತ್ತರಕ್ರಿಯೆಯ ದಾನಗಳನ್ನು ರಾಜಪುರೋಹಿತರು ತೆಗೆದು ಕೊಳ್ಳಬೇಕೆಂದು ಇಚ್ಛಿಸಿದನು. ಆದರೆ ರಾಜಪುರೋಹಿತನು ಯಾವುದೇ ಧಾನ ತೆಗೆದು ಕೊಳ್ಳಲು ನಿರಾಕರಿಸಿದನು. ಈ ವರ್ತನೆಯನ್ನು ರಾಜನು ತನಗೆ ಮಾಡಿದ ಅವಮಾನ ವೆಂದು ಪರಿಗಣಿಸಿ ಪೀತಾಂಬರನಾಥನ ಯಜ್ಞೋಪಾತವನ್ನು ತೆಗೆದು ಹಾಕಿದ್ದು ಮಾತ್ರವಲ್ಲದೆ ರುದ್ರಜವೀನಾಥ ಬ್ರಾಹ್ಮಣರನ್ನು ಇನ್ನು ಮುಂದೆ ಶೂದ್ರ ರಂತೆ ನಡೆಸಿಕೊಳ್ಳಬೇಕೆಂಬ ರಾಜಾಜ್ಞೆಯನ್ನು ಹೊರಡಿಸಿದನು.

ಇದರಿಂದಾಗಿ ಬಂಗಾಳದಲ್ಲಿ ನಾಥಾ ರುದ್ರಜ ಕುಲದವರನ್ನು ಶೂದ್ರರಂತೆ ನಡೆಸಿಕೊಳ್ಳುತ್ತಾರೆ. ಆದರೆ ಬಂಗಾಳದ ಹೊರಗೆ ನಾಥ/ರುದ್ರಜ ಕುಲದವರು ಬಹಳ ಗೌರವವಿರುವ ಬ್ರಾಹ್ಮಣರಾಗಿದ್ದಾರೆ. ಜಾತಿ ಪದ್ಧತಿಯು ಹಿಂದೂ ಧರ್ಮದ ಒಂದು ಅಂಗವಲ್ಲ ಅದು ಕಪಟ ರಾಜಕಾರಣಿಗಳು ಹಿಂದೂ ಸಮಾಜವನ್ನು ರಾಜಕೀಯವಾಗಿ ಹೇಗೆ ಶೋಷಸುತ್ತಿದ್ದರು ಎಂಬುದನ್ನು ಈ ಉದಾಹರಣೆ ಸಾಬೀತುಪಡಿಸುತ್ತದೆ.

ನಾಥ ಬ್ರಾಹ್ಮಣರು (ರುದ್ರಜ ಬ್ರಾಹ್ಮಣರು) ಶಿವನ (ರುದ್ರ) ಸಂತತಿಯವರೆಂದು ಪುರಾಣಗಳಲ್ಲಿ ಹೇಳಲ್ಪಟ್ಟಿದೆ. ನೇಪಾಳ (ಹಿಂದೂ ದೇಶ)ದ ರಾಜ ಪುರೋಹಿತರು ನಾಥ ಬ್ರಾಹ್ಮಣರು.

ಇನ್ನೊಂದು ಉದಾಹರಣೆಯನ್ನು ಮಹಾಭಾರತದ ವನಪರ್ವದ ಯಕ್ಷ ಪ್ರಶ್ನೆಯಲ್ಲಿ ಕಾಣಬಹುದು. ಯಕ್ಷನ ಸಮ್ಮತಿ ಇಲ್ಲದೆ ನೀರು ಕುಡಿದ ಯುಧಿಷ್ಠಿರನ ನಾಲ್ಕು ಜನ ತಮ್ಮಂದಿರು ಜ್ಞಾನ ತಪ್ಪಿದಾಗ ಯುಧಿಷ್ಠರನೇ ಅವರುಗಳನ್ನು ಹುಡುಕಿಕೊಂಡು ಬರುತ್ತಾನೆ. ಆಗ ಯಕ್ಷನು ತನ್ನೆಲ್ಲಾ (12) ಪ್ರಶ್ನಗಳಿಗೆ ಯುಧಿಷ್ಠರನು ಸರಿಯಾದ ಉತ್ತರವನ್ನು ಕೊಟ್ಟಲ್ಲಿ ಅವನ ತಮ್ಮಂದಿರಿಗೆ ಪುನಃಜ್ಞಾನ ಬರುವಂತೆ ಮಾಡುವುದಾಗಿ ಹೇಳಿ ಕೇಳಿದ ಪ್ರಶ್ನೆಗಳಲ್ಲಿ ಒಂಬತ್ತನೆಯ ಪ್ರಶ್ನೆಯನ್ನು ಇಲ್ಲಿ ಗಮನಿಸಬಹುದು.

राजन् कुलेन वृत्तेन स्वाध्यायेन श्रूतेन वा ।
ब्राह्मण्यं केन भवति प्रब्रह्येतत् सुनिश्चितम् ॥

(वनपर्व ३१३ अध्याय, श्लोक १०७)

ರಾಜನ್ ಕುಲೇನ ವೃತ್ತೇನ ಸ್ವಾಧ್ಯಾಯೇನ ಶ್ರುತೇನ ವಾ ।
ಬ್ರಾಹ್ಮಣ್ಯಂ ಕೇನ ಭವತಿ ಪ್ರಬ್ರೂಹ್ಯೇತತ್ ಸುನಿಶ್ಚಿತಮ್ ॥

(ವನಪರ್ವ ಅಧ್ಯಾಯ, ಶ್ಲೋ 107)

ಯಾವುದರಿಂದ ಬ್ರಾಹ್ಮಣನಾಗುತ್ತಾನೆ – ಹುಟ್ಟಿನಿಂದ, ನಡತೆಯಿಂದ, ಅಧ್ಯಯನದಿಂದ ಅಥವಾ ಬುದ್ಧಿವಂತಿಕೆಯಿಂದ.

ಯುಧಿಷ್ಠಿರನ ಉತ್ತರ ಈ ರೀತಿ ಇದೆ.

शृणु यक्ष कुलं तात न स्वाध्यायो न च श्रुतम् ।
कारणं हि द्विजत्वे च वृत्तमेव न संशयः ॥

(वनपर्व ३१३ अध्याय, श्लोक १०८)

ಶೃಣು ಯಕ್ಷ ಕುಲಂ ತಾತ ನ ಸ್ವಾಧ್ಯಾಯೋ ನ ಚ ಶ್ರುತಮ್
ಕಾರಣಂ ಹಿ ದ್ವಿಜಂತ್ವೇ ಚ ವೃತ್ತಮೇವ ನ ಸಂಶಯಃ ॥

(ವನಪರ್ವ ಅಧ್ಯಾಯ, ಶ್ಲೋ 108)

ಹುಟ್ಟಿನಿಂದಾಗಲೀ, ಸ್ವಾಧ್ಯಾಯದಿಂದಾಗಲೀ ಬ್ರಾಹ್ಮಣನಾಗುವುದಿಲ್ಲ. ಆದರೆ ನಡತೆಯಿಂದ ಮಾತ್ರ ಬ್ರಾಹ್ಮಣನಾಗುವುದು ಸಾಧ್ಯ. ಮಹಾಭಾರತದ ಈ ಉದಾಹರಣೆಯು ಜಾತಿಯು ಹುಟ್ಟಿನಿಂದ ಪಡೆಯುವುದಲ್ಲ ಅದು ಆಯ್ಕೆಗೆ ಬಿಟ್ಟದ್ದು ಎಂದು ರುಜುವಾತಾಗುತ್ತದೆ.

ಜಾತಿ ಪದ್ಧತಿಯ ವಿವಾದ ಹುಟ್ಟಲು ಆರ್ಥಿಕ ನಿರ್ವಹಣೆ (ಕೆಲಸದ ಹಂಚಿಕೆ) ಮತ್ತು ರಾಜಕೀಯ ಶೋಷಣೆಯೇ ಕಾರಣ.

ಗುಪ್ತರಕಾಲದಲ್ಲಿ ಬ್ರಾಹ್ಮಣರು/ಕ್ಷತ್ರಿಯರು ಕರಕುಶಲ ವೃತ್ತಿಯಲ್ಲಿ ನಿರತರಾಗುವುದು ಸಾಮಾನ್ಯ ವಾಗಿತ್ತು. ಮಯೂರಶರ್ಮನೆಂಬ ಬ್ರಾಹ್ಮಣನು ಯೋಧನಾಗಿದ್ದು ಕದಂಬ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಮಾತೃವಿಷ್ಣುವೆಂಬ ಮತ್ತೊಬ್ಬ ಬ್ರಾಹ್ಮಣನು ಕ್ಷತ್ರಿಯ ಧರ್ಮವನ್ನು ಪಾಲಿಸುತ್ತಾ ಪ್ರಾಂತ್ಯಾಧಿಕಾರಿ ಯಾಗಿದ್ದನು. ಪ್ರದೋಷವರ್ಮನೆಂಬ ಶೂದ್ರನು ಕ್ಷತ್ರಿಯರ ಕೆಲಸವನ್ನು ಮಾಡುತ್ತಾ ಒಂದು ಪ್ರಾಂತ್ಯದ ಪ್ರಾಂತ್ಯಾಧಿಕಾರಿಯಾಗಿದ್ದನು.

ಗುಪ್ತರ ಕಾಲದಲ್ಲಿ ಬಹಳಷ್ಟು ಬ್ರಾಹ್ಮಣರು ಲಾಭದಾಯಕವಾದ ಬೇಟೆಯಾಡುವ ವೃತ್ತಿ ಯಲ್ಲಿದ್ದರು. ಮಾಂಡಸೋರ್‌ನಲ್ಲಿರುವ ಸೂರ್ಯ ದೇವಸ್ಥಾನವನ್ನು ಶೂದ್ರರ ಹಿನ್ನೆಲೆ ಇರುವ ವ್ಯಕ್ತಿಗಳು ಕಟ್ಟಿದರು. ಹಿಂದೂ ಸಮಾಜದಲ್ಲಿ ಜಾತಿ ಪದ್ಧತಿಯು ಒಂದು ವಿಭಾಗಮಾಡಿಕೊಂಡ ಕಾರ್ಮಿಕ ವ್ಯವಸ್ಥೆಗೆ ಇವು ಕೆಲವು ಉದಾಹರಣೆಗಳಾಗಿವೆ.

ವೇದಗಳ ಕಾಲದಲ್ಲಿ ಅಸ್ಪೃಶ್ಯತೆ – ಶೂದ್ರರ, ದಲಿತರ ಅಥವಾ ಇನ್ನ್ಯಾರದೇ – ಯ ಕಲ್ಪನೆ ಇರಲಿಲ್ಲ. ಸಮಾಜಕ್ಕೆ ಉಪಯೋಗವಾಗದ ಅಥವಾ ಸಮಾಜ ಸಮ್ಮತಿಸದ ಕೆಲಸವನ್ನು ಮಾಡಿದರೆ ಮಾತ್ರ ಶಿಕ್ಷೆ ವಿಧಿ ಸಲಾಗುತ್ತಿತ್ತು. ಆದರೆ ಯಾವುದೇ ಕಳಂಕಿತರು ತಪಸ್ಸನ್ನಾಚರಿಸುವ ಮತ್ತು ತಮ್ಮ ನಡವಳಿಕೆಯನ್ನು ತಿದ್ದಿಕೊಳ್ಳುವ ವಾಡಿಕೆ ಇತ್ತು.

ಹಿಂದಿನ ಕಾಲದ ವಿದ್ಯಾಭ್ಯಾಸ ಪದ್ಧತಿಯು ಪರ್ಣಕುಟಿಗಳಲ್ಲಿ ದೀರ್ಘಕಾಲ (ದಶಕಗಳು) ಮಾಡು ವಂತಹದ್ದಾಗಿತ್ತು. ತಿಳುವಳಿಕೆಯನ್ನು ಗುರು ಶಿಷ್ಯರು ವಿನಿಮಯ ಮಾಡಿಕೊಳ್ಳುತ್ತಿದ್ದರು. ಪುಸ್ತಕಗಳು ಕಡಿಮೆ ಇದ್ದ ಕಾರಣ ಮೌಖಿಕವಾಗಿಯೇ ವಿದ್ಯಾಭ್ಯಾಸ ನಡೆಯುತ್ತಿತ್ತು. ಕುಟುಂಬದ ವ್ಯಾಪಾರದತ್ತ ಮಕ್ಕಳ ನಿರಂತರ ಒಡನಾಟವಿರುತ್ತಿದ್ದುದರಿಂದ ಅವರನ್ನು ಅದರಲ್ಲಿಯೇ ತೊಡಗಿಸುವುದು ಸ್ವಾಭಾವಿಕ ವಾಗಿತ್ತು (ಪರಂಪರೆಯಿಂದ ಬಂದ ವೃತ್ತಿ). ವೃತ್ತಿಯನ್ನು ಆರಿಸಿ ಕೊಳ್ಳುವ ಈ ಪದ್ಧತಿಯು ಕಾಲಕ್ರಮದಲ್ಲಿ ಎಲ್ಲ ಕಡೆಯೂ ಕಸುಬು (ವೃತ್ತಿ) ಆಧಾರಿತ ಕುಟುಂಬಗಳನ್ನು ಹುಟ್ಟುಹಾಕುವ ಪರಂಪರೆಯನ್ನು ಸೃಷ್ಟಿಸಿತು.

ಹಿಂದೂ ಸಮಾಜದಲ್ಲಿ ಜನಗಳು ತಮ್ಮ ಕಸುಬಿನ ಆಯ್ಕೆಯ ಸ್ವಾತಂತ್ರವನ್ನು ಪಡೆದಿದ್ದರು (ಉದಾ: ಸತ್ಯಕಾಮನು ಹುಟ್ಟಿನಿಂದ ಶೂದ್ರನಾದರೂ ವೇದವನ್ನು ಕಲಿತು ಬಹಳ ಗೌರವಾನ್ವಿತನಾದ ಬ್ರಾಹ್ಮಣನಾದನು) ವೇದಗಳ ಕಾಲದಲ್ಲಿ ಯಾರು ಬೇಕಾದರು ಪುರೋಹಿತನಾಗ ಬಹುದಿತ್ತು, ಆ ಸ್ಥಾನವು ಬ್ರಾಹ್ಮಣರಿಗೆ ಎಂದು ಕಾದಿರಿಸುವ (reservation) ಪ್ರಶ್ನೆಯೇ ಇರಲಿಲ್ಲ. ವೇದದಲ್ಲಿ,

पवित्रात्मा संयतेन्द्रियः पेशलां मधु जीऔवा च
तं गुरुं श्रद्धया श्रृणु उपहार च प्रयच्छतु ॥

ಪವಿತ್ರತ್ಮಾ ಸಂಯತೇಂದ್ರಿಯಃ ಪೇಶಲಾಂ ಮಧು ಜೀಜೌವಾ ಚ
ತಂ ಗುರೂಂ ಶ್ರದ್ಧಯಾ ಶೃಣು ಉಪಕಾರ ಚ ಪ್ರಯಚ್ಛತು ॥

ಯಾರು ಶುದ್ಧಮನಸ್ಕನೋ, ಯಾರಿಗೆಕಾಮನೆಗಳನೇಲೆ ನಿಯಂತ್ರಣವಿದೆಯೋ ಮತ್ತು ಶ್ಲೋಕಗಳನ್ನು ಮಧುರವಾಗಿ ಹೇಳ ಬಲ್ಲನೋ (ಅವನು) ಪುರೋಹಿತ (ಗುರು)ನಾಗಿ ಪ್ರಾರ್ಥನೆಯ ಮುಂದಾಳತ್ವವನ್ನು ವಹಿಸಬಲ್ಲ.

ಒಂದೇ ಜಾತಿಯ ಜೋಡಿಗಳು ಮದುವೆಯಾಗುವುದು ವೃತ್ತಿಯ ಕಸುಬಿನ ದೃಷ್ಟಿಯಿಂದ ಅನುಕೂಲಕರ ಮತ್ತು ಲಾಭದಾಯಕ ಎಂದು ಪರಿಗಣಿಸಲಾಗಿತ್ತು. ಒಂದೇ ಹಿನ್ನೆಲೆಯವರಾದುದರಿಂದ ಕುಟುಂಬದ ವೃತ್ತಿಯಲ್ಲಿ ಶೀಘ್ರವಾಗಿ ಯಾವುದೇ ಅನಿಶ್ಚಿತತೆ ಇಲ್ಲದೆ ಅಥವಾ ಹೆಚ್ಚಿನ ತರಬೇತಿ ಇಲ್ಲದೆ, ತೊಡಗಿಸಿಕೊಳ್ಳುವುದು ಸಾಧ್ಯ. ಈ ರೀತಿಯಲ್ಲಿ ಮದುವೆಯಾದ ಗಂಡು, ಹೆಣ್ಣು ಬಳಕೆ ಇಲ್ಲದ, ಅನಾದರದಿಂದ ಕೂಡಿದ ಹಾಗೂ ಎದುರುನೋಡದ ಸಾಮಾಜಿಕ ಪರಿಸ್ಥಿತಿಯನ್ನು ಎದುರಿಸುವ ಸಾಧ್ಯತೆಯೂ ಕಡಿಮೆ.

ಬಹಳಷ್ಟು ಬೇರೆ ಬೇರೆ ಹಿನ್ನೆಲೆ ಇರುವವರ ಮದುವೆಗಳು ಮನ್ನಣೆ ಪಡೆಯುತ್ತಿದ್ದವು ಮತ್ತು ಬಹಳವಾಗಿ ನಡೆಯುತ್ತಿತ್ತು (ಮಹಾಭಾರತದಲ್ಲಿ ಬೆಸ್ತನ ಮಗಳಾದ ಸತ್ಯವತಿಯು ಕ್ಷತ್ರಿಯರಾಜನಾದ ಶಂತನುವನ್ನು ಮದುವೆಯಾದದ್ದಕ್ಕೆ ಸಮಾಜ ಯಾವುದೇ ನಿರ್ಬಂಧ ವಿಧಿಸಿರಲಿಲ್ಲ). ಜಾತಿ ಪದ್ಧತಿಯು ಮೂಲತ ಆಡಳಿತಗಾರರ ನಿರ್ದೇಶನದಂತೆ ನಡೆಯುವ ಒಂದು ಇಚ್ಛಾನುಸಾರ ಸಾಮಾಜಿಕ ಸಂಪ್ರದಾಯವಾಗಿದ್ದು ಮಾತ್ರವಲ್ಲದೆ ಕೌಟುಂಬಿಕ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗಲು ಬೇಕಾದಂತಹ ಅನುಕೂಲಕರ ಸಂಪ್ರದಾಯವಾಗಿತ್ತು. ಪರಮೇಶ್ವರನು ಶೋಷಣೆಯನ್ನು ಸಹಿಸುವುದಿಲ್ಲ. ಆದರೆ ತನ್ನ ಅನುಯಾಯಿಗಳು ಎಲ್ಲರನ್ನೂ ಸಮಾನರನ್ನಾಗಿ ಕಾಣಬೇಕು ಮತ್ತು ದುಃಖಿತರನ್ನು ಕಾಪಾಡಬೇಕು ಎಂದು ಇಚ್ಛಿಸುತ್ತಾನೆ ಎನ್ನುತ್ತದೆ ಸಾಮವೇದ

यो ददाति बुभूक्षितेभ्य: पीडितानां सहायक:
दु:खार्ताणां समाश्लिष्यति तमेव ईश: प्रसीदति ॥

ಯೋ ದದಾತಿ ಬುಭೂಕ್ಷಿತೇಭ್ಯಃ ಪೀಡಿತಾನಾಂ ಸಹಾಯಕಃ
ದುಃಖಾರ್ತಾಣಾಂ ಸಮಾಶ್ಲಿಷ್ಯತಿ ತಮೇವ ಈಶಃ ಪ್ರಸೀದತಿ ॥

ಮನುಷ್ಯರನ್ನು ಸಂತೋಷಪಡಿಸಿದರೆ, ಹಸಿದವರಿಗೆ ಅನ್ನ ನೀಡಿದರೆ, ದುಃಖಿತರ ದುಃಖವನ್ನು ಕಡಿಮೆ ಮಾಡಿದರೆ, ತೊಂದರೆಯಲ್ಲಿದ್ದವರಿಗೆ ಸಹಾಯಮಾಡಿದರೆ ಮತ್ತು ಅನ್ಯಾಯವಾದವರಿಗೆ ನ್ಯಾಯದೊರಕಿಸಿ ಕೊಟ್ಟರೆ ಪರಮೇಶ್ವರನು ಸಂತೋಷಿಸುತ್ತಾನೆ.

ಸಾವಿರ ವರುಷಗಳ ವಿದೇಶೀ ದಾಸ್ಯದಿಂದ ಭಾರತ 1947ರಲ್ಲಿ ಸ್ವಾತಂತ್ರ್ಯ ಪಡೆಯಿತು. ಇದರಿಂದ ಸಾಮಾಜಿಕ ಪಿಡುಗಾದ ಜಾತಿ ಪದ್ಧತಿಯನ್ನು ನಿರ್ಮೂಲಮಾಡಲು ಸ್ವತಂತ್ರವಾಯಿತು. ತಲೆತಲಾಂತರದಿಂದ ಜಾತಿ ಪದ್ಧತಿಯಿಂದ ತೊಂದರೆಗೊಳಗಾಗಿದ್ದವರಿಗೆ ವಿದ್ಯಾಸಂಸ್ಥೆಗಳಲ್ಲಿ ಮತ್ತು ಕೆಲಸವನ್ನು ಕೊಡಲು ಮೀಸಲಾತಿಯನ್ನು ಜಾರಿಗೆ ತರಲಾಗಿದೆ.

# ಮನುಸ್ಮೃತಿ

ಕ್ರಿ.ಪೂ. ಸುಮಾರು 3500ರಲ್ಲಿ ಭಾರತದ ವಾಯುವ್ಯಗಡಿಯಿಂದ ಬಂದ ಧಾಳಿಕೋರರ ತಂಡವು ಈ ದೇಶವನ್ನು ಗೆದ್ದುಕೊಂಡಿತು. ಈ ದೇಶದ ಪ್ರಜೆಗಳ ಐಹಿಕ ಜೀವನವನ್ನು ಜಯಿಸಿದ್ದು ಮಾತ್ರವಲ್ಲದೆ ಅವರ ಮೇಲೆ ಸಾಂಸ್ಕೃತಿಕ ಧಾಳಿಯನ್ನೂ ನಡೆಸ ಬಯಸಿತು. ಧಾಳಿಕೋರರು ತಮ್ಮ ಧರ್ಮವನ್ನು ಭಾರತೀಯ ಧಾರ್ಮಿಕ ಜೀವನದೊಡನೆ ಸಂಯೋಜಿಸುವ ಪ್ರಯತ್ನ ನಡೆಸಿದರು. ವೇದಗಳ ಮೇಲೂ ದೊಡ್ಡಮಟ್ಟದಲ್ಲಿ ಪ್ರಭಾವ ಬೀರುವ ಪ್ರಯತ್ನ ಮಾಡಿದರು.

ವೇದಾಂತ ಕ್ಷೇತ್ರದ ವ್ಯಕ್ತಿಗಳ ನಡುವಿನ ಸಂಬಂಧ, ಸಾಮಾಜಿಕ ನಡವಳಿಕೆಗಳಿಗೆ ವೇದಗಳು ದಾರಿದೀಪವಾಗಿತ್ತು ಮತ್ತು ಅವು ಸ್ವಭಾವತಃ ಏಕೇಶ್ವರ ತತ್ವವನ್ನು ಪುರಸ್ಕರಿಸಿತ್ತು. ಇರಾನಿ ಪದ್ಧತಿಯ ಸೂರ್ಯ ಮತ್ತು ಇಂದ್ರನ ಆರಾಧನೆ ಮತ್ತು ಪಶುಯಜ್ಞಗಳನ್ನು ಮಾಡಿ ಶುಚಿಯಾಗುವಂತೆ ವೈದಿಕ ಧರ್ಮವುನ್ನು ಬಲಾತ್ಕರಿಸಲಾಯಿತು. ಬಹಳಷ್ಟು ಮಹಾತ್ಮರು ದಕ್ಷಿಣ ಭಾರತಕ್ಕೂ ಹಿಮಾಲಯದ ಗುಹೆಗಳತ್ತಲೂ ಪಲಾಯನ ಮಾಡಿದರು.

ಇರಾನೀಯರು ಮತ್ತು ಏಷಿಯ ಮೈನರಿನ ರಾಜರು ಸಮಾಜವು ಬಲಹೀನವಾಗಿಯೂ, ತಮ್ಮ ಕೆಲಸಕ್ಕೆ ಉಪಯುಕ್ತವಾಗಿರುವಂತೆಯೂ ಮಾಡಲು ಅದನ್ನು ವಿಭಜಸಲು ಇಚ್ಛಿಸುತ್ತಿದ್ದರು. ನಂತರ ಕ್ರಿ.ಪೂ. ಸುಮಾರು 3250ರಲ್ಲಿ ಮನುವು ಒಂದು ದೃಢವಾದ ಸಾಮಾಜಿಕ ವಿಂಗಡನೆಯ ದೃಢವಾದ ಆಡಳಿತವನ್ನು ಪ್ರತಿಪಾದಿಸಿ ಅದನ್ನು ಮನುಸ್ಮೃತಿ ಎಂದು ಕರೆದನು. ಮನು ಸ್ವತಃ ಒಬ್ಬ ಪ್ರತಿಭಾವಂತ ವ್ಯಕ್ತಿಯಾಗಿದ್ದು ವೇದಕಾಲದ ಉತ್ತರಾರ್ಧದಲ್ಲಿ ಜೀವಿಸಿದ್ದನು.

ಸನಾತನ ಧರ್ಮದ (ಹಿಂದುತ್ವ) ಪ್ರತ್ಯಕ್ಷ ಸ್ವರೂಪವೇ ವೇದ. ಮನುಸ್ಮೃತಿಯ ಗುರಿ ವಿದೇಶೀಯರ ಜಯವಾಗಿತ್ತು. ಮನುಸೃಷ್ಟಿಸಿದ ಸಾಮಾಜಿಕ ವಿಭಜನೆಯು ತಮ್ಮ ಮೇಲೆ ತಂತ್ರಗಾರಿಕೆಯಿಂದ ಮಾಡಿದ ಮೋಸವೆಂದು ಹಿಂದೂಗಳು ಸ್ಪಷ್ಟವಾಗಿ ಗ್ರಹಿಸಬೇಕು. ಆದರೆ ಮನುಬರೆದ ಗಣಿತಶಾಸ್ತ್ರ ಗ್ರಂಥವು ಪ್ರತಿಭೆಯಿಂದ ಕೂಡಿದ್ದು ವಿಜ್ಞಾನಕ್ಕೆ ಮಾಡಿದ ಸೇವೆಯಾಗಿತ್ತು.

ಸಂಸ್ಕೃತದ ಮನುಸ್ಮೃತಿಯನ್ನು ಬರೆದ ಮನು ಒಬ್ಬ ಪುರಾತನ ಗ್ರಂಥಕರ್ತ. ಮನು ಎಂದರೆ 'ಮನುಷ್ಯ'. 'ಮನು' ಪುರಾತನ ಇಂದೂ-ಯೂರೋಪಿನ ಸಂಪ್ರದಾಯವನ್ನು ಪ್ರತಿಬಿಂಬಿಸ ಬಹುದು ಆದಾಗ್ಯೂ ಮನು ಒಬ್ಬ ಸಮಾನಾಂತರ ಆದರೆ ಸ್ವತಂತ್ರವಾಗಿ ವಿಕಾಸ ಹೊಂದಿದ (ಹೀಬ್ರೂ ಆಡಂ-'ಮನುಷ್ಯ' ನಂತೆ) ವನು ಆಗಿರಬಹುದು ಎಂಬ ಸಾಧ್ಯತೆಯೂ ಇದೆ. ವೇದಗಳನಂತರದ ಸಮಯದ ಶತಮಥ ಬ್ರಾಹ್ಮಣ ವೆಂಬ ಧಾರ್ಮಿಕ ಗ್ರಂಥವು, ಮನುಮಾಡಿದ ಉಪಕಾರಕ್ಕೆ ಪ್ರತ್ಯುಪಕಾರ ವೆಂಬಂತೆ ಒಂದು ಮೀನು ಮನುವಿಗೆ ನೀಡಿದ ಎಚ್ಚರಿಕೆಯನ್ನು - ದೊಡ್ಡ ಪ್ರವಾಹದಲ್ಲಿ ಬಹಳಷ್ಟು ಸಂಖ್ಯೆಯ ಮಾನವ ಜನಾಂಗ ನಾಶ ಹೊಂದುವುದಾಗಿ - ವಿವರಿಸುತ್ತದೆ. ಮೀನಿನ ಸಲಹೆಯಂತೆ ಮನುವು ಒಂದು ದೊಡ್ಡ ದೋಣಿಯನ್ನು ತಯಾರಿಸಿ ಪ್ರವಾಹಬಂದಾಗ ದೋಣಿಯನ್ನು ಮೀನಿನ ಬಾಲಕ್ಕೆ ಕಟ್ಟಲು ಅದು ಅವನನ್ನು ಪರ್ವತದ ಮೇಲೆ ವಿಶ್ರಮಿಸಲು ಯೋಗ್ಯವಾದ ಸ್ಥಳಕ್ಕೆ ಕೊಂಡೊಯುತ್ತದೆ. ಪುರಾಣಗಳಲ್ಲಿ ಈ ಮೀನನ್ನು ವಿಷ್ಣುವಿನ ಅವತಾರವೆಂದು ಪರಿಗಣಿಸಿದ್ದಾರೆ.

ಈ ಅವಧಿಯ ನಂತರದ ಹಿಂದೂತ್ವದ ಸಮೃದ್ಧವಾದ ಸೃಷ್ಟಿ ವಿದ್ಯೆಯ ಊಹಾಪೋಹಗಳಲ್ಲಿ – ಪುರಾಣಗಳು ಮತ್ತು ಮನುಸ್ಮೃತಿಯಲ್ಲೇ ವಿವರಿಸಿದಂತೆ ಬೃಹತ್ ಕಾಲಚಕ್ರದ (ಕಲ್ಪ) –8,640,000,000 ವರುಷಗಳ ಪ್ರತಿ ಉಪ ಕಾಲವಧಿಗೆ ಒಬ್ಬರಂತೆ ಹದಿನಾಲ್ಕು ಮನುಗಳು ಇದ್ದರು ಎನ್ನಲಾಗಿದೆ. ಪ್ರಕೃತ ಕಾಲ ಚಕ್ರವು ಏಳನೆಯ ಮನ್ವಂತರವಾಗಿದೆ. ಹದಿನಾಲ್ಕನೆಯ ಮನ್ವಂತರ ಮುಗಿದನಂತರ ಭೂಮಂಡಲವು ಲಯವಾಗುವುದು ಪೂರ್ವನಿಶ್ಚಿತ. ತದನಂತರ ಪುನಃ ಅಂತ್ಯವಿಲ್ಲದ ಸೃಷ್ಟಿ ಮತ್ತು ಲಯದ ಕಾರ್ಯಗಳ ಸರಣಿ ಇರುತ್ತದೆ. ಹೀಗಾದರೂ ಬ್ರಹ್ಮಾಂಡದ ಅಸ್ತಿತ್ವಕ್ಕೆ ಕಾಲದ ಮಿತಿ ಇಲ್ಲ.

ಪ್ರಜ್ಞಾವಂತನಾದ ಮತ್ತು ವಿವೇಚನಾಶಕ್ತಿ ಇರುವ ಮನುಷ್ಯವರ್ಗವು 2.5 ಮಿಲಿಯ ವರುಷಗಳಿಂದ ಭೂಮಿಯಲ್ಲಿದೆ ಎಂದು ಮನುವಿನ ಲೆಕ್ಕಾಚಾರವಾಗಿದೆ. ಆದರೆ ದ್ವಿಪಾದಿಯಾದ ಮತ್ತು ಮೃಗೀಯ ಅಂತಃಸ್ಫೂರ್ತಿಯಿರುವ ಮನುಷ್ಯ ಜನಾಂಗವು ಹದಿನೈದು ಮಿಲಿಯ ವರುಷಗಳಿಂದಲೂ ಅಸ್ತಿತ್ವದಲ್ಲಿದೆ. ಸೌರವ್ಯೂಹವು ಸುಮಾರು 4000 ಮಿಲಿಯ ವರುಷಗಳ ಮೊದಲು ಪರಮೇಶ್ವರನಿಂದ ಸೃಷ್ಟಿಸಲ್ಪಟ್ಟು, ಅದು ಇನ್ನೂ 8640 ×365 × 100 × 3,15,360,00 –3,15,360,000 – 315.36 ಮಿಲಿಯ ವರುಷಗಳ ಕಾಲ ಅಸ್ತಿತ್ವದಲ್ಲಿರುತ್ತದೆ. ಮನುವಿನ ಗಣಿತದಪ್ರಕಾರ ಪರಮೇಶ್ವರನು 'ತನ್ನ ಜೀವಮಾನ'ದ 100 ವರುಷಗಳನ್ನು ಸೌರವ್ಯೂಹಕ್ಕೆ ನೀಡಿರುತ್ತಾನೆ.

ಮನುಸ್ಮೃತಿ ಅಥವಾ ಸಾಂಪ್ರದಾಯಿಕವಾಗಿ ಮಾನವ ಧರ್ಮ ಶಾಸ್ತ್ರವು ನ್ಯಾಯಮತ್ತು ಅದಕ್ಕೆ ಸಂಬಂಧಪಟ್ಟ ಪ್ರಕಾರಣಗಳ ಪುಸ್ತಕವಾಗಿದೆ. ರಾಜನ ಆಡಳಿತವು ಪಾರದರ್ಶಕವಾಗಿರಬೇಕೆಂದು ಅದು ಒತ್ತಿ ಹೇಳುತ್ತದೆ. ರಾಜನಾದವನು ಪ್ರಜೆಗಳ ಆದಾಯದಲ್ಲಿ ಗರಿಷ್ಠ ಶೇಕಡ ಆರು ಭಾಗವನ್ನು ಪಡೆಯುವುದು ಉತ್ತಮವೆಂದ ವನು ಪ್ರತಿಪಾದಿಸಿದನು. ನಾಗರೀಕ (civil) ಮತ್ತು ಅಪರಾಧ ಕಾನೂನಿನ ಮುಖ್ಯ ಅಂಶಗಳ ಜೊತಗೆ ನಾಲ್ಕು ಆಶ್ರಮಗಳ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ, ಗಳ ಬಗ್ಗೆ ದೀರ್ಘವಾಗಿ ಈ ಪಠ್ಯವು ಚರ್ಚಿಸುತ್ತದೆ. ವಿದೇಶಿ ಧಾಳಿಕೋರರು ಕೆಲಸದ ವಿಭಜನೆಯನ್ನು ತಪ್ಪಾಗಿ ಅನ್ವಯಿಸುವಂತೆ ಮಾಡಿ ದೇಶವನ್ನು ವಿಭಜಿಸಿ ಜನತೆಯನ್ನು ಬಲಹೀನರನ್ನಾಗಿ ಮಾಡಿದರು. ಕೆಲಸದ ವಿಭಜನೆ ಸಾಮಾಜಿಕ ವಿಭಜನೆಯಾಗಿ ಪರಿವರ್ತನೆಗೊಂಡುದರ ಪರಿಣಾಮವಾಗಿ ಸಮಾಜವು ವರ್ಗೀಕರಣಗೊಳ್ಳುವ ಅವನತಿಯ ಹಾನಿ ಹಿಡಿಯಿತು, ಇದೇ ಜಾತಿ ಪದ್ಧತಿಯ ಚಾರಿತ್ರಿಕ ತಳಹದಿಯಾಯಿತು. ಮನುಸ್ಮೃತಿಯು ಭಾರತದ ರಾಜಕೀಯ ಮತ್ತು ಸಾಮಾಜಿಕ ಪದ್ಧತಿಯ ಅವನತಿಯ ಚರಿತ್ರಯ ಬಗ್ಗೆ ಮಾಹಿತಿ ನೀಡುವ ಅಮೂಲ್ಯವಾದ ಆಕರಗ್ರಂಥವಾಗಿದೆ. ಮನುಸ್ಮೃತಿಯು ಹಿಂದೂಗಳನ್ನು ಬಲಹೀನರನ್ನಾಗಿ ಮಾಡಿದೆ. ವೇದಗಳಿಗಿಂತ ಮನುಸ್ಮೃತಿಗೆ ಪ್ರಾಮುಖ್ಯತೆ ಕೊಟ್ಟದಕ್ಕೆ ಶಿಕ್ಷೆಯಾಗಿ ಭಾರತವು ವಿದೇಶೀಯರಿಂದ ಜಯಸಲ್ಪಟ್ಟಿತು. ಅಪ್ಪಟವಾದ ವೈದಿಕ ಧರ್ಮ ಮತ್ತು ಗೀತೆಯ ಧರ್ಮೋಪದೇಶದ ಪ್ರಕಾರ ಜಾತಿ ಪದ್ಧತಿಯು ನ್ಯಾಯ ಸಮ್ಮತ ವಲ್ಲದ ಅಪರಾಧವಾಗಿದೆ. ಕೆಲವೊಮ್ಮೆ ತಿಳಿಯದೆ ಜನರು ಅದನ್ನು ಅನುಸರಿಸುತ್ತಿದ್ದಾರೆ. ಭಾರತದ ಬಹಳಷ್ಟು ರಾಜಕೀಯ ಧುರೀಣರು ಮನುಸ್ಮೃತಿಯನ್ನು ತಮ್ಮ ಮತದ ಹಿತಕ್ಕಾಗಿ ಮತ್ತು ದೇಶವನ್ನು ವಿಭಜಿಸಲು ಮತ್ತು ಬಲಹೀನವನ್ನಾಗಿ ಮಾಡಲು ಉಪಯೋಗಿಸುತ್ತಿದ್ದಾರೆ. ಅವರೆಲ್ಲ ಪರಮೇಶ್ವರನ ಶತ್ರುಗಳಾಗಿದ್ದಾರೆ.

# ಉಪನಿಷತ್ತುಗಳು

ಉಪನಿಷತ್ ಎಂದರೆ ಅಜ್ಞಾನವನ್ನು ಪೂರ್ಣವಾಗಿ ತೊಡೆದು ಹಾಕುವುದು ಎಂದು ಅರ್ಥ. ಆಧ್ಯಾತ್ಮ ಜ್ಞಾನವನ್ನು ಹುಡುಕುವವರನ್ನು ಈಶ್ವರನ ಹತ್ತಿರಕ್ಕೆ ಹೋಗಲು ಇದು ಮಾರ್ಗದರ್ಶಿಯಾಗಿದೆ. ಉಪನಿಷತ್ತಿನ ಶ್ಲೋಕಗಳು ಆಧ್ಯಾತ್ಮ ಜ್ಞಾನವನ್ನು ಅರಸುತ್ತಿರುವವರ ಮನಸ್ಸಿನಲ್ಲಿ ಪವಿತ್ರವಾದ ವಿಚಾರಗಳನ್ನು ಜಾಗೃತಗೊಳಿಸುತ್ತದೆ. ಉಪನಿಷತ್ತಿನ ಶ್ಲೋಕಗಳನ್ನು ರಾಗಬದ್ಧವಾಗಿ ಹೇಳಿದಾಗ ಪವಿತ್ರವಾದ ಕಂಪನಗಳುಳ್ಳ ದೈವಿಕ ವಾತಾವರಣ ಸೃಷ್ಟಿಯಾಗುತ್ತದೆ.

ಒಟ್ಟು 108 ಉಪನಿಷತ್ತುಗಳಿವೆ. ಅವುಗಳಲ್ಲಿ ಕಥ, ಕೇನ, ಮುಂಡಕ, ಮಾಂಡುಕ್ಯ, ಪ್ರಶ್ನ, ಛಾಂದೋಗ್ಯ, ಶ್ವೇತಶ್ವತಾರ, ಈಶಾವಾಸ್ಯ, ನಾರಾಯಣ, ಮಹಾನಾರಾಯಣ, ತೈತ್ತರೇಯ, ಐತರೇಯ, ಬೃಹದಾರಣ್ಯಕ, ಸೂರ್ಯೋಪನಿಷತ್ತುಗಳು ಪ್ರಸಿದ್ಧವಾಗಿವೆ.

ಉಪನಿಷತ್ತುಗಳು ಬ್ರಹ್ಮಜ್ಞಾನದ ಸ್ವರೂಪ, ಮೋಕ್ಷಸಾಧನೆಯ ತತ್ವಗಳ ಅನ್ವೇಷಣೆ ಮಾಡುವ ಬಹಳ ಪುರಾತನವಾದ (16000 – 1000BC ) ಭಾರತೀಯ ಗ್ರಂಥವಾಗಿದೆ, ವೇದ ಪರಂಪರೆಯ ಅಂತಿಮ ಘಟ್ಟವನ್ನು ಪ್ರತಿನಿಧಿಸುವುದರಿಂದ ಇದಕ್ಕೆ ವೇದಾಂತವೆಂದೂ ಹೇಳುತ್ತಾರೆ. ವೇದಗಳ ಕಾಲದನಂತರ ವಿಕಸಿಸಿದ ಉಪನಿಷತ್ತುಗಳು ಆಧ್ಯಾತ್ಮಿಕ ಮತ್ತು ಲೌಕಿಕ ಜೀವನದಕುರಿತಾದ ತತ್ವಗಳನ್ನು ವ್ಯಾವಹಾರಿಕ ದೃಷ್ಟಿಯಿಂದಲೂ ಕಂಡು ಋಗ್ವೇದದ ಅಂತರಾರ್ಥವನ್ನು ವಿಷದವಾಗಿ ತಿಳಿಸಿಕೊಡುತ್ತವೆ. 'ಆತ್ಮ ಸಾಕ್ಷಾತ್ಕಾರ ' (ತತ್ತ್ವಂ ಅಸಿ)ದ ಬಗ್ಗೆ ಛಾಂದೋಗ್ಯ ಉಪನಿಷತ್ತಿನಲ್ಲೂ, 'ಅಮರತ್ವದ' ಬಗ್ಗೆ ಕಥೋಪನಿಷತ್ತಿನಲ್ಲೂ, 'ಆತ್ಮದ ಪರಕಾಯಪ್ರವೇಶ ' ಮತ್ತು 'ಮಾಯೆ'ಹಾಗೂ ಲೌಕಿಕ ಜಗತ್ತಿನ ಭ್ರಾಂತಿಕಾರಕ ಸ್ವಭಾವದ ಬಗ್ಗೆ ಶ್ವೇತಶ್ವತಾರ ಉಪನಿಷತ್ತಿನಲ್ಲೂ ಹೇಳಲಾಗಿದೆ.

ಸಾಮಾನ್ಯವಾಗಿ ಉಪನಿಷತ್ತುಗಳು ಸಂಕ್ಷಿಪ್ತವಾದ, ದೃಷ್ಟಾಂತವನ್ನುಳ್ಳ ಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವಂತಹ ಸಂವಾದ ರೂಪದಲ್ಲಿರುತ್ತದೆ. ಹದಿಮೂರು ಉಪನಿಷತ್ತುಗಳನ್ನು ವೈದಿಕ ಉಪನಿಷತ್ತುಗಳು ಎಂದು ಗುರುತಿಸಲಾಗಿದ್ದು ಉಳಿದವುಗಳಲ್ಲಿ ಹೆಚ್ಚಿನವು ವೇದಗಳ ಪ್ರಭಾವಹೊಂದಿರುವ ವೇದಕಾಲಾನಂತರದ ಉಪನಿಷತ್ತುಗಳಾಗಿವೆ.

# ವಿಷ್ಣುವಿನ ಹತ್ತು ಅವತಾರಗಳು ಮತ್ತು ಭೂಗರ್ಭದಕಾಲಮಾನ

| ಶಕೆ | ಉಪ-ಶಕೆ | ಕಾಲ | ಪ್ರಾರಂಭ-ಮುಕ್ತಾಯ (ಮಿಲಿಯ ವರುಷಗಳು) | |
|---|---|---|---|---|
| ಸೆನೊಜೊಯಿಕ್ | ಕ್ವಾಟೆನರಿ | ಹೊಲೊಸೀನ್ | 0.0115 - 0.00 | ಬುದ್ಧ ಶ್ರೀಕೃಷ್ಣ ಮತ್ತು ಶ್ರೀರಾಮ ಅವತಾರ |
| | | ಪ್ಲೈಸ್ಟೊಸೀನ್ | 1.81 - 0.0115 | ಪರಶುರಾಮ ಅವತಾರ |
| | ಟರ್ಷಿಯರಿ | ಪ್ಲೈಯೋಸೀನ್ | 2.59 - 3.60 | ವಾಮನ ಅವತಾರ |
| | | ಮೈಯೋಸೀನ್ | 7.25 - 20.4 | ನರಸಿಂಹ ಅವತಾರ |
| | | ಒಲಿಗೋಸೀನ್ | 23.4 - 28.4 | |
| | | ಇಯೋಸೀನ್ | 37.2 - 48.6 | ವರಾಹ ಅವತಾರ |
| | | ಪೇಲಿಯೋಸೀನ್ | 58.7 - 61.7 | |
| ಮೆಸೋಜೋಯಿಕ್ | ಕ್ರೆಟೇಸಿಯಸ್ | | 70.6 - 140 | ಸಂಕ್ರಮಣ ಕಾಲ |
| | ಜ್ಯುರಾಸಿಕ್ | | 151 - 197 | |
| | ಟ್ರೈಯಾಸಿಕ್ | | 204 - 250 | |
| ಪೇಲೇಯೊಜೋಯಿಕ್ | ಪರ್ಮಿಯನ್ | | 254 - 295 | |
| | ಕಾರ್ಬೋನಿಫೆರಸ್ | | 304 - 345 | ಕೂರ್ಮ ಅವತಾರ |
| | ಡಿವೊನಿಯನ್ | | 375 - 411 | ಮತ್ಸ್ಯ ಅವತಾರ |
| | ಸೈಲ್ಯೂರಿಯನ್ | | 419 - 439 | |
| | ಒರ್ಡೋವಿಸಿಯನ್ | | 446 - 479 | ಬ್ರಹ್ಮ ಶಕೆ |
| | ಕ್ಯಾಂಬ್ರಿಯನ್ | | 496 - 534 | |
| ಪ್ರಿಕ್ಯಾಂಬ್ರಿಯನ್ | ಪ್ರೊಟೆರೊಜೊಯಿಕ್ | | 630 - 2300 | |
| | ಆರ್ಕೆಯಿಯನ್ | | 2800 - 3600 | |
| | ಹೇಡಿಯನ್ | | 3850 - 4150 | |

# ವಿಷ್ಣುವಿನ ಹತ್ತು ಅವತಾರಗಳು

ವಿಷ್ಣುವಿನ ದಶಾವತಾರವನ್ನು ಭೂಮಿಯ ವಿಕಾಸವನ್ನು ವೈಜ್ಞಾನಿಕವಾಗಿ ವಿವರಿಸಲು ಹಿಂದೂ ಧರ್ಮವು ಉಪಯೋಗಿಸುತ್ತದೆ. ಪರಮಾತ್ಮ (ಈಶ್ವರ) ವಿಷ್ಣು ಸಮಾನಾರ್ಥ ಪದಗಳಾಗಿವೆ. ಪ್ರತಿಯೊಂದು ಜೀವಿಗೂ 'ಆತ್ಮ' ವಿರುತ್ತದೆ ಅದು 'ಪರಮ' 'ಆತ್ಮ'ನ ಅಂಶವಾಗಿರುತ್ತದೆ.

ಶೂನ್ಯದಿಂದ ಮನುಷ್ಯನ ಈಗಿನ ಸ್ವರೂಪದವರೆಗಿನ ವಿಕಸನವನ್ನು ವಿಷ್ಣುವಿನ (ಈಶ್ವರ) ದಶವತಾರದ (ಆತ್ಮದ ಬೇರೆ ಬೇರೆ ಅವಸ್ಥೆಯ) ಚರಿತ್ರೆಯ ಮೂಲಕ ಹೇಳುತ್ತಾರೆ. ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಶ್ರೀಕೃಷ್ಣ, ಭಗವಾನ್ ಬುದ್ಧ ಮತ್ತು ಕಲ್ಕಿ ಇವೇ ಹತ್ತು ಅವತಾರಗಳಾಗಿವೆ.

ಬಹಳ ಪೂರ್ವದಲ್ಲಿ ಈಶ್ವರನ ಸಂಕಲ್ಪದಂತೆ ಸೂರ್ಯನಲ್ಲಿ ಬಿಸಿ ಅನಿಲದ ಒಂದು ಅಂಶವು ಅಲ್ಲಿಂದ ತಪ್ಪಿಸಿಕೊಂಡು ಸೂರ್ಯನಸುತ್ತ ತಿರುಗುತಿತ್ತು. ಈಬಿಸಿ ಅನಿಲವು ತಣ್ಣಗಾದನಂತರ ಭೂಗ್ರಹವಾಗಿ ಘನೀಕರಣ ಗೊಂಡಿತು. ಮೊದಲಿಗೆ ಭೂಮಿಯು ಸಂಪೂರ್ಣ ನೀರಿನಿಂದ ಕೂಡಿತ್ತು. ಭೂಗ್ರಹದ ಮೊದಲ ಜೀವವೇ ಮೀನು (ಮತ್ಸ್ಯ). ಭೂಮಿಯ ವಿಕಾಸದಲ್ಲಿ ಪೇಲಿಯೋಜೊಯಿಕ್ ಸೈಲೂರಿಯನ್ –ಡಿವೊನಿಯನ್ ಕಾಲವನ್ನು ಮತ್ಸ್ಯದಕಾಲ ವೆಂದು ಗುರುತಿಸಲಾಗಿದೆ. ಈ ಕಾಲದಲ್ಲಿ ವೇದಗಳು ಸೃಷ್ಟಿಯಕುರಿತು ಚಿಂತಿಸುತ್ತಿದ್ದವು.

ಭೂಮಿಯ ವಿಕಾಸದ ಮುಂದಿನ ಹಂತ ಪೇಲಿಯೊಜೊಯಿಕ್ ಶಕೆಯ ಕಾರ್ಬೋನಿಫೆರಸ್ ಉಪ ಶಕೆ – ಜೀವವು ಉಭಯಚರ (ಭೂಮಿ, ಜಲ)ವಾಗಿತ್ತು. ಈ ಕಾಲದಲ್ಲಿ ಜೀವಿಗಳು ಗಾಳಿಯಿಂದ ನೇರವಾಗಿ ಆಮ್ಲಜನಕವನ್ನು ಉಸಿರಾಡುವ ಸ್ಥಿತಿಯನ್ನು ತಲುಪಿದ್ದವು. ವಿಷ್ಣುವಿನ ಎರಡನೆ ಅವತಾರ ಕೂರ್ಮಾವತಾರ (ಆಮೆಯ). ಆಮೆ ನೀರು ಮತ್ತು ಭೂಮಿಯಲ್ಲಿ ವಾಸಿಸಬಲ್ಲುದು.

ವಿಷ್ಣುವಿನ ಮೂರನೆಯ ಅವತಾರ ವರಾಹಾವತಾರ. ಭೂಮಿಯಲ್ಲಿ ವಾಸಿಸುತ್ತಿದ್ದರೂ ಕೆಸರಿನಲ್ಲಿ ನೆಮ್ಮದಿಯಾಗಿರುವ ಗುಣವುಳ್ಳದ್ದು. ಭೂಮಿಯ ಮೇಲೆ ಜನ್ಮ ನೀಡಲು ಕಲಿತ ಸಸ್ತನಿಯಾಗಿ ಭೂಮಿಯ ವಿಕಾಸ ಕ್ರಿಯೆಯ ತೃತೀಯ ಹಂತದ (ಇಯೋಸೀನ್–ಪೀಲಿಯೋಸೀನ್ ಶಕೆ). ತನ್ನ ಹಲ್ಲುಗಳ ಉಪಯೋಗದಿಂದ ಭೂಮಿಯ ಒಳಗಿನಿಂದ ಆಹಾರವನ್ನು ತೆಗೆಯುವ ಸ್ವಭಾವ ಉಳ್ಳದ್ದಾಗಿತ್ತು.

ನರಸಿಂಹ – ಅರ್ಧ ಮಾನವ ಅರ್ಧ ಪ್ರಾಣಿ – ಅವತಾರವು ವಿಷ್ಣುವಿನ ನಾಲ್ಕನೆಯ ಅವತಾರ. ಉದಾಹರಣೆಗೆ ಚಿಂಪಾಂಜಿ, ಒರಾಂಗೂಟಾಂಗ್, ಗೊರಿಲ್ಲ – ಭಾಗಶಃ ಮನುಷ್ಯನಂತೆ ಭಾಗಶಃ ಪ್ರಾಣಿಗಳಂತೆ ಕಾಣುತ್ತವೆ. ಹಿಂಸಕನಾದ ಹಿರಣ್ಯಕಶಿಪು ವನ್ನು ತನ್ನ ಹಲ್ಲು ಮತ್ತು ಉಗುರು ಗಳಿಂದ ನರಸಿಂಹನು ನಾಶಪಡಿಸಿದನೆಂದು ಕತೆಗಳು ತಿಳಿಸುತ್ತವೆ. ಭೂಮಿಯು ವಿಕಾಸಗೊಳ್ಳುತ್ತಿದ್ದ ಕಾಲದಲ್ಲಿ ಕ್ರಿಮಿ ಕೀಟಗಳು ಮನುಷ್ಯನ ಆಹಾರವನ್ನು ನಿರಂತರವಾಗಿ ನಾಶಪಡಿ ಸುತ್ತಿದ್ದವು. ಮನುಷ್ಯರು ಕಾಡಿನಲ್ಲಿ ವಾಸಿಸುತ್ತಿದ್ದು ಬಾಳೆಹಣ್ಣು ಅವರ ಮುಖ್ಯ ಆಹಾರವಾಗಿತ್ತು. ಒಂದು ರೀತಿಯ ಕೀಟವು ಬಾಳೆಗಿಡಗಳನ್ನು ನಾಶಪಡಿಸುತ್ತಿತ್ತು.

ಭಾಗಶಃ ಮಾನವ ಮತ್ತು ಭಾಗಶಃ ಪ್ರಾಣಿರೂಪವಾದ–ನರಸಿಂಹ–ಅವತಾರವು ಬಾಳಗಿಡಗಳನ್ನು ಹಲ್ಲು ಮತ್ತು ಉಗುರನ್ನು ಉಪಯೋಗಿಸಿ ಕೀಟಗಳಿಂದ ರಕ್ಷಿಸುವ ತಂತ್ರವನ್ನು ಅಭಿವೃದ್ಧಿ ಪಡಿಸಿತು. ಈಗಲೂ ಕೂಡ ಬಾಳೆಗಿಡದ ಕೀಟಗಳು ವಾನರ – ಒರೆಂಗೂಟಾನ್, ಬಬೂನ್ ಇತ್ಯಾದಿ– ಜಾತಿಯ ವೈರಿಯಾಗಿದೆ. ಹೀಗಾಗಿ ಹಿಂದೂ ಧಾರ್ಮಿಕ ಕ್ರಿಯೆಗಳಲ್ಲಿ ಬಾಳೆಗೆ ವಿಶೇಷ ಸ್ಥಾನವಿದೆ. ಭೂಮಿಯ ವಿಕಾಸದ ಈ ಹಂತವು ಒಲಿಗೋಸೀನ್ – ಮೈಯೋಸೀನ್ ಶಕೆಯ ಸೆನೋಜೋಯಿಕ್ ಕಾಲವಾಗಿರುತ್ತದೆ.

ವಾಮನ ಅವತಾರ ವಿಷ್ಣುವಿನ ಐದನೆಯ ಅವತಾರ (ಭೂಮಿಯ ವಿಕಾಸದ ಹೋಮೊಗನ್, ನಿಯೋಜಿನ್ ಕಾಲದ ಮೈಯೋಸಿನ್ ವಿಭಾಗ ಸಮಯ). ಮನುಷ್ಯ ತನ್ನೆರಡುಕಾಲಿನ ಮೇಲೆ ನಿಲ್ಲುತ್ತಿದ್ದ ಆದರೂ ನಡೆದಾಡಲು ತನ್ನ ಕೈಗಳ ಸಹಾಯ ಪಡೆಯುತ್ತಿದ್ದ ಮತ್ತು ಮನುಷ್ಯನ ಎತ್ತರ ಈಗಿನ ಮನುಷ್ಯನ ಎತ್ತರದ ಅರ್ಧದಷ್ಟು ಮಾತ್ರವಿತ್ತು.

ವಿಷ್ಣುವಿನ ಆರನೆಯ ಅವತಾರ ಪರಶುರಾಮ – ಅವತಾರ. ಬದುಕಲು ಪರಶು (ಕೊಡಲಿ) ವಿನ ಸಹಾಯ ಪಡೆಯುತ್ತಿದ್ದನು. ಬದುಕಲು ದೈಹಿಕ ಶಕ್ತಿ ಮಾತ್ರವಲ್ಲದೆ ಬೌದ್ಧಿಕ ಉಪಕರಣ/ತಂತ್ರವನ್ನು ಉಪಯೋಗಿಸುತ್ತಿದ್ದನು. ಆಹಾರದ ಉತ್ಪಾದನೆಗೆ (ಕೊಡಲಿಯನ್ನು ಉಪಯೋಗಿಸಿ) ಬೇಸಾಯ ಮಾಡುತ್ತಿದ್ದನು. ಅವನು ಬೆಂಕಿಯ ಉಪಯೋಗವನ್ನೂ ಕಲಿತನು. ಪರಶುರಾಮನು ಕಾರ್ತಿವೀರ್ಯಾರ್ಜುನನನ್ನು (ಕ್ಷತ್ರಿಯವೆಂಬ ಮರ) ಕೊಂದು ಕ್ಷತ್ರಿಯರ ನಿರ್ಮೂಲಕ್ಕಾಗಿ ಇಪ್ಪತ್ತೊಂದುಸಾರಿ ಯುದ್ಧ ಮಾಡಿದನು. ಕಾರ್ತಿವೀರ್ಯಾಜುನ ಎಂಬುದು ಒಂದು ಜಾತಿಯ ಬಹಳ ಕೊಂಬೆ ರೆಂಚೆಗಳಿದ್ದ ಪರಶುರಾಮನು ಕೊಡಲಿಯನ್ನು ಆವಿಷ್ಕರಿಸಿ ಅದರ ಸಹಾಯದಿಂದ ಕಾಡಿನಲ್ಲಿದ್ದ ಕಾರ್ತಿವೀರ್ಯಾರ್ಜುನ ಮರಗಳನ್ನು ಇಪ್ಪತ್ತೊಂದುಸಾರಿ ಕತ್ತರಿಸಿ ಭೂಮಿಯನ್ನು ಬೇಸಾಯಕ್ಕೆ ಯೋಗ್ಯವಾಗುವಂತೆ ಮಾಡಿದನು. ಇದು ಪರಶುರಾಮನು ಕ್ಷತ್ರಿಯರನ್ನು ನಾಶಪಡಿಸಿದುದರ (21 ಸಾರಿ) ಅಂತರಾರ್ಥ. ಈ ಸಮಯದಿಂದ ಮಾನವನು ಬದುಕಲು ಬೇಸಾಯವನ್ನು ಅವಲಂಬಿಸಿದ. ಹೊಸ ಆಯುಧದ – ಕೊಡಲಿ – ಉಪಯೋಗದಿಂದಾಗಿ ಪರಶುರಾಮನು ಅಜೇಯನಾಗಿ ಉಳಿದನು. ಪರಶುರಾಮನು ಭೂಮಿಯ ವಿಕಾಸದ ಪ್ಲೈಸ್ಟೋಸೀನ್ ಶಕೆಯಲ್ಲಿ – ಪ್ರಾಚೀನ ಬೇಸಾಯ ಮಾತ್ರ ತಿಳಿದಿದ್ದ – ಇದ್ದನು.

ವಿಷ್ಣುವಿನ ಏಳನೆಯ ಅವತಾರವೇ ರಾಮಾವತಾರ. ಅವನು ಬಿಲ್ಲು ಬಾಣಗಳನ್ನು ಉಪಯೋಗಿಸುತ್ತಿದ್ದ, ದೂರದಿಂದ ಆಕ್ರಮಣ ಮಾಡಲು ಸಾಧ್ಯವಾಗುತ್ತಿತ್ತು. ಕ್ರೂರ ಪ್ರಾಣಿಗಳಿಂದಲೂ ಶತ್ರುಗಳಿಂದಲೂ ಸುರಕ್ಷಿತವಾಗಿದ್ದು ಪರಶು–ಕೊಡಲಿಗಿಂತಲೂ ಬಿಲ್ಲು ಬಾಣ ಪರಿಣಾಮಕಾರಿ ಎಂದು ಪ್ರಮಾಣಿತವಾಯಿತುಃ ರಾಮನ ಕಾಲದಿಂದ ನಿಜವಾದ ರಾಜಾಡಳಿತವಿರುವ ಮಾನವ ಸಂಸ್ಕೃತಿ ಪ್ರಾರಂಭವಾಯಿತು. ದೇಶದ ಕಾನೂನು ಮಾಡುವಲ್ಲಿ ಜನಾಭಿಪ್ರಾಯದ ಮಹತ್ವವನ್ನು ಪರಿಚಯಿಸಿದನು. ಪ್ರಜಾ ಪ್ರಭುತ್ವವನ್ನು ಪರಿಚಯಸಿದ್ದು ಮಾತ್ರ ವಲ್ಲದೆ ನೇಗಿಲನ್ನು ಉಪಯೋಗಿಸಿಕೊಂಡು ಅಹಲ್ಯೆಯನ್ನು ಉದ್ಧಾರ ಮಾಡಿದನು – ನೇಗಿಲನ್ನು ಉಪಯೋಗಿಸಿ ಬರಡು ನೆಲದಲ್ಲಿ ಬೇಸಾಯ ಮಾಡುವ ಪ್ರಕ್ರಿಯ –. ರಾಮನನ್ನು ಸೀತಾಪತಿ

ಎಂದೂ ಕರೆಯುತ್ತಾರೆ. ಸಂಸ್ಕೃತದಲ್ಲಿ ಸೀತೆ ಎಂದರೆ 'ನೇಗಿಲಿನ ಶಿರ' ಎಂದು ಅರ್ಥ. ಶ್ರೀರಾಮನು ಬೇಸಾಯ ಮಾಡಲು ನೇಗಿಲನ್ನು ಪರಿಚಿಯಸಿದನು. ಶ್ರೀರಾಮನು ಭೂವಿಕಾಸದ ಸೆನೋಜೋಯಿಕ್ ಶಕೆಯ ಹೋಲೋಸೀನ್ ಕಾಲದಲ್ಲಿದ್ದನು.

ವಿಷ್ಣುವಿನ ಎಂಟನೆಯ ಅವತಾರ ಶ್ರೀಕೃಷ್ಣನದು. ಎಲ್ಲ ರೀತಿಯಿಂದಲೂ ಅವನು ಪರಿಪೂರ್ಣನಾದ ಮನುಷ್ಯ. ವಿಜ್ಞಾನ, ತತ್ವಜ್ಞಾನ, ಹಾಗೂ ಧರ್ಮಶಾಸ್ತ್ರಗಳಲ್ಲಿ ತಿಳುವಳಿಕೆಯ ಉಪಯೋಗವನ್ನು ಪ್ರಸರಿಸಿದನು. ಒಳ್ಳೆಯದು ಮತ್ತು ಕೆಟ್ಟದಕ್ಕೆ ಪ್ರಮಾಣವನ್ನು ನಿಗದಿಪಡಿಸಿದನು. ರಾಜನೀತಿಯಲ್ಲಿ ಆಧುನಿಕತೆಯನ್ನು ಪರಿಚಯಿಸಿ ಎಲ್ಲ ಮಾನವರೂ ಶಾಂತಿ ಮತ್ತು ಘನತೆಯಿಂದ ಜೀವಿಸಲು ಅನುವು ಮಾಡಿಕೊಟ್ಟನು.

ಬುದ್ಧ-ಸಿದ್ದಾರ್ಥ ಗೌತಮ ಅಥವಾ ಬುದ್ಧದೇವ ವಿಷ್ಣುವಿನ ಒಂಬತ್ತನೆಯ ಅವತಾರ. 'ಅಹಿಂಸಾ ಪರಮೋಧರ್ಮ' ವೆಂಬ ಅತಿ ಮಧುರವಾದ ಮೂರು ಶಬ್ದಗಳನ್ನು ಪ್ರಪಂಚಕ್ಕೆ ಕೊಟ್ಟನು.

ವಿಷ್ಣುವಿನ ಹತ್ತನೆಯ ಅವತಾರ ಇನ್ನೂ ಆಗಬೇಕಷ್ಟೆ. ಅದನು 'ಕಲ್ಕಿ' ಎನ್ನುತ್ತಾರೆ. ಕಲ್ಕಿ ಎಂದರೆ ಥರ್ಮೋನ್ಯೂಕ್ಲಿಯರ್ ಸಹಾಯದಿಂದ ಜನ ಸಾಮಾನ್ಯರ ನೋವು/ಕಷ್ಟವನ್ನು ತೊಡೆಯುವವನು ಎಂದು.

# ಭಗವಾನ್ ಮಹಾವೀರ

ವೈಶಾಲಿಯ ಪ್ರಭಾವಶಾಲಿ ಕ್ಷತ್ರಿಯ ಮುಖಂಡ ಸಿದ್ಧಾರ್ಥನ ಮಗ ಮಹಾವೀರ. ಅವನು ಕ್ರಿ. ಪೂ. 509ರಲ್ಲಿ ಜನಿಸಿದನು. ಭಗವಾನ್ ಮಹಾವೀರನಿಗೆ ಬೇಕಾದ ಅನುಕೂಲತೆಗಳೆಲ್ಲ ಇದ್ದವು. ಅವನಿಗೆ ಬೇಕಾದಷ್ಟು ಹಣ, ಸುಂದರವಾದ ಹೆಂಡತಿ ಮತ್ತು ಒಳ್ಳೆಯ ಕುಟುಂಬ ಎಲ್ಲವೂ ಇತ್ತು. ಪಶುಬಲಿ ಕೊಡುವ ಧರ್ಮಾಚರಣೆಯನ್ನು ಅವನು ವಿರೋಧಿಸುತ್ತಿದ್ದನು. ವೇದಗಳ ಪುನರುತ್ಥಾನಕ್ಕೆ ಅವನ ಬೆಂಬಲವಿದ್ದರೂ 'ಯಜ್ಞ'ಗಳ ಆಚರಣೆಯನ್ನು ವಿರೋಧಿಸುತ್ತಿದ್ದನು. ಮಾನವನ ಅಸ್ತಿತ್ವದ ಸತ್ಯವನ್ನು ತಿಳಿಯಲು ಉತ್ಸುಕನಾಗಿ ಪ್ರಾಪಂಚಿಕ ಸುಖಗಳನ್ನು ಬಿಟ್ಟನು.

ಮೋಕ್ಷವನ್ನು ಪಡೆಯುವುದೇ ಪರಮಾನಂದವೆಂದು ತನ್ನ ಶಿಷ್ಯರಗೆ ಭೋಧಿಸಿದನು. ಪ್ರಾಮಾಣಿಕವಾದ ಚಿಂತನೆ, ಪ್ರಾಮಾಣಿಕವಾದ ಧರ್ಮ ಶ್ರದ್ಧೆ, ಮತ್ತು ಪ್ರಾಮಾಣಿಕ ಜೀವನ – 'ಮೂರು ರತ್ನಗಳು' (ತ್ರಿರತ್ನ)–ದಿಂದ ಮೋಕ್ಷ ಪಡೆಯಬಹುದು ಎಂದು ಸಾರಿದನು.

ಭಗವಾನ್ ಮಹಾವೀರನು ಪರಸನಾಥ ತೀರ್ಥಂಕರರ ಅನುಯಾಯಿಯಾಗಿದ್ದನು. ಪಶುಬಲಿಯನ್ನು ಕೊಡುವುದು ಅವನಿಗೆ ಬಹಳ ನೋವುಂಟು ಮಾಡುತ್ತಿತ್ತು. ಜಾತಿ ಪದ್ಧತಿಯನ್ನು ಪ್ರತಿಭಟಿಹಿಸುತ್ತಿದ್ದನು. ಬ್ರಾಹ್ಮಣರ ಕೊಡುಗೆಯನ್ನು ಶ್ರೇಷ್ಠವೆಂದು ಪರಿಗಣಿಸಬಾರದೆಂದು ಹೇಳಿದನು. 'ವೈಶ್ಯರ' – ವ್ಯಾಪಾರಿ ಸಮುದಾಯದ ಕೊಡುಗೆ – ಮಾನವ ಜನಾಂಗಕ್ಕೆ – ಹೆಚ್ಚೆಂದು ತೊರಿಸಿಕೊಟ್ಟನು. ವೈಶಾಲಿಯವಣಿಕ ಸಮುದಾಯ ಅವನಿಗೆ ಬೆಂಬಲ ನೀಡಿದ್ದಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಅವನ ಅನುಯಾಯಿಗಳಾದರು. ಅವರು ತಮ್ಮನ್ನು ಜೈನರೆಂದು ಕರೆದುಕೊಳ್ಳಲು ಪ್ರಾರಂಭಿಸಿದರು.

ಜೈನ ಮತವು ನಾಲ್ಕು ಮೂಲಭೂತ ತತ್ವಗಳನ್ನು – (1) ಅಹಿಂಸೆ (2) ಪ್ರಾಮಾಣಿಕ ಜೀವನ (3) ಕಳ್ಳತನ ಮಾಡದಿರುವುದು. (4) ಪರರ ಆಸ್ತಿಗೆ ಆಸೆ ಪಡದಿರುವುದು – ಪ್ರತಿಪಾದಿಸುತ್ತದೆ. ಭಗವಾನ್ ಮಹಾವೀರನ್ನು ಬ್ರಹ್ಮಚರ್ಯ ವೆಂಬ ಐದನೆ ತತ್ವವನ್ನು ಸೇರಿಸಿದನು. ಭಗವಾನ್ ಮಹಾವೀರನು 'ಪೂರ್ಬ' ಎಂಬ ಪ್ರಮುಖವಾದ ಪವಿತ್ರ ಗ್ರಂಥವನ್ನು ರಚಿಸಿದನು. ಈ ಪುಸ್ತಕದಲ್ಲಿ 'ದಾದಶ ಅಂಗ' ಎಂಬ ಹನ್ನೆರಡು ಅಧ್ಯಾಯಗಳಿವೆ. ಈ ಪುಸ್ತಕವನ್ನು ಮಹಾವೀರನ ಅನುಯಾಯಿಗಳು ತಮ್ಮ ಮಾರ್ಗದರ್ಶಿ ಎಂದು ಸ್ವೀಕರಿಸಿದ್ದಾರೆ. ಭಗವಾನ್ ಮಹಾವೀರನ ತತ್ವವನ್ನು ಅರ್ಥಮಾಡಿ ಕೊಳ್ಳಲು. 'ಜೈನ ಕಲ್ಪ ಸೂತ್ರ' ಮತ್ತು 'ಜೈನ ಬಾಹುಬಲಿಸೂತ್ರ' ಎಂಬ ಇನ್ನೆರಡು ಮುಖ್ಯವಾದ ಗ್ರಂಥಗಳೂ ಉಪಯುಕ್ತ. ಮಹಾವೀರನ ಅನುಯಾಯಿಗಳನ್ನು 'ಜೈನ'ರೆನ್ನುತ್ತಾರೆ ಇವರು ಶಾಖಾಹಾರಿಗಳು.

# ಶ್ರೀ ಶಂಕರ (ಶಂಕರಾಚಾರ್ಯ)

ಭಾರತದ ಪಶ್ಚಿಮ ಕರಾವಳಿಯ ಕೇರಳದಲ್ಲಿರುವ ಕಾಲಡಿಯಲ್ಲಿ ಶ್ರೀ ಶಂಕರರು ಕ್ರಿ.ಶ. 788ರಲ್ಲಿ ಜನಿಸಿದರು. ಶ್ರೀ ಶಂಕರರು ಸರ್ವ ಶ್ರೇಷ್ಠ ತತ್ವಜ್ಞಾನಿ.

ಹುಡುಗನಾಗಿದ್ದಾಗಲೇ ವೇದ ಪಾಠಶಾಲೆಗೆ ಹೋಗುತ್ತಿದ್ದ ಶಂಕರರು ತೀಕ್ಷ್ಣಮತಿಯಾಗಿದ್ದರು. ಈ ಕಾರಣದಿಂದಾಗಿ ಪವಿತ್ರವಾದ ವೇದಗಳಲ್ಲಿರುವ ಜ್ಞಾನದಬಗ್ಗೆ – ವಿಚಾರಮಾಡಿ, ಚುರುಕು ಬುದ್ಧಿಯ ಈ ಪ್ರತಿಭಾಶಾಲಿಯು, ಸರಿಯಾಗಿ ವಿಶ್ಲೇಷಣೆ ಮಾಡಿ ವಿವರಣೆಗಳನ್ನು ಕೊಟ್ಟು ಸೂತ್ರರೂಪದಲ್ಲಿ ಸಮನ್ವಯವಾದ ತತ್ವವನ್ನು ವ್ಯಕ್ತಪಡಿಸಿದರು. ತನ್ನ ಬುದ್ಧಿಯು ಈ ಪ್ರಪಂಚದ ಕಲುಷಿತ ನೀಚತನದಿಂದ ಹಾಳಾಗುವ ಮೊದಲೇ ಪ್ರಪಂಚವನ್ನು ಪರಿತ್ಯಾಗ ಮಾಡಿ, ಏಕೇಶ್ವರವಾದವನ್ನು ಸ್ವೀಕರಿಸಿ ಪರಮೇಶ್ವರನನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳುವುದಕ್ಕಾಗಿ ತಮ್ಮ ಜೀವನವನ್ನು ಮೀಸಲಾಗಿಟ್ಟರು.

ತನ್ನ ತಾಯಿಗೆ ಆಕೆಯ ಅಂತ್ಯಕಾಲದಲ್ಲಿ ಅವರಬಳಿ ಇರುವುದಾಗಿ ಭರವಸೆ ನೀಡಿ ಈ ಮೋಹರಹಿತ ಏಕಾಂತವಾದಿಯು ತನಗೆ ಸಂನ್ಯಾಸ ದೀಕ್ಷೆಯನ್ನು ನೀಡಿ ಅದರ ರಹಸ್ಯಗಳನ್ನು ತಿಳಿಸಬಲ್ಲ ಮತ್ತು ಪರಮಶ್ರೇಷ್ಠನನ್ನು ತಲುಪಲು ಮಾರ್ಗವನ್ನು ತೋರಿಸಬಲ್ಲ ಗುರುವನ್ನರಸುತ್ತಾ ಹೊರಟರು. ನರ್ಮದಾ ನದಿಯ ದಡದಲ್ಲಿರುವ ಓಂಕಾರನಾತ ಎಂಬಲ್ಲಿ ಗೋವಿಂದ ಭಗವತ್ಪಾದರು ಗುರುಗಳಾಗಿ ಸಿಕ್ಕಿದರು. ಶಂಕರರು ಅವರೊಂದಿಗೆ ಇದ್ದು ಪರಮ ಸತ್ಯದ ಪ್ರತಿಯೊಂದು ಮುಖವನ್ನು ಪರಿಶೋಧಿಸಿದರು.

ಅದ್ವೈತ ವೇದಾಂತವನ್ನು ಪ್ರತಿಷ್ಠಾಪಿಸುವ ಗುರುವಿನ ಆಜ್ಞೆಯನ್ನು ಪೂರೈಸುವ ಉದ್ದೇಶದಿಂದ ಈ ಯುವ ಮೇಧಾವಿ ವೈದಿಕ ಧರ್ಮದ ಮತ್ತು ಸಂಸ್ಕೃತಿಯ ಪುರಾತನ ಪೀಠವಾದ ವಾರಣಾಸಿಗೆ ಹೋದರು ಮತ್ತು ಅದ್ವೈತದ ಸಂದೇಶವನ್ನು ಪ್ರಸಾರಮಾಡಿದರು. ಅಲ್ಲಿ ಬೇರೆ ಬೇರೆ ಅಭಿಪ್ರಾಯ ಗಳಿರುವ ಘನವಾದ ವಿದ್ವಾಂಸ ರೊಡನೆ ತಪ್ಪು ನಂಬಿಕೆಗಳನ್ನು ತೆರೆದಿರಿಸುತ್ತಾ, ಕಲ್ಪಿತ ಖಚಿತತೆಗಳನ್ನು ಪ್ರಶ್ನಿಸುತ್ತಾ, ಚರ್ಚೆ ನಡೆಸಿ ತಮ್ಮ ಯೋಚನೆ/ವಿಚಾರಗಳ ಶ್ರೇಷ್ಠತೆಯನ್ನು ಸ್ಥಾಪಿಸಿದರು. ಅವರ ನಾಲ್ಕು ಶಿಷ್ಯರಲ್ಲಿ ಮೊದಲನೆಯವರಾದ ಸನಂದನ – ಮುಂದೆ ಪದ್ಮಪಾದರೆಂದುಖ್ಯಾತರಾದವರು – ಅವರನ್ನು ಸೇರಿದರು.

ವಾರಣಾಸಿಯಿಂದ ಈ ಆಧ್ಯಾತ್ಮ ದಿಗ್ಗಜರು ತಮ್ಮ ಸಮನ್ವಯ ತತ್ವದ ಸಂದೇಶವನ್ನು ಸಾರುತ್ತಾ ತಮ್ಮ ಶಿಷ್ಯರೊಂದಿಗೆ ಬದರಿಗೆ ಪ್ರಯಾಣ ಮುಂದುವರೆಸಿದರು. ಅವರು ಪ್ರಯಾಗ, ಹರಿದ್ವಾರ, ಹೃಷೀಕೇಶ, ಶ್ರೀನಗರ, ರುದ್ರಪ್ರಯಾಗ, ನಂದಪ್ರಯಾಗ, ಕಾಮರೂಪ ಮತ್ತು ಗೋಮುಖ ಮುಂತಾದ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಅಲ್ಲಿರುವ ದೇವರನ್ನು ಪೂಜಿಸಿದರು. ಇದರಿಂದ ನಿರ್ಗುಣ ಬ್ರಹ್ಮನನ್ನು – ಪರಮೇಶ್ವರನನ್ನು – ತಿಳಿದಿರುವವರು ದೇವತೆಗಳ ವಿಗ್ರಹವನ್ನೊ ಪೂಜಿಸುವುದರಿಂದ ಏನೂ ಕಳೆದುಕೊಳ್ಳುವುದಿಲ್ಲವೆಂಬ ವಿಷಯವನ್ನು ಪ್ರಮಾಣೀಕರಿಸಿದರು. ಶಂಕರರು ಹತ್ತು ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರಗಳಿಗೆ ವ್ಯಾಖ್ಯಾನವನ್ನು ಬರೆದು ತಮ್ಮ ಸಿದ್ಧಾಂತವನ್ನು ಭದ್ರವಾದ ಬುನಾದಿಯ ಮೇಲೇ ಸ್ಥಾಪಿಸಿದರು.

ಅವರು ದೇಶದ ಉದ್ದಗಲಕ್ಕೂ ನಾಲ್ಕು ಸಾರಿ ಸಂಚರಿಸಿ ನಾಲ್ಕು ಮುಖ್ಯ ಮಠಗಳನ್ನು ನಾಲ್ಕು ದಿಕ್ಕುಗಳಲ್ಲಿ – ಶೃಂಗೇರಿ ಮಠವನ್ನು ದಕ್ಷಿಣದಲ್ಲಿ, ಶಾರದಾಮಠವನ್ನು ಪಶ್ಚಿಮದ ದ್ವಾರಕೆಯಲ್ಲಿ, ಉತ್ತರದ ಬದರಿಕಾಶ್ರಮದಲ್ಲಿ ಜ್ಯೋತಿರ್ಮಠವನ್ನು ಮತ್ತು ಪೂರ್ವದ ಪುರಿಯಲ್ಲಿ ಗೋವರ್ಧನ ಮಠವನ್ನು – ಸ್ಥಾಪಿಸಿದರು. ತಮ್ಮ ನಾಲ್ಕು ಶಿಷ್ಯರನ್ನು ಸಂನ್ಯಾಸಿಗಳಾಗಿ ಈ ಮಠಗಳ ಶಿಷ್ಯವರ್ಗದ ಆಧ್ಯಾತ್ಮ ಯೋಗಕ್ಷೇಮವನ್ನು ಉತ್ತೇಜಿಸುವಂತೆ ನೇಮಕಮಾಡಿದರು. ಒಂದೊಂದು ಮಠಕ್ಕೆ ಒಂದೊಂದು ವೇದ ವೆಂದು –ಋಗ್ವೇದವನ್ನು ಗೋವರ್ಧನ ಮಠಕ್ಕೆ, ಯಜುರ್ವೇದವನ್ನು ಶೃಂಗೇರಿ ಮಠಕ್ಕೆ, ಸಾಮವೇದವನ್ನು ಶಾರದಾಮಠಕ್ಕೆ ಮತ್ತು ಅಥರ್ವ ವೇದವನ್ನು ಜ್ಯೋತಿರ್ಮಠಕ್ಕೆ – ವಹಿಸಿಕೊಟ್ಟರು.

ಆ ಕಾಲದಲ್ಲಿ ಹಲವು ಆಕ್ಷೇಪಣೀಯ ಧರ್ಮಪಂಥಗಳು ಭಾರತೀಯ ಸಮಾಜವನ್ನು ಕಲುಷಿತಗೊಳಿಸಿದ್ದು, ದೇವಸ್ಥಾನಗಳು ಆಯ್ದವ್ಯಕ್ತಿಗಳ ಭ್ರಷ್ಟ ಅರ್ಚಕರ ಕೂಟದಕೈಯಲ್ಲಿದ್ದು ಭೀಕರ ರೀತಿಯ ಪೂಜೆಗಳನ್ನು ಮಾಡುತ್ತಿದ್ದರು ಮತ್ತು ಪ್ರಾಣಿಬಲಿಯನ್ನು ಕೊಡುತ್ತಿದ್ದರು. ಶಂಕರರು ಧರ್ಮಗ್ರಂಥಗಳ ಆಧಾರದಿಂದ ಮತ್ತು ತಮ್ಮ ಜಿಜ್ಞಾಸಾಚಾತುರ್ಯದಿಂದ ಈ ಪೂಜಾಕ್ರಮಗಳು ವೇದದ ಚೈತನ್ಯಕ್ಕೆ ಪ್ರತಿಕೂಲವಾಗಿವೆ ಎಂದು ರುಜುವಾತು ಮಾಡಿದರು. ಈ ಭ್ರಷ್ಟ ಅಭ್ಯಾಸಗಳನ್ನು ಏಕೇಶ್ವರ ತತ್ವದ ಉದಾತ್ತ ಪೂಜಾನಿಯಮಗಳನ್ನು ಹೇಳಿಕೊಟ್ಟು ತಿದ್ದಿಸರಿಪಡಿಸಿದರು. ವಿಗ್ರಹಾರಾಧನೆಯು ಪ್ರವಾದಿಗಳನ್ನು ಗೌರವಿಸಲು ಮಾಡುವುದೆಂಬ ವಿಷಯವನ್ನು ಅವರು ಪ್ರಮಾಣೀಕರಿಸಿದರು ಆದರೆ ಉತ್ತಮ ಫಲಿತಾಂಶ ಪಡೆಯಲು ಪರಮೇಶ್ವರನಿಗೆ ಪ್ರಾರ್ಥನೆಮಾಡಬೇಕು.

ಅವರತಾಯಿಯ ಮೇಲಿನ ಅಪಾರವಾದಮಮತೆಯು ಸಂನ್ಯಾಸಾಶ್ರಮಕ್ಕೆ ಸಂಬಂಧಪಟ್ಟ ನಿಯಮಗಳ ಮೇಲೆ ಜಯಗಳಿಸಿತು, ತಾಯಿ ವಿಧಿವಶರಾದಾಗ ಅಂತ್ಯ ಸಂಸ್ಕಾರವನ್ನು ಬಹಳ ವಿರೋಧವಿದ್ದರೂ ಶಂಕರರೇ ಮಾಡಿದರು.

ಶಂಕರರು ತಮ್ಮ ಮೂವತ್ತೆರಡನೆ ವಯಸ್ಸಿನಲ್ಲಿ ಹಿಮಾಲಯದ ಕೇದಾರನಾಥದಲ್ಲಿ ಕಾಲವಶರಾದರು.

# ಹಿಂದೂ ಸನ್ಯಾಸಿ ವಿವೇಕಾನಂದ ಮತ್ತು ಅವರ ತತ್ವಗಳು

ಸ್ವಾಮಿ ವಿವೇಕಾನಂದರ ಜನನ ಜನವರಿ 12, 1863 ರಲ್ಲಾಯಿತು. ''ಉಪನಿಷತ್ತಿನ ಪ್ರತಿಯೊಂದು ಪುಟವೂ ನನ್ನ ಹತ್ತಿರ ನಿರ್ಭಯತೆ (ಧೈರ್ಯ)ಯ ಮಾತನಾಡುತ್ತದೆ.'' ಇದು ನಾನು ಜೀವನದಲ್ಲಿ ಕಲಿತ ಮಹತ್ವದ ಪಾಠ. ಧೈರ್ಯವಾಗಿರಿ ಬಲಹೀನರಾಗ ಬೇಡಿ ಎಂದು ಅವರು ಹೇಳಿದರು.

ಸ್ವಾಮಿ ವಿವೇಕಾನಂದರು ಮುಂದುವರೆದು ''ಒಂದು ಜನಾಂಗವಾಗಿ ನಾವು ಪಡೆದದ್ದೆಲ್ಲ ನಮ್ಮನ್ನು ಬಲಹೀನರನ್ನಾಗಿಸಿದೆ'' ಎನ್ನುತ್ತಾರೆ. ಕಕ್ತಿಯನ್ನು ತೊರಿಸಿ ತಮ್ಮ ಕಾಲ ಕೆಳಗೆ ಹರಿಯುವ ಎರೆ ಹುಳು ಗಳಂತೆ ಮಾಡುವ – ನಮ್ಮನ್ನು ಎಷ್ಟು ಬಲಹೀನರನ್ನಾಗಿ ಮಾಡಬಹುದೆಂಬುದೇ–ಆಕಾಲದ ರಾಷ್ಟ್ರೀಯ ಜೀವನದ ಗುರಿಯಾಗಿತ್ತು.

ಶಕ್ತಿ ಮತ್ತು ಪೌರುಷವನ್ನು ಪೂಜಿಸುವ, ಬಲಿಷ್ಠ ಮಾಂಸಖಂಡ ಮತ್ತು ಉಕ್ಕಿನ ನರಗಳಿಂದ ಕೂಡಿದ, ಸಿಡಿಲಿನಂತಹ ಮನಸ್ಸುಳ್ಳವರು ನನಗೆ ಬೇಕಾಗಿದ್ದಾರೆ.

ಎಲ್ಲ ಶಕ್ತಿಯೂ ನಿಮ್ಮೊಳಗಿದೆ; ನೀವು ಏನು ಬೇಕಾದರೂ ಹಾಗೂ ಎಲ್ಲವನ್ನೂ ಮಾಡಬಲ್ಲಿರಿಎಂದು ನಂಬಿರಿ. ನೀವು ಬಲಹೀನರೆಂದು ಯೋಚಿಸದಿರಿ. ನೀವು ಬೇಕಾದುದನ್ನು ಯಾರ ಮಾರ್ಗದರ್ಶನವೂ ಇಲ್ಲದೆ ಮಾಡಬಲ್ಲಿರಿ. ಎದ್ದೇಳಿ ನಿಮ್ಮಲ್ಲಿರುವ ದೈವತ್ವವನ್ನು ವ್ಯಕ್ತಪಡಿಸಿ.

ನಿಮಗೆ ಶೂರರ ಅವಶ್ಯಕತೆ ಇದೆ, ಶೂರರಾಗಿ ಕಲ್ಲಿನಂತೆ ದೃಢವಾಗಿ ನಿಲ್ಲಿ. ಸತ್ಯವುಯಾವಾಗಲೂ ಜಯಿಸುತ್ತದೆ. ದೇಶದ ನರನಾಡಿಗಳನ್ನು ಹುರಿದುಂಬಿಸುವ ಹೊಸ ವಿದ್ಯುತ್ ಚೇತನ ಜನತೆಗೆ ಬೇಕಾಗಿದೆ. ಧೈರ್ಯದಿಂದಿರಿ, ಮನುಷ್ಯ ಸಾಯುವುದು ಒಮ್ಮೆ ಮಾತ್ರ. ನನ್ನ ಅನುಯಾಯಿಗಳು ಅಂಜುಬುರುಕರಾಗಿರಬಾರದು. ಅಂಜುಬುರುಕತನವನ್ನು ನಾನು ಇಷ್ಟಪಡುವುದಿಲ್ಲ. ಬುದ್ಧಿಯ ಸಮತೋಲನವನ್ನು ಕಾಯ್ದುಕೊಳ್ಳಿ; ಕೀಳು ಮನುಷ್ಯರು ನಿಮ್ಮ ವಿರುದ್ಧ ಕಿಂಚಿತ್ತೂ ಗಮನಕೊಡಬೇಡಿ. ಮಹತ್ತಾದ ಎಲ್ಲ ಕೆಲಸಗಳನ್ನು ಸಾಧಿಸಲು ಪ್ರಬಲವಾದ ಅಡಚಣೆಗಳಿದ್ದೆ ಇರುತ್ತದೆ. ನಿಮ್ಮ ಪ್ರಯತ್ನವನ್ನು ಧೈರ್ಯವಾಗಿ ಮಾಡಿರಿ.

ಸ್ನೇಹಿತರೇ ಏಕೆ ಅಳುವಿರಿ ? ಓ ಶಕ್ತಿಶಾಲಿಗಳೇ ನಿಮ್ಮ ಒಳಗಿರುವ ಶಕ್ತಿಯುತ ಸ್ವಭಾವವನ್ನು ಹೊರತನ್ನಿ, ಇಡೀ ವಿಶ್ವವೇ ನಿಮ್ಮ ಕಾಲಬುಡದಲ್ಲಿರುತ್ತದೆ. ತಮ್ಮ ದೇಹದಿಂದಲೇ ತಮ್ಮನ್ನು ಗುರುತಿಸಿ ಕೊಳ್ಳುವ ಮೂರ್ಖರು ಮಾತ್ರ ತಾವು ಶಕ್ತಿ ಹೀನರು, ಬಲಹೀನರು ಎನ್ನುತ್ತಾರೆ, ದೇಶಕ್ಕೆ ...................... ಮೇರೆ ಮೀರಿದ ಉತ್ಸಾಹಿಗಳ ಅವಶ್ಯಕತೆ ಇದೆ. ಕಾರ್ಯ ತತ್ಪರನಾದ ಧೈರ್ಯವಂತನಿಗೆ ಲಕ್ಷ್ಮಿಯು ಒಲಿಯುತ್ತಾಳೆ. ಹಿಂತಿರುಗಿನೋಡುವ ಅವಶ್ಯಕತೆ ಇಲ್ಲ ಮುನ್ನುಗ್ಗಿ.

ನಮಗೆ ಅನಂತ ಶಕ್ತಿಯ, ಅಪರಿಮಿತ ಉತ್ಸಾಹದ, ಅಮಿತವಾದ ಧೈರ್ಯದ, ಮತ್ತು ಅಮಿತವಾದ ಸಹನೆಯ ಅಗತ್ಯವಿದೆ.ಇವೆಲ್ಲ ಕೂಡಿದಾಗ ಮಾತ್ರ ಶ್ರೇಷ್ಠವಾದ ಸಾಧನೆ ಮಾಡಬಹುದು.

ವೇದಗಳು ಪಾಪವನ್ನು ಒಪ್ಪುವುದಿಲ್ಲ, ಅದು ತಪ್ಪುಗಳನ್ನು ಮಾತ್ರ ಒಪ್ಪುತ್ತದೆ. ನಾನು ಬಲಹೀನ, ಪಾಪಿ, ನೀಚ ಜೀವಿ ಮತ್ತು ಶಕ್ತಿ ಇಲ್ಲದವನು ಹಾಗೂ ಏನನ್ನೂ ಮಾಡಲಾಗದವನು ಎಂದು ಹೇಳುವುದೇ ದೊಡ್ಡ ತಪ್ಪು ಎನ್ನುತ್ತದೆ ವೇದ.

ಶಕ್ತಿಯೇ ಜೀವನ, ಬಲಹೀನತಯೇ ಮೃತ್ಯು; ಶಕ್ತಿಯೇ ಮಹಾ ಆನಂದ, ಜೀವನ ಅನಂತ ಅಮರ ! ಬಲಹೀನತೆ ಎಂದರೆ ಅಚಲವಾದ ನೋವು ಮತ್ತು ವಿಪತ್ತು. ಬಾಲ್ಯದಿಂದಲೇ ನಾವು ಶಕ್ತಿಯುತರು, ಸಹಾಯ ಮಾಡಬಲ್ಲವರು ಎಂಬ ಧನಾತ್ಮಕ ಚಿಂತನೆಯನ್ನು ರೂಢಿಸಿ ಕೊಳ್ಳಬೇಕು.

ನೋವನ್ನು ಅನುಭವಿಸಲು ಬಲಹೀನತೆ ಒಂದು ಕಾರಣ. ನಾವು ಬಲಹೀನರಾದ ಕಾರಣ ಸುಖದಿಂದ ವಂಚಿತರಾಗುತ್ತೇವೆ. ನಾವು ಬಲಹೀನರಾದ ಕಾರಣ ಸುಳ್ಳು ಹೇಳುವುದು. ಕದಿಯುವುದು, ಕೊಲೆಮಾಡುವುದು ಮತ್ತಿತರ ಅಪರಾಧಗಳನ್ನು ಮಾಡುತ್ತೇವೆ. ಬಲವಿಲ್ಲದವರಾದ ಕಾರಣ ನೋವನ್ನು ಅನುಭವಿಸುತ್ತೇವೆ. ನಮ್ಮನ್ನು ಬಲಹೀನರನ್ನಾಗಿಸಲು ಏನೂ ಉಳಿಯದಿದ್ದಾಗ ಸಾವು ನೋವುಗಳಿರುವುದಿಲ್ಲ.

ಶಕ್ತಿಶಾಲಿಗಳಾಗುವುದು ಭವರೋಗಕ್ಕೆ ಉತ್ತಮ ಔಷಧಿ. ಬಲಶಾಲಿಗಳು ದಬ್ಬಾಳಿಕೆ ಮಾಡಿದಾಗ ಬಲಹೀನರು ಶಕ್ತಿಶಾಲಿಗಳಾಗುವುದೇ ಔಷಧಿ. ತಿಳುವಳಿಕೆ ಇದ್ದವರು ದಬ್ಬಾಳಿಕೆ ಮಾಡಿದಾಗ ಅಜ್ಞಾನಿಗಳು ಶಕ್ತಿಶಾಲಿಗಳಾಗುವುದೇ ಔಷಧಿ. ಪಾಪಿಗಳಿಂದ ದಬ್ಬಾಳಿಕೆ ನಡೆದರೂ ಇತರ ಪಾಪಿಗಳು ಇದೇ ಔಷಧಿ ತೆಗೆದುಕೊಳ್ಳಬೇಕು.

ಎದ್ದೇಳಿ, ಧೈರ್ಯಶಾಲಿಗಳಾಗಿ, ಶಕ್ತಿವಂತರಾಗಿ. ಎಲ್ಲ ಜವಾಬ್ದಾರಿಗಳನ್ನು ನಿಮ್ಮ ಹೆಗಲಮೇಲೆ ಹೊತ್ತುಕೊಳ್ಳಿ, ನಿಮ್ಮ ಪ್ರಾರಬ್ಧದ ಸೃಷ್ಟಿಕರ್ತರು ನೀವೇ ಎಂಬುದನ್ನು ತಿಳಿದುಕೊಳ್ಳಿ. ನಿಮಗೆ .................................. ನಾವು ರೋಗಪೀಡಿತರು ಎಂದು ಕೊಳ್ಳುತ್ತಿದ್ದರೆ ರೋಗ ವಾಸಿಯಾಗದು; ಅದಕ್ಕೆ ಔಷಧದ ಅಗತ್ಯವಿದೆ. ಬಲಹೀನರೆಂದು ನೆನಪಿಸಿಕೊಳ್ಳುತ್ತಿದ್ದರೆ ಉಪಯೋಗವಿಲ್ಲ ಶಕ್ತಿವಂತರಾಗಬೇಕು. ಬಲಹೀನತೆಗೆ ಪರಿಹಾರವೆಂದರೆ ಶಕ್ತಿವಂತರಾಗುವಬಗ್ಗೆ ನಿರಂತರವಾಗಿ ಯೋಚಿಸುವುದಾಗಿದೆ.

ಈ ಪ್ರಪಂಚದಲ್ಲಾಗಲೀ ಧಾರ್ಮಿಕ ಪ್ರಪಂಚದಲ್ಲಾಗಲೀ ಅವನತಿಗೆ ಮತ್ತು ಪಾಪಕ್ಕೆ ಹೆದರಿಕೆಯೇ ನಿಜವಾದ ಕಾರಣ. ಹೆದರಿಕೆ ದುಃಖ ವನ್ನುಂಟುಮಾಡುತ್ತದೆ, ಹೆದರಿಕೆಯಿಂದ ಸಾವುಂಟಾಗುತ್ತದೆ, ಹೆದರಿಕೆಯಿಂದ ಕೇಡುಂಟಾಗುತ್ತದೆ. ಹೆದರಿಕೆಗೆ ಕಾರಣವೇನು ? ನಮ್ಮ ಸ್ವಭಾವದ ಬಗ್ಗೆ ಇರುವ ಅಜ್ಞಾನವೇ ಹೆದರಿಕೆಗೆ ಕಾರಣವಾಗಿದೆ. ನಾವು ಪ್ರತಿಯೊಬ್ಬರೂ ಸಾರ್ವಭೌಮನ (ಈಶ್ವರನ) ವಾರಸುದಾರರು.

ಬಲಹೀನತೆ ಎಂಬ ಒಂದು ಶಬ್ದ ಎಲ್ಲ ಪಾಪಗಳ ಮತ್ತು ಕೆಡಕುಗಳ ಸಾರಾಂಶ. ಎಲ್ಲ ದುಷ್ಕೃತ್ಯಕ್ಕೆ ಬಲಹೀನತೆಯೇ ಪ್ರೇರಕಶಕ್ತಿ. ಸ್ವಾರ್ಥಕ್ಕೆ ಮೂಲವೇ ಬಲಹೀನತೆ. ಇನ್ನೊಬ್ಬರನ್ನು ನೋಯಿಸಲು ಬಲಹೀನತೆಯೇ ಕಾರಣ. ಬಲಹೀನತೆ ಇಂದಾಗಿಯೇ ಜನರು ವಾಸ್ತವದಲ್ಲಿ ತಾವು ಏನಾಗಿರುದಿಲ್ಲವೋ ಅದನ್ನು ಆಗಿದ್ದೇನೆಂದು ವ್ಯಕ್ತಪಡಿಸುವುದು.

ನಮ್ಮ ಜನ ಸಮುದಾಯಕ್ಕೆ ಉಕ್ಕಿನಂತಹ ಶಕ್ತಿಯುತವಾದ ಮಾಂಸಖಂಡಗಳು ಬೇಕಾಗಿದೆ; ಪ್ರತಿಭಟನೆ

ಇಲ್ಲದ ವಿಶ್ವದ ರಹಸ್ಯ ಮತ್ತು ನಿಗೂಢತೆಯನ್ನು ಭೇಧಿಸುವ, ಸಮುದ್ರದ ಆಳಕ್ಕೆ ಹೋಗಿಯಾದರೂ ಅಥವಾ ಸಾವಿನೊಡನೆ ಮುಖಾ ಮುಖಿಯಾದರೂ ಗುರಿಯಲ್ಲಿ ಯಶಸ್ಸು ಗಳಿಸುವ ಶಕ್ತಿಯುತವಾದ ಮನಃಸಂಕಲ್ಪ ಬೇಕಾಗಿದೆ.

ನಾವು ಸಾಕಷ್ಟುಕಾಲ ಅತ್ತಿದ್ದೇವೆ; ಅತ್ತದ್ದು ಸಾಕು, ನಿಮ್ಮ ಕಾಲ ಮೇಲೆ ನಿಂತುಕೊಳ್ಳಿ. ಮನುಷ್ಯರನ್ನಾಗಿ ಮಾಡುವ ಧರ್ಮ ನಮಗೆ ಬೇಕಾಗಿದೆ. ಮನುಷ್ಯರನ್ನಾಗಿಸುವ ವಿಚಾರಸರಣಿ ನಮಗೆ ಬೇಕಾಗಿದೆ. ಮನುಷ್ಯರನ್ನಾಗಿಸುವ ವಿದ್ಯಾಭ್ಯಾಸ ನಮಗೆ ಬೇಕಾಗಿದೆ. ನಿಮ್ಮನ್ನು ಶಾರೀರಿಕವಾಗಿ ಭೌತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಬಲಹೀನರನ್ನಾಗಿಸುವ ಯಾವುದೇ ವಿಷಯವನ್ನು ತಿರಸ್ಕರಿಸಿರಿ; ಅದರಲ್ಲಿ ಜೀವಾಳವಿಲ್ಲ, ಅದು ಸತ್ಯವಲ್ಲ. ತಿಳುವಳಿಕೆಯೇ ಸತ್ಯ. ಸತ್ಯವು ಬಲಗೊಳ್ಳಬೇಕು, ಜ್ಞಾನೋದಯವಾಗುವಂತೆ ಮಾಡಬೇಕು, ಚೇತನಗೊಳ್ಳುವಂತೆಇರಬೇಕು.

ಬಹಳಷ್ಟು ವಿಷಯಗಳ ಬಗ್ಗೆ ನಾವು ಗಿಳಿ ಪಾಠದಂತೆ ಮಾತನಾಡುತ್ತೇವೆ, ಆದರೆ ಕಾರ್ಯರೂಪಕ್ಕೆ ತರುವುದಿಲ್ಲ; ಮಾತನಾಡುವ ಆದರೆ ಕೆಲಸ ಮಾಡದಿರುವುದೇ ನಮ್ಮ ಅಭ್ಯಾಸ. ಇದಕ್ಕೆ ನಾವು ಭೌತಿಕವಾಗಿ ಬಲಹೀನರಾಗಿರುವುದೇ ಕಾರಣ. ಭೌತಿಕ ಬಲಹೀನತೆ ಏನೂ ಮಾಡಲಾಗದು. ಅದನ್ನು ಬಲಗೊಳಿಸ ಬೇಕು. ಮೊದಲಾಗಿ ನಮ್ಮ ಯುವಕರು ಬಲಶಾಲಿಗಳಾಗಬೇಕು ಧರ್ಮದ ಬಗ್ಗೆ ನಂತರ ಯೋಚಿಸಬಹುದು. ನಿಮ್ಮ ದೇಹದಲ್ಲಿ ಶಕ್ತಿಯುತವಾದ ರಕ್ತ ಹರಿಯುತ್ತಿದ್ದರೆ ಮಾತ್ರ ನೀವು ಶ್ರೀಕೃಷ್ಣನ ಮೇಧಾಶಕ್ತಿ ಮತ್ತು ಅವನ ಪ್ರಬಲವಾದ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳುವಿರಿ. ನಿಮ್ಮ ದೇಹವು ದೃಢವಾಗಿ ತನ್ನ ಕಾಲ ಮೇಲೆ ನಿಲ್ಲಲು ಸಾಧ್ಯವಾದಾಗ ನಿಮಗೆ ಉಪನಿಷತ್ತನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಮತ್ತು ಆತ್ಮದ ಭವ್ಯತೆಯನ್ನು ರ್ಥಮಾಡಿಕೊಳ್ಳಲು ಸಾಧ್ಯ.

ನೀತಿವಂತರಾಗಿ, ಧೈರ್ಯವಂತರಾಗಿ. ಹೇಡಿಗಳು ಪಾಪ ಮಾಡುತ್ತಾರೆ, ಧೈರ್ಯವಂತರಲ್ಲ. ಎಲ್ಲರನ್ನು ಮತ್ತು ಎಲ್ಲವನ್ನೂ ಪ್ರೀತಿಸಲು ಪ್ರಯತ್ನಿಸಿ.

ಎದ್ದೇಳಿ, ಜೀವನಕ್ಕೆ ಹೆಗಲು ಕೊಡಿ, ಈ ಜೀವನ ಇನ್ನೆಷ್ಟುಕಾಲ ? ಈ ಪ್ರಪಂಚಕ್ಕೆ ಬಂದಿದ್ದೀರಿ, ನಿಮ್ಮ ಗುರುತನ್ನು ನೀಡಿ, ಇಲ್ಲದಿದ್ದರೆ ನಿಮಗೂ ಕಲ್ಲು ಮತ್ತು ಮರಗಳಿಗೂ ವ್ಯತ್ಯಾಸವೇನು ? ಅವು ಜೀವಿಸಿ ಶಿಥಿಲವಾಗಿ ಸಾಯುತ್ತವೆ.

ಧೈರ್ಯವಾಗಿರಿ ! ನನ್ನ ಮಕ್ಕಳು ಎಲ್ಲಕ್ಕಿಂತ ಹೆಚ್ಚಾಗಿ ಧೈರ್ಯವಾಗಿರಬೇಕು. ಯಾವುದೇ ವಿಚಾರಕ್ಕೂ ರಾಜಿಮಾಡಿಕೊಳ್ಳಬೇಡಿ. ಅತ್ಯುಚ್ಛವಾದ ಸತ್ಯವನ್ನು ಬೋಧಿಸಿ. ನಿಮ್ಮ ಗೌರವವನ್ನು ಕಳೆದುಕೊಳ್ಳುವ ಹೆದರಿಕೆ ಅಥವಾ ದುಃಖವನ್ನುಂಟುಮಾಡುವ ಘರ್ಷಣೆ ಉಂಟಾಗುತ್ತದೆಂದು ಹೆದರಬೇಡಿ ಸತ್ಯದ ದಾರಿಯನ್ನು ತ್ಯಜಿಸುವ ಪ್ರಲೋಭನೆಗಳಿದ್ದರೂ ಅದನ್ನು ಬಿಡದೆ ಸತ್ಯಕ್ಕಾಗಿ ದುಡಿದರೆ ನಿಮಗೆ ದಿವ್ಯವಾದ ಶಕ್ತಿ ಬರುತ್ತದೆ, ಅದರ ಎದುರು ಅಸತ್ಯದ ಬಗ್ಗೆ ಮಾತನಾಡಲು ಜನರು ಭಯದಿಂದ ಹಿಂಜರಿಯುತ್ತಾರೆ. ನೀವು ಸತ್ಯದದಾರಿಯನ್ನು ಬಿಡದೆ ಹದಿನಾಲ್ಕು ವರುಷ ಅದಕ್ಕಾಗಿ ದುಡಿದಲ್ಲಿ ನೀವು ಹೇಳಿದ್ದೆಲ್ಲವನ್ನೂ ಜನರು ನಂಬುತ್ತಾರೆ.



**Mahamrityunjoy Trisul**




**Mahamrityunjoy Axe**




**Mahamrityunjoy Sword**

This sword or axe or Trisul containing replica of Ishwar's angels becomes "Mahamrityunjoy", i.e., a guarantee against accidental disaster. Any one who keeps any one of these items at home and master the art of using these sword or axe or Trisul will be blessed by Ishwar to be healthy, wealthy, successful & very powerful.




Badrinath Dham existing since the time of Veda is the oldest Hindu shrine (Altitude 3133 M).

**The Holy Book of Hindu religion has dealt with Veda, Gita, Manusanghita, Smriti Shastras etc, in capsule form. For a Hindu family person, this much knowledge about Hinduism is minimum requirement & is almost adequate.**

**Pandit Pradip Ramnath, Priest of Badrinath Dham**



Indian Space Research Organisation Ministry of Science & Technology, India.

**Every chapter of The Holy Book of Hindu Religion bears the stamp of a scientific mind and eternal human values. I recommend to all the young people to go through the chapters like Idol Worship, Caste System & Ten Incarnations of Vishnu etc. This book covers almost 90% of the knowledge required for an ordinary person to understand the strength of this humanist religion.**

**Dr Samiran Das, Space Scientist , ISRO,INDIA**




Kedarnath Dham existing since the time of Mahabharat is the holiest Hindu shrine (Altitude 3584M).

**I have liked The Holy Book of Hindu Religion. I think that all Hindus should read this book.**

**Pandit MahendarSukla, Priest of Kedarnath Dham**



Indian Institute of Technology, Kharagpur, Ministry of Human Resource Development, India.

**Throughout my life I served science and neither had time nor had any interest to read scriptures. Recently I studied The Holy Book of Hindu Religion. It was a turning point. Had I read this book during my student days, I would have surely achieved much more in life.**

**Prof. Dr. B.B.Ghosh, I.I.T. Kharagpur**

ISBN 81-903418-5-5
9788190341851